ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕ್ರಿಸ್‌ಮಸ್ ಆಚರಿಸಿದ ಮೋದಿ

ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ದೆಹಲಿಯ ಕ್ಯಾಥೆಡ್ರಲ್ ಚರ್ಚ್ ಆಫ್ ದಿ ರಿಡೆಂಪ್ಶನ್‌ನಲ್ಲಿ ನಡೆದ ಕ್ರಿಸ್‌ಮಸ್ ಬೆಳಗಿನ ಪ್ರಾರ್ಥನೆಯಲ್ಲಿ ಪಾಲ್ಗೊಂಡರು. 'ಈ ವಿಶೇಷ ಪ್ರಾರ್ಥನೆಯು ಪ್ರೀತಿ, ಸಮಾಧಾನ ಮತ್ತು ಶಾಂತಿಯ ಸಂದೇಶ ಸಾರಿದೆ. ಕ್ರಿಸ್‌ಮಸ್ ನಮ್ಮ ಸಮಾಜಕ್ಕೆ ಸಾಮರಸ್ಯವನ್ನು ತುಂಬಲಿ' ಎಂದು ಪ್ರಧಾನಿ ಎಕ್ಸ್ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ಬಾಪೂಜಿ ವಿದ್ಯಾ ಸಂಸ್ಥೆ (ರಿ)

2ನೇ ಮುಖ್ಯ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ–577002

ಶಿವಗಣಾರಾಧನೆ ಮತ್ತು ನುಡಿ ನಮನ

ಐವತ್ತು ವರ್ಷಗಳಿಗೂ ಹೆಚ್ಚು ಕಾಲ ದಾವಣಗೆರೆಯ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳಾಗಿ ಸಂಸ್ಥೆಯನ್ನು ಯಶಸ್ವಿಯಾಗಿ ಮುನ್ನಡೆಸಿದ ಅಮೃತ ಪುರುಷರು, ಶತಮಾನ ಶ್ರೇಷ್ಠರು, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರು, ಮಾಜಿ ಸಚಿವರು, ಶಾಸಕರೂ ಆದ

ಲಿಂ. ಡಾ. ಶಾಮನೂರು ಶಿವಶಂಕರಪ್ಪ ಅವರು

ದಿ. 14.12.2025ರಂದು ನಮ್ಮೆಲ್ಲರನ್ನು ಅಗಲಿದ್ದು, ಅವರ **ಶಿವಗಣಾರಾಧನೆ ಮತ್ತು ನುಡಿ ನಮನ** ಕಾರ್ಯಕ್ರಮವನ್ನು ದಿ. 26.12.2025ರ ಶುಕ್ರವಾರ ಬೆಳಿಗ್ಗೆ 10.15ಕ್ಕೆ ಹಮ್ಮಿಕೊಳ್ಳಲಾಗಿದೆ. ದಾವಣಗೆರೆಯ ಬಂಬೂಬಜಾರ್ ಮುಖ್ಯ ರಸ್ತೆಯಲ್ಲಿರುವ ಶ್ರೀ ಕಲ್ಲೇಶ್ವರ ರೈಸ್ ಮಿಲ್ ಆವರಣದಲ್ಲಿ ಕಾರ್ಯಕ್ರಮ ನೆರವೇರಲಿದ್ದು, ತಾವುಗಳೆಲ್ಲರು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಲು ವಿನಂತಿಸುತ್ತೇವೆ.

ಉಪಾಧ್ಯಕ್ಷರು, ಜಂಟಿ ಗೌರವ ಕಾರ್ಯದರ್ಶಿಗಳು, ಖಜಾಂಚಿ, ಆಡಳಿತ ಮಂಡಳಿ ಸದಸ್ಯರು, **ಬಾಪೂಜಿ ವಿದ್ಯಾಸಂಸ್ಥೆ** ಮತ್ತು ಬಾಪೂಜಿ ಬ್ಯಾಂಕ್‌ನ ಹಾಗೂ ಶಾಮನೂರು ಒಡೆತನದ ಸಮೂಹ ಸಂಸ್ಥೆಗಳ ಎಲ್ಲ ಅಂಗ ಸಂಸ್ಥೆಗಳ ನೌಕರ ವರ್ಗ, ದಾವಣಗೆರೆ

ಭಾವಪೂರ್ಣ ಗೌರವ ಶ್ರದ್ಧಾಂಜಲಿ ಸಲ್ಲಿಸುವವರು

ಶ್ರೀಮತಿ ಪ್ರೀತಿ ಬಕ್ಕೇಶ್ ಹಾಗೂ ಶ್ರೀ ಎಸ್.ಎಸ್. ಬಕ್ಕೇಶ್, ಆಶಿಕ್, ಅಕ್ಷತಾ, ಅದಿತ್
ಶ್ರೀಮತಿ ರೇಖಾ ಗಣೇಶ್ ಹಾಗೂ ಶ್ರೀ ಎಸ್.ಎಸ್. ಗಣೇಶ್, ಅಭಿಜಿತ್, ಆಂಚಲ್, ಅಖಿಲಾ
ಡಾ॥ ಪ್ರಭಾ ಮಲ್ಲಿಕಾರ್ಜುನ್ ಹಾಗೂ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್, ಸಮರ್ಥ್, ಡಾ॥ ಶ್ರೇಷ್ಠಾ, ಶಿವ

ಪಂಚ ಪೀಠಾಧೀಶ್ವರರೂ ಸೇರಿದಂತೆ ನಾಡಿನ ಎಲ್ಲಾ ಮಠಾಧೀಶರು, ಹರ, ಗುರು, ಚರ ಮೂರ್ತಿಗಳು ದಿವ್ಯ ಸಾನ್ನಿಧ್ಯ ವಹಿಸುವರು

ಉದ್ಘಾಟನೆ:
ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ
ಅಧ್ಯಕ್ಷರು, ಭಾರತ ರಾಷ್ಟ್ರೀಯ ಕಾಂಗ್ರೆಸ್

ಪುತ್ಥಳಿ ಅನಾವರಣ:
ಮಾನ್ಯ ಶ್ರೀ ಸಿದ್ದರಾಮಯ್ಯ
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಸಾಕ್ಷ್ಯಚಿತ್ರ ಬಿಡುಗಡೆ :
ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್
ಉಪಮುಖ್ಯಮಂತ್ರಿಗಳು, ಅಧ್ಯಕ್ಷರು, ಕೆ.ಪಿ.ಸಿ.ಸಿ.

ಅಧ್ಯಕ್ಷತೆ:
ನ್ಯಾ. ಶಿವರಾಜ್ ಪಾಟೀಲ್
ನಿವೃತ್ತ ನ್ಯಾಯಾಧೀಶರು, ಸರ್ವೋಚ್ಚ ನ್ಯಾಯಾಲಯ

–: ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿ :–

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್
ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ

ಡಾ॥ ಪ್ರಭಾ ಮಲ್ಲಿಕಾರ್ಜುನ್
ಮಾನ್ಯ ಸಂಸದರು, ದಾವಣಗೆರೆ ಲೋಕಸಭಾ ಕ್ಷೇತ್ರ

ಕಿರು ಹೊತ್ತಿಗೆ ಬಿಡುಗಡೆ
ಶ್ರೀ ಹೆಚ್.ಡಿ.ದೇವೇಗೌಡ
ಮಾಜಿ ಪ್ರಧಾನಿಗಳು, ಭಾರತ ಸರ್ಕಾರ

–: ವಂದನಾರ್ಪಣೆ :–
ಶ್ರೀ ಎಸ್.ಎಸ್. ಗಣೇಶ್
ಉದ್ಯಮಿಗಳು ಹಾಗೂ ರಾಷ್ಟ್ರೀಯ ಉಪಾಧ್ಯಕ್ಷರು, ಅ.ಭಾ.ವೀ.ಲಿಂ. ಮಹಾಸಭಾ

ನುಡಿ ನಮನ

ಶ್ರೀ ಬಿ.ಎಸ್.ಯಡಿಯೂರಪ್ಪ – ಮಾಜಿ ಮುಖ್ಯಮಂತ್ರಿಗಳು
ಶ್ರೀ ವೇಣುಗೋಪಾಲ್ – ಪ್ರಧಾನ ಕಾರ್ಯದರ್ಶಿ, ಎಐಸಿಸಿ
ಶ್ರೀ ಜಗದೀಶ್ ಶೆಟ್ಟರ್ – ಸಂಸದರು, ಮಾಜಿ ಮುಖ್ಯಮಂತ್ರಿಗಳು
ಶ್ರೀ ಹೆಚ್.ಡಿ.ಕುಮಾರಸ್ವಾಮಿ – ಮಾನ್ಯ ಕೇಂದ್ರ ಸಚಿವರು, ಮಾಜಿ ಮುಖ್ಯಮಂತ್ರಿಗಳು
ಶ್ರೀ ಬಸವರಾಜ ಬೊಮ್ಮಾಯಿ – ಸಂಸದರು, ಮಾಜಿ ಮುಖ್ಯಮಂತ್ರಿಗಳು
ಶ್ರೀ ವಿ.ಸೋಮಣ್ಣ – ಮಾನ್ಯ ಕೇಂದ್ರ ಸಚಿವರು, ಭಾರತ ಸರ್ಕಾರ
ಶ್ರೀ ಯು.ಟಿ.ಖಾದರ್ – ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ
ಶ್ರೀ ರಣದೀಪ್ ಸುರ್ಜೇವಾಲಾ – ಪ್ರಧಾನ ಕಾರ್ಯದರ್ಶಿ, ಎಐಸಿಸಿ
ಶ್ರೀ ಈಶ್ವರ ಬಿ ಖಂಡ್ರೆ, ಸಚಿವರು – ಹಿರಿಯ ಉಪಾಧ್ಯಕ್ಷರು, ಅ.ಭಾ.ವೀ.ಲಿಂ.ಮ
ಶ್ರೀ ಎಂ.ಬಿ.ಪಾಟೀಲ್, ಸಚಿವರು – ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ

ರಾಜ್ಯದ ಎಲ್ಲಾ ಮಂತ್ರಿಗಳು, ಮಾಜಿ ಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು, ಶಾಸಕರು, ವಿಧಾನ ಪರಿಷತ್ ಸದಸ್ಯರು, ನಿಗಮ-ಮಂಡಳಿ ಅಧ್ಯಕ್ಷರು, ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಮುಖಂಡರುಗಳು ಹಾಗೂ ಎಲ್ಲಾ ಪಕ್ಷಗಳ ಮುಖಂಡರು ನುಡಿನಮನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ವಿ.ಸೂ: ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಎಲ್ಲರಿಗೂ ತಲುಪಿಸಲಾಗಿದ್ದು, ತಲುಪದೆ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಬೇಕಾಗಿ ವಿನಂತಿ

ಸಮಾಚಾರ ಸಣ್ಣದಲ್ಲ

31ರಿಂದ ಖೋ-ಖೋ ಚಾಂಪಿಯನ್‌ಶಿಪ್

ಬೆಂಗಳೂರು: 44ನೇ ರಾಷ್ಟ್ರಮಟ್ಟದ ಜೂನಿಯರ್ ಬಾಲಕ ಮತ್ತು ಬಾಲಕಿಯರ ಖೋ-ಖೋ ಚಾಂಪಿಯನ್ ಶಿಪ್ 2025ನ್ನು ಡಿ.31ರಿಂದ ಜನವರಿ 4 ವರೆಗೆ ಗುಂಜೂರಿನ ವಾಜಪೇಯಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಖೋ-ಖೋ ಸಂಸ್ಥೆ ಅಧ್ಯಕ್ಷ ಲೋಕೇಶ್ವರ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಖೋ-ಖೋ ಇಂದು ಅಂತಾರಾಷ್ಟ್ರೀಯ ಕ್ರೀಡೆಯಾಗಿದೆ. ಕಾಮನ್ ವೆಲ್ತ್ ಕ್ರೀಡಾಕೂಟದಲ್ಲಿ ಸೇರ್ಪಡೆಯಾಗಿದೆ. ಪ್ರಧಾನಿ ನರೇಂದ್ರಮೋದಿರವರು ಖೋ-ಖೋ ಕ್ರೀಡೆಯನ್ನು ಮುಂದಿನ ಒಲಿಂಪಿಕ್ ಗೇಮ್ಸ್ ನಲ್ಲಿ ಸೇರಿಸುವ ಭರವಸೆ ನೀಡಿದ್ದಾರೆ ಎಂದರು. ಡಿ.31 ರಂದು ನಡೆಯುವ ಖೋ-ಖೋ ಪಂದ್ಯಾವಳಿಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸಂಸದ ಪಿ.ಸಿ.ಮೋಹನ್ ಸೇರಿದಂತೆ ಹಲವರು ಉಪಸ್ಥಿತರಿರಲಿದ್ದಾರೆ. ಪಂದ್ಯಾವಳಿಗಳನ್ನು ಹೊನಲು -ಬೆಳಕಿನ ರೀತಿಯಲ್ಲಿ ನಡೆಯಲಿದೆ. ಇದ್ದಕ್ಕಾಗಿ ನಾಲ್ಕು ಕೋರ್ಟ್‌ಗಳನ್ನು ನಿರ್ಮಿಸಲಾಗಿದೆ. ಭಾರತ ದೇಶದ ವಿವಿಧ ರಾಜ್ಯಗಳಿಂದ 66 ತಂಡಗಳು ಭಾಗವಹಿಸಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಗುಂಜೂರ್ ಖೋ-ಖೋ ಕ್ರೀಡಾ ಸಂಸ್ಥೆಯ ಅಧ್ಯಕ್ಷ ಜಿ.ಟಿ.ನಾಗೇಶ್, ರಾಜ್ಯ ಖೋ-ಖೋ ಸಂಸ್ಥೆಯ ಪದಾಧಿಕಾರಿಗಳಾದ ಜಯರಾಮ್, ವೆಂಕಟೇಶ್, ಜಿ.ಟಿ.ಚಂದ್ರಪ್ಪ, ಜಗದೀಶ್, ಬಸವರಾಜ್‌ಉಪಸ್ಥಿತರಿದ್ದರು.

ವಿದ್ಯಾನಿಕೇತನ ಶಾಲೆಗೆ 410 ರನ್‌ಗಳ ಜಯ

ಬೆಂಗಳೂರು: 2025-26ನೇ ಸಾಲಿನ ಕೆಎಸ್‌ಸಿಎ, ಬಿಟಿಆರ್ 14 ವರ್ಷದೊಳಗಿನವರ ಎರಡನೇ ಡಿವಿಷನ್ ಕ್ರಿಕೆಟ್ ಪಂದ್ಯದಲ್ಲಿ ವಿದ್ಯಾನಿಕೇತನ ಶಾಲೆಯ ವ್ಯೊಮ್ ನಾಯ್ಡು ಅದ್ಭುತ ಬ್ಯಾಟಿಂಗ್ ಪ್ರದರ್ಶಿಸಿದ್ದಾರೆ. ಈ ಮೂಲಕ ವಿದ್ಯಾನಿಕೇತನ ಶಾಲೆಯು ಕಾರ್ಮೆಲ್ ಶಾಲೆ (ಆ-70) ವಿರುದ್ಧ 410 ರನ್‌ಗಳ ಬೃಹತ್ ಜಯ ದಾಖಲಿಸಿದೆ.

ಸರ್.ಎಂ. ವಿಶ್ವೇಶ್ವರಯ್ಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ವಿದ್ಯಾನಿಕೇತನ ಶಾಲೆ ಮೊದಲು ಬ್ಯಾಟಿಂಗ್ ಮಾಡಿದ್ದು, ನಿಗದಿತ 50 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 504 ರನ್‌ಗಳನ್ನು ಪಡೆಯಿತು. ಈ ಪೈಕಿ ವ್ಯೊಮ್ ನಾಯ್ಡು ಅವರ ಪಾಲು ಹೆಚ್ಚಿದ್ದು, 150 ಎಸೆತಗಳಲ್ಲಿ 283 ರನ್‌ಗಳನ್ನು ಗಳಿಸಿದರು. ಈ ಇನ್ನಿಂಗ್ಸ್‌ನಲ್ಲಿ ಒಟ್ಟು 47 ಬೌಂಡರಿಗಳಿದ್ದವು. ಇದಕ್ಕೆ ಪ್ರತಿಯಾಗಿ ಬ್ಯಾಟಿಂಗ್ ಮಾಡಿದ ಕಾರ್ಮೆಲ್ ಶಾಲೆ ಕೇವಲ 20.5 ಓವರ್‌ಗಳಲ್ಲಿ 94 ರನ್‌ಗಳಿಗೆ ಸರ್ವಪತನಗೊಂಡಿತು. ಈ ಮೂಲಕ ವಿದ್ಯಾನಿಕೇತನ ಶಾಲೆ ಭಾರಿ ಅಂತರದ ಜಯವನ್ನು ತನ್ನದಾಗಿಸಿಕೊಂಡಿದೆ. ಈ ಅಮೋಘ ಪ್ರದರ್ಶನ ನೀಡುವ ಮೂಲಕ ವ್ಯೊಮ್ ನಾಯ್ಡು ಅವರು ಪ್ರಸ್ತುತ ಟೂರ್ನಿಯಲ್ಲಿ ಅತ್ಯಂತ ಭರವಸೆಯ ಯುವ ಪ್ರತಿಭೆಯಾಗಿ ಹೊರಹೊಮ್ಮಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಸುಶಾಸನ ದಿನಾಚರಣೆ ಅಟಲ್ ಪುರಸ್ಕಾರ-2025 ಕಾರ್ಯಕ್ರಮದಲ್ಲಿ: ಬೊಮ್ಮಾಯಿ

ಮಕ್ಕಳ ಉಜ್ವಲ ಭವಿಷ್ಯಕ್ಕೆ ಎನ್‌ಇಪಿ ಅಗತ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಡೋಲಾಯಮಾನ ಸ್ಥಿತಿಯಲ್ಲಿದೆ. ರಾಜ್ಯದ ಮಕ್ಕಳ ಭವಿಷ್ಯ ಬರೆಯಬೇಕೆಂದರೆ ಎನ್‌ಇಪಿ ಜಾರಿಯಾಗಬೇಕು ರಾಜಕೀಯ ಕಾರಣಕ್ಕೆ ಶಿಕ್ಷಣ ವ್ಯವಸ್ಥೆ ಹಾಳು ಮಾಡುವ ಕೆಲಸ ಆಗಬಾರದು. ಶಿಕ್ಷಣ ರಾಜಕೀಯ ಮುಕ್ತವಾಗಬೇಕು ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ತಿಳಿಸಿದರು.

ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ ವತಿಯಿಂದ ನಗರದ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ 'ಸುಶಾಸನ ದಿನಾಚರಣೆ ಅಟಲ್ ಪುರಸ್ಕಾರ-2025 ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಟಲ್ ಬಿಹಾರಿ ವಾಜಪೇಯಿ ಅವರು ಆರು ದಶಕಗಳ ಕಾಲ ಪರಿಶುದ್ಧ ರಾಜಕಾರಣ ಮಾಡಿದ್ದರು. ಅವರ ನಡೆ ನುಡಿಯಲ್ಲಿ ವ್ಯತ್ಯಾಸ ಇರಲಿಲ್ಲ. ಅಧಿಕಾರಕ್ಕೆ ಬರುತ್ತೇವೆ ಎಂದು ಅಂದುಕೊಂಡಿರಲಿಲ್ಲ. ಸುಮಾರು 45 ವರ್ಷ ಹೋರಾಟ ಮಾಡಿಕೊಂಡು ಬಂದಿದ್ದರು. ಅಂತವರ ಕೈಯಲ್ಲಿ ಅಧಿಕಾರ ಬಂದಾಗ ಯಾವರೀತಿ ನಡೆಸುತ್ತಾರೆ ಎಂದು ನಿರೀಕ್ಷೆ ಇತ್ತು. ಜನನಾಯಕನ ಕೈಯಲ್ಲಿ ಅಧಿಕಾರ ಬಂದಾಗ ಹೇಗೆ ನಡೆಸುತ್ತಾರೆ ಎಂದು ವಾಜಪೇಯಿಯವರು ತೋರಿಸಿಕೊಟ್ಟರು ಎಂದರು.

ಮಹಾತ್ಮಾ ಗಾಂಧಿ ರಾಮರಾಜ್ಯ ಸ್ವರಾಜ್ಯದ ಕಲ್ಪನೆ ಕೊಟ್ಟು ಹೋಗಿದ್ದಾರೆ. ವಾಜಪೇಯಿ ಅವರು ಈಗ ಬೇಕಾಗಿರುವುದು ಸುರಾಜ್ಯ ಎಂದು ಅವರು ಸುರಾಜ್ಯ ಕಲ್ಪನೆ ಕೊಟ್ಟರು. ಎರಡನೇದಾಗಿ ಲಾಲ ಬಹಾದ್ದೂರ ಶಾಸ್ತ್ರಿಯವರು ಜೈ ಜವಾನ್ ಜೈ ಕಿಸಾನ್ ಅಂದರು. ಸ್ವಾತಂತ್ರ್ಯ ಬಂದ ಮೇಲೆ ದೇಶದ ವಿಭಜನೆ ಮತ್ತೆ ನಮ್ಮ ಮೇಲೆ ಯುದ್ಧ ಸಾರಿದ್ದರು. ಹೀಗಾಗಿ ಸೈನಿಕ ಮತ್ತು ರೈತರ ಅಗತ್ಯವಿತ್ತು. ಇವತ್ತಿನ ಭಾರತ ಹಿಂದುಳಿಯಬಾರದು ಎಂದು ವಾಜಪೇಯಿ ಅವರು ಜೈ ವಿಜ್ಞಾನ ಎಂದರು. ಅವರ 101 ನೇ ಜಯಂತಿ ಕಾರ್ಯಕ್ರಮ ಮಾಡಿರುವುದು ಅತ್ಯಂತ ಸುವ್ಯವಸ್ಥೆ ಕಾರ್ಯ ಎಂದರು.

ಈ ಸಂದರ್ಭದಲ್ಲಿ ಐಐಎಸ್‌ಸಿ ನಿರ್ದೇಶಕ ಪ್ರೊ. ಗೋವಿಂದ ರಂಗರಾಜನ್, ನಿವೃತ್ತ ಕುಲಪತಿ ಡಾ ಚಂದ್ರಶೇಖರ್ ಶೆಟ್ಟಿ, ಬೇಸ್ ಸಂಸ್ಥೆ ಸಂಸ್ಥಾಪಕ ಡಾ. ನಾಗರಾಜ್ ಅವರಿಗೆ ಅಟಲ್ ಪುರಸ್ಕಾರ ನೀಡಿ ಗೌರವಿಸಲಾಯಿತು. ಈ ವೇಳೆ ಮಾಜಿ ಡಿಸಿಎಂ ಡಾ.ಅಶ್ವತ್ಥ್ ನಾರಾಯಣ, ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ಅಧ್ಯಕ್ಷ ಡಾ. ಕೃಷ್ಣೇಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ ವತಿಯಿಂದ ನಗರದ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ 101 ನೇ ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ಅಟಲ್ ಪುರಸ್ಕಾರ ನೀಡಿ ಗೌರವಿಸಲಾಯಿತು. ಈ ವೇಳೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ, ಮಾಜಿ ಡಿಸಿಎಂ ಡಾ. ಅಶ್ವತ್ಥ್‌ನಾರಾಯಣ, ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ಅಧ್ಯಕ್ಷ ಡಾ. ಕೃಷ್ಣೇಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶಿಕ್ಷಣ ಕ್ರಾಂತಿ ಆಗಬೇಕು

ಹಳ್ಳಿ ಮಕ್ಕಳು ಬಹಳ ಕಷ್ಟದಲ್ಲಿ ಇದ್ದಾರೆ. ಕೇಂದ್ರ ಸಚಿವ ಕುಮಾರಸ್ವಾಮಿ ಸಿಎಂ ಆಗಿದ್ದಾಗ ಹಳ್ಳಿಗಳಲ್ಲಿ ಪಬ್ಲಿಕ್ ಶಾಲೆಗಳನ್ನು ಮಾಡಿದ್ದಾರೆ. ರಾಜ್ಯ ಸರಕಾರ ಇನ್ನಷ್ಟು ಪಬ್ಲಿಕ್ ಶಾಲೆಗಳನ್ನು ಮಾಡಲು ಹೊರಟಿದೆ ಒಳ್ಳೆಯದು. ನಮ್ಮ ಮಕ್ಕಳಿಗೆ ಪ್ರತಿಭೆ ಕೊರತೆಯಿಲ್ಲ. ನಾನು ಸಿಎಂ ಆಗಿದ್ದಾಗ 30 ಸಾವಿರ ಶಾಲಾ ಕೊಠಡಿ ನಿರ್ಮಿಸಲು ತೀರ್ಮಾನಿಸಿ 10 ಸಾವಿರ ಕೊಠಡಿ ನಿರ್ಮಿಸಿದ್ದೇವು ಈಗ ಯೋಜನೆ ನಿಂತಿದೆ. ಕಂಠಪಾಠದ ಶಿಕ್ಷಣ ನಿಲ್ಲಬೇಕು. ಶಿಕ್ಷಣದಲ್ಲಿ ಕ್ರಾಂತಿಯಾದರೆ ದೇಶದಲ್ಲಿ ಕ್ರಾಂತಿಯಾಗುತ್ತದೆ. ಎಲ್ಲ ಶಿಕ್ಷಣವನ್ನು ನೌಕರಿಗೆ ಮಾಡುತ್ತೇವೆ ಉದ್ಯೋಗ ಅರಸುವ ಶಿಕ್ಷಣ ಬಹಳ ದಿನ ಇರುವುದಿಲ್ಲ. ಉದ್ಯೋಗ ಕೊಡುವ ಶಿಕ್ಷಣ ಆರಂಭಿಸಬೇಕು ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಆಡಳಿತ ಎಂದರೆ ಕರ್ನಾಟಕ ಎನ್ನುವ ದಿನಗಳು ಮತ್ತೆ ಬರಬೇಕು. ಹಿಂದಿನ ಉತ್ತಮ ಆಡಳಿತ ಮತ್ತೆ ಬರಬೇಕು. ಈ ಸರಕಾರದ ಕೆಟ್ಟ ಆಡಳಿತದಿಂದ ಜನರು ರೋಸಿ ಹೋಗಿದ್ದಾರೆ. ಐಟಿ ಬಿಟಿ ರಾಜಧಾನಿ, ಶಿಕ್ಷಣ ತಂತ್ರಜ್ಞಾನದ ಅವಾಸ್ಥಾನವಾಗಿದ್ದ ಬೆಂಗಳೂರು ನಗರದ ಮೂಲಸೌಕರ್ಯ ಪೂರ್ಣವಾಗಿ ಹಾಳಾಗಿದೆ. ಯಾರಾದರೂ ಪ್ರಾಜ್ಞರು ಉತ್ತಮ ಸಲಹೆ ಕೊಟ್ಟರೆ ಅದನ್ನು ಸ್ವೀಕಾರ ಮಾಡುವ ಮನಸ್ಥಿತಿ ಈ ಸರಕಾರಕ್ಕಿಲ್ಲ.

- ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ರಾಜ್ಯ ಕೆಟ್ಟ ಆಡಳಿತಕ್ಕೆ ಹೆಸರಾಗುತ್ತಿದೆ: ಎಚ್‌ಡಿಕೆ

ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಕರ್ನಾಟಕ ಅತ್ಯುತ್ತಮ ಆಡಳಿತಕ್ಕೆ ಪ್ರತೀಕವಾಗಿತ್ತು. ಅತ್ಯುತ್ತಮ ಅಭಿವೃದ್ಧಿ ಮಾದರಿ ಅಳವಡಿಸಿಕೊಂಡು ಇಡೀ ರಾಷ್ಟ್ರಕ್ಕೆ ಮೇಲ್ಪಂಕ್ತಿ ಆಗಿತ್ತು. ಆದರೆ, ಈಗಿನ ಸರಕಾರದ ಕೆಟ್ಟ ಆಡಳಿತದಲ್ಲಿ ಎಲ್ಲಾ ಹೆಗ್ಗಳಿಕೆಗಳು ಹೋಗಿ ಅತ್ಯುತ್ತಮ ಎನ್ನುವುದರ ವಿರುದ್ಧ ದಿಕ್ಕಿನಲ್ಲಿ ರಾಜ್ಯವೂ ಹೋಗುತ್ತಿದೆ. ಈಗಿನ ಸರಕಾರ ಶಿಕ್ಷಣ ಕ್ಷೇತ್ರವನ್ನು ಹಾಳು ಸಂಪೂರ್ಣವಾಗಿ ಮಾಡಿದೆ. ಶಿಕ್ಷಣ ಕ್ಷೇತ್ರದಲ್ಲಿಯೂ ಕರ್ನಾಟಕ ಮೇರು ಸದೃಶ ರಾಜ್ಯವಾಗಿತ್ತು. ವಾಜಪೇಯಿ ಅವರ ಸ್ಮರಣೆ ಸಂದರ್ಭದಲ್ಲಿ ಈ ಸರಕಾರದ ಬಗ್ಗೆ ಮಾತಾಡಿದರೆ ನಾವು ಸಣ್ಣವರು ಆಗುತ್ತೇವೆ ಎನ್ನುವುದು ನನ್ನ ಭಾವನೆ. ಉತ್ತಮ ಆಡಳಿತದಲ್ಲಿ ಮೊದಲ ಸ್ಥಾನದಲ್ಲಿದ್ದ ರಾಜ್ಯ ಕರ್ನಾಟಕ, ಇವತ್ತು ಈ ರಾಜ್ಯಕ್ಕೆ ಏನಾಗಿದೆ? ಒಳ್ಳೆಯ ರಾಜ್ಯದಲ್ಲಿ ಹುಡುಗಾಟಿಕೆ ರಾಜಕೀಯ ನಡೆಯುತ್ತಿದೆ. ಆರೋಗ್ಯ ಶಿಕ್ಷಣ, ಕೃಷಿ, ಕಂದಾಯ ಸೇರಿ ಎಲ್ಲಾ ಇಲಾಖೆಗಳ ಆಡಳಿತ ಹದಗೆಟ್ಟು ಹೋಗಿದೆ. ಇನ್ನಾದರೂ ಜನರು ಆಲೋಚನೆ ಮಾಡಬೇಕಿದೆ ಎಂದು ಅಭಿಪ್ರಾಯಪಟ್ಟರು.

ಕಿರುಕುಳಕ್ಕೆ ಬೇಸತ್ತು ಪತಿಗೆ ಇರಿದ ಪತ್ನಿ

ಬೆಂಗಳೂರು: ಕೆಲಸಕ್ಕೆ ಹೋಗದೆ ಕುಡಿದು ಬಂದು ವಿನಾಕಾರಣ ಜಗಳವಾಡುತ್ತಿದ್ದ ಪತಿಯನ್ನು ಪತ್ನಿಯೇ ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ವರ್ತೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಅಸ್ಸಾಂ ಮೂಲದ ರಾಜೀವ್ ರಜಪೂತ್ (28) ಕೊಲೆಯಾದ ವ್ಯಕ್ತಿ. ಎಂಟು ವರ್ಷದ ಹಿಂದೆ ರುಬಿನಾ ಕೌರ್ ಎಂಬುವವರನ್ನು ರಾಜೀವ್ ರಜಪೂತ್ ಮದುವೆಯಾಗಿದ್ದು, ದಂಪತಿಗೆ ಒಂದು ಮಗುವಿದೆ. ಈ ಕುಟುಂಬ ವರ್ತೂರಿನ ಮುನೇಕೊಳಲು ಶಿರಡಿ ಸಾಯಿಬಾಬಾ ದೇವಸ್ಥಾನದ ಬಳಿ ವಾಸವಾಗಿದೆ. ರಾಜೀವ್ ರಜಪೂತ್ ಕೆಲಸಕ್ಕೆ ಹೋಗದೆ ಅಲ್ಲಿಲ್ಲಿ ತಿರುಗಾಡಿಕೊಂಡು ಮದ್ಯ ಸೇವಿಸಿ ಮನೆಗೆ ಬಂದು ವಿನಾಕಾರಣ ಪತ್ನಿ ರುಬಿನಾ ಜತೆ ಪ್ರತಿದಿನ ಜಗಳವಾಡುತ್ತಿದ್ದನು. ಕುಟುಂಬ ನಿರ್ವಹಣೆಗಾಗಿ ತಾನು ಕೆಲಸಕ್ಕೆ ಹೋಗುವುದಾಗಿ ರುಬಿನಾ ಕೇಳಿದರೂ ಪತಿ ಕೆಲಸಕ್ಕೆ ಕಳುಹಿಸಿಲ್ಲ. ಹಾಗೆಯೇ ದಿನ ದೂಡುತ್ತಿದ್ದನು.ನಿನ್ನೆ ರಾತ್ರಿ ಕುಡಿದು ಬಂದು ಪತ್ನಿ ಜತೆ ಜಗಳವಾಡಿದ್ದಾನೆ. ಇಂದು ಬೆಳಗಿನ ಜಾವ ರಾಜೀವ್ ಮತ್ತೆ ಪತ್ನಿ ಜತೆ ಜಗಳವಾಡಿದಾಗ ಆತನ ವರ್ತನೆಯಿಂದ ರೋಸಿ ಹೋದ ಆಕೆ ಅಡುಗೆ ಮನೆಗೆ ಹೋಗಿ ಚಾಕು ತೆಗೆದುಕೊಂಡು ಪತಿಯ ಎದೆ, ಹೊಟ್ಟೆ ಸೇರಿದಂತೆ ಇನ್ನಿತರ ದೇಹದ ಭಾಗಗಳಿಗೆ ಇರಿದಿದ್ದಾಳೆ.ತೀವ್ರ ರಕ್ತಸ್ರಾವದಿಂದಾಗಿ ಸ್ಥಳದಲ್ಲೆ ರಾಜೀವ್ ರಜಪೂತ್ ಕುಸಿದು ಬಿದ್ದಿದ್ದಾರೆ.

ಕೂಗಾಟದ ಶಬ್ದ ಕೇಳಿ ಅಕ್ಕಪಕ್ಕದ ನಿವಾಸಿಗಳು ಇವರ ಮನೆ ಬಳಿ ಬಂದು ನೋಡಿದಾಗ ರಕ್ತದ ಮಡುವಿನಲ್ಲಿ ವ್ಯಕ್ತಿ ಬಿದ್ದಿರುವುದು ಕಂಡು ಬಂದಿದೆ.ತಕ್ಷಣ ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಿಶೀಲನೆ ನಡೆಸಿದಾಗ ವ್ಯಕ್ತಿ ಮೃತಪಟ್ಟಿರುವುದು ಕಂಡು ಬಂದಿದೆ. ಈ ಬಗ್ಗೆ ವರ್ತೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮೃತದೇಹವನ್ನು ಆಸ್ಪತ್ರೆಗೆ ರವಾನಿಸಿ ರುಬಿನಾಳನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹೊಸ ವರ್ಷಾಚರಣೆ: ಹಿರಿಯ ಪೊಲೀಸ್ ಅಧಿಕಾರಿಗಳ ಬೈಕ್ ರೈಡ್

ಬೆಂಗಳೂರು: ಹೊಸ ವರ್ಷಾಚರಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ, ಬೆಂಗಳೂರಿನ ಪ್ರಮುಖ ವಾಣಿಜ್ಯ ಹಾಗೂ ಮನರಂಜನಾ ಕೇಂದ್ರವಾಗಿರುವ ಕೋರಮಂಗಲ ಪ್ರದೇಶದಲ್ಲಿ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಭದ್ರತಾ ಕ್ರಮಗಳನ್ನು ಕೈಗೊಂಡಿದೆ. ಜನಸಂದಣಿ ಹೆಚ್ಚಾಗುವ ನಿರೀಕ್ಷೆಯ ಹಿನ್ನೆಲೆ, ಸಾರ್ವಜನಿಕರ ಸುರಕ್ಷತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳೀಯ ಮಟ್ಟದಲ್ಲಿ ಸಮಗ್ರ ಪರಿಶೀಲನೆ ನಡೆಸಿದ್ದಾರೆ.

ಬೆಂಗಳೂರು ನಗರ ಪೊಲೀಸ್ ಆಯುಕ್ತರಾದ ಸೀಮಂತ್ ಕುಮಾರ್ ಸಿಂಗ್ ಅವರು ಖುದ್ದಾಗಿ ಕೋರಮಂಗಲ ಪ್ರದೇಶದಲ್ಲಿ ಬೈಕ್ ರೈಡ್ ಮೂಲಕ ಪರಿಶೀಲನೆ ನಡೆಸಿದರು. ಈ ವೇಳೆ ಕೋರಮಂಗಲದ ಪ್ರಮುಖ ಜಂಕ್ಷನ್‌ಗಳು, ಪಬ್ ರಸ್ತೆ, ಜನಸಂದಣಿ ಹೆಚ್ಚಾಗುವ ಸ್ಥಳಗಳು ಹಾಗೂ ಸಂಚಾರ ದಟ್ಟಣೆ ಇರುವ ರಸ್ತೆಗಳಲ್ಲಿ ಸುತ್ತು ಹಾಕಿ ಭದ್ರತಾ ವ್ಯವಸ್ಥೆಗಳ ಬಗ್ಗೆ ಪರಿಶೀಲಿಸಿದರು. ಈ ಪರಿಶೀಲನಾ ಕಾರ್ಯದಲ್ಲಿ ಪೂರ್ವ ವಲಯದ ಜಂಟಿ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ, ಟ್ರಾಫಿಕ್ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ, ಸಿಸಿಬಿ ಡಿಸಿಪಿ ಹರಿಬಾಬು ಸೇರಿದಂತೆ ಹಲವು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಜೊತೆಗೆ ಸ್ಥಳೀಯ ಠಾಣೆಗಳ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯೂ ಈ ಪರಿಶೀಲನೆಗೆ ಸಾಕ್ಷಿಯಾದರು.

ಕೋರಮಂಗಲದಿಂದ ಆರಂಭವಾದ ಪರಿಶೀಲನೆ: ಕೋರಮಂಗಲದ ಸುಖ ಸಾಗರ್ ಹೋಟೆಲ್ ಜಂಕ್ಷನ್ನಿಂದ ಆರಂಭಗೊಂಡ ಪರಿಶೀಲನೆ, ವಿವಿಧ ಪ್ರಮುಖ ರಸ್ತೆಗಳಲ್ಲಿ ಮುಂದುವರಿದಿತು. ಹೊಸ ವರ್ಷಾಚರಣೆಯ ವೇಳೆ ಕೋರಮಂಗಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಲಿದ್ದಾರೆ ಎಂಬ ಅಂದಾಜಿನ ಹಿನ್ನೆಲೆ, ಪೊಲೀಸರು ವಿಶೇಷ ಭದ್ರತಾ ಯೋಜನೆಯನ್ನು ರೂಪಿಸಿದ್ದಾರೆ. ಈ ಬಾರಿ ಕೋರಮಂಗಲದಲ್ಲಿ ತಾತ್ಕಾಲಿಕ ಕಂಟ್ರೋಲ್ ರೂಂ ಅನ್ನು ಸ್ಥಾಪಿಸಲಾಗಿದ್ದು, ಒಂದು ಕಟ್ಟಡದ ಟಾಪ್ ಫ್ಲೋರ್‌ನಲ್ಲಿ ಕಂಟ್ರೋಲ್ ರೂಂ ಕಾರ್ಯ ನಿರ್ವಹಿಸಲಿದೆ. ಅಲ್ಲಿಂದಲೇ ಸಿಸಿಟಿವಿ ಕ್ಯಾಮೆರಾಗಳ ಮೂಲಕ ಪ್ರತಿಯೊಂದು ಚಲನವಲನವನ್ನು ನಿಗಾ ವಹಿಸಲಾಗುತ್ತದೆ. ಜೊತೆಗೆ ಪಬ್ ರಸ್ತೆ ಸೇರಿದಂತೆ ಪ್ರಮುಖ ಪ್ರದೇಶಗಳಲ್ಲಿ ಇನ್ನೊಂದು ತಾತ್ಕಾಲಿಕ ಕಂಟ್ರೋಲ್ ರೂಂ ಕೂಡ ಕಾರ್ಯಾಚರಣೆ ನಡೆಸಲಿದೆ.

ಪ್ರತಿ ಇಂಚಿನ ಪ್ರದೇಶವೂ ಸಿಸಿಟಿವಿ ನಿಗಾವಲಯದಲ್ಲಿ ಇರಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ ಬಂದೋಬಸ್ತ್ ಮಾಡಲಾಗಿದೆ. ಎಲ್ಲೆಲ್ಲಿ ಯಾವ ರೀತಿಯ ಭದ್ರತಾ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನು ಡಿಸಿಪಿ ಸಾರಾ ಫಾತಿಮಾ ಅವರು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರಿಗೆ ವಿವರವಾಗಿ ಮಾಹಿತಿ ನೀಡಿದರು. ಪೊಲೀಸರು ಸಾರ್ವಜನಿಕರಿಗೆ ಭದ್ರತೆ ಕುರಿತಾಗಿ ಅರಿವು ಮೂಡಿಸುವ ಪ್ರಯತ್ನದಲ್ಲಿದ್ದು, ಹೊಸ ವರ್ಷಾಚರಣೆಯನ್ನು ಶಾಂತಿಯುತವಾಗಿ ಹಾಗೂ ಸುರಕ್ಷಿತವಾಗಿ ಆಚರಿಸಲು ಸಹಕಾರ ನೀಡುವಂತೆ ಮನವಿ ಮಾಡಿದ್ದಾರೆ. ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ.

ಗಾಳಿಯ ಗುಣಮಟ್ಟ ಪತ್ತೆಗೆ ಸೆನ್ಸಾರ್

ಬೆಂಗಳೂರು: ನಗರದಲ್ಲಿ ವಾಯುಮಾಲಿನ್ಯದ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಶುದ್ಧ ಗಾಳಿಯ ಸೂಚ್ಯಂಕದಲ್ಲಿ ಕುಸಿತವಾಗುತ್ತಿರುವುದಕ್ಕೆ ಗಾಳಿಯ ಗುಣಮಟ್ಟವನ್ನು ಪತ್ತೆ ಹಚ್ಚಲು ಜಿಬಿಎ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿ ಸೆನ್ಸಾರ್ ಅಳವಡಿಕೆಗೆ ಮುಂದಾಗಿದೆ. ಗಾಳಿಯ ಗುಣಮಟ್ಟ ಕುಸಿತವಾಗಲು ಕಾರಣವೇನು? ನಗರದ ಯಾವ ಭಾಗದಲ್ಲಿ ಗಾಳಿ ಗುಣಮಟ್ಟ ಕುಸಿತವಾಗುತ್ತಿದೆ ಎಂಬುದನ್ನು ಪತ್ತೆ ಹಚ್ಚಲು ಮುಂದಾಗಿದೆ. ಗಾಳಿಯ ಗುಣಮಟ್ಟ ಕುಸಿತಕ್ಕೆ ಸಂಚಾರ ದಟ್ಟಣೆ ಕಾರಣವೇ ಅಥವಾ ಕಟ್ಟಡ ನಿರ್ಮಾಣದ ಅವಶೇಷಗಳು ಕಾರಣವೇ ಅಥವಾ ಬೇರೆ ಕಾರಣ ಏನಾದರೂ ಇದೆಯಾ ಎಂದು ಪತ್ತೆ ಹಚ್ಚಲು ಬೆಂಗಳೂರಿನ 85 ಮೆಟ್ರೋ ನಿಲ್ದಾಣ, 55 ಬಿಎಂಟಿಸಿಯ ಟಿಟಿಎಂಸಿ ಕಟ್ಟಡ , ಪ್ರಮುಖ ರಸ್ತೆ ಮತ್ತು ಫ್ಯಾಕ್ಟರಿಗಳು ಇರುವ ಪ್ರದೇಶಗಳಲ್ಲಿ ಸೆನ್ಸಾರ್ ಅಳವಡಿಕೆ ಮಾಡಲು ಮುಂದಾಗಿದೆ.

ಪಾರ್ಕಿಂಗ್ ಜಾಗ ಖರೀದಿಗೆ ನಿರ್ಧಾರ

ಬೆಂಗಳೂರು: ನಮ್ಮ ಮೆಟ್ರೋದ ಪ್ರಯಾಣಿಕರ ಬಹುದೊಡ್ಡ ಸಮಸ್ಯೆಯಾದ ಪಾರ್ಕಿಂಗ್ ವ್ಯವಸ್ಥೆಗೆ ಪರಿಹಾರ ಕಂಡುಕೊಳ್ಳಲು ಮೆಟ್ರೋ ಮುಂದಾಗಿದೆ.

ಮೆಟ್ರೋ ಸ್ಟೇಷನ್‌ಗಳ ಬಳಿ ಪಾರ್ಕಿಂಗ್ ವ್ಯವಸ್ಥೆ ಇಲ್ಲದೆ ಮೆಟ್ರೋ ಪ್ರಯಾಣಿರು ಸ್ಟೇಷನ್‌ನ ಅಕ್ಕಪಕ್ಕದ ರಸ್ತೆಗಳಲ್ಲಿ ಹಾಗೂ ಮನೆಗಳ ಗೇಟ್ ಬಳಿ ವಾಹನಗಳನ್ನು ಪಾರ್ಕ್ ಮಾಡುತ್ತಿದ್ದು, ಇದರಿಂದ ಭಾರಿ ಪ್ರಮಾಣದಲ್ಲಿ ಸಂಚಾರ ದಟ್ಟಣೆಯುಂಟಾಗುತ್ತಿದೆ. ಡಿಸಿಎಂ ಸೂಚನೆ ಹಿನ್ನೆಲೆ ಬಿಎಂಆರ್‌ಸಿಎಲ್ ಅಧಿಕಾರಿಗಳು ಮುಂದಿನ ದಿನಗಳಲ್ಲಿ ಆರಂಭವಾಗಲಿರುವ ಮೆಟ್ರೋ ಮಾರ್ಗಗಳು ಮತ್ತು ವಿಸ್ತರಣೆ ಆಗಲಿರುವ ಮೆಟ್ರೋ ಮಾರ್ಗಗಳಾದ ಕಿತ್ತಳೆ ಮಾರ್ಗ, ನೀಲಿ ಮಾರ್ಗ, ಕೆಂಪು ಮಾರ್ಗ, ಗುಲಾಬಿ ಮಾರ್ಗ, ಹಳದಿ ಮಾರ್ಗಗಳ ನಿಲ್ದಾಣಗಳ ಬಳಿ ಮಲ್ಟಿ ಲೆವೆಲ್ ಪಾರ್ಕಿಂಗ್ ನಿರ್ಮಾಣ ಮಾಡಲು ಅಕ್ಕಪಕ್ಕದ ಜಾಗವನ್ನು ಪತ್ತೆ ಮಾಡಲು ಮುಂದಾಗಿದ್ದಾರೆ. ಮೆಟ್ರೋ ನಿಲ್ದಾಣಗಳಲ್ಲಿ ಬಹುಮಹಡಿ ಪಾರ್ಕಿಂಗ್ ಸ್ಲಾಟ್‌ಗಳ ನಿರ್ಮಾಣಕ್ಕೆ ನಿರ್ಧಾರ ಮಾಡಿದ್ದಾರೆ.

BEFORE THE NOMINEE OF DEPUTY REGISTRAR OF CHITS,
I ZONE, MARGOSA ROAD, MALLESWARAM, AT BANGALORE
Dispute No. DRB-I ZONE/CHITS/66/2025-2026

DISPUTANT: M/s. DHANALAKSHMI SRINIVASAN CHIT FUNDS (KAR) PVT. LTD.,
Registered Office at # 32, 2nd Floor, B Main Road, 8th B Cross, 'B' Sector, Near Ganapathi Temple. Yelahanka New Town, BENGALURU-560 064
Branch: BASAVESHWARANAGAR, Represented by its Foreman & Branch Manager, Mr. J. RAJKUMAR

OPPONENTS: Mr. R. MOHANKUMAR & ORS.
1. Mr. R. MOHANKUMAR,
S/o Mr. Ramachandra, Major, #18/19, 8th Cross Road, Shivananda Nagar, Nagarabhavi Main Road, Near Santhosh Gym, BANGALORE -560 072
ALSO AT: Mr. R. MOHANKUMAR,
S/o Mr. Ramachandra, Major, M/s. Bosch Automotive Electronics (1) Pvt. Ltd. Naganathapura, P. B. No. 10029, Electronic City (P), BANGALORE -560 100.

NOTICE OF CONDITIONAL ATTACHMENT OF IMMOVABLE PROPERTY OF OPPONENT No. 1, BY PAPER PUBLICATION

WHEREAS, the Disputant has filed the above dispute U/s 64 of The Chit Funds Act, 1982 before The Deputy Registrar of Chits, 2nd Zone, Bangalore for recovery of a sum of **Rs. 14,21,470/-** along with interest at 24% p.a. and the Court Costs from the Opponents and the above dispute has been referred to me for adjudication & disposal in accordance with law.

WHEREAS, the Disputant has filed an interim application U/s 68 of The Chit Funds Act, 1982 seeking for Attachment Before Judgment (ABJ) of the Immovable Property of Opponent No. 1 as shown in the Schedule below.

The Opponent No. 1 named above is therefore hereby directed to furnish the Cash Security to the extent of the Suit Claim amount on or before desires to have this attachment raised. Further, the Opponent No. 1 is directed to appear before me at the Branch Office of the Disputant Company at Basaveshwaranagar at # 172, Suprabha Complex, 2nd Floor, 1st G Cross, 'B' Sector, Near Sharadha Colony Bus Stop, 3rd Stage, Basaveshwaranagar, Bangalore- 560 079 on **19-01-2026 at 3.00 PM** with all relevant documents failing which this Conditional Attachment will be made absolute for the entire Suit claim amount

SCHEDULE PROPERTY

All that piece and parcel of Eastern portion of the Residential Property bearing # 30, Gramatana Assessment No. 27/2, Old Khatha No. 121, New Khatha No. 937, Kachohalli Village, Dasanapura Hobli, Bangalore North Taluk measuring East to West 20 Feet and North to South 30 Feet totally 600 Square Feet with 9.5 Squares on the Ground Floor, 5 Squares on the First Floor house in total 19 Squares building constructed therein and bounded on: **EAST By:** Site No. 21, **WEST By:** Western Portion of the remaining same Property, **NORTH By :** Road, **SOUTH By:** Site No. 29.

Given Under my hand & seal on 23/12/2025

Nominee of The Deputy Registrar of Chits, I Zone, Bangalore

ADVOCATE FOR DISPUTANT:
K. R. DINAKAR, ADVOCATE
#66, 4th Cross, Ashok Nagar, Near N. R. Colony, BANGALORE-560 050.
Mob: 94485 39699.

BEFORE THE NOMINEE OF DEPUTY REGISTRAR OF CHITS, I ZONE, MARGOSA ROAD , MALLESWARAM, AT BANGALORE
Dispute No. DRB-I ZONE/CHITS/ 68/2025-2026

DISPUTANT: M/s. DHANALAKSHMI SRINIVASAN CHIT FUNDS (KAR) PVT. LTD.,
Registered Office at # 32, 2nd Floor, 1st 'B' Main Road, 8th 'B' Cross, 'B' Sector, Near Ganapathi Temple, Yelahanka New Town, BENGALURU-560 064.
Branch: **BASAVESHWARANAGAR,**
Represented by its Foreman & Branch Manager, Mr. **J. RAJKUMAR** -Vs-

OPPONENTS: Mr. G. RANGANATH & ORS.
1. Mr. G. RANGANATH,
S/o Late A. Govindappa, Major, # S 38, SFHS Layout Extension, Near S.G.International School, Nandini Layout, Bangalore- 560 096.
ALSO AT: Mr. G. RANGANATH, S/o Late A. Govindappa, Major, Proprietor, M/s. Chandana Enterprises, No. 40/8, Ground Floor, Om Shakthi Temple Road, 9th Cross Road, Sanjeevini Nagar, Hegganahalli Cross, BANGALORE - 560 091

NOTICE OF CONDITIONAL ATTACHMENT OF IMMOVABLE PROPERTY OF OPPONENT No. 1 BY PAPER PUBLICATION,

Whereas, the Disputant has filed the above dispute U/s 64 of The Chit Funds Act, 1982 before The Deputy Registrar of Chits, 2nd Zone, Bangalore for recovery of a sum of **Rs. 8,86,547/-** along with interest at 24% p.a. and the Court Costs from the Opponents and the above dispute has been referred to me for adjudication & disposal in accordance with law.

Whereas, the Disputant has filed an interim application U/s 68 of The Chit Funds Act, 1982 seeking for Attachment Before Judgment (ABJ) of the Immovable Property of Opponent No. 1 as shown in the Schedule below.

The Opponent No. 1 named above is therefore hereby directed to furnish the Cash Security to the extent of the Suit Claim amount on or before if he desires to have this attachment raised. Further, the Opponent No. 1 is directed to appear before me at the Branch Office of the Disputant Company at Basaveshwaranagar at # 172, Suprabha Complex, 2nd Floor, 1st G Cross, 'B' Sector, Near Sharadha Colony Bus Stop, 3rd Stage, Basaveshwaranagar, Bangalore-560 079 on **19-01-2026 at 3-00 PM** with relevant documents failing which this Conditional Attachment will be made absolute for the entire Suit claim amount.

SCHEDULE PROPERTY

All that piece and parcel of Property bearing Site # 8, Assessment No. 40 Khatha No. 40/08, Hegganahalli Village, earlier Yeshwanthapura Hobli, later on Dasanapura CMC Ward No. 35, Bangalore North Taluk now coming under the limits of BBMP Ward No. 71 measuring East to West 60 Feet and North to South 30 Feet totally 1800 Square Feet and bounded on:**EAST By**: Road **WEST By**:Muninanjamma & Akkayyamma's Property, **NORTH By**:Site No. 9, **SOUTH By :** Site No. 7.

Given Under my hand & seal on 23/12/2025

Nominee of Deputy Registrar of Chits, I Zone, Bangalore

ADVOCATE FOR DISPUTANT:
K. R. DINAKAR,ADVOCATE
#66, 4th Cross, Ashok Nagar, Near N. R. Colony, BANGALORE -560 050.
Mob: 94485 39699

ನಗರದಲ್ಲಿ ಒಂದು ವಾರ ಭಾರಿ ಚಳಿ

ಬೆಂಗಳೂರು: ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಚಳಿಯ ವಾತಾವರಣ ಕಂಡು ಬರುತ್ತಿದ್ದು,. ಮುಂದಿನ ಏಳು ದಿನಗಳ ಕಾಲ ಚಳಿ ಹಾಗೂ ಮಂಜಿನ ವಾತಾವರಣ ಕಂಡು ಬರಲಿದೆ.

ಬೆಂಗಳೂರು ನಗರದಲ್ಲಿ ಆಹ್ಲಾದಕರ ಚಳಿ ಇರಲಿದ್ದು, ಬೆಳಗ್ಗೆ ತಂಪಾಗಿದ್ದು, ತಾಪಮಾನ ಸುಮಾರು 17ಡಿ.ಸೆ ಇರಲಿದೆ. ಮುಂದಿನ 7 ದಿನಗಳಲ್ಲಿ ಮಂಜು ಬೀಳಲಿದ್ದು, ರಾತ್ರಿಯಲ್ಲಿ ಗರಿಷ್ಠ ತಾಪಮಾನವು ಸುಮಾರು 26ಡಿ.ಸೆ ತಲುಪುವ ನಿರೀಕ್ಷೆಯಿದೆ. ಕನಿಷ್ಠ ತಾಪಮಾನವು ಸುಮಾರು 15ಡಿ.ಸೆ ಇರುತ್ತದೆ. ಡಿಸೆಂಬರ್ ತಿಂಗಳ ಸರಾಸರಿ ತಾಪಮಾನದ ವ್ಯಾಪ್ತಿಯು 16ಡಿ.ಸೆ ನಿಂದ 28ಡಿ.ಸೆವರೆಗೆ ಇರುತ್ತದೆ. ಪ್ರಸ್ತುತ ತಾಪಮಾನವು ಈ ವ್ಯಾಪ್ತಿಯಲ್ಲಿಯೇ ಇರಲಿದೆ. ದಿನವು ಬಹುತೇಕ ಮೋಡ ಕವಿದ ವಾತಾವರಣದಿಂದ ಕೂಡಿರುತ್ತದೆ, ಮಳೆಯಾಗುವ ಸಾಧ್ಯತೆ ಕಡಿಮೆ ಇರುತ್ತದೆ, ಇದರಿಂದಾಗಿ ಹಗಲಿನಲ್ಲಿ ಸಾಕಷ್ಟು ಬಿಸಿಲು ಇರುತ್ತದೆ. ಉತ್ತರ, ಮಧ್ಯ, ದಕ್ಷಿಣ ಒಳನಾಡು ಹಾಗೂ ಬೆಂಗಳೂರಿನಲ್ಲಿ ದಟ್ಟ ಮಂಜು ಕವಿದ ವಾತಾವರಣ ಇರಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ಕರಾವಳಿ ಭಾಗದಲ್ಲಿ ಇಂದು ಮೋಡ ಕವಿದ ವಾತಾವರಣ ಇರಲಿದ್ದು, ಮಳೆಯಾಗುವ ಸಾಧ್ಯತೆ ಕಡಿಮೆ ಇದೆ. ಇನ್ನು ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಶೀತಗಾಳಿ ಇರಲಿದೆ. ಬೀದರ್, ಕಲಬುರಗಿ, ವಿಜಯಪುರ ಜಿಲ್ಲೆಗಳಲ್ಲಿ ಚಳಿ ಅಧಿಕವಾಗಿದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಬೆಳಗಾವಿ, ಬಾಗಲಕೋಟೆ, ಬಳ್ಳಾರಿ, ವಿಜಯನಗರ, ಯಾದಗಿರಿ, ರಾಯಚೂರು, ಗದಗ, ಒಣ ಹವೆ ಇರಲಿದೆ.

ಕಿರುಕುಳ ಆರೋಪ: ನವ ವಿವಾಹಿತೆ ಸಾವು

ಬೆಂಗಳೂರು: ಮದುವೆಯಾಗಿ ಒಂದು ತಿಂಗಳು ಕಳೆಯುವುದರೊಳಗೆ ನವ ವಿವಾಹಿತೆ ನಿಗೂಢವಾಗಿ ಮೃತಪಟ್ಟಿರುವ ಘಟನೆ ನೆಲಮಂಗಲದಲ್ಲಿ ನಡೆದಿದೆ.

ಐಶ್ವರ್ಯ (26) ಮೃತ ಯುವತಿ. ಗಂಡನೇ ಆಕೆಯನ್ನು ಕೊಲೆ ಮಾಡಿರೋದಾಗಿ ಪೋಷಕರು ಆರೋಪಿಸಿದ್ದಾರೆ. 27 ದಿನಗಳ ಹಿಂದೆಯಷ್ಟೇ ಲಿಖಿತ್ ಸಿಂಹ ಜತೆ ಐಶ್ವರ್ಯ ಮದುವೆ ನಡೆದಿತ್ತು. ಸುಂದರ ಸಂಸಾರದ ಕನಸು ಕಂಡಿದ್ದ ಐಶ್ವರ್ಯ, ಸಾಂಸಾರಿಕ ಬದುಕನ್ನು ಸರಿಯಾಗಿ ಆರಂಭಿಸುವ ಮುನ್ನವೇ ಪ್ರಾಣ ಕಳೆದುಕೊಂಡಿದ್ದಾರೆ.

ಬುಧವಾರ ಸಂಜೆ ವೇಳೆಗೆ ಲಿಖಿತ್ ತಮ್ಮ ಕರೆ ಮಾಡಿ ಐಶ್ವರ್ಯ ಆತ್ಮಹತ್ಯೆ ಮಾಡಿಕೊಂಡಿ ರುವ ಬಗ್ಗೆ ಆಕೆಯ ಪೋಷಕರಿಗೆ ಮಾಹಿತಿ ನೀಡಿದ್ದಾರೆ. ಈ ಹಿನ್ನೆಲೆ ಮನೆಗೆ ಬಂದು ನೋಡಿದಾಗ ನೇಣು ಬಿಗಿದ ಸ್ಥಿತಿಯಲ್ಲಿ ಆಕೆಯ ಮೃತದೇಹ ಪತ್ತೆಯಾಗಿದೆ. ಆದರೆ ಬಾಗಿಲು ಒಡೆಯದ ಪರಿಣಾಮ, ಗಂಡನೇ ನೇಣುಹಾಕಿ ಕೊಲೆ ಮಾಡಿರುವ ಅನುಮಾನ ವ್ಯಕ್ತವಾಗಿದೆ. ಘಟನೆ ಸಂಬಂಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಐಶ್ವರ್ಯ ಪತಿ ಲಿಖಿತ್‌ನನ್ನು ಪೊಲೀ ಸರು ವಶಕ್ಕೆ ಪಡೆದಿದ್ದಾರೆ. ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಯಿತು.

ಪತ್ನಿಗೆ ಗಂಡನಿಂದ ಕಿರುಕುಳ ಆರೋಪ

ಮೂಲತಃ ನಾಗಮಂಗಲ ನಿವಾಸಿಗಳಾದ ಮಮತಾ ಹಾಗೂ ಕೃಷ್ಣಮೂರ್ತಿ ದಂಪತಿಯ ಹಿರಿ ಮಗಳು ಐಶ್ವರ್ಯಳನ್ನು ಬಾಗಲಗುಂಟೆ ಫೈವ್ ಲೈನ್ ಮಲ್ಲಸಂದ್ರ ನಿವಾಸಿ ಲಿಖಿತ್ ಸಿಂಹ ಅವರಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಕುಟುಂಬಸ್ಥರ ಒಪ್ಪಿಗೆಯ ಮೇರೆಗೆ ಮದುವೆ ನಡೆದಿತ್ತಾದರೂ ತಿಂಗಳು ಕಳೆಯುವದರ ಒಳಗೆ ಐಶ್ವರ್ಯಗೆ ಕಿರುಕುಳ ನೀಡಲಾಗಿದೆ. ಇದೇ ವಿಚಾರವಾಗಿ ಬುಧವಾರ ಬೆಳಿಗ್ಗೆ ಕುಟುಂಬಸ್ಥರು ರಾಜಿ ಪಂಚಾಯಿತಿ ಮಾಡಿದ್ದರು. ಇಷ್ಟಾದರೂ ಸಂಜೆ ಐಶ್ವರ್ಯಾಳ ಮೇಲೆ ಮತ್ತೆ ಹಲ್ಲೆ ಮಾಡಿರುವ ಆರೋಪ ಕೇಳಿಬಂದಿದೆ.

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್. ಸಂಖ್ಯೆ. 891/2025

ಅರ್ಜಿದಾರರು : ಶ್ರೀ ಗುಂಡನಾಯ್ಕ ಬಿನ್ ಲೇಟ್ ಬಾಲ್ಯನಾಯ್ಕ ವಯಸ್ಸು 60 ವರ್ಷಗಳು ವಾಸ: ಅರೆಕೊಪ್ಪ ಗ್ರಾಮ, ಉಯ್ಯಂಬಳ್ಳಿ ಹೋಬಳಿ ಕನಕಪುರ ತಾಲ್ಲೋಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೋಕು. 2. ಗ್ರಾಮಲೆಕ್ಕಾಧಿಕಾರಿಗಳು, ಕೋಟೆಕೊಪ್ಪ ಸರ್ಕಲ್ ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರ ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 3ನೇ ಅರ್ಜಿದಾರರ ಸಹೋದರ, 5 ರಿಂದ 7 ರವರಿಗೆ ಚಿಕ್ಕಪ್ಪ, 9 & 10 ರವರಿಗೆ ತಂದೆ ಯವರಾದ, 4ನೇ ಅರ್ಜಿದಾರರ ಭಾವನಾದ, 8ನೇ ಅರ್ಜಿದಾರರ ಗಂಡನಾದ ರಾಮನಾಯ್ಕ ಬಿನ್ ಬಾಲ್ಯನಾಯ್ಕ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಅರೆಕೊಪ್ಪ ಗ್ರಾಮದಲ್ಲಿ ದಿನಾಂಕ 11/12/2018 ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರು ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ. 26-02-2026ರ ಬೆಳಿಗ್ಗೆ ಸರಿಯಾಗಿ 11=00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

2025ರ ಡಿಸಂಬರ್ 23ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ

ಶಿರಸ್ತೆದಾರರು, ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು:
ಮಹದೇಶ ನಾಯ್ಕ, ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ ದಿನಾಂಕ: 23-12-2025

ಮಾನ್ಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 65/2025

ಅರ್ಜಿದಾರರು : 1. ಶ್ರೀ ನರಸೇಗೌಡ @ ನರಸಯ್ಯ ಬಿನ್ ಲೇಟ್ ಬೆಟ್ಟೇಗೌಡ, ವಯಸ್ಸು ಸುಮಾರು 65 ವರ್ಷ. ವಿಳಾಸ: ಹುಲಿಬೆಲೆ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು. ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು : 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ, ರಾಮನಗರ ಜಿಲ್ಲೆ. 2. ರೆವಿನ್ಯೂ ಅಧಿಕಾರಿಗಳು, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಸಹೋದರನಾದ ಶ್ರೀ ಉಗ್ರೇಗೌಡ ಉ॥ ಚಿಕ್ಕೋನು @ ಲೇಟ್ ಬೆಟ್ಟೇಗೌಡ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಹುಲಿಬೆಲೆ ಗ್ರಾಮದಲ್ಲಿ ದಿನಾಂಕ : 12.03.1994 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ 28/01/2026 ರ ಬೆಳಿಗ್ಗೆ ಸರಿ ಸುಮಾರು 11-00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಡಿಸಂಬರ್ 18ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು:
ಸಿ.ಎಸ್.ನಾರಾಯಣ, ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 18/12/2025

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್. ಸಂಖ್ಯೆ. 896/2025

ಅರ್ಜಿದಾರರು: ಶ್ರೀ ಗುಂಡನಾಯ್ಕ, ಬಿನ್ ಲೇಟ್ ಬಾಲ್ಯನಾಯ್ಕ, ವಯಸ್ಸು 60 ವರ್ಷಗಳು, ವಾಸ: ಅರೆಕೊಪ್ಪ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೋಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೋಕು, 2. ಗ್ರಾಮಲೆಕ್ಕಾಧಿಕಾರಿಗಳು ಕೋಟೆಕೊಪ್ಪ ಸರ್ಕಲ್, ಉಯ್ಯಂಬಳ್ಳಿ ಹೋಬಳಿ ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರ ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 3ನೇ ಅರ್ಜಿದಾರರ ತಾಯಿ, 5 ರಿಂದ 7, 9 & 10 ರವರಿಗೆ ಅಜ್ಜಿಯವರಾದ, 4 & 8ನೇ ರವರಿಗೆ ಅತ್ತಿಗೆಯಾದ ಲಕ್ಷ್ಮೀಬಾಯಿ ಕೋಂ ಬಾಲ್ಯನಾಯ್ಕ ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಅರೆಕೊಪ್ಪ ಗ್ರಾಮದಲ್ಲಿ ದಿನಾಂಕ 10/07/1998 ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರು ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ. 26-02-2026ರ ಬೆಳಿಗ್ಗೆ ಸರಿಯಾಗಿ 11=00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

2025ರ ಡಿಸಂಬರ್ 23ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು:
ಮಹದೇಶ ನಾಯ್ಕ, ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ ದಿನಾಂಕ: 23-12-2025

ಮಾಹಿತಿ ಆಯುಕ್ತರ ವಿರುದ್ಧದ ಎಫ್‌ಐಆರ್ ರದ್ದತಿಗೆ ನಿರಾಕರಣೆ

ಬೆಂಗಳೂರು: ಮಾಹಿತಿ ಹಕ್ಕು ಕಾಯಿದೆಯಡಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಲೇವಾರಿಗೆ ಲಂಚಕ್ಕೆ ಬೇಡಿಕೆಯಿಟ್ಟ ಆರೋಪದಲ್ಲಿ ರಾಜ್ಯ ಮಾಹಿತಿ ಆಯುಕ್ತ ರವೀಂದ್ರ ಗುರುನಾಥ್ ಢಾಕಪ್ಪ ಎಂಬುವರ ವಿರುದ್ಧ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದ ಪ್ರಕರಣವನ್ನು ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಲೋಕಾಯುಕ್ತ ಪೊಲೀಸರು ತಮ್ಮ ವಿರುದ್ಧ ದಾಖಲಿಸಿದ್ದ ಎಫ್‌ಐಆರ್ ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಣಾ ಪ್ರಕ್ರಿಯೆ ರದ್ದುಗೊಳಿಸುವಂತೆ ಕೋರಿ ಢಾಕಪ್ಪ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದಂ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೆ, ಆರೋಪವನ್ನು ಸಾಬೀತುಪಡಿಸಲು ಧ್ವನಿ ರೆಕಾರ್ಡಿಂಗ್ ಮತ್ತು ಭ್ರಷ್ಟಾಚರಕ್ಕೆ ಸಂಬಂಧಿಸಿದಂತೆ ಮೇಲ್ನೋಟಕ್ಕೆ ಪುರಾವೆಗಳಿವೆ. ತನಿಖೆ ನಡೆಸಬೇಕಾದ ಅಗತ್ಯವಿದೆ. ಅಲ್ಲದೆ, ದೂರುದಾರರು ತಪ್ಪಾಗಿ ಹಣ ವರ್ಗಾವಣೆ ಮಾಡಿ ತಕ್ಷಣ ಹಿಂದಿರುಗಿಸಿರುವುದಾಗಿ ತಿಳಿಸಲಾಗಿದೆ. ಈ ಸಂಬಂಧ ಸಂಪೂರ್ಣ ತನಿಖೆಯ ವಿಚಾರವಾಗಿದೆ. ಪ್ರಕರಣದಲ್ಲಿ ಎದುರಾಗಿರುವ ಆರೋಪಗಳ ಸಂಬಂಧ ತನಿಖೆ ನಡೆಸುವುದಕ್ಕೆ ಅಡ್ಡಿಯಾಗುವುದಿಲ್ಲ ಎಂದು ಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ: ರಾಜ್ಯ ಮಾಹಿತಿ ಆಯೋಗದ ಕಲಬುರಗಿ ಪೀಠದಲ್ಲಿ ಮಾಹಿತಿ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದ ಅರ್ಜಿದಾರ ರವೀಂದ್ರ ಢಾಕಪ್ಪ ಅವರು, ಸ್ಥಳೀಯ ಪತ್ರಿಕೆಯೊಂದರ ಪತ್ರಕರ್ತ ಸಾಯಿಬಣ್ಣ ಬೆಂಕನಹಳ್ಳಿ ಅವರಿಂದ ಸಲ್ಲಿಸಿದ್ದ ಮೇಲ್ಮನವಿಗಳ ಇತ್ಯರ್ಥ ಪಡಿಸುವುದಕ್ಕೆ 3 ಲಕ್ಷ ರೂ.ಗಳ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ದೂರುದಾರ ಸಾಯಿಬಣ್ಣ ಬೆಂಕನಹಳ್ಳಿ ಮಾರ್ಚ್ 27ರಂದು ದೂರು ದಾಖಲಿಸಿದ್ದರು. 3 ಲಕ್ಷಕ್ಕೆ ಬೇಡಿಕೆಯಿಟ್ಟ 1 ಲಕ್ಷ ರು.ಗಳನ್ನು ಸಾಯಿ ಹರ್ಷ ಎಂಬುವರ ಖಾತೆಗೆ ಯುಪಿಐ ಮೂಲಕ ವರ್ಗಾವಣೆ ಮಾಡಿಸಿಕೊಳ್ಳಲಾಗಿತ್ತು. ಈ ಸಂಬಂಧ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ವೇಳೆ ಅರ್ಜಿದಾರ ಢಾಕಪ್ಪ ಪರ ವಕೀಲರು, ದೂರುದಾರರು ಆರೋಪಿಸಿರುವ ಮೊತ್ತವನ್ನು ಸಾಯಿ ಹರ್ಷ ಎಂಬುವರು ಐಸಿಐಸಿಐ ಬ್ಯಾಂಕ್ ಖಾತೆಗೆ ಹಣ ಜಮಾಯಿಸಲಾಗಿದೆ. ಹಣ ವರ್ಗಾವಣೆ ತಪ್ಪಾಗಿದೆ ಎಂದು ಗೊತ್ತಾಗಿ ಆ ಹಣವನ್ನು ಮೂರು ನಿಮಿಷಗಳಲ್ಲಿ ದೂರುದಾರರ ಬ್ಯಾಂಕ್ ಖಾತೆಗೆ ಹಿಂದಿರುಗಿಸಲಾಗಿದೆ. ಘಟನೆಗೂ ತಮ್ಮ ಕಕ್ಷಿದಾರರಿಗೆ ಯಾವುದೇ ಸಂಬಂಧವಿಲ್ಲ. ಅಲ್ಲದೆ, ಆರೋಪ ಸಂಬಂಧ ಧ್ವನಿ ಸಂಗ್ರಹವನ್ನು ಪಡೆದುಕೊಳ್ಳುವುದಕ್ಕೂ ಮುನ್ನ ಎಫ್‌ಐಆರ್ ದಾಖಲಿಸಿಲ್ಲ. ಪ್ರಕರಣ ರದ್ದುಗೊಳಿಸಬೇಕು ಎಂದು ಕೋರಿದ್ದರು.

₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶುಕ್ರವಾರ 26.12.2025 ಸಂಪುಟ: 10 ಸಂಚಿಕೆ: 345 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಖೇಲ್ ರತ್ನಕ್ಕೆ ಹಾರ್ದಿಕ್ ಸಿಂಗ್ ಹೆಸರು

ಭಾರತದ ಪುರುಷರ ಹಾಕಿ ತಂಡದ ಉಪನಾಯಕ ಹಾರ್ದಿಕ್ ಸಿಂಗ್ ಅವರನ್ನು ಈ ವರ್ಷದ ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿಗೆ ಏಕೈಕ ಪುರಸ್ಕೃತರನ್ನಾಗಿ ಶಿಫಾರಸು ಮಾಡಲಾಗಿದೆ. ಹಾರ್ದಿಕ್ ಸಿಂಗ್ (27) ಟೋಕಿಯೊ ಮತ್ತು ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟದ ಪದಕ ವಿಜೇತ ತಂಡಗಳ ಭಾಗವಾಗಿದ್ದರು.

ಸೊಂಪಾದ ಪುಟಗಳು

ಬೆಳಗ್ಗೆ ಬೇಗ ಏಳಲು ಐದು ಕ್ಷಣದ ಉಪಾಯ...
ಶಿಶಿರಕಾಲ ಶಿಶಿರ್ ಹೆಗಡೆ 6


ಸೋಲೋ ಟ್ರಿಪ್‌ನಲ್ಲಿ ಕಂಡ ಮಳೆಕೋಂಗಿಲ!
ಶತಾಂಕಣ ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ವ್ಯಕ್ತಿತ್ವ ವಿಕಸನ ಎಂದರೆ ಪ್ರತಿದಿನವೂ ನಿನ್ನೆಗಿಂತ ಉತ್ತಮವಾಗಿರುವುದಕ್ಕೆ ಪ್ರಯತ್ನಿಸುವುದು; ನಾವು ಎಲ್ಲಿಯವರೆಗೆ ಕಲಿಯುವುದನ್ನು ನಿಲ್ಲಿಸುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಬೆಳವಣಿಗೆ ನಿರಂತರವಾಗಿರುತ್ತದೆ.

ವಕ್ರತುಂಡೋಕ್ತಿ

ಗ್ರೂಪ್ ಅಡ್ಮಿನ್ ಕೆಲಸ ಅಂದ್ರೆ, ಅದು ಸಂಬಳವಿಲ್ಲದ ಪೊಲೀಸ್ ಕೆಲಸ ಇದ್ದ ಹಾಗೆ. ಯಾರು ಯಾವಾಗ ಕಿತ್ತಾಡುತ್ತಾರೆ ಅಂತ ಕಾಯ್ತಿರಬೇಕು

ಕುಖ್ಯಾತ ನಕ್ಸಲ್ ಗಣೇಶ್ ಸೇರಿ 6 ನಕ್ಸಲರ ಹತ್ಯೆ

ಭುವನೇಶ್ವರ: ಒಡಿಶಾ ರಾಜ್ಯದ ಕಂಧಮಾಲ್ ಮತ್ತು ಗಂಜಾಮ್ ಜಿಲ್ಲೆಗಳ ಗಡಿ ಭಾಗದಲ್ಲಿರುವ 'ರಂಪಾ ಅರಣ್ಯ'ದಲ್ಲಿ ಬುಧವಾರ ಸಂಜೆಯಿಂದ ಗುರುವಾರ ಬೆಳಗ್ಗೆವರೆಗೂ ನಡೆಸಲಾದ ನಕ್ಸಲ್ ದಮನ ಕಾರ್ಯಾಚರಣೆಯಲ್ಲಿ ಜಂಟಿ ಭದ್ರತಾ ಪಡೆಗಳ ಕೈಮೇಲಾಗಿದೆ. 1.10 ಕೋಟಿ ರು. ಇನಾಮು ಘೋಷಿಸ ಲಾಗಿದ್ದ ಹಿರಿಯ ನಕ್ಸಲ್ ಗಣೇಶ್ ಉಯಿಕೆ, ಒಟ್ಟಾರೆ 23.65 ಲಕ್ಷ ರು. ಬಹುಮಾನ ಘೋಷಣೆಯಾಗಿದ್ದ ಛತ್ತೀಸ್‌ಗಢ ಮೂಲದ ಇಬ್ಬರು ನಕ್ಸಲರು ಸೇರಿದಂತೆ 6 ಮಾವೋವಾದಿಗಳು ಹತರಾಗಿದ್ದಾರೆ.

ಖಾಲಿದಾ ಪುತ್ರ ತಾರಿಖ್ 17 ವರ್ಷದ ನಂತರ ಬಾಂಗ್ಲಾಕ್ಕೆ ವಾಪಸ್

ಢಾಕಾ: ಬಾಂಗ್ಲಾದೇಶದ ಮಾಜಿ ಪ್ರಧಾನಿ ಖಾಲಿದಾ ಜಿಯಾ (80) ಪುತ್ರ, ತಾರಿಖ್ ರೆಹಮಾನ್ (60) 17 ವರ್ಷದ ನಂತರ ದೇಶಕ್ಕೆ

ಮರಳಿದ್ದಾರೆ. ಹಿಂದೆ ಕಾನೂನು ಕುಣಿಕೆಯಿಂದ ತಪ್ಪಿಸಿಕೊಂಡು ಬಾಂಗ್ಲಾದೇಶ ಬಿಟ್ಟು ಹೊರ ದೇಶಕ್ಕೆ ಹೋಗಿದ್ದ ತಾರಿಖ್, ಫೆಬ್ರವರಿಯಲ್ಲಿ ನಡೆಯಲಿರುವ ಚುನಾವಣೆಗೆ ರಹಕಹಳೆ ಮೊಳಗಿಸಿದ್ದಾರೆ. ಕಳೆದ ವರ್ಷ ಆರಂಭವಾದ ದಂಗೆಗಳ ಬಳಿಕ ಈಗ ಬಾಂಗ್ಲಾದೇಶದಲ್ಲಿ ಬಿಎನ್‌ಪಿ ಪಕ್ಷದ ಪರ ಅಲೆಯೇ ಎದ್ದಿದೆ ಎಂದು ಹೇಳಲಾಗುತ್ತಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

'ನೀರಾವರಿ ಮತ್ತು ವರಿ'



● ಹಿರಿಯೂರು ಬಸ್-ಟ್ರಕ್ ಡಿಕ್ಕಿ ● ಚಿಕ್ಕಬಳ್ಳಾಪುರ ಯಮನಾದ ಟಿಪ್ಪರ್ ● ಮೈಸೂರು ಸಿಲಿಂಡರ್ ಸ್ಫೋಟ

ಕರಾಳ ದಿನವಾದ ಗುರುವಾರ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಬಳಿ ಬಸ್‌ಗೆ ಟ್ರಕ್ ಡಿಕ್ಕಿ ನಡುರಾತ್ರಿ ಹೊತ್ತಿ ಉರಿದ ಬಸ್ | 27 ಪ್ರಯಾಣಿಕರು ಪಾರು

6 ಮಂದಿ ಸಜೀವ ದಹನ

ರವಿಚಂದ್ರ ನೇರ್ಲಹಳ್ಳಿ

ಚಿತ್ರದುರ್ಗ: ಬೆಂಗಳೂರಿನಿಂದ ಶಿವಮೊಗ್ಗ ಮಾರ್ಗವಾಗಿ ಗೋಕರ್ಣಕ್ಕೆ ತೆರಳುತ್ತಿದ್ದ ಸೀಬರ್ಡ್ ಖಾಸಗಿ ಬಸ್‌ಗೆ ಕಂಟೇನರ್ ಲಾರಿಯೊಂದು ಬುಧವಾರ ತಡರಾತ್ರಿ ಡಿಕ್ಕಿ ಹೊಡೆದು, ಭೀಕರ ದುರಂತ ಸಂಭವಿಸಿದೆ. ಲಾರಿ ಚಾಲಕನ ನಿರ್ಲಕ್ಷ್ಯದಿಂದ ಬಸ್‌ನಲ್ಲಿದ್ದ ಐವರು ಸಜೀವ ದಹನವಾಗಿದ್ದಾರೆ. ಇನ್ನು ಲಾರಿ ಚಾಲಕ ಕೂಡ ಮೃತಪಟ್ಟಿದ್ದಾರೆ. ಬಿಂದು. ವಿ, ಅವರ ಪುತ್ರಿ ಗ್ರೇಮಾ, ಮಾನಸಾ, ನವ್ಯಾ ಮತ್ತು ರಶ್ಮಿ ಮಹಾಲೆ ಮೃತರು. ಉತ್ತರಪ್ರದೇಶ ಮೂಲದವರು ಎನ್ನಲಾದ ಟ್ರಕ್ ಚಾಲಕ ಮೃತಪಟ್ಟ ಇನ್ನೊಬ್ಬರು. 21 ಮಂದಿ ಗಾಯಗೊಂಡಿದ್ದಾರೆ ಎನ್ನಲಾಗಿದ್ದು, ಗಾಯ ಗೊಂಡವರನ್ನು ಶಿರಾ ಮತ್ತು ಹಿರಿಯೂರು ಹಾಗೂ ತುಮಕೂರು ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಯ ಬೆನ್ನಲ್ಲೇ ರಾಜ್ಯ ಸರಕಾರ ಮೃತಪಟ್ಟವರ ಕುಟುಂಬಕ್ಕೆ 5 ಲಕ್ಷ ರು., ಕೇಂದ್ರ ಸರಕಾರ 2 ಲಕ್ಷ ರು. ಪರಿಹಾರ ಘೋಷಿಸಿದೆ.

ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಸೀಬರ್ಡ್ ಬಸ್‌ನಲ್ಲಿದ್ದವರೆಲ್ಲ ಗೋಕರ್ಣದ ಬೀಚ್‌ಗಳಿಗೆ ತಲುಪಿ ಸಂತಸದ ಸವಿಯನ್ನು ಅನುಭವಿಸಬೇಕಿತ್ತು. ದುರದೃಷ್ಟವಶಾತ್ ಜವರಾಯನಾಗಿ ಬಂದ ಯಮರೂಪಿ ಕಂಟೇನರ್ ಲಾರಿ, ನಾನ್ ಎಸಿ ಸ್ಲೀಪರ್ ಕೋಚ್ ಬಸ್‌ಗೆ ಡಿಕ್ಕಿ ಹೊಡೆದಿದೆ. ಈ ದುರ್ಘಟನೆ ಬುಧವಾರ ತಡರಾತ್ರಿ 2 ಗಂಟೆ ಹೊತ್ತಿಗೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಗೊಲ್ಲಡ್ಕು ಗ್ರಾಮದ ರಾಷ್ಟ್ರೀಯ ಹೆದ್ದಾರಿ-48ರಲ್ಲಿ ನಡೆದಿದೆ.

ಹೇಗಾಯ್ತು?: ರಾ.ಹೆದ್ದಾರಿ 48ರಲ್ಲಿ ಒಂದು ಕಡೆಯಿಂದ ಬರುತ್ತಿದ್ದ ಲಾರಿಯೊಂದು ಡಿವೈಡರ್ ಹಾರಿ ಮತ್ತೊಂದು ದಿಕ್ಕಿಂದ ಬರುತ್ತಿದ್ದ ಬಸ್ಸಿಗೆ ಡಿಕ್ಕಿ ಹೊಡೆದಿದೆ. → 4

ಪಾರಾದ 42 ಶಾಲಾ ಮಕ್ಕಳು

ಅಪಘಾತದ ಮಾರ್ಗದಲ್ಲಿ ಶಾಲಾ ಮಕ್ಕಳು ಪ್ರಯಾಣಿಸುತ್ತಿದ್ದ ಪ್ರವಾಸದ ಬಸ್ ಕೂದಲೆಳೆಯ ಅಂತರದಿಂದ ಪಾರಾಗಿದೆ. ಲಾರಿ ಸೀಬರ್ಡ್ ಬಸ್‌ಗೆ ಡಿಕ್ಕಿ ಹೊಡೆದಾಗ ಸಮಾನಾಂತರದಲ್ಲೇ ಚಲಿಸುತ್ತಿದ್ದ ಬಸ್‌ಗೆ ತಾಕಿದೆ. ಈ ಬಸ್‌ನಲ್ಲಿ ಬೆಂಗಳೂರಿನ ಟಿ.ದಾಸರಹಳ್ಳಿ ಶಾಲೆಯ 42 ಮಕ್ಕಳು ಪ್ರಯಾಣಿಸುತ್ತಿದ್ದರು. ಶಾಲಾ ಬಸ್ ಚಾಲಕನ ಸಮಯಪ್ರಜ್ಞೆಯಿಂದ ದೊಡ್ಡ ಅವಘಡ ತಪ್ಪಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಸಂಭವಿಸಿದ ಅಪಘಾತದಲ್ಲಿ ಜೀವಹಾನಿಯಾಗಿದೆ ಎಂದು ತಿಳಿದು ತೀವ್ರ ದುಃಖವಾಗಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ಸಂತಾಪ ಸೂಚಿಸುತ್ತೇನೆ. ಗಾಯಗೊಂಡವರು ಆದಷ್ಟು ಬೇಗ ಚೇತರಿಸಿಕೊಳ್ಳಲಿ. ಮೃತರ ಸಂಬಂಧಿಕರಿಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿ (ಪಿಎಂಎನ್‌ಆರ್‌ಎಫ್) ಯಿಂದ 2 ಲಕ್ಷ ರೂ. ತಾತ್ಕಾಲಿಕ ಪರಿಹಾರ ನೀಡಲಾಗುವುದು. ಗಾಯಾಳುಗಳಿಗೆ 50,000 ರೂ. ನೀಡಲಾಗುವುದು

-ನರೇಂದ್ರ ಮೋದಿ, ಪ್ರಧಾನಿ

ಏನಾಯ್ತು? ಹೇಗಾಯ್ತು?

1. ಬುಧವಾರ ತಡರಾತ್ರಿ 1.30ರಿಂದ 2 ಗಂಟೆಯ ನಡುವೆ ಭೀಕರ ಅಪಘಾತ
2. ಬೆಂಗಳೂರಿನಿಂದ ಹೊರಟಿದ್ದ ಸೀಬರ್ಡ್ ಖಾಸಗಿ ಬಸ್‌ಗೆ ಕಂಟೇನರ್ ಡಿಕ್ಕಿ
3. ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲೂಕು ಗೊಲ್ಲಡ್ಕು ಬಳಿ ಘಟನೆ
4. ರಸ್ತೆ ವಿಭಜಕ ಹಾರಿ ಮತ್ತೊಂದು ಮಾರ್ಗದಲ್ಲಿದ್ದ ಬಸ್‌ಗೆ ಡಿಕ್ಕಿ ಹೊಡೆದ ಲಾರಿ
5. ಬಸ್‌ನ ಡೀಸೆಲ್ ಟ್ಯಾಂಕ್‌ಗೆ ಗುದ್ದಿದ್ದರಿಂದ ಒಡನೆಯೇ ಹೊತ್ತಿಕೊಂಡ ಬೆಂಕಿ
6. ಕೆಲವೇ ನಿಮಿಷಗಳಲ್ಲಿ ಕೆನ್ನಾಲಿಗೆ ಚಾಚಿದ ಬೆಂಕಿ, ಬಸ್‌ನಲ್ಲಿದ್ದ ಐವರು ದಹನ
7. ಕಿಟಕಿಯಿಂದ ಹಾರಿ ಕೆಲವರು ಪಾರು, ತೀವ್ರವಾಗಿ ಗಾಯಗೊಂಡ ಹಲವರು
8. 42 ಮಕ್ಕಳಿದ್ದರು ಎನ್ನಲಾದ ಶಾಲಾ ಬಸ್ ಇದೇ ವೇಳೆ ಅಪಾಯದಿಂದ ಪಾರು

ಟಿಪ್ಪರ್ ಹರಿದು ನಾಲ್ವರು ಯುವಕರ ದುರ್ಮರಣ

ಚಿಕ್ಕಬಳ್ಳಾಪುರ: ಎರಡು ಬೈಕ್‌ಗಳ ಮೇಲೆ ಟಿಪ್ಪರ್ ಹರಿದ ಪರಿಣಾಮ ಬೈಕ್‌ಗಳಲ್ಲಿದ್ದ ನಾಲ್ವರು ಯುವಕರು ಸ್ಥಳದಲ್ಲೆ ಸಾವನ್ನಪ್ಪಿದ ಘಟನೆ ಗುರುವಾರ ರಾತ್ರಿ ನಗರ ಹೊರವಲಯದ ಅಜ್ಜವಾರ ಗೇಟ್‌ನಲ್ಲಿ ನಡೆದಿದೆ. ಮೃತ ಯುವಕರೆಲ್ಲರೂ ಅಜ್ಜವಾರ ಗ್ರಾಮಕ್ಕೆ ಸೇರಿದವರಾಗಿದ್ದಾರೆ. ಅರುಣ್ (18), ನಂದೀಶ್ (19), ನರಸಿಂಹ (22) ಮತ್ತು ಮನೋಜ್ (23) ಎಂದು ಗುರ್ತಿಸಲಾಗಿದೆ.

ಮೃತ ನಾಲ್ವರು ಯುವಕರು ಚಿಕ್ಕಬಳ್ಳಾಪುರದ ಚರ್ಚ್‌ಗೆ ಬಂದವರಾಗಿದ್ದು ಇಲ್ಲಿಂದ ಹುಟ್ಟೂರಿಗೆ ಎರಡು ಬೈಕ್‌ಗಳಲ್ಲಿ ವಾಪಸ್

ಆಗುತ್ತಿದ್ದ ವೇಳೆ ವೇಗವಾಗಿ ಬಂದ ಟಿಪ್ಪರ್ ಬೈಕ್‌ಗಳ ಮೇಲೆ ಹರಿದ ಪರಿಣಾಮ ನಾಲ್ವರ ಯುವಕರು ಸ್ಥಳದಲ್ಲೇ ಅಸುನೀಗಿದ್ದಾರೆ.

ಅರಮನೆ ಎದುರು ಸ್ಫೋಟ ಒಬ್ಬ ಸಾವು, ಐವರು ಗಂಭೀರ

ಮೈಸೂರು: ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಒಬ್ಬರು ದಾರುಣವಾಗಿ ಸಾವನ್ನಪ್ಪಿ, ಐವರು ತೀವ್ರವಾಗಿ ಗಾಯಗೊಂಡ ಘಟನೆ ಮೈಸೂರಿನ ಅರಮನೆಯ ಜಯ ಮಾರ್ತಾಂಡ ದ್ವಾರದ ಮುಂಭಾಗದಲ್ಲಿ ಗುರುವಾರ ರಾತ್ರಿ ನಡೆದಿದೆ. ಸೈಕಲ್‌ನಲ್ಲಿ ಹೀಲಿಯಂ ಸಿಲಿಂಡರ್ ಇಟ್ಟುಕೊಂಡು ಅದನ್ನು ಬಲೂನಿಗೆ ತುಂಬಿ ಮಾರಾಟ ಮಾಡುತ್ತಿದ್ದು, ಆ ಸ್ಫೋಟದ ರಭಸಕ್ಕೆ ಮಾರಾಟ ಮಾಡುತ್ತಿದ್ದ ವ್ಯಕ್ತಿಯ ದೇಹ ಛಿದ್ರವಾಗಿದೆ. ಗಾಯಗೊಂಡವರ ಪೈಕಿ ನಂಜನಗೂಡು ಮೂಲದ ಮಂಜುಳಾ, ಬೆಂಗಳೂರು ಮೂಲದ ಲಕ್ಷ್ಮಿ, ಕೋಲ್ಕತಾ ಮೂಲದ ಶಬ್ಬೀರ್, ರಾಣೆಬೆನ್ನೂರು ಮೂಲದ ಕೊಟ್ರೇಶ್ ಎಂದು ಗೊತ್ತಾಗಿದೆ. ಬಲೂನಿಗೆ ಹೀಲಿಯಂ ಅನಿಲ ತುಂಬಿಸುವ ವೇಳೆ ಸಮೀಪದಲ್ಲೇ ಇದ್ದ ಇಬ್ಬರು ಮಕ್ಕಳು ಸೇರಿ ಒಟ್ಟು ಐವರ ಸ್ಥಿತಿ ಗಂಭೀರವಾಗಿದೆ.

ಉತ್ತರಪ್ರದೇಶದ ರಾಷ್ಟ್ರ ಪ್ರೇರಣಾ ಸ್ಥಳಕ್ಕೆ ಪ್ರಧಾನಿ ಚಾಲನೆ

ಉತ್ತರಪ್ರದೇಶದ ಲಖನೌನಲ್ಲಿ ಗುರುವಾರ ಪ್ರಧಾನಿ ನರೇಂದ್ರ ಮೋದಿ ರಾಷ್ಟ್ರ ಪ್ರೇರಣಾ ಸ್ಥಳವನ್ನು ಅನಾವರಣಗೊಳಿಸಿದರು. ಮಾಜಿ ಪ್ರಧಾನಿ, ಭಾರತರತ್ನ ಅಟಲ್ ಬಿಹಾರಿ ವಾಜಪೇಯಿ ಜನ್ಮಶತಮಾನೋತ್ಸವದ ಹಿನ್ನೆಲೆಯಲ್ಲಿ 65 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು ಇಲ್ಲಿ ನಿಲ್ಲಿಸಲಾಗಿದೆ. ಹಾಗೆಯೇ ಬಿಜೆಪಿಯ (ಜನಸಂಘ) ಸಂಸ್ಥಾಪಕ ಶ್ಯಾಮಪ್ರಸಾದ್ ಮುಖರ್ಜಿ, ಪಕ್ಷವನ್ನು ಬೆಳೆಸಿದ ಪ್ರಖರ ರಾಷ್ಟ್ರೀಯವಾದಿ ಪಂಡಿತ್ ದೀನದಯಾಳ್ ಉಪಾಧ್ಯಾಯರ ಪ್ರತಿಮೆಗಳೂ ಇಲ್ಲಿದ್ದು, ಅವೂ 65 ಅಡಿ ಎತ್ತರ ಇವೆ. 65 ಎಕರೆ ಜಾಗ, 230 ಕೋಟಿ ರು. ವೆಚ್ಚದಲ್ಲಿ ನಿರ್ಮಾಣವಾಗಿದೆ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ: ಸಿಎಂಗೆ ದಿಢೀರ್ ಕರೆ ಹೋಗಲ್ಲ ಎಂದಿದ್ದ ಸಿದ್ದು ಹೊರಟರು | ಹೋಗಲ್ಲ ಎಂದ ಡಿಕೆಶಿ

ದಿಲ್ಲಿಗೆ ಹೊರಟ ಸಿದ್ದು; ಡಿಕೆಶಿಗಿಲ್ಲ ಆಹ್ವಾನ

ಬೆಂಗಳೂರು: ಎರಡು ದಿನದ ಹಿಂದಷ್ಟೇ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ತೆರಳುವುದಿಲ್ಲ ಎಂದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹೈಕಮಾಂಡ್ ಬುಲಾವ್ ನೀಡಿದೆ. ಇದರ ಬೆನ್ನಲ್ಲೇ, ಸಿದ್ದರಾಮಯ್ಯ ಅವರು ಶುಕ್ರವಾರ ಸಂಜೆ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ. ದೆಹಲಿಯಲ್ಲಿ ನಡೆಯಲಿರುವ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸದಸ್ಯರು ಮಾತ್ರ ಭಾಗವಹಿಸುವುದರಿಂದ ತಾವು ಈ ಸಭೆಗೆ ಹೋಗುವುದಿಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದರು. ಆದರೆ ಹೈಕಮಾಂಡ್‌ನಿಂದ ಸಭೆಯಲ್ಲಿ ಭಾಗವಹಿಸಬೇಕು ಎನ್ನುವ ಸಂದೇಶದ ಹಿನ್ನಲೆಯಲ್ಲಿ ದೆಹಲಿಗೆ ತೆರಳಲಿದ್ದಾರೆ. ಆದರೆ ಈ ಸಭೆಗೆ ಉಪಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಆಹ್ವಾನ ಸಿಗದಿರುವುದು ಭಾರಿ ಚರ್ಚೆಗೆ ಗ್ರಾಸವಾಗಿದೆ.

ಮೇಲ್ನೋಟಕ್ಕೆ ಈ ಸಭೆಗೆ ಸಮಿತಿ ಸದಸ್ಯರು ಹಾಗೂ ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಆಹ್ವಾನ ನೀಡಿರುವುದರಿಂದ ಡಿ.ಕೆ.ಶಿವಕುಮಾರ್ ಅವರು ಭಾಗವಹಿಸುತ್ತಿಲ್ಲ ಎನ್ನುವ ಮಾತುಗಳಿವೆ. → 4

ವಿಷಯವೇನು?

- 2 ದಿನದ ಹಿಂದಷ್ಟೆ ಕಾರ್ಯಕಾರಿ ಸಭೆಗೆ ಹೋಗಲ್ಲ ಎಂದಿದ್ದ ಸಿಎಂ
- ಎಐಸಿಸಿಯಿಂದ ಆಹ್ವಾನ ಬಂದ ಹಿನ್ನೆಲೆಯಲ್ಲಿ ಶುಕ್ರವಾರ ದೆಹಲಿಗೆ
- ನನಗೆ ಆಹ್ವಾನವಿಲ್ಲ ಎಂದ ಡಿಕೆಶಿ

ಕಾಂಗ್ರೆಸ್ ಕಾರ್ಯಕಾರಿ ಸಭೆಗೆ ಮುಖ್ಯಮಂತ್ರಿಗಳಿಗೆ ಆಹ್ವಾನವಿದೆ. ಆದ್ದರಿಂದ ಮೂರು ರಾಜ್ಯದ ಸಿಎಂಗಳು ಹೋಗುತ್ತಾರೆ. ಉಪಮುಖ್ಯಮಂತ್ರಿಗಳನ್ನು ಕರೆದಿಲ್ಲ. ಕರೆದರೆ ಹೋಗುತ್ತೇನೆ. ಪಿಸಿಸಿ ಅಧ್ಯಕ್ಷರನ್ನು ಈಗ ಕರೆದಿಲ್ಲ. ಸಮಿತಿ ವಿಸ್ತರಿತ ಸಭೆಗೆ ಕರೆಯುತ್ತಾರೆ. ಆಗ ಹೋಗಲೇಬೇಕು.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ರಾಜ್ಯ ಕಾಂಗ್ರೆಸ್‌ನಲ್ಲಿರುವ ಆಂತರಿಕ ಗೊಂದಲ ಬಗೆಹರಿಸಿ ಕೊಳ್ಳುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿರುವುದು ಕ್ಯಾಪ್ಟನ್ (ಸಿದ್ದರಾಮಯ್ಯ) ಹಾಗೂ ವೈಸ್ ಕ್ಯಾಪ್ಟನ್ (ಶಿವಕುಮಾರ್)ಗೆ ಮಾತ್ರ. ಆ ಮಾತು ನಮಗೆ ಅನ್ವಯವಾಗುವುದಿಲ್ಲ.

-ಸತೀಶ್ ಜಾರಕಿಹೊಳಿ, ಸಚಿವ

ಸೇನೆ ಸಾಮಾಜಿಕ ತಾಣ ನೀತಿ ಬದಲಾವಣೆ ಕಾಮೆಂಟ್, ಪೋಸ್ಟ್‌ಗೆ ಈಗಲೂ ನಿರ್ಬಂಧ

ಇನ್‌ಸ್ಟಾಗ್ರಾಮ್, ಎಕ್ಸ್ ನೋಡಲು ಮಾತ್ರ ಯೋಧರಿಗೆ ಅನುಮತಿ

ದೆಹಲಿ: ಸಾಮಾಜಿಕ ಮಾಧ್ಯಮ ಬಳಕೆಯ ಕುರಿತಾದ ತನ್ನ ನೀತಿಯಲ್ಲಿ ಭಾರತೀಯ ಸೇನೆ ಪ್ರಮುಖ ಬದಲಾವಣೆಯೊಂದನ್ನು ಮಾಡಿದೆ. ಇದುವರೆಗೆ ಯೋಧರು ಯಾವುದೇ ಕಾರಣಕ್ಕೂ ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಎಕ್ಸ್‌ನಂತಹ ಸಾಮಾಜಿಕ ತಾಣಗಳನ್ನು ಬಳಸುವಂತೆಯೇ ಇರಲಿಲ್ಲ. ಇದೀಗ ಸಣ್ಣ ಬದಲಾವಣೆ ಮಾಡಿದ್ದು ತಮ್ಮ ಜ್ಞಾನಕ್ಕಾಗಿ ಇನ್‌ಸ್ಟಾಗ್ರಾಮ್, ಎಕ್ಸ್‌ಗಳನ್ನು ಕೇವಲ ನೋಡಬಹುದು. ಆದರೆ ಯಾವುದೇ ಪ್ರತಿಕ್ರಿಯೆ ನೀಡುವಂತಿಲ್ಲ, ಪೋಸ್ಟ್‌ಗಳನ್ನು ಮಾಡುವಂತಿಲ್ಲ ಎಂದು ಹೇಳಿದೆ. ಉಳಿದಂತೆ ಹಿಂದಿನ ಎಲ್ಲ ನಿರ್ಬಂಧಗಳು ಮುಂದುವರಿಯಲಿವೆ. ಭದ್ರತಾ ದೃಷ್ಟಿಯಿಂದ ಯೋಧರು ಈ ತಾಣಗಳನ್ನು ಬಳಕೆ ಮಾಡುವಂತಿಲ್ಲವೆಂದು ಆದೇಶಿಸಲಾಗಿತ್ತು. ಇದರಿಂದ ಸೂಕ್ಷ್ಮ ಮಾಹಿತಿಗಳು ದುಷ್ಕರ್ಮಿಗಳಿಗೆ ಸಿಲುಕಿ ಹನಿ ಟ್ರ್ಯಾಪ್‌ನಂತಹ ಘಟನೆಗಳು ನಡೆದಿರುವುದು ಗಮನಕ್ಕೆ ಬಂದಿತ್ತು. ಇಂತಹ ಘಟನೆಗಳಿಂದ ದೇಶದ ಭದ್ರತೆಗೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಗಳು ಗೊತ್ತಿಲ್ಲದೇ ಹೊರಹರಿದಿವೆ. → 4

ಯಾಕೆ ನಿರ್ಬಂಧ?

- ಹಿಂದೆ ಭದ್ರತಾ ದೃಷ್ಟಿಯಿಂದ ಯೋಧರು ಈ ತಾಣ ಬಳಸುವಂತಿರಲಿಲ್ಲ
- ಸೂಕ್ಷ್ಮ ಮಾಹಿತಿಗಳು ವಿದೇಶಿ ದುಷ್ಕರ್ಮಿಗಳಿಗೆ ಸಿಕ್ಕಿದ್ದೇ ಇದಕ್ಕೆ ಕಾರಣ
- ಇದೀಗ ತಿಳಿವಳಿಕೆಗಾಗಿ ನೋಡಲು ಅವಕಾಶ, ಪ್ರತಿಕ್ರಿಯಿಸಲು ಸಾಧ್ಯವಿಲ್ಲ

ವಿಶ್ವ ಆಯುರ್ವೇದ ಮೇಳ ಶುರು

ಬೆಂಗಳೂರು: ಆಯುರ್ವೇದವನ್ನು ಅದರ ಶುದ್ಧ ಮತ್ತು ಪ್ರಾಮಾಣಿಕ ರೂಪದಲ್ಲಿ ಅನುಸರಿಸಿದರೆ, ದೀರ್ಘಾಯುಷ್ಯ ಮಾತ್ರವಲ್ಲದೆ ಆರೋಗ್ಯಕರ ಜೀವನ ನಡೆಸಲು ಸಾಧ್ಯ ಎಂದು ಆರೋಗ್ಯ ಮತ್ತು ಕುಟುಂಬ ಸಚಿವ ದಿನೇಶ್ ಗುಂಡೂರಾವ್ ಹೇಳಿದರು. ಬೆಂಗಳೂರು ನಗರದ ಅರಮನೆ ಮೈದಾನದಲ್ಲಿ ಗುರುವಾರ ವಿಶ್ವ ಆಯುರ್ವೇದ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ವೈದ್ಯ ಡಾ.ಗಿರಿಧರ್ ಕಜೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಮಚಂದ್ರಾಪುರ ಮಠದ ಪೀಠಾಧಿಪತಿಗಳಾದ ರಾಘವೇಶ್ವರ ಭಾರತೀ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು.

100 ಅಟಲ್ ಕ್ಯಾಂಟೀನ್ ಆರಂಭ

ದೆಹಲಿ: ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ



101ನೇ ಜನ್ಮದಿನಾಚರಣೆ ಹಿನ್ನೆಲೆಯಲ್ಲಿ ದೆಹಲಿ ಸರಕಾರ ಗುರುವಾರ ರಾಜಧಾನಿ ದೆಹಲಿಯಲ್ಲಿ 100 ಹೊಸ 'ಅಟಲ್ ಕ್ಯಾಂಟೀನ್' ಆರಂಭಿಸಿದೆ. ಕ್ಯಾಂಟೀನ್‌ನಲ್ಲಿ ಕೇವಲ 5 ರು. ಗೆ ಊಟ ಸಿಗಲಿದೆ. ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಲಾಜಪತ್‌ನ ನೆಹರೂ ನಗರದಲ್ಲಿ ಮೊದಲ ಕ್ಯಾಂಟೀನ್ ಉದ್ಘಾಟಿಸಿದರು.

ವಿಷ್ಣು ಪ್ರತಿಮೆ ಧ್ವಂಸಕ್ಕೆ ಭಾರತ ಕಿಡಿ

ಬ್ಯಾಂಕಾಕ್: ಕಾಂಬೋಡಿಯಾ ಗಡಿ ಪ್ರದೇಶದಲ್ಲಿರುವ ಭಗವಾನ್ ವಿಷ್ಣುವಿನ 30 ಅಡಿ ಎತ್ತರದ ಪ್ರತಿಮೆಯನ್ನು ಥಾಯ್ಲೆಂಡ್ ಧ್ವಂಸಗೊಳಿಸಿದ್ದಕ್ಕೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಇಂತಹ ಕೃತ್ಯಗಳು ವಿಶ್ವಾದ್ಯಂತ ಇರುವ ಭಕ್ತರ ಭಾವನೆಗಳಿಗೆ ನೋವುಂಟು ಮಾಡುತ್ತವೆ ಎಂದು ಭಾರತ ಹೇಳಿದೆ. ಆನ್‌ಲೈನ್‌ನಲ್ಲೂ ಬಾಯ್ಕಾಟ್ ಥಾಯ್ಲೆಂಡ್ ಅಭಿಯಾನ ಶುರುವಾಗಿದೆ. ಇದಕ್ಕೆ ಥಾಯ್ಲೆಂಡ್ ಅಧಿಕೃತ ಸ್ಪಷ್ಟನೆಯನ್ನೂ ನೀಡಿದೆ. ಈ ಕ್ರಮವು ಯಾವುದೇ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಉದ್ದೇಶ ಹೊಂದಿರಲಿಲ್ಲ, ರಾಷ್ಟ್ರೀಯ ಭದ್ರತೆ ಕಾರಣ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದೆ.

ಕಾಯಂ ನೌಕರರಿಗೆ 1 ಕೋಟಿ, ಹೊರಗುತ್ತಿಗೆ ಸಿಬ್ಬಂದಿಗೆ 20 ಲಕ್ಷ ರು. ಅಪಘಾತ ವಿಮೆ

ಅರಣ್ಯ ಸಿಬ್ಬಂದಿಗೆ ಕೋಟಿ ರು. ವಿಮಾ ರಕ್ಷೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅರಣ್ಯ ಇಲಾಖೆ ಸಿಬ್ಬಂದಿಯ ಬಹುದಿನದ ಬೇಡಿಕೆಗೆ ಸರಕಾರ ಸ್ಪಂದಿಸಿದ್ದು, ಕಾರ್ಯ ನಿರ್ವಹಿಸುವ ವೇಳೆ ಮರಣ ಹೊಂದಿದರೆ ಒಂದು ಕೋಟಿ ರು. ವಿಮೆ ಒದಗಿಸಲು ಬರೋಡಾ ಬ್ಯಾಂಕ್ ಜತೆ ಒಪ್ಪಂದ ಮಾಡಿಕೊಂಡಿದೆ. ಈ ಬಗ್ಗೆ ಮಾತನಾಡಿರುವ ಅರಣ್ಯ ಸಚಿವ ಈಶ್ವರ್ ಖಂಡ್ರೆ, ಅರಣ್ಯ ಇಲಾಖೆಯ ಕಾಯಂ ಅಧಿಕಾರಿ, ಸಿಬ್ಬಂದಿಗೆ ಒಂದು ಕೋಟಿ ರು. ಅಪಘಾತ (ಮರಣ) ವಿಮೆ ಹಾಗೂ ಹೊರಗುತ್ತಿಗೆ ಸಿಬ್ಬಂದಿಗೆ 20 ಲಕ್ಷ ರು. ವಿಮಾ ಸೌಲಭ್ಯ ಕಲ್ಪಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದಿದ್ದಾರೆ.

ಏನಿದು ಯೋಜನೆ?

- ಅರಣ್ಯ ಇಲಾಖೆ ಸಿಬ್ಬಂದಿಗೆ ರಕ್ಷಣೆ ನೀಡಲು ರಾಜ್ಯ ಅರಣ್ಯ ಇಲಾಖೆ ಕ್ರಮ
- ಬ್ಯಾಂಕ್ ಆಫ್ ಬರೋಡಾದೊಂದಿಗೆ ಒಪ್ಪಂದ, ಹಲವು ಸೌಲಭ್ಯ ನೀಡಲು ವ್ಯವಸ್ಥೆ
- ಬರೋಡಾ ಬ್ಯಾಂಕಲ್ಲಿ ಪಿಂಚಣಿ ಖಾತೆ ಯಿದ್ದರೆ 70 ವರ್ಷದವರೆಗೆ ಅಪಘಾತ ವಿಮೆ

ಅರಣ್ಯ ಮತ್ತು ವನ್ಯಜೀವಿಗಳ ರಕ್ಷಣೆಗಾಗಿ ಮುಂಚೂಣಿ ಸಿಬ್ಬಂದಿ ಅಪಾಯ ಎದುರಿಸಿ ಹಗಲಿರುಳು ಶ್ರಮಿಸುತ್ತಿದ್ದು, ಇಲಾಖೆ ಕೆಲವು ಶೌರ್ಯಶಾಲಿ ಹಸಿರು ಯೋಧರನ್ನು ಕಳೆದುಕೊಂಡಿದೆ. ಇವರೆಲ್ಲರಿಗೂ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಒದಗಿಸಲು ಈ ತಿಳಿವಳಿಕೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದ್ದಾರೆ. ವನ ಮತ್ತು ವನ್ಯಜೀವಿ ಸಂರಕ್ಷಣೆಯಲ್ಲಿ ಹೊರಗುತ್ತಿಗೆ ಸಿಬ್ಬಂದಿಯ ಪಾತ್ರವೂ ಮಹತ್ವದ್ದಾಗಿದೆ. → 4

ಸಾಂದರ್ಭಿಕ ಚಿತ್ರ

ಅರಣ್ಯ ಇಲಾಖೆಯ ನೌಕರರು ಮತ್ತು ಅವರ ಕುಟುಂಬಗಳ ಹಿತದೃಷ್ಟಿಯಿಂದ ಬ್ಯಾಂಕ್ ಆಫ್ ಬರೋಡಾದೊಂದಿಗೆ ತಿಳಿವಳಿಕೆ ಒಪ್ಪಂದ ಮಾಡಿಕೊಂಡಿದ್ದು, ಹಲವು ವಿಶೇಷ ಸವಲತ್ತುಗಳೂ ಲಭಿಸಲಿವೆ. ಈ ಬಗ್ಗೆ ಎಲ್ಲರಿಗೂ ಅರಿವು ಮೂಡಿಸುವಂತೆ, ಬ್ಯಾಂಕ್ ಆಫ್ ಬರೋಡಾದಲ್ಲಿ ಸಂಬಳ ಖಾತೆ ತೆರೆಯಲು ಸೂಚಿಸಲಾಗಿದೆ.

- ಈಶ್ವರ ಖಂಡ್ರೆ, ಅರಣ್ಯ ಸಚಿವ

ಸಮಾಚಾರ ಸಣ್ಣದಲ್ಲ

ಭಟ್ಕಳ ಸಿಪಿಐ, ಹೆಡ್ ಕಾನ್‌ಸ್ಟೇಬಲ್ ಸಸ್ಪೆಂಡ್

ಕಾರವಾರ: ಕುಡಿದು ವಾಹನ ಚಲಾಯಿಸಿದ ಪ್ರಕರಣ, ಭ್ರಷ್ಟಾಚಾರ ಹಾಗೂ ಸಾರ್ವಜನಿಕರಿಗೆ ಬೆದರಿಕೆ ಹಾಕಿದ ಗಂಭೀರ ಆರೋಪದ ಹಿನ್ನೆಲೆಯಲ್ಲಿ, ಭಟ್ಕಳ ಗ್ರಾಮೀಣ ಠಾಣೆಯ ಸಿಪಿಐ ಮಂಜುನಾಥ್ ಲಿಂಗಾರೆಡ್ಡಿ ಹಾಗೂ ಹೆಡ್ ಕಾನ್ ಸ್ಟೇಬಲ್ ಅಶೋಕ ನಾಯ್ಕ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್. ಆದೇಶ ಹೊರಡಿಸಿದ್ದಾರೆ.

ಕೆಲವು ದಿನಗಳ ಹಿಂದೆ ಸಿಪಿಐ ಮಂಜುನಾಥ್ ಲಿಂಗಾರೆಡ್ಡಿ ಅವರ ವಿರುದ್ಧ 'ಡ್ರಿಂಕ್ ಆ್ಯಂಡ್ ಡ್ರೈವ್' ಪ್ರಕರಣ ದಾಖಲಾಗಿತ್ತು. ಈ ಬಗ್ಗೆ ನಡೆದ ಪ್ರಾಥಮಿಕ ತನಿಖೆಯಲ್ಲಿ ಅವರು ಮದ್ಯಪಾನ ಮಾಡಿ ವಾಹನ ಚಲಾಯಿಸಿರುವುದು ದೃಢಪಟ್ಟಿದೆ. ಜವಾಬ್ದಾರಿಯುತ ಸ್ಥಾನದಲ್ಲಿದ್ದುಕೊಂಡು ನಿಯಮ ಉಲ್ಲಂಘಿಸಿದ ಅಧಿಕಾರಿಯ ನಡೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದು ಎಸ್‌ಪಿ ತಿಳಿಸಿದ್ದಾರೆ. ಸಿಪಿಐ ವಿರುದ್ಧ ಕೇವಲ ಮದ್ಯಪಾನದ ಆರೋಪವಷ್ಟೇ ಅಲ್ಲದೆ, ಹಣಕಾಸಿನ ಅಕ್ರಮದ ದೂರುಗಳೂ ಕೇಳಿಬಂದಿವೆ. ಡ್ರಿಂಕ್ ಆ್ಯಂಡ್ ಡ್ರೈವ್ ಪ್ರಕರಣವೊಂದರಲ್ಲಿ ಸಾರ್ವಜನಿಕರಿಂದ ವಸೂಲಿ ಮಾಡಿದ್ದ 15 ಸಾವಿರ ರು. ದಂಡದ ಹಣವನ್ನು ನ್ಯಾಯಾಲಯಕ್ಕೆ ಪಾವತಿಸದೆ ಅಧಿಕಾರಿಗಳೇ ಲಪಟಾಯಿಸಿದ್ದಾರೆ ಎಂಬ ಆರೋಪ ಸಾಬೀತಾಗಿದೆ.

55 ಲಕ್ಷ ಕಳವು ಮಾಡಿದ ಖದೀಮರ ಬಂಧನ

ಚಿಕ್ಕಬಳ್ಳಾಪುರ: ಡಿ.8ರಂದು ತಾಲೂಕಿನ ಅರೂರು ಬಳಿಯ ಸಾಯಿ ಡೆಲಿಕೆಸಿ ಹೋಟೆಲ್ ಮುಂಭಾಗ ರಾತ್ರಿ ಊಟಕ್ಕೆಂದು ನಿಲ್ಲಿಸಿದ್ದ ಕೆಎಸ್‌ಆರ್‌ಟಿಸಿ

ಅಂಬಾರಿ ಬಸ್‌ನಲ್ಲಿ 55 ಲಕ್ಷ ನಗದು ಮತ್ತು ದಾಖಲೆಗಳ ಕಳವು ಪ್ರಕರಣಕ್ಕೆ ಸಂಬಂಧಿಸಿಂತೆ ನಾಲ್ವರು ಅಂತರ್ ರಾಜ್ಯ ಕಳ್ಳರನ್ನು ಬಂಧಿಸಿ ನಗದು ಮತ್ತು ದಾಖಲೆ ಪತ್ರಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಎಸ್ಪಿ ಕುಶಾಲ್ ಚೌಕ್ಸೆ ತಿಳಿಸಿದರು. ಮದ್ಯ ಪ್ರದೇಶ ಮೂಲದ ಅಸ್ಲಂಖಾನ್ (36), ಮುನೀರ್‌ಖಾ(50), ಆಬ್ಯಾಖಾನ್ (44), ಶೇರು(35) ಬಂಧಿತರು. ಡಿ.8 ರಂದು ಆಂಧ್ರ ಪ್ರದೇಶ ಮೂಲದ ಉದ್ಯಮಿ ವೆಂಕಟೇಶ್ವರ್ ರಾವ್ ಎಂಬುವರು ಬೆಂಗಳೂರು ಮಾರತ್ ಹಳ್ಳಿಯಲ್ಲಿನ ಬಿಲ್ಡಿಂಗ್ ಮಾರಾಟ ಮಾಡಿ ಖರೀದಿದಾರರಿಂದ 55 ಲಕ್ಷ ರು.ನಗದು ಹಣವನ್ನು ಹಾಗೂ ಬಿಲ್ಡಿಂಗ್‌ಗೆ ಸಂಬಂಧಿಸಿದ ದಾಖಲಾತಿಗಳನ್ನು ತೆಗೆದುಕೊಂಡು ಬೆಂಗಳೂರಿನಿಂದ ಅದ ಹೈದ್ರಾಬಾದ್‌ಗೆ ಅಂಬಾರಿ ಬಸ್‌ನಲ್ಲಿ ತೆರಳುತ್ತಿದ್ದ ವೇಳೆ ಕೃತ್ಯ ನಡೆದಿತ್ತು. ಈ ಸಂಬಂಧ ಪೆರೇಸಂದ್ರ ಠಾಣೆಯಲ್ಲಿ ಕೇಸ್ ದಾಖಲಾಗಿತ್ತು.

ಅರಮನೆ ಮೈದಾನದಲ್ಲಿ ಆರಂಭಗೊಂಡ ವಿಶ್ವ ಆಯುರ್ವೇದ ಸಮ್ಮೇಳನದಲ್ಲಿ ದಿನೇಶ್ ಗುಂಡೂರಾವ್

ಆಯುರ್ವೇದ ಪದ್ಧತಿಯಿಂದ ದೀರ್ಘಾಯುಷ್ಯ ಸಾಧ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆಯುರ್ವೇದವನ್ನು ಅದರ ಶುದ್ಧ ಮತ್ತು ಪ್ರಾಮಾಣಿಕ ರೂಪದಲ್ಲಿ ಅನುಸರಿಸಿದರೆ, ದೀರ್ಘಾಯುಷ್ಯ ಮಾತ್ರವಲ್ಲದೆ ಆರೋಗ್ಯಕರ ಜೀವನ ನಡೆಸಲು ಸಾಧ್ಯ ಎಂದು ಆರೋಗ್ಯ ಮತ್ತು ಕುಟುಂಬ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಬೆಂಗಳೂರು ನಗರದ ಅರಮನೆ ಮೈದಾನದಲ್ಲಿ ನಡೆಯುತ್ತಿರುವ ವಿಶ್ವ ಆಯುರ್ವೇದ ಸಮ್ಮೇಳದ ಮೊದಲ ದಿನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ಆರೋಗ್ಯ ಸಮಸ್ಯೆಗಳಿಗೆ ಮಾತ್ರೆ, ಶಸ್ತ್ರಚಿಕಿತ್ಸೆಗಳೇ ಪರಿಹಾರ ಎಂಬ ಮನಸ್ಥಿತಿ ಹೆಚ್ಚಾಗಿದೆ. ಆದರೆ ಆಯುರ್ವೇದ ಮತ್ತು ಯೋಗದಲ್ಲಿ ಪರಿಣಾಮಕಾರಿಯಾದ ಪರ್ಯಾಯ ಚಿಕಿತ್ಸೆ ಮತ್ತು ರೋಗನಿರೋಧಕ ವಿಧಾನಗಳು ಲಭ್ಯವಿದೆ ಎಂದು ತಿಳಿಸಿದರು.

ಆಯುರ್ವೇದವು ಕೇವಲ ಪರಂಪರೆ ಮಾತ್ರವಲ್ಲ, ಅದು ವಿಜ್ಞಾನ ವಾಗಿದ್ದು ಅದರ ಬೆಳವಣಿಗೆಗೆ ಸಂಶೋಧನೆ, ವೈಜ್ಞಾನಿಕ ವಿಶ್ಲೇಷಣೆ, ಮಾನದಂಡೀಕರಣ ಅಗತ್ಯವಿದೆ. ಅನೇಕ ದೀರ್ಘಕಾಲೀನ ರೋಗಗಳು ಆಧುನಿಕ ಚಿಕಿತ್ಸೆಯಿಂದ ಗುಣಮುಖವಾಗದೇ ಆಯುರ್ವೇದದಿಂದ ಸಂಪೂರ್ಣವಾಗಿ ಗುಣಮುಖವಾಗಿರುವ ಉದಾಹರಣೆಗಳಿವೆ. ಆದರೆ ಯಾರು ನಿಜವಾದ ಆಯುರ್ವೇದ ತಜ್ಞರು, ಯಾರು ದುರುಪಯೋಗ ಪಡಿಸಿಕೊಳ್ಳುವವರು ಎಂಬುದನ್ನು ಗುರುತಿಸಲು ಪ್ರಮಾಣೀಕರಣ ವ್ಯವಸ್ಥೆ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಆಯುರ್ವೇದ ವೈದ್ಯರು ಹಾಗೂ ಔಷಧಿಗಳಿಗೆ ಮಾನ್ಯ ಪ್ರಮಾಣಪತ್ರ ನೀಡುವ ವ್ಯವಸ್ಥೆಯನ್ನು ರೂಪಿಸುವ ಕುರಿತು ಸರಕಾರ ಚಿಂತನೆ ನಡೆಸುತ್ತಿದೆ ಎಂದರು.

ಸರಕಾರಕ್ಕೂ ಸಾಧ್ಯವಾಗದ ಮಟ್ಟದ ವಿಶ್ವಮಟ್ಟದ ಆಯುರ್ವೇದ ಸಮ್ಮೇಳನವನ್ನು ಡಾ. ಗಿರಿಧರ ಕಜೆ ಅವರ ಉತ್ಸಾಹದಿಂದ ಆಯೋಜಿಸಲಾಗಿದೆ. ಸಮ್ಮೇಳನದಲ್ಲಿ ಮುಂದಿನ ನಾಲ್ಕು ದಿನಗಳಲ್ಲಿ ಹೊರಬರುವ ಸಲಹೆ, ಶಿಫಾರಸುಗಳನ್ನು ಕರ್ನಾಟಕದಲ್ಲಿ ಜಾರಿಗೆ ತರಲು ಸರಕಾರ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ಮಾತನಾಡಿ, ಜಗತ್ತಿನಲ್ಲಿ ಕೊಲ್ಲುವ ಶಕ್ತಿ ಹಾಗೂ ಕಾಯುವ ಶಕ್ತಿ ಎಂಬ ಎರಡು ಶಕ್ತಿಗಳು ಸದಾ ಇರುತ್ತದೆ. ದೇವರದ್ದು ಕಾಯುವ ಕೆಲಸವಾದರೆ, ರಾಕ್ಷಸರ ಕೆಲಸ ಕೊಲ್ಲುವುದು ಹಾಗೂ ತೊಂದರೆ ನೀಡುವುದಾಗಿದೆ. ದೇವರು ನೇರವಾಗಿ ಸಹಾಯ ಮಾಡುವುದಿಲ್ಲ. ಜೀವ ಉಳಿಸುವ ಕಾರ್ಯವನ್ನು ದೇವರ ರೂಪದಲ್ಲಿ ವೈದ್ಯರು ಮಾಡುತ್ತಾರೆ. ಹಾಗಾಗಿ ಇದು ಕೇವಲ ಆಯುರ್ವೇದ ವೈದ್ಯರ ಸಮ್ಮೇಳನವಲ್ಲ, ಇದು ದೇವರ ಸಮ್ಮೇಳನ ಎಂದರು.

ಡಾ.ಗಿರಿಧರ ಕಜೆ ದೇವರನ್ನೆಲ್ಲ ಸೇರಿಸಿ ಸಮ್ಮೇಳನ ಮಾಡುತ್ತಿದ್ದಾರೆ ಎಂಬುದು ಉಲ್ಲೇಖನೀಯ. ಅವರ ಶ್ರಮ ನಾಡಿನ ಅಭಿನಂದನೆಗೆ ಅರ್ಹ. ಆಯುರ್ವೇದ ವೈದ್ಯರು ಕೇವಲ ಆಯುರ್ವೇದ ಪಠ್ಯಗಳ ಅಧ್ಯಯನಕ್ಕೆ ಸೀಮಿತವಾಗಬಾರದು. ಆಯುರ್ವೇದಕ್ಕೆ ಹೊಂದಿಕೊಂಡಂತೆ ಜ್ಯೋತಿಷ್ಯ ಹಾಗೂ ಧರ್ಮಶಾಸ್ತ್ರಗಳ ಅಧ್ಯಯನವೂ ಅಗತ್ಯ. ಇವುಗಳನ್ನು ಸರಿಯಾಗಿ ತಿಳಿದಾಗ ಮಾತ್ರ ಔಷಧಗಳ ಪ್ರಯೋಜನ ಹೆಚ್ಚಾಗಲು ಸಾಧ್ಯ.

ಆಯುರ್ವೇದ ವೈದ್ಯರು ಆಲೋಪತಿ ವಿಜ್ಞಾನವನ್ನು ತಿಳಿದಿರಬೇಕು. ಆದರೆ ಆಯುರ್ವೇದ ಔಷಧಗಳನ್ನೇ ನೀಡಬೇಕು. ಕರುಣೆ ಇಲ್ಲದವರು ವೈದ್ಯರಲ್ಲ, ವೈದ್ಯರಲ್ಲಿ ಕರುಣೆ ಇರಬೇಕು. ಔಷಧದಿಂದ ಅರ್ಧ ಕಾಯಿಲೆ ಗುಣವಾದರೆ, ಇನ್ನರ್ಧ ಕಾಯಿಲೆ ವೈದ್ಯರ ಕಳಕಳಿಯಿಂದ ಗುಣವಾಗುತ್ತದೆ. ಆಯುರ್ವೇದ ಸಮ್ಮೇಳನದ ಉದ್ಘಾಟನೆಯಲ್ಲಿ ಬೆಳಗಿದ ದೀಪ ವಿಶ್ವವನ್ನು ಬೆಳಗಲಿ ಎಂದರು.

ಈ ವೇಳೆ ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್, ಹಿಮಾಲಯ ಕಂಪನಿಯ ಸಿ.ಎಫ್.ಒ ಜಯ ಶ್ರೀ ಉಳ್ಳಾಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿರುವ ವಿಶ್ವ ಆಯುರ್ವೇದ ಸಮ್ಮೇಳನವನ್ನು ಸಿರಿಗೆರೆ ತರಳಬಾಳು ಮಠದ ಸ್ವಾಮೀಜಿ ಡಾ. ಶಿವಮೂರ್ತಿ ಶಿವಾಚಾರ್ಯ, ಪೇಜಾವರಮಠ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ರಾಮಚಂದ್ರಾಪುರಮಠದ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ, ವಚನಾನಂದ ಸ್ವಾಮೀಜಿ ಉದ್ಘಾಟಿಸಿದರು. ಈ ವೇಳೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕಾರ್ಯಕ್ರಮದ ರೂವಾರಿ ಡಾ.ಗಿರಿಧರ ಕಜೆ, ಕೇಂದ್ರ ಆಯುಷ್ ಸಚಿವಾಲಯದ ಸಲಹೆಗಾರ ಡಾ. ಕೌಸ್ತುಭ ಉಪಾಧ್ಯಾಯ, ಸೇರಿದಂತೆ ಹಲವರು ಇದ್ದರು.

ಆಯುರ್ವೇದ ಈ ನೆಲದ ವೈದ್ಯಕೀಯ ಪದ್ಧತಿ

ಆಯುರ್ವೇದ ಪರ್ಯಾಯ ವೈದ್ಯಕೀಯ ಪದ್ಧತಿಯಲ್ಲ. ಅದು ಈ ನೆಲದ ವೈದ್ಯಕೀಯ ಪದ್ಧತಿ. ಹಾಗೆಯೇ ಇದು ವೈದ್ಯಕೀಯ ಪದ್ಧತಿ ಮಾತ್ರವಲ್ಲ. ಇದು ಸಮಗ್ರ ಜೀವನ ಪದ್ಧತಿಯೂ ಹೌದು. ಈ ಆಯುರ್ವೇದ ವಿಶ್ವ ಸಮ್ಮೇಳನ ಹಲವಾರು ದಾಖಲೆಗಳನ್ನು ಬರೆಯಲು ಸಿದ್ಧವಾಗಿದ್ದು, ದೇಶವಿದೇಶಗಳಿಂದ 6 ಸಾವಿರ ಪ್ರತಿನಿಧಿಗಳು, ನೂರಾರು ಮಳಿಗೆಗಳು, ಆಯುರ್ವೇದ ಅನುಭವ ಕೇಂದ್ರಗಳು ಸೇರಿದಂತೆ ಹಲವಾರು ವೈಶಿಷ್ಟ್ಯಗಳ ಮೂಲಕ ಇತಿಹಾಸವನ್ನು ನಿರ್ಮಿಸುತ್ತದೆ ಎಂದು ಡಾ. ಗಿರಿಧರ ಕಜೆ ತಿಳಿಸಿದರು.

ಆಯುರ್ವೇದ ನಮ್ಮ ದೇಶದಲ್ಲಿ ಮಾತ್ರವಲ್ಲದೇ ಹೊರದೇಶಗಳಲ್ಲಿಯೂ ಪ್ರಭಾವವನ್ನು ಗಳಿಸುತ್ತಿದ್ದು, ಜಗತ್ತು ಆಯುರ್ವೇದದತ್ತ ವಾಲುತ್ತಿದೆ. ಆಯುರ್ವೇದ ಶಕ್ತಿಶಾಲಿಯಾದರೂ ಅದನ್ನು ಆಧುನಿಕ ಸಂಶೋಧನೆಗಳ ಮೂಲಕ ದಾಖಲೆ ಸಂಗ್ರಹಿಸುವ ಕಾರ್ಯ ಆಗಬೇಕಿದೆ. ಡಾ. ಗಿರಿಧರ ಕಜೆಯವರು ಕೊರೋನಾ ಸಂದರ್ಭದಲ್ಲಿ ಆಯುರ್ವೇದ ಔಷಧವನ್ನು ಕಂಡುಹಿಡಿದು, ಜನರಿಗೆ ಉಚಿತವಾಗಿ ನೀಡಿದ್ದರು.

- ಡಾ.ಡಿ. ವೀರೇಂದ್ರ ಹೆಗ್ಗಡೆ, ರಾಜ್ಯಸಭಾ ಸದಸ್ಯರು ಹಾಗೂ ಧರ್ಮಾಧಿಕಾರಿಗಳು ಧರ್ಮಸ್ಥಳ

ಹಿಂದಿನ ಕಾಲದಲ್ಲಿ ಯಾವುದೇ ಆಯುರ್ವೇದ ವೈದ್ಯರು ರೋಗಿಗಳ ಬಳಿ ಹಣ ಪಡೆಯುತ್ತಿರಲಿಲ್ಲ. ಹಣ ಪಡೆಯುವುದನ್ನು ಪಾಪವೆಂದು ಪರಿಗಣಿಸುತ್ತಿದ್ದರು. ಭಾರತ ಅತ್ಯದ್ಭುತ ದೇಶ ಸೊನ್ನೆಯನ್ನು ಪ್ರಪಂಚಕ್ಕೆ ಕೊಡುಗೆಯಾಗಿ ನೀಡಿದ ಭಾರತ ಆಯುರ್ವೇದವನ್ನೂ ನೀಡಿದೆ.

- ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಸಿರಿಗೆರೆ ತರಳಬಾಳು ಮಠ

ಎಲ್ಲಾ ಆರೋಗ್ಯ ಪದ್ಧತಿಗಳ ಮೂಲ ಉದ್ದೇಶವೂ ಆರೋಗ್ಯವನ್ನು ಕಾಪಾಡುವುದೇ ಆಗಿದೆ. ಅಗತ್ಯಕ್ಕೆ ಅನುಗುಣವಾಗಿ ಸೂಕ್ತ ಪದ್ಧತಿಯನ್ನು ಅಳವಡಿಸಿಕೊಂಡು ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಒಂದು ಬೇರೊಂದು ಪದ್ಧತಿಯನ್ನು ತೆಗಳುವಂತೆ ಆಗಬಾರದು.

- ಡಾ. ವಚನಾನಂದ ಮಹಾಸ್ವಾಮಿಗಳು, ಶ್ವಾಸಗುರು

ಆಯುರ್ವೇದದಲ್ಲಿ ಉಲ್ಲೇಖಿಸಲಾದ ಔಷಧಗಳಿಗೆ ಆಧುನಿಕ ವಿಜ್ಞಾನದ ಮಾದರಿಯಲ್ಲಿ ವೈಜ್ಞಾನಿಕ ಸಂಶೋಧನೆಗಳ ಆಧಾರವನ್ನು ಒದಗಿಸುವ ಕಾರ್ಯವಾಗಬೇಕಿದ್ದು, ಕೇಂದ್ರ ಸರ್ಕಾರ ಆ ದಿಶೆಯಲ್ಲಿ ಕಾರ್ಯಪ್ರವೃತ್ತವಾಗಿದೆ.

-ಡಾ.ಕೌಸ್ತುಭ ಉಪಾಧ್ಯಾಯ, ಕೇಂದ್ರ ಆಯುಷ್ ಸಚಿವಾಲಯದ ಸಲಹೆಗಾರ

ಆಹಾರವನ್ನೇ ಔಷಧವಾಗಿ ಬಳಸುವ ಪದ್ಧತಿ ಆಯುರ್ವೇದ ಪದ್ಧತಿ. ಜೀವನ ಪದ್ಧತಿಯ ಮೂಲಕ ಆರೋಗ್ಯ ಪೂರ್ಣವಾಗಿರುವುದು ಆಯುರ್ವೇದದ ಸೂತ್ರವಾಗಿದೆ. ವಯಕ್ತಿಕವಾಗಿ ನಾವೂ ಕೂಡ ಆಯುರ್ವೇದದ ಪ್ರಯೋಜನ ಪಡೆದಿದ್ದು, ಆಯುರ್ವೇದ ಇನ್ನಷ್ಟು ಬೆಳಯಲಿ.

- ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಪೇಜಾವರಮಠ

1.10 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ

ಬೆಂಗಳೂರು: ಬಹುಕಾಲದಿಂದ ತಾಂಡ, ಹಟ್ಟಿ ಗೊಲ್ಲರಹಟ್ಟಿ ಗಳಲ್ಲಿ ವಾಸ ಮಾಡುತ್ತಿದ್ದ ನಿವಾಸಿಗಳಿಗೆ ದಾಖಲೆ ಇಲ್ಲದೆ ನೆಮ್ಮದಿಯ ಜೀವನ ಅಸಾಧ್ಯವಾಗಿತ್ತು. ಅಂತಹವರಿಗೆ ಹಕ್ಕುಪತ್ರ ಮತ್ತು ದಾಖಲೆ ಮಾಡಲು 2017 ರಲ್ಲಿ ಕಾನೂನು ತಿದ್ದುಪಡಿ ಮಾಡಲಾಗಿದೆ. ಇದರ ಮುಖಾಂತರ ಕಾಲಾನುಕಾಲದಿಂದ ಅತಂತ್ರದಲ್ಲಿ ಬದುಕುತ್ತಿದ್ದ ಕುಟುಂಬಗಳಿಗೆ ನೆಮ್ಮದಿ ನೀಡಲು ಅವರ ವಾಸಕ್ಕೆ ದಾಖಲೆಗಳ ಗ್ಯಾರಂಟಿ ನೀಡುವ ಕೆಲಸ ಪ್ರಗತಿಯಲ್ಲಿದೆ.

ಈ ಕಾನೂನು 2017ರಲ್ಲಿ ತಿದ್ದುಪಡಿ ಆದ ನಂತರ 2023 ಮೇ ವರೆಗೆ 6 ವರ್ಷಗಳಲ್ಲಿ 1.08 ಲಕ್ಷ ನಿವಾಸಿಗಳಿಗೆ ಹಕ್ಕುಪತ್ರಗಳನ್ನು ನೀಡಲಾಗಿತ್ತು. ಮೇ 2023 ರಿಂದ 2025ರ ವರೆಗೆ 1.11 ಲಕ್ಷ ಹಕ್ಕುಪತ್ರಗಳನ್ನು ಈಗಾಗಲೇ ನೀಡಲಾಗಿದೆ. ಮೇ 2025ರ ನಂತರ 1.10 ಲಕ್ಷ ಹಕ್ಕುಪತ್ರಗಳನ್ನು ನೀಡುವ ಪ್ರಕ್ರಿಯೆ ಕೂಡಲೇ ಪೂರ್ಣಗೊಳಿಸುವಂತೆ ಗುರುವಾರದ ಜಿಲ್ಲಾಧಿಕಾರಿಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಎಲ್ಲಾ ಅಧಿಕಾರಿಗಳಿಗೂ ಸೂಚನೆ ನೀಡಲಾಯಿತು. ಫೆಬ್ರವರಿ ತಿಂಗಳಲ್ಲಿ 1.10 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ನೀಡಲು ಸರಕಾರ ತೀರ್ಮಾನಿಸಿದೆ.

ಕಾಲಾನುಕಾಲದಿಂದ ಬಹುತೇಕ ಬಡ ಕುಟುಂಬಗಳು ವಾಸಿಸುತ್ತಿದ್ದರೂ ದಾಖಲೆ ರಹಿತವಾಗಿರುವುದರಿಂದ ಅವರ ಬದುಕೇ ಅತಂತ್ರವಾಗಿದೆ. ದಶಕಗಳ ಸಮಸ್ಯೆಗೆ ಪರಿಹಾರ ನೀಡುವ ಕೆಲಸ ಕಂದಾಯ ಗ್ರಾಮ ರಚನೆ ಅಭಿಯಾನದ ಮುಖಾಂತರ ನಡೆಯು ತ್ತಿದೆ. ದಾಖಲೆ ರಹಿತ ವಸತಿ ಪ್ರದೇಶ ಮತ್ತು ಮನೆಗಳನ್ನು ಗುರುತಿಸಿ ಸರ್ವೇ ಮಾಡಿ, ದಾಖಲೆಗಳನ್ನು ತಯಾರಿಸಿ, ಅಧಿಸೂಚನೆ ಹೊರಡಿಸಿ, ಹಕ್ಕುಪತ್ರ ನೀಡಿ, ಕ್ರಯಪತ್ರದಂತೆ ನೋಂದಣಿ ಮಾಡಿ ಸ್ಥಳೀಯ ಸಂಸ್ಥೆಯಲ್ಲಿ ಪಕ್ಕಾ ಖಾತೆ ಮಾಡುವುದರ ಮುಖಾಂತರ ಸಂಪೂರ್ಣ ಮಾಲಿಕತ್ವದ ಗ್ಯಾರಂಟಿ ನೀಡುವ ಈ ಕಾರ್ಯ ರಾಜ್ಯಾದ್ಯಂತ ಅಭಿಯಾನದ ಮಾದರಿಯಲ್ಲಿ ನಡೆಯುತ್ತಿದೆ.

ತುರ್ತು ನಿರ್ಗಮನ ಕಡ್ಡಾಯ

ಬೆಂಗಳೂರು: ಸಾರ್ವಜನಿಕ ಸಾರಿಗೆಗಳಲ್ಲಿ ಬಳಸುವ ವಾಹನಗಳಿಗೆ ತುರ್ತು ನಿರ್ಗಮನದ ಬಾಗಿಲುಗಳಿಲ್ಲದಿದ್ದರೆ ಭೌತಿಕ ಕ್ಷಮತೆ ದೃಢೀಕರಣ ಪತ್ರ -ಎಫ್‌ಸಿ

ಮಾಡದಂತೆ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಚಿತ್ರದುರ್ಗದ ಹಿರಿಯೂರು ಬಳಿ ನಡೆದ ಖಾಸಗಿ ಬಸ್ ದುರಂತಕ್ಕೆ ತೀವ್ರ ವಿಷಾದ ವ್ಯಕ್ತಪಡಿಸಿದ ವೇಳೆ ಮಾತನಾಡಿ, ಬಸ್‌ನ ಡೀಸೆಲ್ ಟ್ಯಾಂಕಿಗೆ ಘರ್ಷಣೆಯಾಗಿರುವುದರಿಂದ ಬೆಂಕಿ ಹೊತ್ತಿಕೊಂಡಿದೆ. ಅಪಘಾತಕ್ಕೆ ಬಹುಶಃ ಅಜಾಗರೂಕತೆಯ ಚಾಲನೆ ಅಥವಾ ನಿದ್ದೆಯ ಮಂಪರು ಕಾರಣ ಇರಬಹುದು. ಸಾರಿಗೆ ಇಲಾಖೆಯ ಯೋಗೇಶ್ ಮತ್ತು ಹೆಚ್ಚುವರಿ ಆಯುಕ್ತ ಓಂಕಾರೇಶ್ವರ ಅವರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ ನಿಖರ ಕಾರಣವನ್ನು ಪತ್ತೆ ಹಚ್ಚಲಿದ್ದಾರೆ ಎಂದರು.

ಆಂಧ್ರಪ್ರದೇಶದಲ್ಲಿ ಬಸ್ ದುರಂತ ಸಂಭವಿಸಿದ ಬಳಿಕ ಸಾರಿಗೆ ಬಸ್‌ಗಳಲ್ಲಿ ಯಾವುದೇ ರೀತಿಯ ಸ್ಫೋಟಕಗಳನ್ನು ಸಾಗಿಸಬಾರದು ಎಂದು ಕಟ್ಟಪ್ಪಣೆ ಮಾಡಿದ್ದೇವೆ. ಪ್ರಯಾಣಿಕರನ್ನು ಹೊರತು ಪಡಿಸಿ ಅನಗತ್ಯವಾದ ಲಗೇಜ್‌ಗಳನ್ನು ಸಾಗಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದ್ದೇವೆ ಎಂದು ಹೇಳಿದರು.

2013ರಲ್ಲಿ ತಾವು ಸಾರಿಗೆ ಇಲಾಖೆಯ ಸಚಿವರಾಗಿದ್ದಾಗ ಜಪಾನ್ ಟ್ರಾವೆಲ್ ಬಸ್ ಒಂದು ಹೈದರಾಬಾದ್‌ಗೆ ಹೋಗುವಾಗ ಬೆಂಕಿ ಹೊತ್ತಿಕೊಂಡು ನಾಲ್ಕೈದು ಮಂದಿ ಸಾವನ್ನಪ್ಪಿದ್ದರು. ಆಗ ತಾವು ಗಮನಿಸಿದಂತೆ ಆ ಬಸ್ ನಲ್ಲಿ ತುರ್ತು ನಿರ್ಗಮನದ ಬಾಗಿಲು ಇರಲಿಲ್ಲ. ಅಪಘಾತದ ಸಂದರ್ಭದಲ್ಲಿ ಗ್ಲಾಸ್ ಹೊಡೆದು ಆಚೆ ಬರಬೇಕಿತ್ತು. ಐಶಾರಾಮಿ ಬಸ್‌ಗಳು 8 ರಿಂದ 10 ಅಡಿ ಎತ್ತರ ಇರುತ್ತವೆ. ಮಕ್ಕಳು, ವಯಸ್ಸಾದವರು, ಹೆಣ್ಣು ಮಕ್ಕಳು ಅಷ್ಟು ಎತ್ತರದಿಂದ ಜಿಗಿಯಲು ಸಾಧ್ಯವಾಗುವುದಿಲ್ಲ. ಈ ಕಾರಣಕ್ಕೆ ಸಾರಿಗೆ ಇಲಾಖೆಯ 25 ಸಾವಿರ ಬಸ್‌ಗಳಿಗೆ, ಎಲ್ಲಾ ಖಾಸಗಿ ವಾಹನಗಳಿಗೆ, ಓಮ್ನಿ ಬಸ್‌ಗಳಿಗೆ, ಶಾಲಾ ವಾಹನಗಳಿಗೆ ಕಡ್ಡಾಯವಾಗಿ ತುರ್ತು ನಿರ್ಗಮನದ ಬಾಗಿಲನ್ನು ಅಳವಡಿಸಲಾಗಿದೆ ಎಂದರು.

ಸ್ಯಾನ್ಸನ್‌ಗೆ ಭೂಮಿ: ಎಂ.ಬಿ ಪಾಟೀಲ್

ಬೆಂಗಳೂರು: ಅಮೆರಿಕ ಮೂಲದ ಸೆಮಿಕಂಡಕ್ಟರ್ ಕಂಪನಿ ಸ್ಯಾನ್ಸನ್ ಗ್ರೂಪ್ ಗೆ ತನ್ನ ಘಟಕ ಸ್ಥಾಪಿಸಲು ಮಂಡ್ಯ ಜಿಲ್ಲೆಯಲ್ಲಿ 100 ಎಕರೆ ಭೂಮಿ ನೀಡಲು ರಾಜ್ಯ ಸರಕಾರ ಉತ್ಸುಕವಾಗಿದೆ ಎಂದು ಕೇಂದ್ರ ಸಚಿವ

ಎಚ್.ಡಿ.ಕುಮಾರಸ್ವಾಮಿ ಅವರಿಗೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಪತ್ರ ಬರೆದಿದ್ದಾರೆ.

ಈ ಯೋಜನೆ ಸ್ಥಾಪಿಸುವುದಕ್ಕೆ ಸರಕಾರ ಅಗತ್ಯ ಸಹಕಾರ ನೀಡಲು ಸಿದ್ಧವಿದೆ. ಆದರೆ ಈ ಸಂಬಂಧವಾಗಿ ಕಂಪನಿಯ ಉನ್ನತಾಧಿಕಾರಿಗಳನ್ನು ಸಂಪರ್ಕಿಸಲು ಸಾಕಷ್ಟು ಪ್ರಯತ್ನಿಸಿ ದರೂ ಅವರು ಸಿಕ್ಕಿಲ್ಲ. ಈ ಯೋಜನೆ ರಾಜ್ಯಕ್ಕೆ ಬಂದು ನೆಲೆಯೂರಬೇಕು ಎನ್ನುವುದು ನಮ್ಮ ಆಸಕ್ತಿಯಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ನಿಮಗೆ ಪತ್ರಬ ರೆದಿದ್ದು, ನೀವು ಸಕಾರಾತ್ಮಕವಾಗಿ ಸ್ಪಂದಿಸಿದ್ದೀರಾ. ಆದರೆ ಪ್ರಸ್ತಾವಿನ ಯೋಜನೆಯ ವಿವರಗಳನ್ನು ತಿಳಿದುಕೊಳ್ಳಲು ಸ್ಯಾನ್ಸನ್ ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ ಮತ್ತು ಭಾರತೀಯ ವ್ಯವಹಾರಗಳ ಮುಖ್ಯಸ್ಥ ಅಭಯ್ ಕೆ. ರೈ.ಅವರನ್ನು ಸಂಪರ್ಕಿಸಲು ಹಲವು ಬಾರಿ ಪ್ರಯತ್ನಿಸಲಾಗಿದೆ. ಆದರೆ ಅವರ ಕಡೆಯಿಂದ ಇದುವರೆಗೂ ಉತ್ತರ ಬಂದಿಲ್ಲ ಎಂದರು.

ಮಂಡ್ಯ ಜಿಲ್ಲೆಯಲ್ಲಿ ನೀರು, ವಿದ್ಯುತ್, ಸಂಪರ್ಕ ಸೌಲಭ್ಯವಿರುವ ಕಡೆಯಲ್ಲೇ 100 ಎಕರೆ ಕೊಡಲು ಅಡ್ಡಿಯೇನಿಲ್ಲ. ಕಂಪನಿಯ ಕಡೆಯಿಂದ ಮನವಿ ಬಂದರೆ ಭೂ ಮಂಜೂರಾತಿಯ ಕಾರ್ಯಸಾಧ್ಯತೆ ಜತೆಗೆ ಇನ್ನಿತರ ಅಗತ್ಯ ಅನುಮೋದನೆಗಳು ಮತ್ತು ಮೂಲಸೌಕರ್ಯ ಗಳನ್ನು ಪರಿಗಣಿಸಿ, ತ್ವರಿತವಾಗಿ ಮುಂದಿನ ಹಂತಕ್ಕೆ ಕೊಂಡೊಯ್ಯಲಾಗುವುದು. ಈ ಹೊಣೆಯನ್ನು ಕೈಗಾರಿಕಾ ಇಲಾಖೆಯ ಆಯುಕ್ತೆ ಗುಂಜನ್ ಕೃಷ್ಣ ಅವರಿಗೆ ವಹಿಸಲಾಗಿದೆ ಎಂದರು. ಹೈಟೆಕ್ ಉದ್ಯಮಗಳನ್ನು ಬೆಳೆಸಲು ರಾಜ್ಯ ಸರಕಾರ ಬದ್ಧವಾಗಿದೆ. ಈ ಉದ್ದೇಶಿತ ಹೂಡಿಕೆ ಯೋಜನೆ ರಾಜ್ಯದ ಕೈತಪ್ಪಬಾರದು ಎನ್ನುವುದು ನಮ್ಮ ಕಳಕಳಿಯಾಗಿದೆ. ಇದರಿಂದ ಬೆಂಗಳೂರಿನ ಹೊರಗಿನ ಭಾಗಗಳಲ್ಲಿ ಉದ್ಯೋಗ ಸೃಷ್ಟಿ ಮತ್ತು ಉದ್ದಿಮೆಗಳ ಬೆಳವಣಿಗೆಗೂ ಅನುಕೂಲವಾಗಲಿದೆ ಎಂದು ಎಂ.ಬಿ.ಪಾಟೀಲ ಹೇಳಿದರು.

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ
ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್, ರೇಷ್ಮೆ ಇಲಾಖೆ, ಅಲ್-ಅಮೀನ ಮೆಡಿಕಲ್ ಕಾಲೇಜ ಹತ್ತಿರ ತೊರವಿ ರಸ್ತೆ, ವಿಜಯಪುರ. ದೂರವಾಣಿ ಸಂ:08352-200066,
ಇ-ಮೇಲ್:ddsbjp.sericulture@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಜಯಪುರ ಜಿಲ್ಲೆಯ ರೇಷ್ಮೆ ಬೆಳೆಗಾರರಿಗೆ ಉಚಿತವಾಗಿ ವಿತರಿಸಲು ರೇಷ್ಮೆ ಬೆಳೆಗೆ ಬಳಸುವ Hygiene Disinfectants ಗಳನ್ನು ಸರಬರಾಜು ಮಾಡಲು ಆಸಕ್ತ ಸರಬರಾಜುದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಸಲ್ಲಿಸಲು ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ಸಲ್ಲಿಸಲು ದಿನಾಂಕಗಳ ವಿವರ ಈ ಕೆಳಗಿನಂತಿದೆ.

1) ಟೆಂಡರ ವಿವರ: ರೇಷ್ಮೆ ಬೆಳೆಗೆ ಬಳಸುವ Hygiene Disinfectants and Grade-1 Bleaching Powder ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್ ಪ್ರಕಟಣೆ 2) ಟೆಂಡರ್ ಸಂಖ್ಯೆ: SD/2024-25/IND0148 ದಿನಾಂಕ: 22.12.2025 3) ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 22.12.2025. 4) ಟೆಂಡರ್ ಡೌನ್‌ಲೋಡ್ ಮಾಡಲು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ & ಸಮಯ 01.01.2026 ಸಂಜೆ 05.00 ಗಂಟೆ 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 03.01.2026 ಬೆ:-11.30. 6) ಇ.ಎಂ.ಡಿ ಹಾಗೂ ಭದ್ರತಾ ಠೇವಣಿ ಮೊತ್ತ : ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ತಿಳಿಸಿರುವಂತೆ 7) ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.01.2026 ಬೆ: 11.30 (ತಾತ್ಕಾಲಿಕ ವೇಳಾಪಟ್ಟಿ ಬದಲಾವಣೆಗೆ ಒಳಪಟ್ಟಿದೆ). ಆಸಕ್ತ ಸರಬರಾಜುದಾರರು "ಇ-ಪೋರ್ಟಲ್" ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಿಂದ ಪಡೆದು ಕೊಳ್ಳಬಹುದು.

ಸಹಿ/- ರೇಷ್ಮೆ ಉಪನಿರ್ದೇಶಕರು,
ಜಿಲ್ಲಾ ಪಂಚಾಯತ್, ವಿಜಯಪುರ

ವಾಸಾಸಂಇ/ವಿಜಯಪುರ/566/ಕೆಎಸ್‌ಎಂಸಿಎ/2025-26

ನಡುರಾತ್ರಿ ಬಸ್‌ಗೆ ಟ್ರಕ್ ಡಿಕ್ಕಿ: 6 ಮಂದಿ ಸಜೀವ ದಹನ

← ಮೊದಲ ಪುಟದಿಂದ ಬಸ್ಸಿನ ಡೀಸೆಲ್ ಟ್ಯಾಂಕಿಗೆ ಡಿಕ್ಕಿಯಾದ ಪರಿಣಾಮ ತಕ್ಷಣ ಬೆಂಕಿ ಹೊತ್ತಿಕೊಂಡಿದೆ. ಚಾಲಕ ಕೂಡಲೇ ಜೋರಾಗಿ ಸದ್ದು ಮಲಗಿದ್ದವರನ್ನು ಎಬ್ಬಿಸಿದ್ದಾರೆ. ನಾನ್ ಎಸಿ ಬಸ್ ಆದ್ದರಿಂದ ಬಹುತೇಕರು ಕಿಟಕಿ ತೆಗೆದು ಹೊರಹಾರಿದ್ದಾರೆ. ಆಹುತಿಯಾದ ಬ್ಯಾಚೆಲರ್ ಪಾರ್ಟಿ ಸಂಭ್ರಮ: ಕ್ರಿಸ್ಮಸ್ ರಜೆಯ ಹಿನ್ನೆಲೆಯಲ್ಲಿ ಬ್ಯಾಚೆಲರ್ ಪಾರ್ಟಿಗಾಗಿ ತೆರಳುತ್ತಿದ್ದ ಒಂದೇ ಐಟಿ ಕಂಪನಿಯ ಆರು ಮಂದಿ ಸಹೋದ್ಯೋಗಿಗಳು ಬೆಂಕಿ ದುರಂತದಲ್ಲಿ ಸಿಲುಕಿದ್ದು, ಒಬ್ಬರು ಸಾವನ್ನಪ್ಪಿದ್ದಾರೆ. ಈ ಘಟನೆ ತೀವ್ರ ಆಘಾತ ಮೂಡಿಸಿದೆ. ದುರಂತದಲ್ಲಿ ಸಾವನ್ನಪ್ಪಿದವರಲ್ಲಿ ಬಿಂದು ಎಂಬುವವರು ಸೇರಿದ್ದಾರೆ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ.

ಮೂವರು ಸ್ನೇಹಿತೆಯರು ಬಚಾವ್

ರಜೆಯಿತ್ತು ಎಂದು ಗೋಕರ್ಣಕ್ಕೆ ಹೊರಟಿದ್ದ ಮೂವರು ಸ್ನೇಹಿತೆಯರು ಭೀಕರ ಅಪಘಾತದಲ್ಲಿ ಅಚ್ಚರಿಯ ರೀತಿಯಲ್ಲಿ ಪ್ರಾಣ ಉಳಿಸಿಕೊಂಡಿದ್ದಾರೆ. ಬೆಂಗಳೂರು ಮೂಲದ ರಕ್ಷಿತಾ, ಗಗನ ಹಾಗೂ ಗೋಕರ್ಣ ಮೂಲದ ರಶ್ಮಿ ಬಚಾವಾದವರು. ಮೂವರೂ ಬೆಂಗಳೂರಿನ ಡೈಲೈಟ್ ಕಂಪನಿಯ ಉದ್ಯೋಗಿಗಳು ಎನ್ನಲಾಗಿದೆ.

ಇನ್‌ಸ್ಟಾಗ್ರಾಮ್, ಎಕ್ಸ್ ನೋಡಲು ಮಾತ್ರ ಯೋಧರಿಗೆ ಅನುಮತಿ

← ಮೊದಲ ಪುಟದಿಂದ ಇದನ್ನು ನಿಯಂತ್ರಿಸಲು ಸೇನೆ ಈ ನಿರ್ಧಾರ ಮಾಡಿದೆ. ಹೊಸ ಬದಲಾವಣೆ ಪ್ರಕಾರ ಯೋಧರು ತಮ್ಮ ಜ್ಞಾನಕ್ಕಾಗಿ ಈ ತಾಣಗಳನ್ನು ನೋಡಬಹುದು. ಅಲ್ಲಿ ಯಾವುದೇ ಆಕ್ಷೇಪಾರ್ಹ ಸಂಗತಿಗಳನ್ನು ಕಂಡರೆ ಮಾಹಿತಿ ನೀಡಬಹುದು. ಸೇನಾ ಸಿಬ್ಬಂದಿಗೆ ಡಿಜಿಟಲ್ ಚಟುವಟಿಕೆಗಳ ಕುರಿತು ಅಸ್ತಿತ್ವದಲ್ಲಿರುವ ಎಲ್ಲಾ ಇತರ ನಿಯಮಗಳು ಜಾರಿಯಲ್ಲಿರುವುದರಿಂದ, ಅವರು ಸಾಮಾಜಿಕ ಜಾಲತಾಣಗಳಲ್ಲಿ ಏನನ್ನೂ ಪೋಸ್ಟ್ ಮಾಡಲು, ಲೈಕ್ ಮಾಡಲು ಅಥವಾ ಕಾಮೆಂಟ್ ಮಾಡಲು ಸಾಧ್ಯವಿಲ್ಲ. ಪ್ರತಿಯೊಂದು ಸೇನಾ ಘಟಕಗಳಿಗೆ ಈ ಹೊಸ ಸೂಚನೆಗಳನ್ನು ಜಾರಿ ಮಾಡಲಾಗಿದೆ.

ಯುವಕರು ಸೇನೆಗೆ ಸೇರಲು ಬಯಸುತ್ತಾರೆ. ಆದರೆ ಅವರು ಸ್ಮಾರ್ಟ್‌ಫೋನ್ ಇಲ್ಲದ ಜೀವನವನ್ನು ಊಹಿಸಿಕೊಳ್ಳುವುದು ಅಸಾಧ್ಯ. ಸೈನ್ಯವು ಮೂಲಭೂತವಾಗಿ ಸಾಮಾಜಿಕ ಜಾಲತಾಣಗಳಿಂದ ದೂರವಿರುತ್ತದೆ. ಹೀಗಾಗಿ ಈ ವಿಷಯದಲ್ಲಿ ಸೂಕ್ತ ಸಂಯೋಜನೆ ಬಹುಮುಖ್ಯವಾಗುತ್ತದೆ. ಹೀಗಾಗಿ ನಾವು ಯೋಧರ ಸಾಮಾಜಿಕ ಜಾಲತಾಣಗಳ ಬಳಕೆ ಮೇಲೆ ನಿಯಂತ್ರಣ ಹೇರುವುದು ಅನಿವಾರ್ಯವಾಗಿದೆ ಎಂದು ಜನರಲ್ ಉಪೇಂದ್ರ ದ್ವಿವೇದಿ ಇತ್ತೀಚೆಗೆ ಸೂಚ್ಯವಾಗಿ ಹೇಳಿದ್ದರು.

2019ರವರೆಗೆ ಸೇನಾ ಸಿಬ್ಬಂದಿಗೆ ಯಾವುದೇ ಸಾಮಾಜಿಕ ಮಾಧ್ಯಮ ಗುಂಪಿನ ಭಾಗವಾಗಲು ಅವಕಾಶವಿರಲಿಲ್ಲ. ಸಾಮಾಜಿಕ ಮಾಧ್ಯಮ ದುರುಪಯೋಗದ ಹಲವಾರು ಪ್ರಕರಣಗಳ ನಂತರ, ಸೇನೆಯು 2020ರಲ್ಲಿ ನಿಯಮಗಳನ್ನು ಬಿಗಿಗೊಳಿಸಿತು ಮತ್ತು ಫೇಸ್ ಬುಕ್ ಮತ್ತು ಇನ್‌ಸ್ಟಾಗ್ರಾಮ್ ಸೇರಿದಂತೆ 89 ಮೊಬೈಲ್ ಅಪ್ಲಿಕೇಶನ್‌ಗಳನ್ನು ಅಳಿಸಲು ಸೈನಿಕರಿಗೆ ಸೂಚನೆ ನೀಡಿತ್ತು.

ಆದಾಗ್ಯೂ, ಕೆಲವು ಕಠಿಣ ನಿಯಮಗಳೊಂದಿಗೆ ಸೇನೆಯು ಫೇಸ್ ಬುಕ್, ಯೂಟ್ಯೂಬ್, ಎಕ್ಸ್, ಲಿಂಕ್ಡ್‌ಇನ್, ಕೋರಾ, ಟೆಲಿಗ್ರಾಮ್ ಮತ್ತು ವಾಟ್ಸ್‌ಆ್ಯಪ್‌ನಂತಹ ಕೆಲವು ಪ್ಲಾಟ್‌ಫಾರ್ಮ್‌ಗಳನ್ನು ಬಳಸಲು ಯೋಧರಿಗೆ ಅನುಮತಿ ನೀಡಿದೆ. ಸೈನ್ಯವು ಈಗಾಗಲೇ ತನ್ನದೇ ಆದ ಅಧಿಕೃತ ಸಾಮಾಜಿಕ ಮಾಧ್ಯಮ ಖಾತೆಗಳನ್ನು ಹೊಂದಿದೆ. ಹೊಸ ಮಾರ್ಗಸೂಚಿಗಳನ್ನು ಅನುಸರಿಸಿ, ಸೈನಿಕರು ಈಗ ಸಾಮಾನ್ಯ ಮಾಹಿತಿಗಾಗಿ ಈ ವೇದಿಕೆಗಳನ್ನು ಬಳಸಬಹುದು.

ದಿಲ್ಲಿಗೆ ಹೊರಟ ಸಿದ್ದು; ಡಿಕೆಶಿಗಿಲ್ಲ ಆಹ್ವಾನ

← ಮೊದಲ ಪುಟದಿಂದ ಆದರೆ ಎರಡು ದಿನದ ಹಿಂದೆ ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡದ ಹೈಕಮಾಂಡ್ ಇದೀಗ ಆಹ್ವಾನ ನೀಡಿರುವುದು ಏಕೆ? ಎನ್ನುವ ಪ್ರಶ್ನೆಗಳಿವೆ. ಈ ಸಭೆಯ ಬಳಿಕ ನಡೆಯುವ ವಿಸ್ತರಿತ ಸಭೆಗೆ ಡಿ.ಕೆ.ಶಿವಕುಮಾರ್ ಅವರಿಗೆ ಆಹ್ವಾನ ಸಿಗುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ.

ರಾಜ್ಯ ಕಾಂಗ್ರೆಸ್‌ನಲ್ಲಿರುವ ನಾಯಕತ್ವ ಗೊಂದಲದ ಈ ಹೊತ್ತಿನಲ್ಲಿ ಡಿ.ಕೆ. ಶಿವಕುಮಾರ್ ಅವರನ್ನು ಕರೆಯದೇ, ಸಿದ್ದರಾಮಯ್ಯ ಅವರಿಗೆ ಮಾತ್ರ ಸಭೆಗೆ ಆಹ್ವಾನ ನೀಡಿರುವುದು ಬೇರೆ ಸಂದೇಶವನ್ನು ರವಾನಿಸುತ್ತಿದೆ. ಇದಕ್ಕೆ ಪೂರಕವಾಗಿ ದೆಹಲಿಯಲ್ಲಿ ಎರಡೂ ದಿನವಿದ್ದರೂ ಹೈಕಮಾಂಡ್ ನಾಯಕರನ್ನು ಭೇಟಿಯಾಗದೇ ವಾಪಸಾದ ಸಮಯದಲ್ಲಿಯೇ, ಹೈಕಮಾಂಡ್‌ನ ಈ ನಡೆ ಕುತೂಹಲಕ್ಕೆ ಕಾರಣವಾಗಿದೆ.

ಖರ್ಗೆ ಭೇಟಿಯಾದ ಡಿಕೆಶಿ

ಈ ನಡುವೆ ಬುಧವಾರ ರಾತ್ರಿ ದೆಹಲಿಯಿಂದ ವಾಪಸಾದ ಡಿ.ಕೆ.ಶಿವಕುಮಾರ್ ಅವರು ಗುರುವಾರ ಬೆಳಗ್ಗೆ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸಕ್ಕೆ ಭೇಟಿಯಾಗಿ ಚರ್ಚೆ ನಡೆಸಿದರು. ಕಾರ್ಯಕಾರಿ ಸಭೆಯಲ್ಲಿ ಭಾಗವಹಿಸಲು ಗುರುವಾರ ಸಂಜೆ ದೆಹಲಿಗೆ ಖರ್ಗೆ ಅವರು ತೆರಳುವ ಮೊದಲು ಭೇಟಿಯಾಗಿರುವುದು ಕುತೂಹಲಕ್ಕೆ ಕಾರಣವಾಗಿದೆ. ಇದರೊಂದಿಗೆ ದೆಹಲಿ ಪ್ರವಾಸದಲ್ಲಿ ಯಾವ ನಾಯಕರನ್ನು ಭೇಟಿಯಾಗದ ಡಿಕೆ ಈಗ ಖರ್ಗೆ ಅವರನ್ನು ಭೇಟಿಯಾಗಿದ್ದು ಏಕೆ ಎನ್ನುವ ಪ್ರಶ್ನೆ ರಾಜಕೀಯ ವಲಯದಲ್ಲಿ ಶುರುವಾಗಿದೆ.

ಅರಣ್ಯ ಸಿಬ್ಬಂದಿಗೆ ಕೋಟಿ ರು. ವಿಮಾ ರಕ್ಷೆ

← ಮೊದಲ ಪುಟದಿಂದ

ಕಂದಾಯ ಗ್ರಾಮ ರಚನೆ, ಹಕ್ಕುಪತ್ರ ವಿತರಿಸಲು ಮಹತ್ವದ ನಿರ್ಧಾರ

ಆದ್ದರಿಂದ ಹೊರಗುತ್ತಿಗೆ ಸಿಬ್ಬಂದಿಗೆ 20 ಲಕ್ಷ ರು. ವಿಮಾ ಸೌಲಭ್ಯ ಕಲ್ಪಿಸಲಾಗಿದೆ. ಅರಣ್ಯ ಇಲಾಖೆಯ ಎಲ್ಲಾ ಕಾಯಂ ಉದ್ಯೋಗಿಗಳಿಗೆ, ಅವರ ವೇತನ ಮತ್ತು ಶ್ರೇಣಿಯ ಹೊರತಾಗಿ ಕೋಟಿ ರು.ಗಳ ಅಪಘಾತ ಮರಣ ವಿಮೆಯನ್ನು ಬ್ಯಾಂಕ್ ನೀಡುತ್ತದೆ. ಒಂದೊಮ್ಮೆ ಕರ್ತವ್ಯದಲ್ಲಿದ್ದಾಗ ಮೃತಪಟ್ಟರೆ ಹೆಚ್ಚುವರಿಯಾಗಿ 25 ಲಕ್ಷ ರು.ಗಳನ್ನು ಬ್ಯಾಂಕ್ ಪಾವತಿಸಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಬ್ಯಾಂಕ್ ಆಫ್ ಬರೋಡಾದಲ್ಲಿ ಇಲಾಖೆಯ ನೌಕರರು ಪಿಂಚಣಿ ಖಾತೆಯನ್ನು ಮುಂದುವರಿಸಿದರೆ, ಈ ವೈಯಕ್ತಿಕ ಅಪಘಾತ ವಿಮಾ ರಕ್ಷಣೆಯ ಸೌಲಭ್ಯ 70 ವರ್ಷ ವಯಸ್ಸಿನವರೆಗೆ ಮುಂದುವರಿಯುತ್ತದೆ. ಇದಲ್ಲದೆ, ಕಾಯಂ ಉದ್ಯೋಗಿಗಳಿಗೆ 10 ಲಕ್ಷಗಳ ಜೀವ ವಿಮಾ ರಕ್ಷಣೆಯನ್ನು ಸಹ ಬ್ಯಾಂಕ್ ಒದಗಿಸುತ್ತದೆ ಎಂದಿದ್ದಾರೆ.

ಬೆಂಕಿಯ ಬಲೆಗೆ 6 ಮಂದಿ ಸಜೀವ ದಹನ

ಕ್ಯಾಂಟರ್ ಲಾರಿ ಡಿಕ್ಕಿ ಹೊಡೆದು ಖಾಸಗಿ ಸ್ಲೀಪರ್ ಬಸ್ ಸ್ಫೋಟ | ಹಿರಿಯೂರಿನ ಗೊರ್ಲತ್ತು ಕ್ರಾಸ್ ಬಳಿ ದುರಂತ | ಬಸ್‌ನಲ್ಲಿದ್ದ 33 ಮಂದಿ ಪೈಕಿ 5 ಮಂದಿ ದುರ್ಮರಣ | ಮೃತರಿಗೆ ರಾಜ್ಯ ಸರಕಾರ ತಲಾ 5 ಲಕ್ಷ, ಕೇಂದ್ರ 2 ಲಕ್ಷ ರು. ಪರಿಹಾರ | ಗಾಯಾಳುಗಳಿಗೆ ಮುಂದುವರಿದ ಚಿಕಿತ್ಸೆ

1. ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲೂಕಿನ ಗೊರ್ಲತ್ತು ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಖಾಸಗಿ ಸ್ಲೀಪರ್ ಬಸ್‌ಗೆ ಕಂಟೇನರ್ ಲಾರಿ ಡಿಕ್ಕಿ ಹೊಡೆದ ಪರಿಣಾಮ ಸ್ಲೀಪರ್ ಬಸ್ ಹೊತ್ತಿಉರಿಯುತ್ತಿರುವುದು.

2 ಸಜೀವ ದಹನಗೊಂಡ ಬಸ್‌ನಲ್ಲಿದ್ದ ಯುವತಿಯರು.

ರವಿಚಂದ್ರ ನೇರ್ಲಹಳ್ಳಿ ಚಿತ್ರದುರ್ಗ

ಖಾಸಗಿ ಸ್ಲೀಪರ್ ಬಸ್‌ನಲ್ಲಿ ಬೆಂಗಳೂರಿನಿಂದ ಶಿವಮೊಗ್ಗ ಮಾರ್ಗವಾಗಿ ಗೋಕರ್ಣಕ್ಕೆ ಹೊರಟಿದ್ದ 33 ಮಂದಿ ಬಾಳಲ್ಲಿ ವಿಧಿ ಆಟವಾಡಿದೆ. ಜವರಾಯನ ಅಟ್ಟಹಾಸಕ್ಕೆ ಬಸ್‌ನಲ್ಲಿದ್ದ ಮಗು ಸೇರಿ 5 ಮಂದಿ ಬೆಂಕಿಯಲ್ಲಿ ಬೆಂದು ದಾರುಣವಾಗಿ ಸಾವನ್ನಪ್ಪಿದ್ದಾರೆ.

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲೂಕಿನ ಗೊರ್ಲತ್ತು ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಖಾಸಗಿ ಸ್ಲೀಪರ್ ಬಸ್ ಮತ್ತು ಕಂಟೇನರ್ ಲಾರಿ ನಡುವೆ ಮಧ್ಯರಾತ್ರಿ 1.40ರ ಸುಮಾರಿಗೆ ಅಪಘಾತ ನಡೆದಿದೆ. ಸ್ಲೀಪರ್ ಬಸ್‌ನಲ್ಲಿದ್ದ 5 ಮಂದಿ, ಲಾರಿ ಚಾಲಕ ಸೇರಿ 6 ಮಂದಿ ಸಾವನ್ನಪ್ಪಿದ್ದಾರೆ.

ಬಸ್‌ನಲ್ಲಿದ್ದ ಮೃತರನ್ನು ಬಿಂದು ವಿ, ಅವರ ಪುತ್ರಿ ಗ್ರೇಮಾ, ಮಾನಸ, ನವ್ಯಾ ಮತ್ತು ರಶ್ಮಿ ಮಹಾಲೆ ಎಂದು ಗುರುತಿಸಲಾಗಿದೆ. ಮೃತಪಟ್ಟ ಕಂಟೇನರ್ ಲಾರಿ ಚಾಲಕ ಉತ್ತರ ಪ್ರದೇಶ ಮೂಲದವರು ಎನ್ನಲಾಗಿದೆ. ಗಾಯಾಳುಗಳಿಗೆ ಚಿತ್ರದುರ್ಗ, ಶಿರಾ, ಹಿರಿಯೂರು, ಬೆಂಗಳೂರಿ ಸೇರಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮುಂದುವರಿದಿದೆ.

ದುರಂತ ಹೇಗಾಯ್ತು?: ಚಿತ್ರದುರ್ಗ ಕಡೆಯಿಂದ ಬರುತ್ತಿದ್ದ ಕಂಟೇನರ್ ಲಾರಿ ಹೆದ್ದಾರಿಯ ಡಿವೈಡರ್ ದಾಟಿ ಬಂದು ಖಾಸಗಿ ಸ್ಲೀಪರ್ ಬಸ್‌ನ ಡೀಸೆಲ್ ಟ್ಯಾಂಕ್ ಭಾಗಕ್ಕೆ ಸರಿಯಾಗಿ ಡಿಕ್ಕಿ ಹೊಡೆದಿದೆ. ಇದರಿಂದ ತಕ್ಷಣವೇ ಡೀಸೆಲ್ ಟ್ಯಾಂಕ್‌ಗೆ ಬೆಂಕಿ ಹೊತ್ತಿಕೊಂಡಿದೆ. ಡೀಸೆಲ್ ಟ್ಯಾಂಕ್‌ಗೆ ಕಂಟನೇರ್ ಲಾರಿ ಡಿಕ್ಕಿ ಹೊಡೆದ ತಕ್ಷಣವೇ ಡೀಸೆಲ್ ಟ್ಯಾಂಕ್ ಸ್ಫೋಟಗೊಂಡಿದೆ. ಡೀಸೆಲ್ ಟ್ಯಾಂಕ್‌ನ ಮೇಲ್ಭಾಗದ ಸೀಟುಗಳಲ್ಲಿ ಕುಳಿತಿದ್ದವರು ಬಸ್‌ನಿಂದ ಹೊರಗೆ ಓಡಿ ಬರಲು ಸಮಯವೇ ಸಿಕ್ಕಿಲ್ಲ. ಇದರಿಂದ ಈ ಭಾಗದಲ್ಲಿ ಕುಳಿತಿದ್ದ 5 ಮಂದಿಯೂ ದಾರುಣವಾಗಿ ಸುಟ್ಟು ಕರಕಲಾಗಿ ಸಾವನ್ನಪ್ಪಿದ್ದಾರೆ. ಬಸ್ ಹಿಂಭಾಗ, ಮುಂಭಾಗದಲ್ಲಿ ಕುಳಿತಿದ್ದವರು ಬಸ್‌ನಿಂದ ಜಿಗಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮೂವರು ಸ್ನೇಹಿತೆಯರು ಗ್ರೇಟ್ ಎಸ್ಕೇಪ್: ಅಪಘಾತದಲ್ಲಿ ಮೂವರು ಸ್ನೇಹಿತೆಯರು ಗ್ರೇಟ್ ಎಸ್ಕೇಪ್ ಆಗಿದ್ದಾರೆ.ಬೆಂಗಳೂರು ಮೂಲದ ರಕ್ಷಿತಾ, ಗಗನ ಹಾಗೂ ಗೋಕರ್ಣ ಮೂಲದ ರಶ್ಮಿ ಅದೃಷ್ಟವಶಾತ್ ಪಾರಾಗಿದ್ದಾರೆ. ಮೂವರು ಕೂಡ ಬೆಂಗಳೂರಿನ ಡ್ವೈಲೈಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ತಿಳಿದುಬಂದಿದೆ. ರಜೆಯಿರುವ ಹಿನ್ನೆಲೆ ಮೂವರು ಸೇರಿಕೊಂಡು ಗೋಕರ್ಣಕ್ಕೆ ತೆರಳುತ್ತಿದ್ದರು. ಈ ವೇಳೆ ಅಪಘಾತ ಸಂಭವಿಸಿದ್ದು, ಮೂವರು ಪವಾಡ ಸೃದೃಶ್ಯದಂತೆ ಪಾರಾಗಿದ್ದಾರೆ

ಸಾವಿನ ದವಡೆಯಿಂದ ಪಾರಾದ ಕುಟುಂಬ: ಕಿರಣ್ ಮತ್ತು ಅವರ ಕುಟುಂಬ ಕೂಡ ಗೋಕರ್ಣ ಟ್ರಿಪ್‌ಗೆ ಹೋಗುತ್ತಿದ್ದರು. ಇವರು ಬಸ್‌ನ ಎಡಭಾಗದ ಕೆಳಗಿನ ಸೀಟುಗಳನ್ನೇ ಆಯ್ಕೆ ಮಾಡಿಕೊಂಡಿದ್ದರು. ಕಿರಣ್ ಪಾಲ್, ಕೀರ್ತನ, ನಂದಿತಾ ಮತ್ತು ದೇವಿಕಾ ಒಂದೇ ಕಡೆ ಇದ್ದಿದ್ದರಿಂದ, ಒಬ್ಬರಿಗೊಬ್ಬರು ಸಹಾಯ ಮಾಡಿಕೊಂಡು ಹೊರಗೆ ಬಂದಿದ್ದಾರೆ. ಅದೃಷ್ಟವಶಾತ್ ಇಡೀ ಕುಟುಂಬ ಸಾವಿನ ದವಡೆಯಿಂದ ಪಾರಾಗಿದೆ. ಈ ದುರಂತದಲ್ಲಿ ಗಾಯಗೊಂಡ ಆರು ಜನರಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಯುತ್ತಿದೆ. ಕಿರಣ್ ಅವರ ಕುಟುಂಬದ ಸದಸ್ಯರಾದ ಕೀರ್ತನ ಅವರಿಗೆ ಶೇ.5 ರಷ್ಟು ಸುಟ್ಟ ಗಾಯಗಳಾಗಿದ್ದರೆ, ದೇವಿಕಾ ಅವರಿಗೆ ಶೇ.3 ರಷ್ಟು ಸುಟ್ಟ ಗಾಯಗಳಾಗಿವೆ. ಅದೃಷ್ಟವಶಾತ್ ಇವರ ಗಾಯಗಳು ಗಂಭೀರವಾಗಿಲ್ಲ.

ತಾಯಿ ಮಗು ದಾರುಣ ಸಾವು: ಇನ್ನು ಅಪಘಾತದಲ್ಲಿ ಬದುಕುಳಿದ ಒಬ್ಬೊಬ್ಬ ಪ್ರಯಾಣಿಕರ ಕತೆಯೂ ರೋಚಕವಾಗಿದೆ. ಒಂದೇ ಐಟಿ ಕಂಪನಿಯ 6 ಮಂದಿ ಸಹೋದ್ಯೋಗಿಗಳು ಬೆಂಕಿಯ ಕೆನ್ನಾಲೆಯ ನಡುವೆ ಸಿಲುಕಿ ಒದ್ದಾಡಿದ್ದಾರೆ. ಕವಿತಾರ ಮದುವೆ ನಿಗದಿಯಾಗಿರುವ ಹಿನ್ನೆಲೆ ಬ್ಯಾಚುಲರ್ ಪಾರ್ಟಿಗೆಂದು ಇವರು ಗೋಕರ್ಣಕ್ಕೆ ತೆರಳುತ್ತಿದ್ದರು. ಅಲ್ಲಿನ ಖಾಸಗಿ ರೆಸಾರ್ಟ್‌ನಲ್ಲಿ ಪಾರ್ಟಿಯೂ ನಿಗದಿಯಾಗಿತ್ತು. ಕ್ರಿಸ್ಮಸ್ ರಜೆ ಹಿನ್ನೆಲೆ ತಂಡವೇ ಗೋಕರ್ಣಕ್ಕೆ ಹೊರಟಿತ್ತು. ಆ ಪೈಕಿ ಬಿಂದು ಮತ್ತು ಆಕೆಯ 5 ವರ್ಷದ ಮಗು ಗ್ರೇಮಾ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಬೆಂಗಳೂರಿನಿಂದ ಗೋಕರ್ಣಕ್ಕೆ ತೆರಳುತ್ತಿದ್ದ ಬಸ್ ಮತ್ತು ಟ್ರಕ್ ನಡುವೆ ಹಿರಿಯೂರು ಬಳಿ ಅಪಘಾತ ಸಂಭವಿಸಿ ಹಲವರು ಸಜೀವ ದಹನಗೊಂಡಿರುವ ಸುದ್ದಿ ತಿಳಿದು ತೀವ್ರ ಆಘಾತವಾಗಿದೆ. ಮೃತಪಟ್ಟವರಿಗೆ ನನ್ನ ಸಂತಾಪಗಳನ್ನು ತಿಳಿಸುತ್ತೇನೆ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಹಾರೈಸುತ್ತೇನೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ



ಲಾರಿ ಚಾಲಕನ ರ‍್ಯಾಷ್ ಡ್ರೈವ್ ಹಾಗೂ ಅಜಾಗರೂಕತೆಯಿಂದ ಚಿತ್ರದುರ್ಗದಲ್ಲಿ ಬಸ್ ಅಪಘಾತ ಆಗಿದೆ. ಗೋಕರ್ಣಕ್ಕೆ ಹೋಗುತ್ತಿದ್ದ ಸೀಬರ್ಡ್ ಬಸ್‌ಗೆ ಲಾರಿ ಡಿಕ್ಕಿಯಾಗಿ ಅವಘಡ ಸಂಭವಿಸಿದೆ. ಡಿವೈಡರ್ ದಾಟಿ ಬಂದು ಬಸ್‌ನ ಡೀಸೆಲ್ ಟ್ಯಾಂಕ್‌ಗೆ ಲಾರಿ ಗುದ್ದಿದೆ. ಈಗಾಗಲೇ ಸಾರಿಗೆ ಇಲಾಖೆ ಕಮಿಷನರ್ ಸ್ಥಳಕ್ಕೆ ಹೋಗಿದ್ದಾರೆ. ಯಾವ ಕಾರಣಕ್ಕೆ ಬೆಂಕಿ ಹೊತ್ತಿಕೊಂಡಿದೆ ಎಂಬ ಬಗ್ಗೆ ತನಿಖೆ ನಡೆಸಬೇಕಿದೆ.

-ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ನಾನು ಎಲ್ಲಾ ಆಸ್ಪತ್ರೆಗೂ ಹೋಗಿ ನೋಡುತ್ತಾ ಇದ್ದೇನೆ. ಗಾಯಾಳುಗಳಿಗೆ ಏನು ಸಹಕಾರ ಬೇಕು, ಅನುಕೂಲತೆ ಬೇಕು ಅದೆಲ್ಲದಕ್ಕೂ ಕೂಡ ನಾನು ಸಹಕಾರ ಮಾಡುತ್ತೇನೆ. ಚಾಲಕರು ಬೇಜವಬ್ದಾರಿಯಿಂದ ಓಡಿಸುವಂತದ್ದು, ಟ್ರಾಫಿಕ್ ನಿಯಮಗಳನ್ನ ಮೀರಿ ಚಾಲನೆ ಮಾಡುವಂತದ್ದು ಇದೆಲ್ಲ ದುರಂತಕ್ಕೆ ಕಾರಣವಾಗುತ್ತದೆ.

ಗೋವಿಂದ ಕಾರಜೋಳ, ಸಂಸದ

ಖಾಸಗಿ ಬಸ್ ಭೀಕರ ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ ಕುರಿತು ಗೊಂದಲ ಉಂಟಾಗಿತ್ತು. ಸ್ಲೀಪರ್ ಬಸ್‌ಗೆ ಬೆಂಕಿ ಹೊತ್ತಿಕೊಂಡಾಗ ಮುಂಜಾನೆಯ ಸಮಯವಾಗಿದ್ದರಿಂದ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದವರಲ್ಲಿ 20 ಮಂದಿ ಮೃತಪಟ್ಟಿದ್ದಾರೆಂದು ನಂತರ 17 ಮಂದಿ, 11 ಮಂದಿ, 9 ಮಂದಿ ಎಂದು ಹೇಳಲಾಗುತ್ತಿತ್ತು. ಘಟನೆ ನಡೆದ ಸ್ಥಳಕ್ಕೆ ಪೂರ್ವ ವಲಯ ಪೊಲೀಸ್ ಮಹಾನಿರ್ದೇಶಕ ರವಿಕಾಂತೇಗೌಡ ಹಾಗೂ ಚಿತ್ರದುರ್ಗ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ರಂಜಿತ್ ಕುಮಾರ್ ಬಂಡಾರು ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಅಂತಿಮವಾಗಿ ಈ ಘಟನೆಯಲ್ಲಿ ಈವರೆಗೂ ಆರು ಜನ ಸಾವನ್ನಪ್ಪಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ರಂಜಿತ್ ಕುಮಾರ್ ಬಂಡಾರು, ಜಿಲ್ಲಾ ಪೊಲೀಸ್ ಅಧೀಕ್ಷಕ

42 ಶಾಲಾ ಮಕ್ಕಳು ಪವಾಡ ಸದೃಶ ಪಾರು

ಭೀಕರ ಅಪಘಾತದಲ್ಲಿ 42 ಶಾಲಾ ಮಕ್ಕಳು ಪವಾಡಸದೃಶವಾಗಿ ಸಾವಿನ ದವಡೆಯಿಂದ ಪಾರಾಗಿದ್ದಾರೆ. ಬೆಂಗಳೂರಿನಿಂದ ದಾಂಡೇಲಿಗೆ ಶಾಲಾ ಪ್ರವಾಸಕ್ಕೆ ತೆರಳುತ್ತಿದ್ದ ಬಸ್, ಗೊರ್ಲತ್ತು ಕ್ರಾಸ್ ಬಳಿ ಬರುತ್ತಿದ್ದಂತೆ ಮುಂಭಾಗದಲ್ಲಿ ಲಾರಿ ಮತ್ತು ಖಾಸಗಿ ಸ್ಲಿಪ್ಪರ್ ಕೋಚ್ ಬಸ್ ನಡುವೆ ನಡೆದ ಅಪಘಾತದಲ್ಲಿ ಸ್ಲೀಪರ್ ಕೋಚ್ ಬಸ್‌ಬ ಡೀಸೆಲ್ ಟ್ಯಾಂಕ್ ಸ್ಫೋಟಗೊಂಡು ಬೆಂಕಿ ಹೊತ್ತಿ ಉರಿಯಲಾರಂಭಿಸಿತ್ತು. ಇದೇ ವೇಳೆ ಬೆಂಕಿಯ ಕೆನ್ನಾಲಿಗೆಗೆ ಸಿಲುಕಿದ ಶಾಲಾ ಬಸ್ಸಿಗೂ ಬೆಂಕಿ ಹರಡಲು ಶುರುವಾಗಿದೆ. ಬಸ್ಸಿಗೆ ಬೆಂಕಿ ತಗುಲುತ್ತಿದ್ದಂತೆ ಎಚ್ಚೆತ್ತ ಚಾಲಕ, ಮಕ್ಕಳನ್ನು ರಕ್ಷಿಸುವ ಭರದಲ್ಲಿ ಬಸ್ಸನ್ನು ರಸ್ತೆಯ ಪಕ್ಕಕ್ಕೆ ಚಲಾಯಿಸಿದ್ದಾರೆ. ಈ ಸಂದರ್ಭದಲ್ಲಿ ನಿಯಂತ್ರಣ ತಪ್ಪಿದ ಶಾಲಾ ಬಸ್ಸು ಹೆದ್ದಾರಿಯ ತಡೆಗೋಡೆಯನ್ನು ಕಿತ್ತುಕೊಂಡು ಚರಂಡಿ ದಾಟಿ ಆಚೆ ಬದಿಗೆ ಹೋಗಿ ನಿಂತಿದೆ. ಬಸ್ಸಿನಲ್ಲಿದ್ದ 42 ಶಾಲಾ ಮಕ್ಕಳು ತಕ್ಷಣವೇ ಕೆಳಗಿಳಿದಿದ್ದು, ಅದೃಷ್ಟವಶಾತ್ ಯಾರಿಗೂ ಯಾವುದೇ ಗಾಯಗಳಾಗಿಲ್ಲ.

ಬದುಕುಳಿದವರು

ಮಂಜುನಾಥ್, ಸಂಧ್ಯಾ, ಶಶಾಂಕ್, ದಿಲೀಪ್, ಪ್ರತೀಶ್ವರನ್, ಕವಿತಾ, ಅನಿವೃದ್ಧ್, ಅಮೃತ, ಇಷಾ, ಸೂರಜ್, ಮಿಲನ, ವಿಜಯ್, ಅಭಿಷೇಕ್, ಕಿರಣ್ ಪಾಲ್, ಕೀರ್ತನಾ, ನಂದಿತಾ, ದೇವಿಕಾ, ಮೇಘಾರಾಜ್, ಕಲ್ಪನಾ ಪ್ರಜಾವತಿ, ರಕ್ಷಿತ, ಗಗನಶ್ರೀ, ಬಸ್ ಚಾಲಕ ಮೊಹಮ್ಮದ್ ರಫೀಕ್, ಕ್ಲೀನರ್ ಮೊಹಮ್ಮದ್ ಸಾದೀಕ್, ಆದಿತ್ಯ, ವರುಣ್, ಮಸ್ರತ್ ಉನ್ನೀಸ್, ಸೌಯದ್ ಜಮೀರ್ ಗೌಸ್ ಸೇರಿ ಬಸ್‌ನಲ್ಲಿದ್ದ 33 ಮಂದಿ ಪೈಕಿ 28 ಜನ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಬಸ್‌ಗಳಿಗೆ ಸುರಕ್ಷತಾ ಮಾರ್ಗಸೂಚಿ ಅಗತ್ಯ: ಎಚ್‌ಡಿಕೆ

ಸ್ಲೀಪರ್ ಕೋಚ್ ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ರಾಜ್ಯ ಸರಕಾರ ಮಾರ್ಗಸೂಚಿಗಳನ್ನು ರೂಪಿಸುವ ಅಗತ್ಯವಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸಲಹೆ ನೀಡಿದರು.ರಾತ್ರಿ ಸಂದರ್ಭದ ಪ್ರಯಾಣ ಅಸುರಕ್ಷಿತ ಎಂಬ ಭಾವನೆ ಮೂಡಿದೆ. ಹೆಚ್ಚು ಅಪಘಾತಗಳು ಸಂಭವಿಸುತ್ತಿದ್ದು, ನಿರೀಕ್ಷೆ ಮೀರಿದ ಸಾವುನೋವು ಉಂಟಾಗುತ್ತಿದೆ. ಸ್ಲೀಪರ್ ಕೋಚ್ ಬಸ್‌ಗಳಲ್ಲಿ ಅವಘಡ ಸಂಭವಿಸಿದಾಗ ತುರ್ತಾಗಿ ಪಾರಾಗುವ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕಿದೆ. ಬಸ್ ಮಾಲೀಕರೊಂದಿಗೆ ಚರ್ಚಿಸಿ ಮಾರ್ಗಸೂಚಿ ರೂಪಿಸಬೇಕು ಎಂದು ಸುದ್ದಿಗಾರರೊಂದಿಗೆ ದಾವಣಗೆರೆಯಲ್ಲಿ ಮಾತನಾಡಿದರು.

ಮೃತರ ಕುಟುಂಬಕ್ಕೆ 5 ಲಕ್ಷ ಪರಿಹಾರ ಘೋಷಿಸಿದ ಸಿಎಂ

ರಸ್ತೆ ಅಪಘಾತ ಘಟನೆಗೆ ತೀವ್ರ ಆಘಾತ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೃತರ ಕುಟುಂಬಗಳಿಗೆ ತಲಾ 5 ಲಕ್ಷ ರು. ಹಾಗೂ ಗಾಯಾಳುಗಳಿಗೆ ತಲಾ 50 ಸಾವಿರ ರು. ತುರ್ತು ಪರಿಹಾರವನ್ನು ಘೋಷಿಸಿದ್ದಾರೆ. ಅಪಘಾತದ ಬಗ್ಗೆ ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಸಂತಾಪ ಸೂಚಿಸಿರುವ ಅವರು, ಊರಿಗೆ ಮರಳುತ್ತಿದ್ದವರ ಬದುಕು ಹೀಗೆ ದಾರಿಯಲ್ಲೇ ದುರಂತವಾಗಿ ಕೊನೆಗೊಂಡಿರುವುದು ಎದೆ ನಡುಗಿಸುವಂತಿದೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಗಾಯಗೊಂಡವರು ಶೀಘ್ರವಾಗಿ ಗುಣಮುಖರಾಗಲಿ ಎಂದು ಪ್ರಾರ್ಥಿಸಿದ್ದಾರೆ.



ಮದುವೆ ಸಂಭ್ರಮದಲ್ಲಿದ್ದ ಮನೆಯಲ್ಲಿ ಸೂತಕ

ಹಾಸನ ಜಿಲ್ಲೆ ಚನ್ನರಾಯಪಟ್ಟಣ ಮೂಲದ ಮಾನಸ ಐಡಿಯಲ್ಲಿ ನಾಲ್ಕು ಜನರಿಗೆ ಟಿಕೆಟ್ ಬುಕ್ ಆಗಿತ್ತು. ಬೆಂಗಳೂರು ಐಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಮಾನಸ ಪಿಜಿಯಲ್ಲಿ ವಾಸವಿದ್ದರು. ತಮ್ಮ ಜತೆಗೆ ಇದ್ದ ನವ್ಯಾ, ಮಿಲನ ಸೇರಿ ಅಭಿಷೇಕ್ ಎಂಬವರ ಜತೆ ಗೋಕರ್ಣ ಪ್ರವಾಸಕ್ಕೆ ಹೊರಟಿದ್ದರು. ಮಾನಸಾಗೆ ಮದುವೆಯೂ ನಿಗದಿಯಾಗಿದ್ದು, ಅದಕ್ಕಾಗಿ ಆಭರಣವನ್ನೂ ಕುಟುಂಬ ಖರೀದಿಸಿತ್ತು. ಆದರೆ ವಿಧಿಯಾಟಕ್ಕೆ ಹಸೆ ಮಣೆ ಏರುವ ಮುನ್ನವೇ ಅವರು ಮಸಣ ಸೇರಿದ್ದಾರೆ. ರಶ್ಮಿ ಮತ್ತು ನವ್ಯಾ ಎಂಬವರು ಕೂಡ ಘಟನೆಯಲ್ಲಿ ಮೃತಪಟ್ಟಿದ್ದಾರೆ. ಲಾಕೆಟ್ ಮೂಲಕ ಮಗಳ ಗುರುತು ಪತ್ತೆಹಚ್ಚಿದ ಮಾನಸಾ ತಂದೆ ಪತ್ತೆಹಚ್ಚಿದ್ದಾರೆ.

ಪ್ರಧಾನಿಯಿಂದ ಪರಿಹಾರ, ರಾಷ್ಟ್ರಪತಿಗಳ ಸಂತಾಪ

ಚಿತ್ರದುರ್ಗದಲ್ಲಿ ನಡೆದ ಹೃದಯವಿದ್ರಾವಕ ಘಟನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ತೀವ್ರ ಕಂಬನಿ ಮಿಡಿದಿದ್ದಾರೆ. ಮೃತರ ಕುಟುಂಬಗಳಿಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರು. ಹಾಗೂ ಗಾಯಾಳುಗಳಿಗೆ ತಲಾ 50 ಸಾವಿರ ರು. ಪರಿಹಾರವನ್ನು ಪ್ರಧಾನಿ ಮೋದಿ ಘೋಷಿಸಿದ್ದಾರೆ. ಭೀಕರ ಬಸ್ ಅಗ್ನಿ ಅವಘಡದಲ್ಲಿ ಅಮಾಯಕ ಜೀವಗಳು ಬಲಿಯಾಗಿರುವುದು ನನಗೆ ತೀವ್ರ ನೋವುಂಟು ಮಾಡಿದೆ. ಮೃತರ ಕುಟುಂಬಗಳಿಗೆ ನನ್ನ ಭಾವಪೂರ್ಣ ಸಂತಾಪಗಳು. ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂತಾಪ ಸೂಚಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಬೋನಿಗೆ ಬಿದ್ದ ಹುಲಿ: ನಿಟ್ಟುಸಿರು ಬಿಟ್ಟ ಜನ

ಚಾಮರಾಜನಗರ: ಗುಂಡ್ಲುಪೇಟೆ ತಾಲೂಕಿನ ದೇಪಾಪುರ ಗ್ರಾಮದ ಜಮೀನಿನಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಹುಲಿ ಸೆರೆಯಾಗಿದೆ. ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಗುಂಡ್ಲುಪೇಟೆ ಬಫರ್ ಜೋನ್ ಉಪವಿಭಾಗದ ವ್ಯಾಪ್ತಿಯಲ್ಲಿ ಜಾನುವಾರು ಗಳನ್ನು ಭೇಟಿಯಾಡಿ ಆಹುತಿ ಪಡೆದಿದ್ದ ಹುಲಿ ಸೆರೆಗೆ ಗ್ರಾಮಸ್ಥರು ಆಗ್ರಹಿಸಿದ್ದ ಹಿನ್ನೆಲೆ ಬೋನ್ ಇರಿಸಿ ಕೂಂಬಿಂಗ್ ಆರಂಭಿಸಿದ್ದ ಇಲಾಖೆ ಬೋನಿನಲ್ಲಿದ್ದ ಕರುವನ್ನು ಭಕ್ಷಿಸಲು ಹೋದ ಹುಲಿ ಬಂಧಿಯಾಗಿದೆ. ಹುಲಿ ನೋಡಲು ಮುಗಿಬಿದ್ದ ಜನ: ಹುಲಿಯ ಘರ್ಜನೆ ಸದ್ದಿಗೆ ಅನುಮಾನಗೊಂಡ ಸ್ಥಳೀಯರು ಬೋನಿನ ಸಮೀಪ ಬಂದು ನೋಡಿದ ವೇಳೆ ಸೆರೆಯಾಗಿರುವುದು ಬೆಳಕಿಗೆ ಬಂದಿದೆ. ಸದ್ಯ ಸ್ಥಳಕ್ಕೆ ದೌಡಾಯಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಮುಗಿಬಿದ್ದ ಜನರನ್ನು ನಿಯಂತ್ರಿಸಿದ್ದಾರೆ.

ಶಿಕ್ಷಕಿಯರಿಗೆ ಋತುಚಕ್ರ ರಜೆ ಮಂಜೂರು

ಬೆಂಗಳೂರು: ಸರಕಾರಿ ಶಾಲಾ ಶಿಕ್ಷಕಿಯರಿಗೆ ಪ್ರತಿ ತಿಂಗಳು ಒಂದು ದಿನದ ವೇತನ ಸಹಿತ ಋತುಚಕ್ರ ರಜೆ ಮಂಜೂರು ಮಾಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಆದೇಶಿಸಿದ್ದಾರೆ. ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಶಿಕ್ಷಕಿಯರಿಗೆ ವೇತನದೊಂದಿಗೆ ಒಂದು ದಿನದ ಋತುಚಕ್ರ ರಜೆ ನೀಡುವಂತೆ ಸರಕಾರಕ್ಕೆ ಮನವಿ ಮಾಡಿತ್ತು. ಈ ಮನವಿಗೆ ಸ್ಪಂದಿಸಿದ ಶಾಲಾ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್ ಶಾಲಾ ಶಿಕ್ಷಣ ಇಲಾಖೆಯ (ಬೆಂಗಳೂರು) ಆಯುಕ್ತರು, ಧಾರವಾಡ ಮತ್ತು ಕಲಬುರಗಿಯ ಹೆಚ್ಚುವರಿ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಸರಕಾರದ ಸೂಚನೆಯಂತೆ ಋತುಚಕ್ರ ರಜೆಯನ್ನು ಮಂಜೂರು ಮಾಡಿ ಆದೇಶ ಹೊರಡಿಸಲು ಸೂಚನೆ ನೀಡಿದ್ದಾರೆ.

ವಿವಿಧ ಮಠಾಧೀಶರು, ಎಚ್‌ಡಿಡಿ, ಸಿಎಂ ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ ಭಾಗಿ

ಎಸ್‌ಎಸ್‌ಗೆ ದಾವಣಗೆರೆಯಲ್ಲಿಂದು ನುಡಿನಮನ

ದಾವಣಗೆರೆ: ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ, ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪನವರ ನುಡಿನಮನ ಹಾಗೂ ಶಿವಗಣರಾಧನೆ ಕಾರ್ಯಕ್ರಮವನ್ನು ನಗರದ ಆನೆಕೊಂಡದ ಶ್ರೀ ಕಲ್ಲೇಶ್ವರ ರೈಸ್ ಮಿಲ್ ಆವರಣದ 100ಎಕರೆ ಪ್ರದೇಶದಲ್ಲಿ ಶುಕ್ರವಾರ ಏರ್ಪಡಿಸಲಾಗಿದೆ.



ಬೆಳಗ್ಗೆ 10.15 ಗಂಟೆಯಿಂದ ಆರಂಭಗೊಳ್ಳುವ ಕಾರ್ಯಕ್ರಮದಲ್ಲಿ ಸುಮಾರು 200 ಅಧಿಕ ನಾಡಿನ ಮಠಾಧೀಶರು ಸಾನ್ನಿಧ್ಯ ವಹಿಸಲಿದ್ದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಪಿಎಂ ದೇವೇಗೌಡ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಸೇರಿದಂತೆ ಎಲ್ಲ ಗಣ್ಯರು ಭಾಗವಹಿಸಲಿದ್ದಾರೆ.

ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶರಾದ ಜಸ್ಟಿಸ್ ಶಿವರಾಜ್ ಪಾಟೀಲ್ ಅಧ್ಯಕ್ಷತೆಯಲ್ಲಿ ಜರುಗುವ ನುಡಿನಮನದಲ್ಲಿ ಎಐಸಿಸಿ ಅಧ್ಯಕ್ಷ ಮತ್ತು ರಾಜ್ಯಸಭಾ ವಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಡಾ.ಶಾಮನೂರು ಶಿವಶಂಕರಪ್ಪ ಅವರ ಪುತ್ಥಳಿ ಅನಾವರಣಗೊಳಿಸುವರು. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಜೀವನ ಕುರಿತ ಕಿರುಹೊತ್ತಿಗೆ ಬಿಡುಗಡೆಗೊಳಿಸುವರು. ಸಿಎಂ ಸಿದ್ದರಾಮಯ್ಯನವರು ಡಾ.ಶಾಮನೂರು ಅವರು ನಡೆದು ಬಂದ ದಾರಿಯ 'ಅಮೃತ ಪುರುಷ' ಸಾಕ್ಷ್ಯಚಿತ್ರವನ್ನು ಬಿಡುಗಡೆಗೊಳಿಸುವರು. ಡಿಸಿಎಂ ಡಿ.ಕೆ. ಶಿವಕುಮಾರ್ ಅವರು 2026ನೇ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸುವರು. ನಂತರ ಮಠಾಧೀಶರರು ಆಶೀರ್ವಚನ ನೀಡಲಿದ್ದಾರೆ.

50 ಸಾವಿರ ಜನರಿಗೆ ಭೋಜನ ವ್ಯವಸ್ಥೆ

50 ಸಾವಿರ ಜನರಿಗೆ ಭೋಜನ ವ್ಯವಸ್ಥೆ ಕಲ್ಪಿಸಲಾಗಿದ್ದು, ಅದಕ್ಕಾಗಿ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ 90 ಊಟದ ಕೌಂಟರ್ ತೆರೆಯಲಾಗಿದೆ. ಗಣ್ಯಾತೀಗಣ್ಯರು ಮತ್ತು ಗಣ್ಯರಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಕಲ್ಪಿಸಲಾಗಿದೆ. ಪರಮಪೂಜ್ಯರಿಗೆ ನಗರದ ಶಾಮನೂರು ರಸ್ತೆಯ ಬಾಪೂಜಿ ಬ್ಯಾಂಕ್ ಸಮುದಾಯ ಭವನ, ಎಸ್. ನಿಜಲಿಂಗಪ್ಪ ಬಡಾವಣೆಯ ಶ್ರೀ ಗುರು-ಬಕ್ಕೇಶ್ವರ ಕಲ್ಯಾಣ ಮಂಟಪ ಹಾಗೂ ಪಿ.ಬಿ.ರಸ್ತೆಯ ಶ್ರೀ ಅಭಿನವ ರೇಣುಕಾ ಮಂದಿರದಲ್ಲಿ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದ್ದು, ಆಂಬ್ಯುಲೆನ್ಸ್ ಮತ್ತು ಅಗ್ನಿಶಾಮಕ ಸಿಬ್ಬಂದಿ ನಿಯೋಜಿಸಲಾಗಿದೆ.

ಮುಂಡಗೋಡ: ದಲೈಲಾಮಾ ಪೂಜೆ

ಮುಂಡಗೋಡ: ತಾಲೂಕಿನ ಟಿಬೆಟನ್ ಕ್ಯಾಂಪ್ ನಂ.6ರ ಡ್ರೆಪುಂಗ್ ಲಾಚಿ ಬೌದ್ಧಮಂದಿರದಲ್ಲಿ ಬುಧವಾರ ನಡೆದ ವಿಶೇಷ ಡ್ರೆಪುಂಗ್ ಪೂಜೆಯಲ್ಲಿ ದಲೈಲಾಮಾ ಪಾಲ್ಗೊಂಡರು. 24ನೇ ಡ್ರೆಪುಂಗ್ ತ್ರಿಪಾ ಆಗಿ ಸಿಂಹಾಸನಗೊಂಡ ದಲೈಲಾಮಾ ಅವರಿಗೆ, ಧಾರ್ಮಿಕ ವಿಧಿವಿಧಾನಗಳ ಮೂಲಕ ಗೌರವಿಸಲಾಯಿತು.

ಸುಮಾರು ಮೂರು ಗಂಟೆಗಳ ಕಾಲ ನಡೆದ ಕಾರ್ಯಕ್ರಮದಲ್ಲಿ ನೂರಾರು ಬಿಕ್ಕುಗಳು, ಬೌದ್ಧ ಅನುಯಾಯಿಗಳು ಪಾಲ್ಗೊಂಡಿದ್ದರು. ದಲೈಲಾಮಾ ದೀರ್ಘಾಯುಷ್ಯಕ್ಕಾಗಿ ವಿಶೇಷ ಪ್ರಾರ್ಥನೆಯನ್ನು ಬಿಕ್ಕುಗಳು ಸಲ್ಲಿಸಿದರು. ಡ್ರೆಪುಂಗ್ ಲೋಸಲಿಂಗ್ ಬೌದ್ಧಮಂದಿರದ ಹಿರಿಯ ಬೌದ್ಧ ಮುಖಂಡ ಟಿ ರಿನ್‌ಪೋಚೆ ಅವರು ದಲೈಲಾಮಾ ಅವರ ದೀರ್ಘಾಯುಷ್ಯಕ್ಕಾಗಿ ಪೂಜೆ ಸಲ್ಲಿಸಿ, ಲೋಸಲಿಂಗ್ ಹಾಗೂ ಗೋಮಾಂಗ್ ಬೌದ್ಧ ಮಂದಿರದ ವತಿಯಿಂದ ಗೌರವಿಸಿದರು. ಗೋಮಾಂಗ್ ಬೌದ್ಧಮಂದಿರದಿಂದ ಡ್ರೆಪುಂಗ್ ಲಾಚಿ ಬೌದ್ಧ ಮಂದಿರದವರೆಗೆ ದಲೈಲಾಮಾ ಆಗಮನದ ಸಮಯದಲ್ಲಿ, ನೂರಾರು ಬಿಕ್ಕುಗಳು, ಟಿಬೆಟಿಯನ್ನರು ರಸ್ತೆ ಬದಿಯಲ್ಲಿ ನಿಂತು, ಧಾರ್ಮಿಕ ನಾಯಕ ದಲೈಲಾಮಾ ಅವರಿಗೆ ನಮಿಸಿದರು.

ಮುಂಡಗೋಡ ತಾಲೂಕಿನ ಟಿಬೆಟನ್ ಕ್ಯಾಂಪ್ ನಂ.6ರ ಡ್ರೆಪುಂಗ್ ಲಾಚಿ ಬೌದ್ಧಮಂದಿರದಲ್ಲಿ ಬುಧವಾರ ನಡೆದ ವಿಶೇಷ ಡ್ರೆಪುಂಗ್ ಪೂಜೆಯಲ್ಲಿ ದಲೈಲಾಮಾ ಪಾಲ್ಗೊಂಡರು.

ಅಂಜನಾದ್ರಿಯಲ್ಲಿ ಇಬ್ಬರು ಕಾವಿಧಾರಿಗಳ ಗಲಾಟೆ | ವಿದ್ಯಾದಾಸ ಬಾಬಾ ಬೆಂಬಲಿತ ಐವರ ಬಂಧನ

ಅರ್ಚಕರ ವಿರುದ್ಧ 3 ಎಫ್‌ಐಆರ್ ದಾಖಲು

ಕೊಪ್ಪಳ: ಪೌರಾಣಿಕ ಪ್ರಸಿದ್ಧ ಆಂಜನೇಯನ ಜನ್ಮಸ್ಥಳ ಎಂಬ ಖ್ಯಾತಿಯ ಅಂಜನಾದ್ರಿ ಬೆಟ್ಟದಲ್ಲಿ ನಡೆದ ಇಬ್ಬರು ಕಾವಿಧಾರಿಗಳ ನಡುವಿನ ಗಲಾಟೆ ತಾರಕಕ್ಕೇರಿದೆ. ಗಲಾಟೆ ಹಿನ್ನೆಲೆ ಅಂಜನಾದ್ರಿ ಬೆಟ್ಟದ ಅರ್ಚಕ ವಿದ್ಯಾದಾಸ ಬಾಬಾ ಮತ್ತವರ ಬೆಂಬಲಿಗರ ವಿರುದ್ಧ 3 ಎಫ್‌ಐಆರ್ ದಾಖಲಾಗಿವೆ.

ಕಳೆದ ಡಿ.23 ರಂದು ಅಂಜನಾದ್ರಿ ಬೆಟ್ಟದಲ್ಲಿ ನಡೆದ ಗಲಾಟೆಯಾಗವಾಗಿದ್ದ ಹೊಸಪೇಟೆಯ ಗೋವಿಂದಾನಂದ ಸರಸ್ವತಿ ಸ್ವಾಮೀಜಿ ದೂರು ಆರಿಸಿ ಎರಡು ಎಫ್‌ಐಆರ್ ದಾಖಲಾಗಿವೆ. ಪಿಎಸ್‌ಐ ವೆಂಕಟೇಶ ಚೌವ್ಹಾಣ ದೂರು ಆಧರಿಸಿ ಪೊಲೀಸರು ಸುಮೊಟೋ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಜತೆಗೆ ಘಟನೆ ಹಿನ್ನೆಲೆ ವಿದ್ಯಾದಾಸ ಬಾಬಾ ಜತೆಗಿದ್ದ 5 ಜನರನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ನೀಡಿದ್ದಾರೆ. ಮಧ್ಯಪ್ರದೇಶ ಮೂಲದ ರಾಮ ಸುಶೀಲ್ ಚತುರ್ವೇದಿ, ಆನೆಗೊಂದಿ ಗ್ರಾಮದ ರಾಜಾ ಅಚ್ಚಳಿ, ಸುರೇಶ ತಂ/ಆಂಜನೇಯ, ರಾಜು ತಂ/ಶ್ರೀನಿವಾಸ ಹಾಗೂ ಮಂಜುನಾಥ ತಂ ಶ್ರೀನಿವಾಸ ಅವರನ್ನು ಪೊಲೀಸರು ನ್ಯಾಯಾಂಗ ಬಂಧನಕ್ಕೆ ನೀಡಿದ್ದಾರೆ.

ಘಟನೆ ಹಿನ್ನೆಲೆ ಏನು?: ಡಿ.23 ರಂದು ಸಂಜೆಯೇ ವಿದ್ಯಾದಾಸ ಬಾಬಾ ಆನ್ ಲೈನ್ ಮೂಲಕ ಹಾಗೂ ಅದೇ ದಿನ ರಾತ್ರಿ ಖುದ್ದು ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ. ಜತೆಗೆ ಅಂಜನಾದ್ರಿ ಬೆಟ್ಟದಲ್ಲಿ ಕೆಲಸ ಮಾಡುವ ಮಹಿಳೆಯೊಬ್ಬರು ಗೋವಿಂದಾನಂದ ಸರಸ್ವತಿ ಸ್ವಾಮೀಜಿ ವಿರುದ್ಧ ಜಾತಿ ನಿಂದನೆ ದೂರು ನೀಡಿದ್ದಾರೆ. ಆದರೆ, ಪೊಲೀಸರು ಎರಡೂ ದೂರುಗಳನ್ನು ತಿರಸ್ಕಾರ ಮಾಡಿದ್ದು, ಎಫ್‌ಐಆರ್ ಮಾಡಿಲ್ಲ. ಪೊಲೀಸರ ಈ ನಡೆ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.

ಗಲಾಟೆ ವಿಡಿಯೊ ವೈರಲ್

ಡಿ.24 ರಂದು ಗೋವಿಂದಾನಂದ ಸರಸ್ವತಿ ಸ್ವಾಮೀಜಿ ಪೊಲೀಸರೊಂದಿಗೆ ಪಂಚನಾಮೆಗೆ ಅಂಜನಾದ್ರಿ ಬೆಟ್ಟಕ್ಕೆ ಹೋಗಿದ್ದಾಗ ನಡೆದ ಗಲಾಟೆಯ ವಿಡಿಯೊ ವೈರಲ್ ಆಗಿದೆ. ವಿಡಿಯೊದಲ್ಲಿ ಹಿಂದಿ ಭಾಷೆಯಲ್ಲಿ ಮಾತನಾಡುವ ವ್ಯಕ್ತಿಯೊಬ್ಬ ಕಬ್ಬಿಣದ ಪೈಪ್ ಎತ್ತಿಕೊಂಡು ಬಂದು ನೆಲಕ್ಕೆ ಬಿಸಾಕಿದ್ದಾನೆ. ಜತೆಗೆ ಗೋವಿಂದಾನಂದ ಸ್ವಾಮೀಜಿಗೆ ನಿಂದನೆ ಮಾಡುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಆದೇಶಕ್ಕೂ ಮೊದಲೇ ಅವಾಂತರ?

ಅಂಜನಾದ್ರಿ ಬೆಟ್ಟದ ಪೂಜೆ ಹಕ್ಕಿಗಾಗಿ ವಿದ್ಯಾದಾಸ ಬಾಬಾ ಕಳೆದ 2019ರಿಂದ ಕಾನೂನು ಹೋರಾಟ ಮಾಡುತ್ತಿದ್ದಾರೆ. ಕರ್ನಾಟಕ ಹೈಕೋರ್ಟ್ ಧಾರವಾಡ ಪೀಠದಲ್ಲಿ ವಿದ್ಯಾದಾಸ ಬಾಬಾ ಅರ್ಜಿ ವಿಚಾರಣೆ ಪೂರ್ಣಗೊಂಡಿದೆ. ಸದ್ಯ ಆದೇಶ ಕಾಯ್ದಿರಿಸ ಲಾಗಿದೆ. ಈ ನಡುವೆ ಇಂಥ ಗಲಾಟೆಗಳು ನಡೆಯುತ್ತಿರುವುದು ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.

ಕಾಂಗ್ರೆಸ್ ಸರಕಾರದಿಂದ ಕೋಟಿ ಕೋಟಿ ಸುಲಿಗೆ: ಎಚ್‌ಡಿಕೆ

ಮದ್ಯದಂಗಡಿ ಪರವಾನಗಿಯಲ್ಲಿ ಅಕ್ರಮ

ದಾವಣಗೆರೆ: ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರವು ಗ್ಯಾರಂಟಿಗೆ ಹಣ ಹೊಂದಿಸಿಕೊಳ್ಳಲು, ಖಾಲಿಯಾದ ಖಜಾನೆ ಭರ್ತಿ ಮಾಡಿಕೊಳ್ಳಲು ಮದ್ಯದ ಅಂಗಡಿಗಳಿಗೆ ಪರವಾನಗಿ ನೀಡುವ ನೆಪದಲ್ಲಿ ಜನರಿಂದ ಸುಲಿಗೆ ಮಾಡುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಗುರುವಾರ ನಗರದಲ್ಲಿ ದಿ.ಶಾಮನೂರು ಶಿವಶಂಕರಪ್ಪ ಅವರ ಸ್ಮೃತಿ ಸ್ಥಳಕ್ಕೆ ತೆರಳಿ ನಮನ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಮದ್ಯದಂಗಡಿ ಪರವಾನಗಿ ಒಂದಕ್ಕೆ 1.95 ಕೋಟಿ ದರ ರಾಜ್ಯ ಸರಕಾರ ನಿಗದಿ ಮಾಡಿದೆ. ಇದು ಲೂಟಿನಲ್ಲೇ ಮತ್ತೇನು? ಜನರಿಗೆ ಇನ್ನು ದೊಡ್ಡ ಪ್ರಮಾಣದಲ್ಲಿ ಕುಡಿತದ ಚಟ ಹತ್ತಿಸಲು ಸರಕಾರವೇ ಉತ್ತೇಜನ ನೀಡುತ್ತಿದೆ. ಇದೇ ರೀತಿ ಪ್ರತಿಯೊಂದು ಇಲಾಖೆಯನ್ನು ಲೂಟಿ ಮಾಡುತ್ತಿದೆ ಎಂದು ಆರೋಪಿಸಿದರು.

ಪ.ಜಾತಿ ಉಪ ಯೋಜನೆ ಹಾಗೂ ಪ.ಪಂಗಡ ಉಪಯೋಜನೆ ಸೇರಿದಂತೆ ವಿವಿಧ ಯೋಜನೆಗಳ ಹಣ, ಅನುದಾನ ರಾಜ್ಯ ಸರಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ. ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ರಾಜ್ಯದ ಖಜಾನೆ ಕೊಳ್ಳೆ ಹೊಡೆಯಲಾಗುತ್ತಿದೆ. ಮದ್ಯದಂಗಡಿ ಹರಾಜು ರಾಜ್ಯ ಸರಕಾರವು ಜನತೆಗೆ ನೀಡುತ್ತಿರುವ ಹೊಸ ವರ್ಷದ ಕೊಡುಗೆ ಎಂದು ಲೇವಡಿ ಮಾಡಿದರು.

ಗೃಹಲಕ್ಷ್ಮೀ ಯೋಜನೆಯಲ್ಲಿ ಮಹಿಳೆಯರ ಖಾತೆಗೆ ಜಮಾ ಆಗಬೇಕಾದ 5000 ಕೋಟಿ ಎಲ್ಲಿ ಹೋಯಿತು? ಎಂದು ಸಿಎಂ ಸಿದ್ದರಾಮಯ್ಯ ಈವರೆಗೂ ಜನತೆಗೆ ಮಾಹಿತಿ ಕೊಟ್ಟಿಲ್ಲ. ನನಗೆ ಈ ವಿಷಯವೇ ಗೊತ್ತಿಲ್ಲ ಎಂದು ಸಿಎಂ ಅವರೇ ಹೇಳುತ್ತಾರೆ. ದಾಖಲೆಯ ಬಜೆಟ್ ಮಂಡಿಸಿರುವ ಅವರಿಗೆ ತಮ್ಮ ಇಲಾಖೆಯಲ್ಲಿ ಏನು ನಡೆಯುತ್ತಿದೆ? ಹಣ ಏನಾಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ. ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ್ದಾಗಿ ಹೇಳಿಕೊಳ್ಳುವ ಇವರಂತಹ ಆರ್ಥಿಕ ತಜ್ಞರವನ್ನು ಪ್ರಪಂಚದಲ್ಲಿಯೇ ಕಾಣಲು ಸಾಧ್ಯವಿಲ್ಲ ಎಂದು ವ್ಯಂಗ್ಯವಾಡಿದರು.

ಎಸ್‌ಎಸ್‌ಗೆ ನಮನ

ಇದಕ್ಕೂ ಮುನ್ನ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಇತ್ತೀಚೆಗೆ ಅಗಲಿದ ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ ಅವರ ಸಮಾಧಿ ಸ್ಥಳಕ್ಕೆ ತೆರಳಿ ನಮನ ಸಲ್ಲಿಸಿದರು. ಬಳಿಕ ಶಾಮನೂರು ಅವರ ನಿವಾಸಕ್ಕೆ ತೆರಳಿ ಅವರ ಪುತ್ರ, ಸಚಿವ ಎಸ್ ಎಸ್ ಮಲ್ಲಿಕಾರ್ಜುನ ಅವರನ್ನು ಭೇಟಿಯಾಗಿ ಸಾಂತ್ವನ ಹೇಳಿದರು.

ವಿಶ್ವವಾಣಿ

ಸಂಪಾದಕೀಯ

ವಿಶ್ವಗುರುವಾಗಲಿ ಭಾರತ

ಏಕಕಾಲಕ್ಕೆ ನೂರಕ್ಕೂ ಹೆಚ್ಚು ಉಪಗ್ರಹಗಳ ಉಡಾವಣೆ, ಮಂಗಳ ಕಕ್ಷಾಗಾಮಿ ಮತ್ತು ಚಂದ್ರಯಾನ ಯೋಜನೆಗಳು ಹೀಗೆ ಒಂದೊಂದೇ ಸಾಧನೆಯ ಗರಿಗಳನ್ನು ತನ್ನ ಕಿರೀಟಕ್ಕೆ ಸೇರಿಸಿಕೊಳ್ಳುತ್ತಾ ಸಾಗಿದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಇದೀಗ ಈ ನಿಟ್ಟಿನಲ್ಲಿ ಮತ್ತೊಂದು ಮೈಲಿಗಲ್ಲನ್ನು ದಾಟಿದೆ. ಬರೋಬ್ಬರಿ 6500 ಕೆ.ಜಿ. ತೂಕದ, ಅಮೆರಿಕದ 'ಬ್ಲೂಬರ್ಡ್-6' ಉಪಗ್ರಹವನ್ನು ನಿಗದಿತ ಭೂಕಕ್ಷೆಗೆ ಯಶಸ್ವಿಯಾಗಿ ಸೇರಿಸಿರುವುದೇ ಈ ಸಾಧನೆ. ಇದಕ್ಕೆ ಬಳಕೆಯಾಗಿದ್ದು, ಅತಿಭಾರದ ಉಪಗ್ರಹಗಳನ್ನು ಭೂಕಕ್ಷೆಗೆ ನಿರಾಯಾಸವಾಗಿ ತೂರಿಬಿಡಬಲ್ಲ 'ಬಾಹುಬಲಿ' ವಾಹಕ. ವಿಶ್ವದ ಪ್ರಬಲ ಆರ್ಥಿಕ ಶಕ್ತಿಗಳ ಪಟ್ಟಿಯಲ್ಲಿನ ತನ್ನ ಸ್ಥಾನವನ್ನು ಹಂತಹಂತವಾಗಿ ಮೇಲೇರಿಸಿಕೊಳ್ಳುತ್ತಿರುವ ಭಾರತವು, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲೂ ಹೀಗೆ ಪಾರಮ್ಯವನ್ನು ಮೆರೆಯು ತ್ತಿರುವುದು ಹೆಮ್ಮೆಯ ಸಂಗತಿ. ಈ ಕ್ಷೇತ್ರಗಳಲ್ಲಿ ಸಾಕಷ್ಟು ಗಟ್ಟಿಗ ಎನಿಸಿಕೊಂಡಿ ರುವ ಅಮೆರಿಕ ದೇಶವೇ ಭಾರತಕ್ಕೆ ಈ ಕಾರ್ಯಭಾರವನ್ನು ವಹಿಸಿತ್ತು ಎಂದರೆ, ಭಾರತವು ವಿವಿಧ ವಲಯಗಳಲ್ಲಿ ದಾಪುಗಾಲಿಟ್ಟು ಸಾಗುತ್ತಿರುವ ಪರಿಯನ್ನು ಯಾರು ಬೇಕಿದ್ದರೂ ಊಹಿಸಿಕೊಳ್ಳಬಹುದು. ಒಂದು ಕಾಲಕ್ಕೆ, ಉಡಾವಣಾ ನೆಲೆಗೆ ಉಪಗ್ರಹವನ್ನು ಹೊತ್ತೊಯ್ಯಬಲ್ಲ, ಮರದ ತಳಹದಿಯ ವಿಶಿಷ್ಟ ಸಾಧನ-ಸಲಕರಣೆ ಅಲಭ್ಯವಾಗಿದ್ದ ಕಾರಣಕ್ಕೆ ಎತ್ತಿನ ಗಾಡಿಯ ಮೇಲೆ ಅದನ್ನಿಟ್ಟುಕೊಂಡು ಕಾರ್ಯವನ್ನು ನೆರವೇರಿಸಿದ್ದ ಇಸ್ರೋ, ಈಗ ಈ ಎತ್ತರಕ್ಕೆ ಬೆಳೆದಿರುವುದನ್ನು ನೋಡಿದರೆ, ಆ ಸಂಸ್ಥೆಯಲ್ಲಿ ಕಾರ್ಯನಿರ್ವ ಹಿಸುತ್ತಿರುವ ವಿಜ್ಞಾನಿಗಳು ಮತ್ತು ವಿವಿಧ ಸ್ತರದ ಸಿಬ್ಬಂದಿಯ ಕಾರ್ಯ ದಕ್ಷತೆ, ಪ್ರಾಮಾಣಿಕತೆ, ಬದ್ಧತೆ ಇತ್ಯಾದಿಗಳು ಅರಿವಾಗುತ್ತವೆ. ದೇಶದ ಮಿಕ್ಕ ಕಾರ್ಯಕ್ಷೇತ್ರಗಳಲ್ಲೂ ಇದೇ ವೈಶಿಷ್ಟ್ಯಗಳು ಅನುರಣಿಸಿದರೆ, ಭಾರತವು ಕೆಲವೇ ವರ್ಷಗಳಲ್ಲಿ 'ವಿಶ್ವಗುರು' ಎನಿಸಿಕೊಳ್ಳಬಲ್ಲದು. ಆ ದಿನಗಳು ಆದಷ್ಟು ಬೇಗ ಬರಲಿ...

ಸೊಂಪಾದಕೀಯ

ರದ್ದಾಗಲು ಇದೂ ಒಂದು ಕಾರಣ!

ವಿಮಾನಗಳು ಹಾರಾಡುತ್ತಿದ್ದರೆ ಕಂಪನಿಗಳಿಗೆ ಲಾಭ ಎನ್ನುವ ಮಾತೊಂದಿದೆ. ಅದರಲ್ಲಿಯೂ ಅಂತಾರಾಷ್ಟ್ರೀಯ ವಿಮಾನಗಳು ವಾರದಲ್ಲಿ 3 ದಿನಕ್ಕಿಂತ ಹೆಚ್ಚು ದಿನ ನೆಲದಲ್ಲಿದ್ದರೆ ಕಂಪನಿಗಳಿಗೆ 'ಲಾಸ್' ಎನ್ನುವ ಮಾತಿದೆ. ಇಷ್ಟೆಲ್ಲ ಇದ್ದರೂ, ಅನೇಕ ಬಾರಿ ವಿಮಾನಗಳು ಕ್ಯಾನ್ಸಲ್ ಆಗುತ್ತವೆ. ಇನ್ನೂ ಕೆಲವೊಮ್ಮೆ ಟೇಕ್ ಆಫ್‌ಗೆ ಸಜ್ಜಾಗಿದ್ದಾಗಲೂ ರದ್ದಾಗಿರುವ ಅದೆಷ್ಟೋ ಉದಾಹರಣೆಗಳಿವೆ. ಹವಾಮಾನ ವೈಪರೀತ್ಯ, ತಾಂತ್ರಿಕ ಸಮಸ್ಯೆ, ಪ್ರಯಾ ಣಿಕರ ಆರೋಗ್ಯದಲ್ಲಿ ಏರುಪೇರು, ಹುಸಿ ಬಾಂಬ್ ಕರೆ ಸೇರಿದಂತೆ ಹತ್ತು ಹಲವು ಕಾರಣಗಳನ್ನು ಈ ವಿಷಯದಲ್ಲಿ ಕೇಳಿರುತ್ತೇವೆ. ಆದರೆ ಸುಮಾರು ಒಂದೂವರೆ ವರ್ಷದ ಹಿಂದೆ, ಈ ಎಲ್ಲವನ್ನೂ ಮೀರಿಸುವ ಕಾರಣಕ್ಕೆ ವಿಮಾನವೊಂದು ಕ್ಯಾನ್ಸಲ್ ಆಗಿತ್ತು. ಅಷ್ಟಕ್ಕೂ ಆ ಕಾರಣವೇನು ಎನ್ನುವ ಕುತೂಹಲಕ್ಕೆ ಉತ್ತರ- ಮಹಿಳಾ ಪ್ರಯಾಣಿಕರೊಬ್ಬರಿಗೆ ವಿಮಾನದಲ್ಲಿನ ಎ.ಸಿ. ಚಳಿ ಹಿಡಿಸಿದ್ದಂತೆ! ಈ ಚಳಿಯಿಂದ ರಕ್ಷಿಸಿಕೊಳ್ಳಲು ಆಕೆ ಗಗನಸಖಿಯ ಬಳಿ ಬ್ಲಾಂಕೆಟ್ ಕೇಳಿದರಂತೆ. ಹಾಗೆ ಕೇಳಿದ್ದಕ್ಕೆ ರೇಗಿದ ಗಗನಸಖಿ ಕ್ಯಾಪ್ಟನ್‌ಗೆ ದೂರು ನೀಡಲು ಮುಂದಾದಳಂತೆ. ಗಗನಸಖಿ ನೀಡಿದ ದೂರನ್ನು ಗಂಭೀರವಾಗಿ ಪರಿಗಣಿಸಿದ ಕ್ಯಾಪ್ಟನ್, 'ಎಲ್ಲರೂ ಸುಮ್ಮನೆ ಕೂರಬೇಕು, ಇಲ್ಲದಿದ್ದರೆ ಪರಿಸ್ಥಿತಿ ನೆಟ್ಟಗಿರಲ್ಲ' ಎಂದು ಧಮಕಿ ಹಾಕಿದನಂತೆ. ಈ ಗಲಾಟೆ ಇನ್ನಷ್ಟು ದೊಡ್ಡದಾಗುತ್ತಿರುವುದು ಖಾತ್ರಿಯಾಗುತ್ತಿದ್ದಂತೆ ವಿಮಾನವನ್ನು ಸಮೀಪದ ನಿಲ್ದಾಣದಲ್ಲಿ ಇಳಿಸಿ, ಪ್ರಯಾಣಿಕರನ್ನು ಮತ್ತೊಂದು ವಿಮಾನದಲ್ಲಿ ನಿಗದಿತ ಸ್ಥಳಕ್ಕೆ ಕಳುಹಿಸಿದರಂತೆ. ಅಷ್ಟಕ್ಕೂ ಇಷ್ಟೆಲ್ಲ ಆಗಿದ್ದು ಏರ್‌ಕೆನಡಾ ಸಂಸ್ಥೆಯ ವಿಮಾನದಲ್ಲಿ. ಈ ವಿಮಾನ ಮೊರಾಕ್ಕೊದಿಂದ ಮಾಂಟ್ರಿಯಲ್‌ಗೆ ಹೋಗುತ್ತಿತ್ತು. ಈ ಘಟನೆಯ ಬಳಿಕ ಏರ್‌ಕೆನಡಾದಲ್ಲಿ ಪ್ರಯಾಣಿಸುವವರು, ಗಗನಸಖಿಯನ್ನು ತಲೆಯೆತ್ತಿ ನೋಡಲೂ ಹೆದರುತ್ತಾ ಡಗಿದರಂತೆ. ಬಸ್ಸಿನಲ್ಲೋ, ಕಾರಿನಲ್ಲೋ ಜಗಳವಾಡಿ ಡ್ರೈವರ್ ಗಾಡಿಯನ್ನು ಯಾವುದೋ ಗೋಡೆಗೆ ಗುದ್ದಿದರೆ ಪರವಾಗಿಲ್ಲ. ಆದರೆ ವಿಮಾನದಲ್ಲಿ ಹೋಗೋವಾಗ ಕ್ಯಾಪ್ಟನ್ ತಲೆಕೆಟ್ಟು ವಿಮಾನವನ್ನು ಇನ್ನೆಲ್ಲೋ ಗುದ್ದಿದರೆ ಗತಿಯೇನು ಎನ್ನುವುದು ಹಲವರ ಆತಂಕವಾಗಿತ್ತಂತೆ. ಅದಕ್ಕೇ ಮಳೆಯೋ, ಬಿಸಿಲೋ, ಚಳಿಯೋ ಹೇಗೋ ನಮ್ಮೂರು ಸೇರಿದ್ರೆ ಸಾಕು ಎಂದುಕೊಂಡು ಪ್ರಯಾಣಿಕರು ಗಪ್-ಚುಪ್ ಆಗಿದ್ದರಂತೆ!

ಸಂಪಾದಕರ ಸದ್ಯಶೋಧನೆ

ವಿಮಾನವೆಂಬ ಪವರ್‌ಹೌಸ್

ವಿಮಾನವೆಂದರೆ ಕೇವಲ ಹಾರುವ ವಾಹನವಲ್ಲ, ಅದು ಆಕಾಶದಲ್ಲಿ ಚಲಿಸುವ ಒಂದು 'ವಿದ್ಯುತ್ ಉತ್ಪಾದನಾ ಕೇಂದ್ರ' (Flying Power Station) ಕೂಡ ಹೌದು. ಒಂದು ಬೃಹತ್ ಗಾತ್ರದ ವಿಮಾನವು ಉತ್ಪಾದಿಸುವ ವಿದ್ಯುತ್ ಶಕ್ತಿಯು ಒಂದು ಪುಟ್ಟ ನಗರದ ಅಗತ್ಯವನ್ನೇ ಪೂರೈಸಬಲ್ಲದು ಎಂದರೆ ನೀವು ನಂಬಬೇಕು. ವಿಮಾನದ ವಿದ್ಯುತ್ ವ್ಯವಸ್ಥೆ, ಅದರ ಮೂಲಗಳು ಮತ್ತು ಅಷ್ಟು ದೊಡ್ಡ ಪ್ರಮಾಣದ ವಿದ್ಯುತ್ ಏಕೆ ಬೇಕಾಗುತ್ತದೆ ಎಂಬುದು ಕುತೂಹಲಕರ ಸಂಗತಿಯೇ. ವಿಮಾನದ ವಿದ್ಯುತ್ ವ್ಯವಸ್ಥೆಯನ್ನು ಆಕಾಶದಲ್ಲಿನ ಮಿನಿ ಪವರ್‌ಗ್ರಿಡ್ ಎನ್ನಬಹುದು. ಆಧುನಿಕ ವಿಮಾನಗಳು ಸಾವಿರಾರು ಅಡಿ ಎತ್ತರದಲ್ಲಿ ಹಾರುವಾಗ ಸ್ವಾವಲಂಬಿಯಾಗಿರಬೇಕು. ಅಲ್ಲಿ ವಿದ್ಯುತ್ ಇಲ್ಲದೇ ಹೋದರೆ ವಿಮಾನದ ಯಾವ ವ್ಯವಸ್ಥೆಯೂ ಕೆಲಸ ಮಾಡುವುದಿಲ್ಲ. ವಿಮಾನಕ್ಕೆ ವಿದ್ಯುತ್ ಎಲ್ಲಿಂದ ಬರುತ್ತದೆ? ಇದಕ್ಕೆ ಮೂರು ಪ್ರಮುಖ ಮೂಲಗಳಿವೆ. ಮೊದಲನೆಯದು, ಎಂಜಿನ್ ಚಾಲಿತ ಜನರೇಟರ್‌ಗಳು (Engine Driven Generators). ವಿಮಾನದ ಮುಖ್ಯ ಎಂಜಿನ್‌ಗಳು ಕೇವಲ ವಿಮಾನವನ್ನು ಮುಂದಕ್ಕೆ ತಳ್ಳುವುದಷ್ಟೇ ಅಲ್ಲದೆ, ವಿದ್ಯುತ್ ಉತ್ಪಾದನೆಯನ್ನೂ ಮಾಡುತ್ತವೆ. ಪ್ರತಿಯೊಂದು ಎಂಜಿನ್‌ನಲ್ಲಿ ಅಳವಡಿಸಲಾದ ಜನರೇಟರ್‌ಗಳು ಸಾಮಾನ್ಯವಾಗಿ 90ರಿಂದ 150 ಕೆವಿಎ (Kilovolt-Ampere) ವಿದ್ಯುತ್ ಉತ್ಪಾದಿಸುತ್ತವೆ. ಬೋಯಿಂಗ್ 787 (ಡ್ರೀಮ್ ಲೈನರ್)ನಂಥ ಆಧುನಿಕ ವಿಮಾನಗಳಲ್ಲಿ ಇದು ಇನ್ನೂ ಹೆಚ್ಚಾಗಿರುತ್ತದೆ. ಎಪಿಯು (APU- Auxiliary Power Unit) ಎಂಬುದು ವಿಮಾನದ ಬಾಲದ ಭಾಗದಲ್ಲಿರುವ ಪುಟ್ಟ ಎಂಜಿನ್. ವಿಮಾನವು ನೆಲದ ಮೇಲಿರುವಾಗ ಮತ್ತು ತುರ್ತು ಸಂದರ್ಭದಲ್ಲಿ ಗಾಳಿಯಲ್ಲಿದ್ದಾಗ ಇದು ವಿದ್ಯುತ್ ಮತ್ತು ಎಸಿ (AC) ವ್ಯವಸ್ಥೆಯನ್ನು ಒದಗಿಸುತ್ತದೆ. ಹಾಗೆ ಬ್ಯಾಕಪ್ ಮತ್ತು ತುರ್ತು ಮೂಲಗಳು ಮುಖ್ಯ ಜನರೇಟರ್‌ಗಳು ವಿಫಲವಾದರೆ, ಬ್ಯಾಟರಿಗಳು ಮತ್ತು ರ್‍ಯಾಟ್ (RAT- Ram Air Turbine) ಎಂಬ ಪುಟ್ಟ ಗಾಳಿಯ ಯಂತ್ರವು ವಿಮಾನದ ಅವಶ್ಯಕ ವ್ಯವಸ್ಥೆಗಳಿಗೆ ವಿದ್ಯುತ್ ನೀಡುತ್ತದೆ. ಎರಡನೆಯದಾಗಿ, ಒಂದು ಬೃಹತ್ ದೀರ್ಘ ಪ್ರಯಾಣದ ವಿಮಾನವು ಒಟ್ಟಾರೆಯಾಗಿ 500 ಕೆವಿಎಗಿಂತ ಹೆಚ್ಚು ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿರುತ್ತದೆ. ಸಾಮಾನ್ಯವಾಗಿ ಒಂದು ಸಣ್ಣ ಪಟ್ಟಣದ ಸಾವಿರಾರು ಮನೆಗಳು ಗರಿಷ್ಠ ಬಳಕೆಯ ಸಮಯದಲ್ಲಿ ಎಷ್ಟು ವಿದ್ಯುತ್ ಬಳಸುತ್ತವೆಯೋ, ಅಷ್ಟೇ ವಿದ್ಯುತ್ ಅನ್ನು ಒಂದು ದೊಡ್ಡ ವಿಮಾನವು ನಿರಂತರವಾಗಿ ಬಳಸುತ್ತಿರುತ್ತದೆ. ಆದ್ದರಿಂದಲೇ ಎಂಜಿನಿಯರ್‌ಗಳು ವಿಮಾನವನ್ನು 'ವಿಮಾನವೆಂಬ ಪವರ್ ಸ್ಟೇಷನ್' ಎಂದು ಕರೆಯುತ್ತಾರೆ. ಇನ್ನು ಈ ವಿದ್ಯುತ್ ಎಲ್ಲಿಗೆ ಬಳಕೆಯಾಗುತ್ತದೆ? ಪ್ರಯಾಣಿಕರು ಕೇವಲ ಲೈಟ್‌ಗಳು ಮತ್ತು ಚಲನಚಿತ್ರದ ಪರದೆಗಳನ್ನು ಮಾತ್ರ ಗಮನಿಸುತ್ತಾರೆ. ಆದರೆ ವಿಮಾನದ ಒಳಗೆ ಅತಿದೊಡ್ಡ ಭಾಗದ ವಿದ್ಯುತ್ ಹಲವು ಭಾಗಗಳಲ್ಲಿ ವಿನಿಯೋಗವಾಗುತ್ತವೆ. ಉದಾಹರಣೆಗೆ, ಏವಿಯಾನಿಕ್ಸ್ ಮತ್ತು ಫ್ಲೈಟ್ ಕಂಪ್ಯೂಟರ್‌ಗಳು. ವಿಮಾನದ ದಿಕ್ಕನ್ನು ತೋರಿಸುವ, ಪೈಲಟ್‌ಗೆ ಮಾಹಿತಿ ನೀಡುವ ಮತ್ತು ವಿಮಾನವನ್ನು ಸಮತೋಲನದಲ್ಲಿಡುವ ನೂರಾರು ಕಂಪ್ಯೂಟರ್‌ಗಳು ನಿರಂತರವಾಗಿ ವಿದ್ಯುತ್ ಬಳಸುತ್ತವೆ. 35,000 ಅಡಿ ಎತ್ತರದಲ್ಲಿ ಗಾಳಿಯ ಒತ್ತಡ ಮತ್ತು ತಾಪಮಾನ ಅತ್ಯಂತ ಕಡಿಮೆ ಇರುತ್ತದೆ. ಕ್ಯಾಬಿನ್ ಒಳಗಿನ ಗಾಳಿಯನ್ನು ಬೆಚ್ಚಗಿಡಲು ಮತ್ತು ಉಸಿರಾಡಲು ಯೋಗ್ಯವಾದ ಒತ್ತಡವನ್ನು ನಿರ್ವಹಿಸಲು ದೊಡ್ಡ ಪ್ರಮಾಣದ ವಿದ್ಯುತ್ ಬೇಕು. ನೂರಾರು ಪ್ರಯಾಣಿಕರಿಗೆ ಕಾಫಿ ತಯಾರಿಸಲು, ಆಹಾರವನ್ನು ಬಿಸಿ ಮಾಡಲು ಓವನ್‌ಗಳು ಮತ್ತು ಹಣ್ಣು-ಪಾನೀಯಗಳನ್ನು ತಂಪಾಗಿಡಲು ಚಿಲ್ಲರ್‌ಗಳು (Chillers) ಬೇಕು. ಇವು ವಿಮಾನದ ಒಳಗೆ ಹೆಚ್ಚು ವಿದ್ಯುತ್ ಬಳಸುವ ಭಾಗಗಳಾಗಿವೆ. ವಿಮಾನದ ರೆಕ್ಕೆಗಳನ್ನು ಚಲಿಸಲು ಮತ್ತು ಲ್ಯಾಂಡಿಂಗ್ ಗೇರ್ ತೆರೆಯಲು ಬಳಸುವ ಪಂಪ್‌ಗಳು, ಮೋಟಾರ್‌ಗಳು, ಹೈಡ್ರಾಲಿಕ್ ಮತ್ತು ಆಕ್ಚುಯೇಟರ್‌ಗಳು ವಿದ್ಯುತ್ ಶಕ್ತಿಯಿಂದಲೇ ಚಲಿಸುತ್ತವೆ. ವಿಮಾನಯಾನದಲ್ಲಿ ಯಾವುದಾದರೂ ಒಂದು ವ್ಯವಸ್ಥೆ ವಿಫಲವಾದರೆ ಪರ್ಯಾಯ ವ್ಯವಸ್ಥೆ ಇರಲೇಬೇಕು. ವಿದ್ಯುತ್ ವ್ಯವಸ್ಥೆಯನ್ನು ಹಲವಾರು ಮೂಲಗಳಾಗಿ ವಿಂಗಡಿಸಲಾಗಿರುತ್ತದೆ. ಒಂದು ಎಂಜಿನ್ ನಿಂತುಹೋದರೂ, ಇನ್ನೊಂದು ಎಂಜಿನ್‌ನ ಜನರೇಟರ್ ಇಡೀ ವಿಮಾನಕ್ಕೆ ವಿದ್ಯುತ್ ನೀಡಬಲ್ಲದು. ಎಲ್ಲ ಎಂಜಿನ್‌ಗಳು ವಿಫಲವಾದರೂ, ಎಪಿಯು ಅಥವಾ ಬ್ಯಾಟರಿಗಳು ವಿಮಾನದ ಕನಿಷ್ಠ ಮತ್ತು ಅನಿವಾರ್ಯ ಉಪಕರಣಗಳನ್ನು ಚಾಲನೆಯಲ್ಲಿಡುತ್ತವೆ. ಆಧುನಿಕ ವಿಮಾನಗಳು ಕೇವಲ ಕಂಪ್ಯೂಟರ್‌ಗಳಿಗಷ್ಟೇ ಅಲ್ಲದೆ, ವಿಮಾನದ ಹಲವು ಯಾಂತ್ರಿಕ ಭಾಗಗಳನ್ನು ವಿದ್ಯುದೀಕರಿಸುತ್ತಿವೆ.

ಬೆಳಗ್ಗೆ ಬೇಗ ಏಳಲು ಐದು ಕ್ಷಣದ ಉಪಾಯ...

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಟಿಂಗ್ ಟಿಂಗ್ ಟಿಂಗ್.. ಸ್ನೂಜ್..

ಇನ್ನೊಂದ್ ಐದ್ ನಿಮಿಷ ಸ್ನೂಜ್.. ಇನ್ನೊಂದು ಹತ್ತು ನಿಮಿಷ ಜಾಸ್ತಿ ಮಲಗಿಕೊಂಡರೆ ಭೂಮಿ ನಿಂತುಬಿಡುವುದಿಲ್ಲ..

ಸ್ನೂಜ್.. ಇವತ್ತೊಂದು ದಿನ, ಸ್ವಲ್ಪ ಹೊತ್ತು ಮಲಗಿಬಿಡುತ್ತೇನೆ... ಸ್ನೂಜ್... ಥೂತ್ತೇರಿಕ್ಕೆ.. ತಡವಾಗಿ ಹೋಯ್ತು, ನನ್ನ ಹಣೆಬರಹ..

ಇದು ಅದೆಷ್ಟೋ ಜನರ ಪ್ರತಿದಿನದ ಮೊದಲ ಸ್ವಗತ, ಮೊದಲ ಪ್ರಾಪಂಚಿಕ ಸಂಧಾನ, ಮಾತುಕತೆ.

ಮೊನ್ನೆ ಓದುಗರೊಬ್ಬರು ಒಬ್ಬ ಪ್ರಭಾವಿ ಮಾತುಗಾರರ ಭಾಷಣದ ತುಣುಕೊಂದನ್ನು ಕಳುಹಿಸಿಕೊಟ್ಟಿದ್ದರು. ಆ ಭಾಷಣದ ಸಾರ ಹೀಗಿತ್ತು- ''ಬದುಕಿನಲ್ಲಿ ಸಾಧಿಸಬೇಕೆಂದರೆ ಬೆಳಗ್ಗೆ ಬೇಗ ಏಳಬೇಕು. ಬೇಗ ಏಳಬೇಕೆಂದರೆ ನಿಮಗೆ ಬದುಕಿನಲ್ಲಿ ಮುಖ್ಯವಾಗಿ ಒಂದು ದೊಡ್ಡ ಗುರಿ ಇರಬೇಕು. ಅಬ್ದುಲ್ ಕಲಾಂ ಹೇಳಿಲ್ಲವೇ, ನಿದ್ರಿಸುವಾಗ ಕಾಣುವುದು ಕನಸಲ್ಲ, ಬದಲಿಗೆ ನಿದ್ರಿಸಲು ಬಿಡದಿರುವುದು ನಿಜವಾದ ಕನಸು. ಆ ಗುರಿಯೇ ನಿಮ್ಮನ್ನು ಎಬ್ಬಿಸಬೇಕು, ಎಬ್ಬಿಸುತ್ತದೆ..'' ಎಂದೆಲ್ಲ. ಅವರು ಸುಲಭಕ್ಕೆ ಸಿಗುವ ಉದಾಹರಣೆಗಳಾದ ಸ್ಟೀವ್ ಜಾಬ್ಸ್, ಬಿಲ್ ಗೇಟ್ಸ್, ಅಂಬಾನಿ ಮೊದಲಾದ ಹೆಸರನ್ನೆಲ್ಲ ಬಳಸಿಕೊಂಡು, ಬದುಕಿನಲ್ಲಿ 'ಮೋಟಿವೇಷನ್' ಇರಬೇಕು, ಆಗಲೇ ಬೆಳಗ್ಗೆ ಬೇಗ ಏಳಲಿಕ್ಕಾಗುವುದು ಎನ್ನುತ್ತಿದ್ದರು. ಅವರದು ಅದೇ ಓಬೀರಾಯನ ಕಾಲದ ಮಾತು. ಅದೇ ಭಾಷಣ. ಅದೇ ಅಮ್ಮಕ್ಕಜ್ಜಿಯ ಕಥೆ. ಅದೇ ಹಸಿಬೆಂದ ಸುಳ್ಳು, ಕೆಲಸಕ್ಕೆ ಬಾರದ ಬುರುಡೆ.

ನಿಮ್ಮಲ್ಲೊಂದು ವೈಯಕ್ತಿಕ ವಿಷಯ ಹೇಳಬೇಕು. ನಾನು ನಿತ್ಯ ಬೆಳಗ್ಗೆ ನಾಲ್ಕೂವರೆಯಿಂದ ಐದು ಗಂಟೆಯ ಮಧ್ಯದಲ್ಲಿ ಏಳುತ್ತೇನೆ. ವಾರ, ವಾರಾಂತ್ಯ, ದಿನ, ನಕ್ಷತ್ರ, ಸ್ಥಳ ಯಾವುದೇ ಇರಲಿ, ಸಂಬಂಧವಿಲ್ಲ. ಹಾಗಂತ ಬೆಳಗ್ಗೆ ನನ್ನನ್ನು ನಿದ್ರೆಯಿಂದ ಎದ್ದೇಳಿಸುವ, ನಿದ್ರಿಸಲು ಬಿಡದ ಯಾವುದೇ ದೊಡ್ಡ ಮೋಟಿವೇಷನ್ ನನ್ನಲ್ಲಿಲ್ಲ. ನನ್ನ ಬದುಕಿನಲ್ಲಿ ಅಸಹಜ, ಘನಂದಾರಿ ಪ್ರೇರಣೆ ಯಾವುದೂ ಇಲ್ಲ. ಸತ್ಯ ಹೇಳಬೇಕೆಂದರೆ ಹಾಸಿಗೆಯಿಂದ ಎದ್ದೇಳಿಸುವ ಮಟ್ಟದ ಸ್ಫೂರ್ತಿ ನನಗಿನ್ನೂ ಸಿಕ್ಕಿಯೇ ಇಲ್ಲ. ತಮಾಷೆ ಮಾಡುತ್ತಿಲ್ಲ. ಅಂಥದ್ದೊಂದು ಪ್ರೇರಣೆ ಯಾವುದಿರಬಹುದು ಎಂದು ಅದೆಷ್ಟೋ ಬಾರಿ ಯೋಚಿಸಿದ್ದಿದೆ. ಅಯ್ಯೋ, ಮಹಾನ್ ಸಾಧಕರಿಗೆ ಇರುವ ಅಥವಾ ಇತ್ತು ಎಂದು ಬೇರೆಯವರು ಹೇಳುವ, ನಂಬುವ, ಕನಸು, ಗುರಿ ಇತ್ಯಾದಿಗಳು ನನಗೇ ಇಲ್ಲವಲ್ಲ, ಸಾಧಕನಾದವನಿಗೆ ಇರಬೇಕಲ್ಲ ಎಂದೆನಿಸಿ, ಕೊರತೆಯ ಯೋಚನೆ ಬಂದದ್ದಿದೆ. ಬದುಕಿನಲ್ಲಿ ಏನೋ ಒಂದು 'ಮಿಸ್ ಹೊಡೆಯುತ್ತಿದೆಯೇ?' ನಾನೇ ಸರಿಯಾಗಿ ಬದುಕುತ್ತಿಲ್ಲವೇ? ಎಂದೆಲ್ಲ ನನ್ನನ್ನು ನಾನೇ ಪ್ರಶ್ನಿಸಿಕೊಂಡದ್ದಿದೆ. ಬದುಕಿನಲ್ಲಿ ಪ್ರೇರಣೆಗೆ ಬೇಕಾದಷ್ಟಿದೆ, ಆದರೆ ಅವು ಯಾವುದಕ್ಕೂ ಕಲಾಂ ಹೇಳಿದ ಮಟ್ಟದಲ್ಲಿ ನನ್ನನ್ನು ಹಾಸಿಗೆಯಿಂದ ಎದ್ದು ಕೂರಿಸುವ 'ತಾಕತ್ತು' ಇಲ್ಲವಲ್ಲ.

ಯಶಸ್ವಿ ವ್ಯಕ್ತಿಗಳು ಬೆಳಗ್ಗೆ ಬೇಗನೆ ಏಳುತ್ತಾರೆ, ಏಕೆಂದರೆ ಅವರಲ್ಲಿ ಶಿಸ್ತಿದೆ, ಪ್ರೇರಣೆ ಇದೆ, ಅವರಿಗೆ ದೇವರ ಆಶೀರ್ವಾದ ಇದೆ, ಅವರಲ್ಲಿ ಇನ್ನೇನೋ ಮಣ್ಣು ಮಸಿ ಇದೆ- ಎಂದೆಲ್ಲ ನಾವು ನಂಬಿಕೊಂಡಿರುತ್ತೇವೆ. ಅವರೆಲ್ಲರೂ 4-5 ಗಂಟೆಗೆ ಅಲಾರಾಂ ಆಗುತ್ತಿದ್ದಂತೆ, ಯಾರನ್ನೂ ಶಪಿಸುವುದಿಲ್ಲ, ಬೈದುಕೊಳ್ಳುವುದಿಲ್ಲ, ಮುಗುಳ್ನಗುತ್ತ, ಜಗತ್ ಪ್ರೇರಣೆಯಿಂದ ಬೆಡ್‌ನಿಂದ- ಪಿಂಗ್‌ಪಾಂಗ್ ಬಾಲಿನಂತೆ ಥಂಗನೆ ಪುಟಿದೇಳುತ್ತಾರೆ- ಇವೆಲ್ಲ ಎಂದುಕೊಳ್ಳುತ್ತೇವೆ. ಇಂಥ ಕಲ್ಪನೆಗಳು ನಮ್ಮಲ್ಲಿ ಸಾಂತ್ವನ, ಕೊರತೆ ತುಂಬಬಹುದು. ಆದರೆ ಅವುಗಳಿಂದ ನಮಗೆ ಎಂಟಾಣೆ ಪ್ರಯೋಜನವಿಲ್ಲ. ಅಲ್ಲ, ಸತ್ಯ ನಾಡೆಲ್ಲಾ, ನರೇಂದ್ರ ಮೋದಿ, ಎಲಾನ್ ಮಸ್ಕ್ ಅವರೆಲ್ಲ ಬೆಳಗ್ಗೆ ಬೇಗನೆ ಏಳುತ್ತಾರೆ ಸರಿ, ಆದರೆ ಅವರಷ್ಟು ಪ್ರೇರಣೆ ನಮಗೆಲ್ಲಿಂದ ಬರಬೇಕು, ನಾವೆಲ್ಲಿಂದ ಕಡ ತರಬೇಕು ಸ್ವಾಮಿ!!

ಇಲ್ಲಿ ಇನ್ನೊಂದು ವಿಷಯ ಸ್ಪಷ್ಟಪಡಿಸಬೇಕು. ಅದೇನೆಂದರೆ, ಬೆಳಗ್ಗೆ ಬೇಗ ಎದ್ದೇಳುವವರೆಲ್ಲ ದೊಡ್ಡ ಸಾಧಕರು, ಶಿಸ್ತಿನವರು, ಕಡಿದು ಗುಡ್ಡೆ ಹಾಕುವವರು, ಮೌಂಟ್ ಎವರೆಸ್ಟ್ ಹತ್ತುವವರು ಎನ್ನುವುದು ಕೂಡ ಸುಳ್ಳೆ. ರಾತ್ರಿ ತಡವಾಗಿ ಮಲಗಿ, ಬೆಳಗ್ಗೆ ತಡವಾಗಿ ಏಳುವವರೆಲ್ಲರೂ ಪರಮ ಆಲಸಿ, ನಿಷ್ಪ್ರಯೋಜಕ ಎನ್ನುವುದು ಕೂಡ ಅಷ್ಟೇ ಸುಳ್ಳು, ತಪ್ಪು. ರಾತ್ರಿ ಎರಡು ಗಂಟೆಗೆ ಮಲಗುವ ಅದೆಷ್ಟೋ ಸಾಧಕ ಮಂದಿ ಇದ್ದಾರೆ. ಕೆಲವರು ರಾತ್ರಿಯೇ ಹೆಚ್ಚು ಕ್ರಿಯಾಶೀಲರಾಗಿರುತ್ತಾರೆ. ಕೆಲವರಿಗೆ ಬೆಳಗ್ಗೆ ತಲೆಯೇ ಓಡುವುದಿಲ್ಲ. ಅಂಥವರಿಗೆ ಬದಲಿಸಿಕೊಳ್ಳಬೇಕಿಲ್ಲ ಎಂದೆನಿಸಿದಲ್ಲಿ ಅದು ಕೂಡ ತಪ್ಪಲ್ಲ. ಯಾರಿಗೂ ಬೆಳಗ್ಗೆ ಬೇಗನೆ ಏಳುವುದಿಲ್ಲ ಎಂಬುದರ ಬಗ್ಗೆ ಪಾಪಪ್ರಜ್ಞೆ ಇರಬೇಕಾಗಿಲ್ಲ. ನಿದ್ರೆ, ಅವಶ್ಯಕತೆ. ನೀವು ಹಾಲು, ಪೇಪರ್ ಹಾಕುವವರಲ್ಲ ಎಂದಾದರೆ ನಿಮ್ಮ ಬದುಕಿನ ಯಾವುದೇ ಸಾಧನೆಗೆ ಎಷ್ಟು ಗಂಟೆಗೆ ಏಳುತ್ತೀರಿ ಎಂಬುದು ಮುಖ್ಯವಾಗುವುದಿಲ್ಲ. ಸಾಧಕರೆಲ್ಲರೂ ಬೆಳಗ್ಗೆ ಬೇಗ ಏಳುವವರು ಎನ್ನುವುದು ಪೊಂಕು-ಮಿಥ್ಯ. ಸಾಧನೆಗೂ ಏಳುವ ಸಮಯಕ್ಕೂ ಸಂಬಂಧ ಕಲ್ಪಿಸುವ ನೂರಾರು ಪುಸ್ತಕಗಳಿವೆ. ಆದರೆ ಅವರ ವಾದದಲ್ಲಿ ಹುರುಳಿಲ್ಲ. ಏಕೆಂದರೆ ಅವರು ಬೆಳಗ್ಗೆ ಬೇಗನೆ ಏಳುವ ಸಾಧಕರನ್ನಷ್ಟೇ ಅಲ್ಲಿ ಪಟ್ಟಿಮಾಡಿರುತ್ತಾರೆ. ಬೇಕಾದರೆ ನೋಡಿ. ಅವರದು ಅನುಕೂಲದ ಆಯ್ಕೆ.

ನಮ್ಮ ಮಿದುಳು, ಮನಸ್ಸು ಬಹಳ ಮಜಕೂರಿನದು. ಅದರಷ್ಟಕ್ಕೆ ಬಿಟ್ಟರೆ ಯಾವತ್ತೂ ಸುರಕ್ಷತೆ, ಆರಾಮದಾಯಕ ಮತ್ತು ಪರಿಚಿತವಿರುವುದನ್ನೇ ಅದು ಆಯ್ಕೆ ಮಾಡುವುದು. ಬೇಕಾದರೆ ಸ್ವಲ್ಪ ಯೋಚಿಸಿ ನೋಡಿ. ಇನ್ನು ಮುಂದೆ ಬೆಳಗ್ಗೆ ಬೇಗ ಏಳುವ ಅಭ್ಯಾಸ ಮಾಡಿಕೊಳ್ಳಬೇಕೆಂದರೆ ಅದಕ್ಕೆ ಆ ಮುಂಜಾವೇ ಅಪರಿಚಿತ, ಹೊಸತು. ಮುಗಿಯದ ನಿದ್ರೆಯನ್ನು ಮೀರುವುದು ಅದರ ಪ್ರಕಾರ ನೋವು, ದೇಹಕ್ಕೆ ಅಪಾಯ. ಬದಲಾವಣೆ ಯಾವತ್ತೂ ಅದರ ಪ್ರಕಾರ ಅಸುರಕ್ಷಿತ. ಆ ಕಾರಣಕ್ಕೇ ಅಲಾರಾಂ ಆಗುತ್ತಿದ್ದಂತೆ ಇದರ ಕಿತಾಪತಿ ಕೆಲವೇ ಕ್ಷಣದಲ್ಲಿ ಆರಂಭವಾಗುತ್ತದೆ. ನೀವು ಅಲಾರಾಂ ಅದಾಕ್ಷಣ ನಡೆಯುವ ಸ್ವಗತ ಸಂಭಾಷಣೆಯನ್ನು ಸ್ವಲ್ಪ ಗ್ರಹಿಸಿ ನೋಡಿ. ಆಗ ಮಿದುಳು ಕೊಡುವ ಸಮಜಾಯಿಷಿ ಹೇಗಿರುತ್ತದೆ? ಅದು ವಿನ್ಯಾಸವಾಗಿರುವುದೇ ಹಾಗೆ. ಮಿದುಳು ಯಾವತ್ತೂ ಬದಲಾವಣೆ, ಬೆಳವಣಿಗೆಗೆ ಹಿಂದೇಟು ಹಾಕುತ್ತದೆ. ಪ್ರೇರಣೆ, ಪ್ಯಾಷನ್, ಶಿಸ್ತು ಇತ್ಯಾದಿಗಳೆಲ್ಲ ಅರ್ಥಹೀನ ಎಂದು ಯಾವಾಗ ಬೇಕಾದರೂ ಮನಸ್ಸು ನಮ್ಮನ್ನು ಒಪ್ಪಿಸುತ್ತದೆ. ಅದರ ಜತೆ ವಾದ ಮಾಡಿ ಗೆಲ್ಲಲು ಬೆಳ್ ಬೆಳಗ್ಗೆಯಂತೂ, ಅದರಲ್ಲೂ ಬೆಡ್ ಮೇಲೆ, ಚಾದರದೊಳಗೆ ಸಾಧ್ಯವೇ ಇಲ್ಲ.

ಹಾಗಾದರೆ ಏನು ಮಾಡೋದು? ಎರಡು ಸಾಧ್ಯತೆ- ಒಂದೋ ಅಷ್ಟು ಗಟ್ಟಿ ಮನಸ್ಸು ಮಾಡಿಕೊಳ್ಳಬೇಕು, ಮನಸ್ಸಿನ ಜತೆ ವಾದ, ಯುದ್ಧಕ್ಕಿಳಿದು ಅದನ್ನು ಮೀರಬೇಕು. ಅದು ಒಂದೆರಡು ದಿನ ಮಾಡಿಬಿಡಬಹುದು. ಆದರೆ ಪ್ರತಿನಿತ್ಯ ಬೆಳ್ಳಂ ಬೆಳಗ್ಗೆ? ಯಶಸ್ವಿಯಾದರೂ ಆಗೀಗ- ಒಂದೊಂದೇ ದಿನ ಮನಸ್ಸು ನಮ್ಮನ್ನು ಸೋಲಿಸುತ್ತದೆ. ಕ್ರಮೇಣ ನಮ್ಮ 'ಅಶ್ವಮೇಧ ಯಾಗ' ಅಷ್ಟಕ್ಕೇ ನಿಂತು, ಅಲ್ಲಿಯೇ ಕುದುರೆ ಮಲಗಿಬಿಡುತ್ತದೆ. ಮನಸ್ಸಿಗೆ ಸೋಲಿಸಿ ಗೊತ್ತೇ ವಿನಾ ಸೋತು ಗೊತ್ತಿಲ್ಲ. ಮಂಡೆ ಸಮ ಇದ್ದವರಲ್ಲೆಲ್ಲ ಈ ಪ್ರಕ್ರಿಯೆ ಸಹಜ ನಡೆಯುತ್ತದೆ. ಹಾಗಾಗಿ ಇಲ್ಲಿರುವ ಎರಡನೇ ಆಯ್ಕೆ- ಮಿದುಳಿಗೆ ಆ ಸಂಭಾಷಣೆಯ ಅವಕಾಶವನ್ನೇ ಕೊಡದಿರುವುದು. ಏನದು? ಹೇಗದು?

ನೀವು ಬೆಳಗ್ಗೆ ಬೇಗ ಏಳುವವರನ್ನು ಯಾರನ್ನೇ ಇದೊಂದು ಪ್ರಶ್ನೆ ಕೇಳಿ- ಬೆಳಗ್ಗೆ ಅಲಾರಾಂ ಆದಾಗ ಅಥವಾ ಎಚ್ಚರವಾದಾಗ ಹಾಸಿಗೆ ಹೇಗೆ ಬಿಡುತ್ತೀರಿ? ಎಂದು. ನಿಮ್ಮ ಪ್ರಶ್ನೆಗೆ ಅವರಲ್ಲಿ ಯಾವುದೇ ವಿಶೇಷ ಉತ್ತರ ಇರುವುದಿಲ್ಲ. ಏಳಬೇಕು, ಏಳುತ್ತೇನೆ, ಎದ್ದುಬಿಡುತ್ತೇನೆ, ಎಚ್ಚರಾಗಿಬಿಡುತ್ತದೆ ಎಂಬಿತ್ಯಾದಿ ಉತ್ತರ ಬಂದೀತು. ಅವರಿವರು ಏಕೆ, ನಾನೇ ಇಪ್ಪತ್ತು ವರ್ಷದಿಂದ ಬೆಳಗ್ಗೆ ಬೇಗ ಏಳುತ್ತಿದ್ದೇನೆ. ಏಳುವಾಗ ನಾನೆಂದೂ ಯೋಚಿಸುವುದೇ ಇಲ್ಲ, ಏಳಬೇಕು, ಏಳುತ್ತಿದ್ದೇನೆ ಅಷ್ಟೇ. ಬೆಳಗಿನ ಮಿದುಳಿನ ಸಂಭಾಷಣೆಯನ್ನು ತಪ್ಪಿಸಬೇಕೆಂದರೆ, ಏನೂ ಯೋಚಿಸದೆ ಒಂದೇ ಜಪಾಟಿಗೆ ಎದ್ದು ಕುಳಿತುಕೊಳ್ಳುವುದು. ಆದರೆ ಹೇಳಿದೆನಲ್ಲ, ಮಂಡೆ ಸಮ ಇರುವವರಿಗೆ ಅದು ಸುಲಭವಲ್ಲ. ಯೋಚನೆಗಳು, ಆಲಸ್ಯ ನನಗೂ ಬರುತ್ತವೆ. ಅದೆಲ್ಲದಕ್ಕೆ ಒಂದು ಅತ್ಯಂತ ಸುಲಭದ, ಒಂದು ಜೈವಿಕ ಹ್ಯಾಕ್ ಇದೆ. ಅದಕ್ಕೆ '5 ಕ್ಷಣದ ಉಪಾಯ' ಎಂದು ಹೆಸರು.

ಏನದು '5 ಕ್ಷಣದ ಉಪಾಯ?' ನೀವೆಲ್ಲರೂ ಇಸ್ರೋ, ನಾಸಾ ಅವರು ಮಾಡುವ ರಾಕೆಟ್ ಉಡಾವಣೆಯ ಸನ್ನಿವೇಶ ನೋಡಿರುತ್ತೀರಿ. ಅಲ್ಲಿ ಈ ಕೌಂಟ್‌ಡೌನ್ ಇರುತ್ತದೆ ನೋಡಿ. ಫೈವ್, ಫೋರ್, ಥ್ರೀ, ಟೂ, ಒನ್ ಎನ್ನುತ್ತಿದ್ದಂತೆ 'ಬುಸ್' ಅಂತ ರಾಕೆಟ್ ಮೇಲಕ್ಕೇರುತ್ತದೆ. ಇದೇ ರೀತಿ ಐದು, ನಾಲ್ಕು,

ಮೂರು, ಎರಡು, ಒಂದು ಎಂದು ಹಿಂದೆಣಿಸುವುದು. ಹಿಂದೆಣಿಕೆಯಲ್ಲಿ 'ಒಂದು' ಕಳೆಯುತ್ತಿದ್ದಂತೆ ರಾಕೆಟ್‌ನಂತೆ ಮೇಲಕ್ಕೇಳುವುದು, ಕಾಲು ನೆಲಕ್ಕಿಡುವುದು, ದೈಹಿಕವಾಗಿ ಚಲಿಸುವುದು. ಅತ್ಯಂತ ಸರಳ.

ನಿಮಗೆ ಇದು ತೀರಾ ಪೊಕ್ಕು ವಿಚಾರ ಅನಿಸಬಹುದು. ಇಷ್ಟು ಸರಳ ಉಪಾಯ ಕೆಲಸ ಮಾಡಬಹುದೇ ಎಂಬ ಪ್ರಶ್ನೆ ಹುಟ್ಟುವುದು ಸಹಜ. ಆದರೆ ಇದು ನೂರಕ್ಕೆ ನೂರು ಬಾರಿ ಕೆಲಸ ಮಾಡುತ್ತದೆ. ಇಲ್ಲಿ ಮುಖ್ಯ ಹಿಂದೆಣಿಕೆ. ಅಲಾರಾಂ ಆಗುತ್ತಿದ್ದಂತೆ, ಬೇರಿನ್ನೊಂದು ವಿಚಾರ ಬರುವುದರೊಳಗೆ ಐದರ ಹಿಂದೆಣಿಕೆ ಆರಂಭವಾಗಬೇಕು. 5, 4, 3 , 2.. 'ಒಂದು' ಎಂದಾಕ್ಷಣ ದೇಹ ಚಲಿಸಬೇಕು. ರಾತ್ರಿ ಮಲಗುವಾಗ ಬೆಳಗ್ಗೆ ಎದ್ದು ಅದನ್ನು ಮಾಡಬೇಕು, ಇದನ್ನು ಮಾಡಬೇಕು ಎಂದೆಲ್ಲ ಅಂದುಕೊಂಡರೆ ಅದೆಲ್ಲ ಪ್ರಯೋಜನಕ್ಕೆ ಬರುವುದಿಲ್ಲ. ಬದಲಿಗೆ ಕಾರಣಗಳು ತೀರಾ ಚಿಕ್ಕವೆನಿಸುತ್ತವೆ. ಹಾಗಾಗಿ ಅದೆಲ್ಲ ಆಗದ ಕೆಲಸ. ಅಲಾರಾಂ 'ಟಿಂಗ್ ಟಿಂಗ್' ಐದು, ನಾಲ್ಕು, ಮೂರು, ಎರಡು, ಒಂದು, ದೈಹಿಕವಾಗಿ ಕಾರ್ಯಗತವಾಗುವುದು, ಬೆಡ್ ಬಿಟ್ಟು ಮೇಲೇಳುವುದು. ಇದುವೇ 'ಐದು ಸೆಕೆಂಡಿನ ಉಪಾಯ'. ಈ ಉಪಾಯ ನನ್ನ ಸೃಷ್ಟಿಯಲ್ಲ, ಆದರೆ ನನ್ನದೇ ಆಗಿ ಅದೆಷ್ಟೋ ವರ್ಷವಾಯಿತು. ಇಂದಿಗೂ ಇದು ನಿತ್ಯ ಬೆಳಗ್ಗೆ ಕೆಲಸ ಮಾಡುತ್ತದೆ. ಇದನ್ನು ಇತ್ತೀಚೆಗೆ ಮೆಲ್ ರಾಬಿನ್ಸ್ ಮೊದಲಾದ ಬರಹಗಾರರು ಇನ್ನಷ್ಟು ಪ್ರಚಲಿತಕ್ಕೆ ತಂದಿದ್ದಾರೆ.

ಬೆಳಗ್ಗೆ ಎದ್ದೇಳುವುದರ ಪ್ರಯೋಜನ, ಎಷ್ಟು ಗಂಟೆಗೆ ಏಳಬೇಕು ಇತ್ಯಾದಿ ಈಗ ಬೇಡ. ಅದು ಇಂದಿನ ವಿಷಯ ಅಲ್ಲ. ಮುಂದೆ ಬರೆದೇನು. ಆದರೆ ನಿಮ್ಮಲ್ಲಿ ಬೇಗ ಏಳಬೇಕೆನ್ನುವ ಕಿಂಚಿತ್ ಬಯಕೆ, ಉದ್ದೇಶವಿದ್ದರೆ, ಅದು ನಿಮ್ಮ ಅವಶ್ಯಕತೆಯಾಗಿದ್ದರೆ, ಅದು ಸಾಧ್ಯವಾಗುತ್ತಿಲ್ಲದಿದ್ದರೆ ಅದಕ್ಕೆ ಏಕೈಕ ಪರಿಹಾರ - ಐದು ಸೆಕೆಂಡಿನ ಉಪಾಯ. 5, 4, 3, 2, 1- ತಲೆ, ಬೆನ್ನು ಹಾಸಿಗೆಯಿಂದ ಮೇಲಕ್ಕೆ, ಕಾಲು ನೆಲಕ್ಕೆ.. ಉಡಾವಣೆ!!

ಬೇಗನೆ ಏಳಲು ನಿದ್ರೆ ಎಂದೂ ಸಮಸ್ಯೆಯಲ್ಲ. ಈ ಬೆಳಗಿನ ಮನಸ್ಸಿನ ಸಂಭಾಷಣೆ, ಸಮಜಾಯಿಷಿ ಇವುಗಳನ್ನು ಮೀರುವುದು ಕಷ್ಟದ್ದು. ಇಲ್ಲೊಂದು ಸೂಕ್ಷ್ಮವಿದೆ. ಏನೆಂದರೆ ಯಾವುದೇ ವಿಷಯದ ಅರಿವು ಮೊದಲು ಮೂಡುತ್ತದೆ. ಆನಂತರದಲ್ಲಿ ಮನಸ್ಸಿನ ಕಾರ್ಯಚಟುವಟಿಕೆ, ಪ್ರಶ್ನೋತ್ತರ ಆರಂಭವಾಗುವುದು. ಎಚ್ಚರಾಗುವ ಸ್ಥಿತಿ ಅರಿವಿನದು. ಪ್ರಜ್ಞೆಯ ಹಿಂದೆ-ಹಿಂದೆ ಯೋಚನೆ ಬರುತ್ತದೆ.

ಈ ಐದು ಸೆಕೆಂಡಿನ ಉಪಾಯ. 5,4,3,2,1 ನಿದ್ರೆಯಿಂದ ಬೇಗ ಎದ್ದೇಳುವುದಕ್ಕೆ ಮಾತ್ರವಲ್ಲ. ಎಲ್ಲೆಲ್ಲಿ ನಾವು ನಮ್ಮನ್ನು ಬದಲಾಯಿಸಿಕೊಳ್ಳಬೇಕು ಎಂದು ಹೆಣಗಾಡಿ ಸೋಲುತ್ತೇವೋ, ಎಲ್ಲೆಲ್ಲಿ ಯೋಚಿಸಿದರೆ ಕೆಲಸ ಕೆಡುತ್ತಿದೆಯೋ ಅಲ್ಲೆಲ್ಲ ಈ ಉಪಾಯ ಬಳಸಿಕೊಳ್ಳಬಹುದು. ಉದಾಹರಣೆಗೆ- ಹಿಂದಿನ ವಾರ ರೀಲ್ಸ್ ನೋಡುವ ಚಟದ ಬಗ್ಗೆ ಬರೆದಿದ್ದೆ. ಅದಕ್ಕೆ ರೀಲ್ಸ್ ನೋಡದೆ ನಿಲ್ಲಿಸುವುದು ಹೇಗೆಂದು ಕೆಲ ಓದುಗ ಮಿತ್ರರು ಇ-ಮೇಲ್ ಮಾಡಿ ಕೇಳಿದ್ದರು. ಫೋನ್ ಅನ್‌ಲಾಕ್ ಮಾಡಿರುತ್ತೀರಿ, ರೀಲ್ಸ್ ಇತ್ಯಾದಿ ನೋಡ ನೋಡುತ್ತಾ ಹದಿನೈದಿಪ್ಪತ್ತು ನಿಮಿಷ ಕಳೆದಿರುತ್ತದೆ. ಆಗ ಸಮಯ ವ್ಯರ್ಥವಾಗಿದೆ ಎಂದು ಅರೆಕ್ಷಣ ಅನಿಸುತ್ತದೆ.. ಆಗ 5,4,3,2, ಒಂದು.. ಎನ್ನುತ್ತಿದ್ದಂತೆ ಎಕ್ಸಿಟ್, ಫೋನ್ ಲಾಕ್.

ಈ ಐದು ಸೆಕೆಂಡ್ ಉಪಾಯ ಕೇವಲ ಏನೋ ಒಂದನ್ನು ನಿಲ್ಲಿಸುವುದಕ್ಕೆ ಮಾತ್ರವಲ್ಲ. ಇದನ್ನು ಏನೋ ಒಂದು ಕೆಲಸ ಆರಂಭಿಸಲು ಕೂಡ ಬಳಸಬಹುದು. ಏನೋ ಒಂದು ಕಥೆ, ಲೇಖನ, ಯಾರಿಗೋ ಇ-ಮೇಲ್, ಯಾವುದೋ ಹಳೆಯ ಸ್ನೇಹಿತನಿಗೆ, ಸಂಬಂಧಿಕರಿಗೆ ಒಂದು ಫೋನ್ ಕರೆ, ಯಾವತ್ತೋ ತುಂಬಬೇಕಾದ ಯಾವುದೋ ಒಂದು ಅರ್ಜಿ.. ಎಲ್ಲದಕ್ಕೂ 5,4,3,2,1, ಆಕ್ಷನ್. ಈ ಐದು ಕ್ಷಣದ ಉಪಾಯ ಕೆಲಸ ಮಾಡಬೇಕೆಂದರೆ 'ಒಂದು' ಎನ್ನುತ್ತಿದ್ದಂತೆ ದೈಹಿಕವಾದ ನಡೆಯೊಂದನ್ನು ತೆಗೆದುಕೊಳ್ಳುವುದು ಬಹಳ ಮುಖ್ಯ. ಕಚೇರಿಯ ಮೀಟಿಂಗ್‌ನಲ್ಲಿ, ಮನೆಯಲ್ಲಿ, ಸ್ನೇಹಿತರ ಜತೆ, ಏನೋ ಒಂದು ಹೇಳಬೇಕು ಆದರೆ ಸಾಧ್ಯವಾಗುತ್ತಿಲ್ಲ ಎಂದೆನಿಸಿದಾಗ, ಅಥವಾ ಯಾರಿಗೋ ಏನೋ ಒಂದಕ್ಕೆ ಬೇಡ, ಇಲ್ಲ, 'ನೋ' ಎಂದು ಹೇಳಬೇಕಾದಾಗ, ಯಾವುದೋ ಒಂದು ಬೇಡದ ಸಂಬಂಧ ಮುರಿಯುವ ಕೊನೆಯ ಹಂತಕ್ಕೆ ಬಂದಾಗ, ವ್ಯಾಯಾಮ, ವಾಕಿಂಗ್‌ಗೆ ಹೊರಡಬೇಕು ಎಂದಾಗ.. 5,4,3,2,1, ಆಕ್ಷನ್.

ದುಶ್ಚಟ ಬಿಡಬೇಕು ಎಂದೆನಿಸಿದಾಗ ಅತ್ಯಂತ ಕಷ್ಟದ್ದೆಂದರೆ ಅದು ಎದುರಿಗೆ ಇರುವಾಗ ಅದರ ಮೇಲೆ ನಿಯಂತ್ರಣ ಸಾಧಿಸುವುದು, ಮಾಡದಿರುವುದು. ಉದಾಹರಣೆಗೆ ಸಿಗರೇಟ್, ಹೆಂಡ ಇತ್ಯಾದಿ. ಅದನ್ನು ಕೈಗೆತ್ತಿಕೊಳ್ಳುವ ಸಮಯದಲ್ಲಿ, ಗ್ಲಾಸಿಗೆ ಹುಯ್ಯುವ ಆ ಕ್ಷಣದಲ್ಲಿ - 5,4,3,2,1, ಸ್ಟಾಪ್- ನಿಲ್ಲಿಸಿಬಿಡುವುದು. ಮತ್ತೆ ಬೇಕೆನ್ನಿಸಿದರೆ- ಮತ್ತೆ ಅದೇ ಉಪಾಯ. ಯಾವುದೋ ನಮಗಿಷ್ಟವಾಗದ ಸ್ಥಳ, ಯಾರದೋ ಮನೆ, ಯಾರದೋ ಅತಿ ಒತ್ತಾಯ, ಕಿರಿಕಿರಿಯೆನಿಸುವ ಮಾತುಕತೆ, ಸಂಭಾಷಣೆ, ಮುರಿಯಬೇಕಾದ ಕೆಟ್ಟ ಸಂಬಂಧ. ಸಾಧ್ಯವೇ ಆಗುತ್ತಿಲ್ಲವೇ? 5,4,3,2,1, ಕತ್ತೆ ಬಾಲ, ಕುದುರೆ ಜುಟ್ಟು- ಔಟ್- ನಿರ್ಗಮನ.

ಈ ಎಲ್ಲ ಉದಾಹರಣೆಗಳಲ್ಲಿ ಒಂದು ಅನುಕ್ರಮವಿದೆ. ಅವಶ್ಯಕತೆ-ಪ್ರಜ್ಞೆ- ಯೋಚನೆ-ಜಿಜ್ಞಾಸೆ, ಸ್ವವಿಮರ್ಶೆ- ಅಂಜಿಕೆ, ಭಯ, ತರುವಾಯ ಹಿಂಜರಿಕೆ. ಇದು ಒಂದಾದ ನಂತರ ಒಂದು ಸಂಭವಿಸುತ್ತದೆ. ಇದೇ ನಮ್ಮ ಬಹುತೇಕ ನಿಷ್ಕ್ರಿಯತೆಗೆ ಕಾರಣ. ಹಿಂಜರಿಕೆ- ಆಮೇಲೆ ಮಾಡಿದರಾಯ್ತು, ಇನ್ಯಾವತ್ತೋ ನೋಡಿಕೊಳ್ಳೋಣ, ಮೊದಲು ಮಾನಸಿಕವಾಗಿ ತಯಾರಾಗೋಣ; ಮುಂದೂಡಿಕೆ, ದೀರ್ಘಸೂತ್ರ- ಆಮೇಲೆ ಬೇಸರ, ಪುನರಾವರ್ತನೆ, ಮತ್ತೆ ಬೇಸರ. ಈ ವಿಷವರ್ತುಲಕ್ಕೆ ಇರುವ ಪರಿಹಾರ ಇದೊಂದೇ. ನಿತ್ಯ ಬದುಕಿನಲ್ಲಿ ಎಲ್ಲೆಲ್ಲಿ ನಮ್ಮ ಹೃದಯ ಬಯಸುತ್ತದೆ ಆದರೆ ಬುದ್ಧಿ ಅಡ್ಡಗಾಲು ಇಡುತ್ತದೆಯೋ ಅಲ್ಲೆಲ್ಲ ಐದು ಸೆಕೆಂಡಿನ ಉಪಾಯ ಬಹಳ ಪರಿಣಾಮಕಾರಿ. 5,4,3,2,1 'ಆಕ್ಷನ್'. ಇದನ್ನು ನಾನಂತೂ ನಿತ್ಯ ಬದುಕಿನಲ್ಲಿ ಅಸಂಖ್ಯ ಕಡೆ, ಎಲ್ಲೆಲ್ಲಿ ಸ್ನೂಜ್ ಬಟನ್ ಕಾಣಿಸುತ್ತದೆಯೋ ಅಲ್ಲೆಲ್ಲ ಬಳಸುತ್ತೇನೆ. ನನ್ನ ಮಟ್ಟಿಗಂತೂ ಇದು ಬಹಳ ಸಹಾಯಕ. 5,4,3,2,1- ಆಕ್ಷನ್! ಅಷ್ಟೆ. ಈ ಉಪಾಯವನ್ನು ನೀವು ಎಲ್ಲೆಲ್ಲಿ ಬಳಸಿದಿರಿ ತಿಳಿಸಿ. ಚಿಯರ್ಸ್.

ವಿಬಿ-ಜಿ ರಾಮ್ ಜಿ ಯೋಜನೆ: ಚರ್ಚೆ ಆಗದಿರುವ ವಿಚಾರಗಳು!

ಹಳೆಯ ನರೇಗಾದಲ್ಲಿ ಫಲಾನುಭವಿಗಳಿಗೆ ಪ್ರತಿ ವರ್ಷ 100 ದಿನಗಳ ಉದ್ಯೋಗ ಖಾತರಿ ಸಿಗುತ್ತಿತ್ತು. ಆದರೆ 'ವಿಬಿ-ಜಿ ರಾಮ್ ಜಿ'ಯಲ್ಲಿ 125 ದಿನಗಳ ಖಾತರಿ ಉದ್ಯೋಗ ಸಿಗಲಿದೆ. ಗ್ರಾಮೀಣ ಮೂಲಸೌಕರ್ಯ ವ್ಯವಸ್ಥೆ ಸುಧಾರಿಸಲಿದೆ. ನೀರಾವರಿ ಕೆಲಸಗಳಿಗೆ ಆದ್ಯತೆ, ಗ್ರಾಮೀಣ ರಸ್ತೆ, ಮಾರುಕಟ್ಟೆ, ಪರಿಸರ ರಕ್ಷಣೆ, ಕೃಷಿ ಉತ್ಪಾದಕತೆ ಹೆಚ್ಚಳಕ್ಕೆ ಆದ್ಯತೆ ಸಿಗಲಿದೆ.

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
keshavaprasadb@gmail.com

ಕೇಂದ್ರ ಸರಕಾರವು ಇಪ್ಪತ್ತು ವರ್ಷ ಹಳೆಯ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಬದಲಿಗೆ 'ವಿಬಿ-ಜಿ ರಾಮ್ ಜಿ' ಎಂಬ ಹೊಸ ಕಾಯಿದೆಯನ್ನು ಇತ್ತೀಚೆಗೆ ಜಾರಿಗೆ ತಂದಿದೆ. ಇದರಲ್ಲಿ ಗಾಂಧಿಯವರ ಹೆಸರನ್ನು ತೆಗೆದುಹಾಕಿರುವುದಕ್ಕೆ ವಿವಾದ ಆಯಿತೇ ವಿನಾ, ಅದರಲ್ಲೇನಿದೆ? ಪ್ರಯೋಜನ ಏನು? ಎಂಬುದರ ಬಗ್ಗೆ ಚರ್ಚೆ ಕಳೆದುಹೋಗಿತ್ತು.

ಬೇಕಾದರೆ ನೋಡಿ, ಈ 'ರಾಮ್ ಜಿ' ಅಡಿಯಲ್ಲಿ 60 ದಿನಗಳ ಕಾಲ ಕೆಲಸಗಳನ್ನು ತಡೆಹಿಡಿಯಬಹುದು. ದೇಶದಲ್ಲಿ ಬಿತ್ತನೆ ಮತ್ತು ಕೊಯ್ಲಿನ ಸಂದರ್ಭ ರೈತರಿಗೆ ಕೆಲಸಗಾರರ ಕೊರತೆ ಆಗಬಾರದು ಎಂಬುದೇ ಈ ಸಕಾರಾತ್ಮಕ ಬದಲಾವಣೆಗೆ ಕಾರಣ. ಹಿಂದೆಲ್ಲ ಬಿತ್ತನೆ, ಕೊಯ್ಲಿನ ಸಂದರ್ಭದಲ್ಲಿ, ನರೇಗಾ ಕೆಲಸಕ್ಕೆ ಕಾರ್ಮಿಕರು ಹೋಗುತ್ತಿದ್ದುದರಿಂದ ಸಣ್ಣ ಪುಟ್ಟ ರೈತರಿಗೆ ಕಾರ್ಮಿಕರೇ ಸಿಗುತ್ತಿರಲಿಲ್ಲ, ಇದರಿಂದ ಅವರಿಗೆ ಭಾರಿ ಸಮಸ್ಯೆಯಾಗುತ್ತಿತ್ತು. ಆದರೆ ಈ ಸಮಸ್ಯೆ ಬಗೆಹರಿಸಲು ಕಾಯಿದೆಯಲ್ಲಿ 60 ದಿನಗಳ ಕಾಲ ಕೆಲಸಗಳನ್ನು ತಡೆಹಿಡಿಯಬಹುದಾದ ಅವಕಾಶ ಕಲ್ಪಿಸಲಾಗಿದೆ. ವಿಪರ್ಯಾಸವೇನೆಂದರೆ ಕೃಷಿ ಕಸುಬಿನ ಕಷ್ಟ ಸಂಕಷ್ಟಗಳ ಅರಿವೇ ಇಲ್ಲದವರು ಇದನ್ನು, 'ಕಾರ್ಮಿಕರ ಹಕ್ಕನ್ನು ಕಿತ್ತುಕೊಳ್ಳುವ ಪ್ರಯತ್ನ' ಎಂದು ಕರೆದು ಮಸಿ ಬಳಿಯುತ್ತಿರುವುದು!

ಆದ್ದರಿಂದ ಹೆಸರು ಬದಲಾವಣೆಯ ಬಗೆಗಿನ ಕ್ಷುಲ್ಲಕ ಮಾತಿನ ಚಕಮಕಿಗಿಂತ, ಹೊಸ ಬದಲಾವಣೆ ಏನು? ಅದರ ಪ್ರಯೋಜನವೇನು? ಎಂಬುದನ್ನು ತಿಳಿಯುವುದು ಅರ್ಥಪೂರ್ಣ. 2005ರಲ್ಲಿ ನರೇಗಾ ಆರಂಭವಾದಾಗ ಅದರಲ್ಲಿ ಗಾಂಧಿಯವರ ಹೆಸರು ಇದ್ದಿರಲಿಲ್ಲ. 'ನ್ಯಾಷನಲ್ ರೂರಲ್ ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಆಕ್ಟ್' (ನರೇಗಾ) ಎಂದು ಇತ್ತು. 2009ರಲ್ಲಿ ಮಹಾತ್ಮ ಗಾಂಧಿಯವರ ಹೆಸರನ್ನು ಸೇರಿಸಲಾಯಿತು. ಹೀಗಾಗಿ ಯೋಜನೆಯ ಹೆಸರು 'ಮಹಾತ್ಮ ಗಾಂಧಿ ನ್ಯಾಷನಲ್ ರೂರಲ್ ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಆಕ್ಟ್' ಸಂಕ್ಷಿಪ್ತವಾಗಿ 'ಎಂಜಿನರೇಗಾ' ಎಂದು ಆಗಿತ್ತು. 20 ವರ್ಷಗಳ ಬಳಿಕ ಈಗ 'ವಿಕಸಿತ್ ಭಾರತ್ -ಗ್ಯಾರಂಟಿ ಫಾರ್ ರೋಜ್‌ಗಾರ್ ಆ್ಯಂಡ್ ಅಜೀವಿಕಾ ಮಿಷನ್ (ಗ್ರಾಮೀಣ್)' ಎಂಬುದಾಗಿ ಬದಲಿಸಲಾಗಿದೆ. ಸಂಕ್ಷಿಪ್ತವಾಗಿ ಇದನ್ನು 'ವಿಬಿ-ಜಿ ರಾಮ್ ಜಿ' ಎಂದು ಕರೆಯಲಾಗುತ್ತಿದೆ.

ಗಾಂಧಿಯವರ ಆಶಯಕ್ಕೆ ಪೂರಕವಾಗಿ, ಎಂಜಿ ನರೇಗಾ ಯೋಜನೆಯ ಹೆಸರನ್ನು ವಿಕಸಿತ್ ಭಾರತ್ ಗ್ಯಾರಂಟಿ ಫಾರ್ ರೋಜ್‌ಗಾರ್ ಎಂದು ಬದಲಿಸಲಾಗಿದೆ. ವಿಕಸಿತವಾಗುತ್ತಿರುವ ಭಾರತದ ಪ್ರಕ್ರಿಯೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯೂ ಸಕ್ರಿಯವಾಗಿ ಇರಬೇಕು ಮತ್ತು ಅಭಿವೃದ್ಧಿಯಾಗಬೇಕು ಎಂಬ ಉದ್ದೇಶದಿಂದ ಹೆಸರನ್ನು ಹೀಗೆ ಬದಲಾಯಿಸಲಾಗಿದೆ. ಹಳೆಯ ನರೇಗಾ ಯೋಜನೆಯು ದುರ್ಬಲ ವರ್ಗದ ಜನತೆಗೆ ಉದ್ಯೋಗಾವಕಾಶವನ್ನು ಕಲ್ಪಿಸುತ್ತಿತ್ತು. 2009ರ ಹಳೆಯ ಮಾನದಂಡವನ್ನು ಇಲ್ಲಿ ಬಳಸಲಾಗುತ್ತಿತ್ತು. ಆದರೆ ಈಗ ಮಹಿಳೆಯರೂ ಶಾಸನಾತ್ಮಕ ಮಾನದಂಡವಾಗಿರುವ 33 ಪರ್ಸೆಂಟಿಗಿಂತಲೂ ಹೆಚ್ಚು ಭಾಗವಹಿಸುತ್ತಿದ್ದಾರೆ. ಈ ವರ್ಷ ಜುಲೈನಲ್ಲಿ 52 ಪರ್ಸೆಂಟಿಗೆ ಏರಿಕೆಯಾಗಿತ್ತು. ಆದ್ದರಿಂದ ಯೋಜನೆಯಲ್ಲಿ ಬದಲಾವಣೆಯ ಅಗತ್ಯ ಇತ್ತು ಎಂದು ಕೇಂದ್ರ ಸರಕಾರ ತಿಳಿಸಿದೆ.

ಭಾರತದಲ್ಲಿ ವೇತನ ಸಹಿತ ಉದ್ಯೋಗ ಯೋಜನೆಗಳು ಹಂತಗಳಲ್ಲಿ ವಿಕಾಸವಾಗಿವೆ. ಬೇರೆ ಬೇರೆ ಹೆಸರುಗಳೂ ಇದ್ದವು. ರೂರಲ್ ಮ್ಯಾನ್ ಪವರ್ ಪ್ರೋಗ್ರಾಮ್ (1960), ಕ್ರ್ಯಾಶ್ ಸ್ಕೀಮ್ ಫಾರ್ ರೂರಲ್ ಎಂಪ್ಲಾಯ್‌ಮೆಂಟ್ (1971), ನ್ಯಾಷನಲ್ ರೂರಲ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್, ರೂರಲ್ ಲ್ಯಾಂಡ್‌ಲೆಸ್ ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮ್, ಜವಾಹರ್ ರೋಜ್‌ಗಾರ್ ಯೋಜನೆ (1993), ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ (1999), ಎಂಪ್ಲಾಯ್‌ಮೆಂಟ್ ಅಶ್ಯೂರೆನ್ಸ್ ಸ್ಕೀಮ್ ಆ್ಯಂಡ್ ದಿ ಫುಡ್ ಫಾರ್ ವರ್ಕ್ ಪ್ರೋಗ್ರಾಮ್ ಈ ಯೋಜನೆಗಳು ಆಯಾ ಕಾಲಘಟ್ಟದ ನಿರುದ್ಯೋಗ ಮತ್ತು ಆಹಾರ ಭದ್ರತೆಯ ಸವಾಲುಗಳ ಎದುರು ಅಸ್ತಿತ್ವದಲ್ಲಿದ್ದವು ಹಾಗೂ ಕ್ರಮೇಣ ವಿಕಾಸವಾಗುತ್ತಿದ್ದವು. 'ಮಹಾರಾಷ್ಟ್ರ ಎಂಪ್ಲಾಯ್‌ಮೆಂಟ್ ಗ್ಯಾರಂಟಿ ಆಕ್ಟ್ 1977' ಮಹತ್ವದ ತಿರುವು ಕೊಟ್ಟಿತು. ಕೆಲಸ ಮಾಡುವ ಹಕ್ಕನ್ನು ಅದು ಕೊಟ್ಟಿತು. 2005ರಲ್ಲಿ ನರೇಗಾ ಬಂದಿತು. ಈಗ ಮತ್ತೆ ಹೊಸತು.

'ವಿಬಿ-ಜಿ ರಾಮ್ ಜಿ'ಯಲ್ಲಿ ಏನೆಲ್ಲಾ ಹೊಸ ಬದಲಾವಣೆ ತರಲಾಗಿದೆ? ಹಳೆಯ ನರೇಗಾದಲ್ಲಿ ಫಲಾನುಭವಿಗಳಿಗೆ ಪ್ರತಿ ವರ್ಷ 100 ದಿನಗಳ ಉದ್ಯೋಗ ಖಾತರಿ ಸಿಗುತ್ತಿತ್ತು. ಆದರೆ 'ವಿಬಿ-ಜಿ ರಾಮ್ ಜಿ'ಯಲ್ಲಿ 125 ದಿನಗಳ ಖಾತರಿ ಉದ್ಯೋಗ ಸಿಗಲಿದೆ. ಗ್ರಾಮೀಣ ಮೂಲಸೌಕರ್ಯ ವ್ಯವಸ್ಥೆ ಸುಧಾರಿಸಲಿದೆ. ನೀರಾವರಿ ಕೆಲಸಗಳಿಗೆ ಆದ್ಯತೆ, ಗ್ರಾಮೀಣ ರಸ್ತೆ, ಮಾರುಕಟ್ಟೆ, ಪರಿಸರ ರಕ್ಷಣೆ, ಕೃಷಿ ಉತ್ಪಾದಕತೆ ಹೆಚ್ಚಳಕ್ಕೆ ಆದ್ಯತೆ ಸಿಗಲಿದೆ. ರೈತರಿಗೆ ಕೊಯ್ಲಿನ ಸಮಯದಲ್ಲಿ ಕೃಷಿಕಾರ್ಮಿಕರ ಲಭ್ಯತೆ ಹೆಚ್ಚಲಿದೆ. ಕಾರ್ಮಿಕರಿಗೆ ಸಂಬಳದಲ್ಲಿ 25 ಪರ್ಸೆಂಟ್ ಹೆಚ್ಚಳವಾಗಲಿದೆ. ಡಿಜಿಟಲ್ ಸಂಬಳ ಪಾವತಿ ಆಗುವುದರಿಂದ ಅಕ್ರಮ, ಸೋರಿಕೆ ಸಮಸ್ಯೆ ಇರುವುದಿಲ್ಲ, ಇದರಿಂದ ಗ್ರಾಮೀಣ ಜನರ ಆದಾಯ ನಿಶ್ಚಿತವಾಗಿ ಹೆಚ್ಚಲಿದೆ. ಗಾಂಧಿಯವರ ಆಶಯಕ್ಕೆ ಇದು ಪೂರಕವಾಗಿದೆ. ರೈತರು, ಕೃಷಿ ಕಾರ್ಮಿಕರು ಇಬ್ಬರಿಗೂ ಅನುಕೂಲಕರ. ಎಂಜಿನರೇಗಾದಲ್ಲಿ ಮಾಡಬೇಕಾದ ಕೆಲಸಗಳ ಹಲವಾರು ಕೆಟಗರಿಗಳು ಮತ್ತು ಸೀಮಿತ ಕಾರ್ಯತಂತ್ರಗಳಿಂದಾಗಿ ವ್ಯವಸ್ಥೆ ಸಂಕೀರ್ಣವಾಗಿತ್ತು. ಈಗ ಆದ್ಯತೆಯ 4 ವಲಯಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ.

ಯೋಜನೆಯ ಫಂಡಿಂಗ್ ವಿಚಾರದಲ್ಲಿ ಸ್ವಲ್ಪ ಬದಲಾವಣೆ ಮಾಡಲಾಗಿದೆ. ಮೊದಲು ಅನ್-ಸ್ಕಿಲ್ಡ್ ಕಾರ್ಮಿಕರಿಗೆ ಮಾತ್ರ ಕೇಂದ್ರ ಸರಕಾರ ಶೇ.100ರಷ್ಟು ಸಂಬಳ ಕೊಡುತ್ತಿತ್ತು. 'ವಿಬಿ-ಜಿ ರಾಮ್ ಜಿ'ಯಲ್ಲಿ 60 ಪರ್ಸೆಂಟ್ ಕೇಂದ್ರ ಮತ್ತು 40 ಪರ್ಸೆಂಟ್ ರಾಜ್ಯ ಸರಕಾರಗಳು ಕೊಡಬೇಕು. ಇದು ಒಳ್ಳೆಯ ನಿರ್ಧಾರ. ಇದರಿಂದ ಯೋಜನೆಯ ಪರಿಣಾಮಕಾರಿ ಜಾರಿಯಲ್ಲಿ ರಾಜ್ಯ ಸರಕಾರಗಳಿಗೂ ಜವಾಬ್ದಾರಿ ಹಂಚಿಕೆಯಾಗುತ್ತದೆ. ಅವುಗಳ ವಿತ್ತೀಯ ಶಿಸ್ತು ಸುಧಾರಿಸುತ್ತದೆ. ವಿಕಸಿತ ಗ್ರಾಮ ಪಂಚಾಯತ್ ಪ್ಲಾನ್ ಮೂಲಕ ಯೋಜನೆಯ ಪ್ಲಾನಿಂಗ್ ವಿಕೇಂದ್ರೀಕರಣವಾಗಲಿದೆ. ಯೋಜನೆಯ ಉತ್ಪಾದಕತೆ ಹೆಚ್ಚಳಕ್ಕೆ ಇದು ಕಾರಣವಾಗಲಿದೆ. ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರವೇ ನೂರು ಪರ್ಸೆಂಟ್ ಫಂಡ್ ನೀಡಲಿದೆ. ಹಾಗೆಯೇ ಹಿಮಾಲಯದ ತಪ್ಪಲಿನ ರಾಜ್ಯಗಳು ಮತ್ತು ಈಶಾನ್ಯ ರಾಜ್ಯಗಳಿಗೆ 90:10 ಅನುಪಾತದಲ್ಲಿ ಫಂಡಿಂಗ್ ನಡೆಯಲಿದೆ. ರಾಜ್ಯ ಸರಕಾರಗಳಿಗೆ ಎಷ್ಟು ಫಂಡ್ ನೀಡಬೇಕು ಎಂಬ ನಿರ್ಧಾರವನ್ನು ಕೇಂದ್ರ ಸರಕಾರ ಕೈಗೊಳ್ಳಲಿದೆ. ಹೊಸ ಬದಲಾವಣೆಯಿಂದ ಗ್ರಾಮ ಪಂಚಾಯಿತಿಗಳ ಗ್ರಾಮಸಭೆಯ ಅಧಿಕಾರ ಪ್ರಬಲವಾಗಲಿದೆ.

ಹಳೆಯ ನರೇಗಾ ಯೋಜನೆಯಲ್ಲೂ ಕೇಂದ್ರ ಸರಕಾರ 75 ಪರ್ಸೆಂಟ್ ಸಾಮಗ್ರಿ ವೆಚ್ಚವನ್ನು ಮಾತ್ರ ಭರಿಸುತ್ತಿತ್ತು. 25 ಪರ್ಸೆಂಟ್ ಅನ್ನು ರಾಜ್ಯ ಸರಕಾರಗಳು ನೀಡುತ್ತಿದ್ದವು. ಕೇಂದ್ರ ಸರಕಾರವು ಅನ್-ಸ್ಕಿಲ್ಡ್ ಕಾರ್ಮಿಕರಿಗೆ ಮಾತ್ರ 100

ಪರ್ಸೆಂಟ್ ಸಂಬಳ ಕೊಡುತ್ತಿತ್ತು ಎಂಬುದನ್ನು ಗಮನಿಸಬಹುದು. ಚಿದಂಬರಂ ಕೂಡ ಒಂದಷ್ಟು ಹಣವನ್ನು ರಾಜ್ಯಗಳೂ ನೀಡಬೇಕು ಎಂದು ಬಯಸಿದ್ದರು. ಯೋಜನೆಯಲ್ಲಿ ಹಣದ ಸೋರಿಕೆ ಆಗದಂತೆ ನೋಡಿಕೊಳ್ಳಲು ರಾಜ್ಯ ಸರಕಾರಗಳೂ ಫಂಡಿಂಗ್‌ನಲ್ಲಿ ಭಾಗವಹಿಸುವುದು, ಜವಾಬ್ದಾರಿ ವಹಿಸುವುದು ಉತ್ತಮ. ಈಗಲೂ ಬಹುಪಾಲು ಫಂಡಿಂಗ್ ಪ್ರಾಯೋಜಕತ್ವವು ಕೇಂದ್ರ ಸರಕಾರದ್ದೇ ಆಗಿದೆ. ಆದರೆ ಯೋಜನೆಯ ಸರಿಯಾದ ಅನುಷ್ಠಾನದ ಜವಾಬ್ದಾರಿ ರಾಜ್ಯ ಸರಕಾರದ್ದಾಗಿದೆ. ಸ್ಥಳೀಯವಾಗಿ ಅಗತ್ಯವಿರುವ ಮೂಲಸೌಕರ್ಯ ಅಭಿವೃದ್ಧಿಗೆ ಯೋಜನೆಯನ್ನು ಸಮರ್ಥವಾಗಿ ಬಳಸಬಹುದು. ರಸ್ತೆಗಳು, ಗೋದಾಮುಗಳು, ಮಾರುಕಟ್ಟೆ ಸೌಕರ್ಯಗಳು ಅಭಿವೃದ್ಧಿಯಾದರೆ ರೈತರ ಆದಾಯವೂ ಹೆಚ್ಚುತ್ತದೆ. ವಿಕಸಿತ ಗ್ರಾಮ ಪಂಚಾಯತ್ ಪ್ಲಾನ್ ಎಂಬ ಪರಿಕಲ್ಪನೆಯ ಅಡಿಯಲ್ಲಿ ಗ್ರಾಮೀಣ ಭಾಗದ ಕೆಲಸಗಳು ನಡೆಯಲಿವೆ. ಬ್ಲಾಕ್, ಜಿಲ್ಲೆ, ರಾಜ್ಯ ಮಟ್ಟದಲ್ಲಿ ಕೇಂದ್ರೀಕೃತವಾಗಲಿದೆ. ಪಿಎಂ ಗತಿ ಶಕ್ತಿ ರಾಷ್ಟ್ರೀಯ ಯೋಜನೆಗೂ ಲಿಂಕ್ ಆಗಲಿದೆ. ಹೀಗಾಗಿ ಇದು ಹೆಚ್ಚು ಉತ್ಪಾದಕತೆಯನ್ನು ತಾನಾಗಿಯೇ ಗಳಿಸಿಕೊಳ್ಳಲಿದೆ.

ಗ್ರಾಮೀಣ ಭಾಗದ ಬಡತನದ ಪ್ರಮಾಣ 2011-12ರಲ್ಲಿ 25.7 ಪರ್ಸೆಂಟ್ ಇದ್ದರೆ 2023-24ರ ವೇಳೆಗೆ 4.86 ಪರ್ಸೆಂಟ್‌ಗೆ ಇಳಿದಿದೆ. ಆದ್ದರಿಂದ ಅಭಿವೃದ್ಧಿ ಆಧಾರಿತ ಮತ್ತು ಪರಿಸರ ಸಂರಕ್ಷಣೆಗೆ ಪೂರಕವಾಗಿ ಪ್ರೋಗ್ರಾಮ್ ಸುಧಾರಿಸಬೇಕಾದ ಅಗತ್ಯವೂ ಇದೆ. ಜಾಬ್ ಕಾರ್ಡ್‌ಗಳ ವ್ಯಾಲಿಡಿಟಿಯನ್ನು 5 ವರ್ಷಗಳಿಂದ 3 ವರ್ಷಗಳಿಗೆ ಇಳಿಸಲಾಗಿದೆ. ಇದೂ ಒಳ್ಳೆಯದೇ. ಏಕೆಂದರೆ ಮೃತಪಟ್ಟಿರುವ ಅಥವಾ ಗೈರು ಹಾಜರಾಗಿರುವ ಕಾರ್ಮಿಕರ ಜಾಬ್ ಕಾರ್ಡ್‌ಗಳನ್ನು ಬೇರೆಯವರು ದುರುಪಯೋಗ ಮಾಡಿಕೊಳ್ಳದಂತೆ ಇದು ತಡೆಯುತ್ತದೆ.

ಗ್ರಾಮೀಣ ಭಾಗದಲ್ಲಿ ಜನರಿಗೆ ಖಾತರಿಯ ಉದ್ಯೋಗ, ವೇತನದ ಜತೆಗೆ ಉತ್ಪಾದಕ ಆಸ್ತಿಗಳು ಸೃಷ್ಟಿಯಾಗುವುದು ಎಂದರೆ ಆರ್ಥಿಕ ಪ್ರಗತಿಗೂ ಕಾರಣವಾಗಲಿದೆ. ನೀರಾವರಿಗೆ ಆದ್ಯತೆ ನೀಡುವುದು ಕೂಡ ಹಲವು ಆಯಾಮಗಳಲ್ಲಿ ಲಾಭದಾಯಕ. ಇದರಿಂದ ಅಂತರ್ಜಲದ ಮಟ್ಟ ಸುಧಾರಿಸಲಿದೆ. ಸ್ಥಳೀಯವಾಗಿ ಜೀವನೋಪಾಯಕ್ಕೆ ಕೆಲಸ ಸಿಕ್ಕಿದರೆ ನಗರಗಳಿಗೆ, ಪಟ್ಟಣಗಳಿಗೆ ಹಳ್ಳಿಗರ ವಲಸೆಯೂ ಕಡಿಮೆಯಾಗುತ್ತದೆ. ಮನೆಮನೆಯಲ್ಲಿ ದುಡಿಯುವವರ ಸಂಖ್ಯೆ ಹೆಚ್ಚಿದಾಗ ಸ್ಥಳೀಯ ಆರ್ಥಿಕ ಚಟುವಟಿಕೆ ಹೆಚ್ಚುತ್ತದೆ. ಅಂದರೆ ಜನರು ಸಮೀಪದ ಮಾರುಕಟ್ಟೆಯಲ್ಲಿ ತಮಗೆ ಬೇಕಾದ ನಾನಾ ವಸ್ತುಗಳನ್ನು, ಸೇವೆಗಳನ್ನು ಖರೀದಿಸುತ್ತಾರೆ. ಕೃತಕ ಬುದ್ಧಿಮತ್ತೆ, ಕಾಮಗಾರಿಗಳ ಬಗ್ಗೆ ಜಿಪಿಎಸ್ ಮತ್ತು ಮೊಬೈಲ್ ಆಧಾರಿತ ಮಾನಿಟರಿಂಗ್ ವ್ಯವಸ್ಥೆ, 6 ತಿಂಗಳಿಗೊಮ್ಮೆ ಸೋಷಿಯಲ್ ಆಡಿಟ್ ಕಡ್ಡಾಯಗೊಳಿಸಿರುವುದು ಯೋಜನೆಯ ಪಾರದರ್ಶಕತೆಯನ್ನು ಹೆಚ್ಚಿಸಲಿದೆ.

ಈ ಹಿಂದೆ ಸಹಿ ಮತ್ತು ಹೆಬ್ಬೆಟ್ಟು ಇರುವ ಮಾನ್ಯುಯಲ್ ವೆರಿಫಿಕೇಶನ್ ಇತ್ತು. ಇದು ಅಕ್ರಮ, ಸೋರಿಕೆಗೂ ಕಾರಣವಾಗುತ್ತದೆ. ಈ ಹಿಂದೆ ಕೆಲಸಗಾರರಿಗೆ ಸಕಾಲದಲ್ಲಿ ವೇತನ ಬಟವಾಡೆ ಆಯಿತೇ ಎಂಬುದನ್ನು ಖಾತರಿಪಡಿಸಿಕೊಳ್ಳುವ ಅನುಕೂಲ ಇದ್ದಿರಲಿಲ್ಲ. ಕೇವಲ 76 ಲಕ್ಷ ಕೆಲಸಗಾರರಿಗೆ ಮಾತ್ರ ಆಧಾರ್ ಸೀಡಿಂಗ್ ಮೂಲಕ ದೃಢೀಕರಣವಾಗುತ್ತಿತ್ತು. ಇದು ಸೋರಿಕೆಗೆ ಕಾರಣವಾಗುತ್ತಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ನರೇಗಾದ ನಕಲಿ ಫಲಾನುಭವಿಗಳನ್ನು ನಿರ್ಮೂಲನೆಗೊಳಿಸಲಾಗಿದೆ. ಹೀಗಿದ್ದರೂ ಈಗ ನ್ಯಾಷನಲ್ ಇಲೆಕ್ಟ್ರಾನಿಕ್ ಫಂಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಮೂಲಕ ಕೆಲಸಗಾರರ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಜಮೆಯಾಗುತ್ತದೆ. ನಿಸ್ಸಂದೇಹವಾಗಿ ಇವತ್ತಿನ ಭಾರತ ಇಪ್ಪತ್ತು ವರ್ಷಗಳ ಹಿಂದಿನದ್ದಲ್ಲ. ಎಂಜಿನರೇಗಾ ಒಂದು ಸೇಫ್ಟಿ ವಾಲ್ವ್ ಆಗಿತ್ತು. ಖಾಸಗಿ ಉದ್ಯೋಗಗಳು ಸಿಗದಿದ್ದಾಗ ಖಾತರಿಯ ವೇತನ ಇರುವ ಕೆಲಸದ ವ್ಯವಸ್ಥೆ ಕಲ್ಪಿಸುವುದು ಉದ್ದೇಶವಾಗಿತ್ತು. 2005ರಲ್ಲಿ ಬ್ಯಾಂಕ್ ಖಾತೆಗಳು ಕಡಿಮೆ ಇದ್ದವು. ಡಿಜಿಟಲ್ ಟ್ರಾನ್ಸ್‌ಫರ್ ಕಲ್ಪನೆಯಲ್ಲಿತ್ತು. ಆದರೆ ಈಗ ಬ್ಯಾಂಕ್ ಖಾತೆ ಇಲ್ಲದ ಮನೆ ಇರಲಿಕ್ಕಿಲ್ಲ. 2029ರ ತನಕ 80 ಕೋಟಿ ಜನರಿಗೆ ಉಚಿತ ಆಹಾರ ಧಾನ್ಯ ವಿತರಿಸುವ ಪಡಿತರ ವ್ಯವಸ್ಥೆ ಇದೆ. 45 ಕೋಟಿ ಜನರಿಗೆ ನೇರ ನಗದು ವಿತರಣೆ ಅನುಕೂಲ ಇದೆ. ಈಗ ಗ್ರಾಮೀಣ ಭಾರತದಲ್ಲಿ ಕೇವಲ ಬಡತನ ನಿವಾರಣೆಯ ರಿಲೀಫ್ ಮಾತ್ರವಲ್ಲದೆ, ಉತ್ಪಾದಕತೆ, ಆಸ್ತಿ ಸೃಷ್ಟಿ ಮತ್ತು ಕೃಷಿ ಕ್ಷೇತ್ರದ ವಾಸ್ತವ ಸ್ಥಿತಿಗತಿ-ಅಗತ್ಯಗಳಿಗೆ ಹೊಂದಿಕೆಯಾಗುವ ಯೋಜನೆ ಬೇಕಿದೆ. ಆದ್ದರಿಂದ ಬದಲಾವಣೆಯ ಅಗತ್ಯವಿತ್ತು.

ಭಟ್ಟರ್ ಸ್ಕಾಚ್

- **ಚಂದ್ರು, ಉಜಿರೆ**
ಭಟ್ರೇ, 'ಐಟಮ್ ಸಾಂಗ್ ಡಾನ್ಸರ್' ಅಂತ ನೀವು ಬರೆದಿದ್ದು ಯಾವ ತಾಳಮದ್ದಳೆ ಅರ್ಥಧಾರಿ ಬಗ್ಗೆ?
– **ಆ ಅವಿವೇಕಿ ನಿಮ್ಮೂರ ಅಶೋಕ ಭಟ್ಟನ ಬಗ್ಗೆ ಎಂದು ಅನೇಕರು ಭಾವಿಸಿದ್ದರೆ ಅದಕ್ಕೆ ನಾನು ಹೊಣೆಯಲ್ಲ!**

- **ಸಂದೇಶ ವಿಶ್ವನಾಥ, ಅರಕಲಗೂಡು**
ಭಟ್ರೇ, ತಾಳಮದ್ದಳೆ ಬಹಳ ಸದ್ದು ಮಾಡುತ್ತಿದೆಯಲ್ಲ?
– **ಕೆಲವರ ಸದ್ದು ಅಡಗಿಸುತ್ತಿದೆಯಂತೆ!**

- **ಕೇಶವ ಪಿ.ಹೆಗಡೆ, ಶಿರಸಿ**
ಭಟ್ರೇ, ಅವರು ಸಂಸ್ಕೃತ ಓದಿಕೊಂಡಿದ್ದಾರೆ, ಆದರೆ ಪುರಾಣದ ಸೂಕ್ಷ್ಮ ವಿವರಗಳ ಬಗ್ಗೆ ಅಷ್ಟಕ್ಕಷ್ಟೇ ಅಂತಾರಲ್ಲ?
– **ನೀವು ಕೆರೆಕ್ಕೈ ಉಮಾಕಾಂತ ಭಟ್ಟರನ್ನುದ್ದೇಶಿಸಿ ಈ ಪ್ರಶ್ನೆ ಕೇಳಿಲ್ಲ ತಾನೇ ?**

- **ಜೆ.ಸಂತೋಷ, (ಇಮೇಲ್ ಮೂಲಕ)**
ಭಟ್ರೇ, ಕೆಲವು ಪದಗಳು ಏಕಾಏಕಿ ಅರ್ಥಗಳನ್ನು ಬದಲಿಸಿಕೊಳ್ಳುತ್ತವಲ್ಲ?
– **ಈಗ 'ಐಟಮ್ ಸಾಂಗ್ ಡಾನ್ಸರ್' ಪದದ ಸರದಿ!**

- **ಚಂದ್ರಶೇಖರ ಭರಣ್ಯ, ಸುಳ್ಯ**
ಭಟ್ರೇ, ಯಕ್ಷಗಾನ ಅರ್ಥಧಾರಿಗಳ ಪಟ್ಟಿಯಲ್ಲಿ ಕೆಲವು ಧೀಮಂತರ ಹೆಸರು ಬಿಟ್ಟುಹೋಗಿದೆಯಲ್ಲ?
– **ಅದೇನು ಮತದಾರರ ಪಟ್ಟಿ ಅಂತ ಭಾವಿಸಿದ್ದೀಯಾ?!**

- **ವಾಸುದೇವ ಅಡಿಗ, ಬ್ರಹ್ಮಾವರ**
ಭಟ್ರೇ, ಏನೇ ಅನ್ನಿ, ನೀವು ತಾಳಮದ್ದಳೆ ಅರ್ಥಧಾರಿಗಳನ್ನು 'ಐಟಮ್ ಸಾಂಗ್ ಡಾನ್ಸರ್'ಗಳಿಗೆ ಹೋಲಿಸಬಾರದಿತ್ತಲ್ಲವೇ?
– **ತಮ್ಮನ್ನು ಅರ್ಥಧಾರಿಗಳಿಗೆ ಹೋಲಿಸಿ ಮಾನ ಕಳೆದಿರಿ ಎಂದು 'ಐಟಮ್ ಸಾಂಗ್ ಡಾನ್ಸರ್'ಗಳು ಪ್ರತಿಭಟಿಸುತ್ತಿದ್ದಾರಂತೆ...ಹಾಂ!**

- **ಶಂಕರ ಹೆಗಡೆ, ಸಿದ್ದಾಪುರ**
ಭಟ್ರೇ, ತಾಳಮದ್ದಳೆ ಅರ್ಥಧಾರಿಗಳ ಬಗ್ಗೆ ಒಂದು ಇಡೀ ಪುಟ ಲೇಖನ ಬೇಕಿತ್ತಾ?
– **ಒಂದು ಪಾತ್ರದ ಬಗ್ಗೆ ಮೂರು ತಾಸು ಕೊರೆಯುವುದಕ್ಕಿಂತ ವಾಸಿ!**

- **ವಾಸಂತಿ ನಾಗರಾಜ, ಸಾಗರ**
ತಾಳಮದ್ದಳೆಗಿಂತ 'ಭಟ್ಟರ ಸ್ಕಾಚ್' ಖುಷಿ ಕೊಡ್ತಾ ಇದೆಯಲ್ಲ?
– **ಇದು ಪ್ರಶ್ನೆಯಲ್ಲ, ಉತ್ತರ!**

- **ವಿಷ್ಣು ಕೆ.ಜೋಶಿ, ಶಿರಸಿ**
ಭಟ್ರೇ, ತಾಳಮದ್ದಳೆಯಲ್ಲಿ 'ಸಮಯ ಪ್ರಜ್ಞೆ' ಅಂದರೆ ಏನು?
– **ಕೆಲಸಕ್ಕೆ ಬಾರದ ಪಾಂಡಿತ್ಯ ಪ್ರದರ್ಶನ ಮಾಡೋದು!**

ಸೋಲೋ ಟ್ರಿಪ್‌ನಲ್ಲಿ ಕಂಡ ಮಳೆಕೋಂಗಿಲ!

ಶಶಾಂಕಣ

ಶಶಿಧರ ಹಾಲಾಡಿ
vveditoped@gmail.com

ಅದೇಕೋ ಗೊತ್ತಿಲ್ಲ, ಏಕಾಂಗಿಯಾಗಿ ಚಾರಣ, ಪ್ರವಾಸ ಮಾಡುವುದೆಂದರೆ ನನಗೆ ಎಲ್ಲಿಲ್ಲದ ಹುಚ್ಚು! ಗೊತ್ತಿಲ್ಲದ ದಾರಿಗಳಲ್ಲಿ ಏಕಾಂಗಿಯಾಗಿ ಸಾಗುತ್ತಾ, ಅನಿರೀಕ್ಷಿತವಾಗಿ ಎದುರಾಗುವ ಸನ್ನಿವೇಶಗಳನ್ನು, ದೃಶ್ಯಗಳನ್ನು ನೋಡುವ ಆ ಹಪಹಪಿಯನ್ನು ಹೇಗೆಂದು ಅರ್ಥೈಸಬೇಕೋ ಎಂದು ಇಂದಿಗೂ ಸ್ಪಷ್ಟವಿಲ್ಲ! ಏಕೆಂದರೆ, ಒಂದು ಮುಂಜಾನೆ ಬಾಡಿಗೆ ಸೈಕಲ್ ಪಡೆದು, 'ಇವತ್ತು ಸೋಲೋ ಟ್ರಿಪ್ ಹೋಗುವುದೇ ಸೈ' ಎಂದಂದುಕೊಂಡು, 130 ಕಿ.ಮೀ. ದೂರದ ಸವಳಂಗದಲ್ಲಿದ್ದ ನನ್ನ ತಂಗಿಯ ಮನೆಯತ್ತ ಸೈಕಲ್ ಪೆಡಲ್ ತುಳಿಯಲಾರಂಭಿಸಿದ ಆ ಹುಚ್ಚು ಉತ್ಸಾಹವನ್ನು ಹೇಗೆಂದು ಸಮರ್ಥಿಸಿಕೊಳ್ಳಲಿ! ಆದರೆ, 15 ಕಿ.ಮೀ. ಸಾಗುವಷ್ಟರಲ್ಲಿ, ಹೆದ್ದಾರಿ ಎದುರಾಗಿ, ಆ ವಾಹನಗಳ ಮಧ್ಯೆ ಸುಮಾರು 100 ಕಿ.ಮೀ.ಗೂ ಅಧಿಕ ದೂರ ಸೈಕಲ್ ತುಳಿಯುವ ಶ್ರಮಕ್ಕೆ ಬೆದರಿ, ಅದೇ ಸೈಕಲ್‌ನಲ್ಲಿ ವಾಪಸಾಗಿ, ಬಾಡಿಗೆ ಪಾವತಿಸಿ ಮನೆಗೆ ಬಂದು ವಿರಮಿಸಿದ್ದು ಬೇರೆ ವಿಚಾರ! ಈ ವಿಫಲ ಸಾಹಸಕ್ಕೆ ನಾನು ಕೈ ಹಾಕಿದ್ದು ಕೆಲವು ದಶಕಗಳ ಹಿಂದೆ.

ಇನ್ನೊಂದು ಭಾನುವಾರ ಮುಂಜಾನೆ ಇದೇ ರೀತಿ ಬಾಡಿಗೆ ಸೈಕಲ್ ಪಡೆದು, ಟಾರು ರಸ್ತೆಯಲ್ಲಿ ನಾಲ್ಕಾರು ಕಿ.ಮೀ. ತುಳಿದು, ಬಲಕ್ಕೆ ಹೊರಳಿಕೊಂಡು, ಬಯಲು ಸೀಮೆಯ ಪುಟ್ಟ ಹಳ್ಳಿ ಥೆರೆಸಾಪುರ ಎಂಬಲ್ಲಿಗೆ ಹೊರಟೆ. ವಿಶಾಲ ಬಯಸೀಮೆಯ ಏಕಾಂಗಿ ಸ್ಥಳವೊಂದರಲ್ಲಿ ಥೆರೆಸಾಪುರ ಮತ್ತು ಅಲ್ಲಿನ ಚರ್ಚ್ ನಿಂತಿತ್ತು. ಅಲ್ಲಿಂದ ಮುಂದೆ ಸಿಗುವ ಮಣ್ಣುರಸ್ತೆಯಲ್ಲಿ ಒಂದೆರಡು ಕಿ.ಮೀ. ಸೈಕಲ್ ತುಳಿದೆ. ಆ ದಿನದ ಸೈಕಲ್ ಸವಾರಿಗೆ ಒಂದು ಸ್ಥೂಲ ಗುರಿಯಿತ್ತು: ಅದೇನೆಂದರೆ, ಆ ದಿಕ್ಕಿನಲ್ಲಿ ಸಾಗಿದರೆ, ಮುತ್ತಾನೆಗೆರೆ ಮತ್ತು ಆನೆಗೆರೆ ಎಂಬ ಎರಡು ದೊಡ್ಡ ಕೆರೆಗಳಿವೆ ಎಂದು ಸ್ಥಳೀಯ ಹುಡುಗರು ಹೇಳಿದ್ದರು. ಅವರಿಗೆಲ್ಲಾ ಆ ರೀತಿಯ ಕೆರೆಗಳ ನೋಟ ತೀರಾ ಸಾಮಾನ್ಯ. ಆದರೆ, ದೂರದ ಕರಾವಳಿಯಿಂದ ಬಂದಿದ್ದ ನನಗೆ, ಬಯಲುಸೀಮೆಯಲ್ಲಿ ಅಲ್ಲಲ್ಲಿ ಹರಡಿದ್ದ ಕೆರೆಗಳೆಂದರೆ ಒಂದು ರೀತಿಯ ಬೆರಗು. ಆದ್ದರಿಂದ, ಕೆರೆಗಳನ್ನು ನೋಡುವ, ಅದರ ಮೇಲಿನಿಂದ ಬೀಸಿ ಬರುವ ತಂಗಾಳಿಗೆ ಮೈಒಡ್ಡುವ ಆಸೆಯಿಂದ, ಸೈಕಲ್ ತುಳಿಯುತ್ತಾ, ಮುತ್ತಾನೆಗೆರೆ ಕೆರೆಯ ಬಳಿ ಸಾರಿದೆ.

ವಿಶಾಲವಾಗಿ ಹರಡಿದ್ದ ಕೆರೆ ನೀರನ್ನು, ಆ ನೀರು ನೀಲಾಗಸದ ಬಣ್ಣವನ್ನು ಪ್ರತಿಫಲಿಸುವುದನ್ನು ನೋಡಲು ಬಂದಿದ್ದ ನನಗೆ, ಒಂದು ಬೋನಸ್ ದೃಶ್ಯ ಎದುರಾಯ್ತು! ಕೆರೆಯ ಹತ್ತಿರ ಸಾಗಿದಂತೆ, ಕೆರೆಯ ಹಿನ್ನೀರಿನಲ್ಲಿ ನೂರಾರು ಹಕ್ಕಿಗಳು ಕಂಡವು. ಅವು 'ರಾಜಹಂಸ'ಗಳು ಅಥವಾ ಲೆಸ್ಸರ್ ಫ್ಲಾಮಿಂಗೋಗಳು. ಚಳಿಗಾಲದ ವಲಸೆಯ ಭಾಗವಾಗಿ ಆ ಕೆರೆಗೆ ಅವು ಬಂದಿದ್ದವು. ನಮ್ಮ ದೇಶದಲ್ಲಿ ಈ ಫ್ಲಾಮಿಂಗೋಗಳು ಚಳಿಗಾಲದಲ್ಲಿ ಬಹು ದೂರದ ತನಕ ವಲಸೆಹೋಗುವುದುಂಟು. ಪಕ್ಷಿವೀಕ್ಷಣೆಯ ವಿಪರೀತ ಹವ್ಯಾಸವನ್ನು ಕಾಲೇಜು ದಿನಗಳಲ್ಲೇ ಅಂಟಿಸಿಕೊಂಡಿದ್ದ ನನಗೆ, ಆ ನಡುಮಧ್ಯಾಹ್ನ ನೂರಾರು ಫ್ಲಾಮಿಂಗೋಗಳನ್ನು ಕಂಡಾಗ ಆದ ಸಂತಸ ಅಷ್ಟಿಷ್ಟಲ್ಲ. ನನ್ನ ಪಕ್ಷಿವೀಕ್ಷಣೆಯ ದಿನಗಳಲ್ಲಿ, ಅದೇ ಮೊದಲ ಬಾರಿ ಫ್ಲಾಮಿಂಗೋಗಳನ್ನು ನೋಡಿದ್ದು. ಉದ್ದ ಕಾಲಿನ ಆ ಚಂದದ ಹಕ್ಕಿಗಳು, ನೀರಿನಲ್ಲಿ ನಡೆಯುತ್ತಾ, ತಮ್ಮ ಕೊಕ್ಕನ್ನು ಕೆಸರಿನಲ್ಲಿ ಮುಳುಗಿಸಿ, ಆಹಾರವನ್ನು ಹುಡುಕುವ ಶೈಲಿಯೇ ಮೋಹಕ. ಕೆರೆಯ ಹಿನ್ನೀರಿನ ಆ ಭಾಗವು ಮುತ್ತಾನೆಗೆರೆ ಹಳ್ಳಿಯಿಂದ ಸಾಕಷ್ಟು ದೂರವಿದ್ದುದರಿಂದ ನಿರ್ಜನವೂ ಆಗಿತ್ತು. ಹಕ್ಕಿಗಳ ದಿನಚರಿಗೆ ಸೂಕ್ತವೂ ಎನಿಸಿತ್ತು.

ಸುಮಾರು ಅರ್ಧಗಂಟೆಯಷ್ಟು ಕಾಲ ಅವುಗಳನ್ನು ನೋಡಿ, ಸೈಕಲನ್ನು ವಾಪಸು ತಿರುಗಿಸಿದೆ. ಆ ದಿನ ನನ್ನ ಪುಟ್ಟ ಕ್ಯಾಮೆರಾವನ್ನು ಕೊಂಡೊಯ್ದಿರಲಿಲ್ಲವಾದ್ದರಿಂದ, ಅವುಗಳ ಫೋಟೋ ತೆಗೆಯಲು ಸಾಧ್ಯವಾಗಲಿಲ್ಲ. ಹಳ್ಳಿಗೆ ವಾಪಸಾಗಿ, ಬಾಡಿಗೆ ಸೈಕಲನ್ನು ಬಾಡಿಗೆಯವರಿಗೆ ಹಿಂತಿರುಗಿಸುವುದರೊಂದಿಗೆ, ಆ ದಿನದ ಸೋಲೋಟ್ರಿಪ್ ಮುಗಿಯಿತು.

ಇದೇ ರೀತಿ, ನಮ್ಮ ಹಳ್ಳಿಯಲ್ಲಿ ಹಕ್ಕಿಗಳನ್ನು ಹುಡುಕಿಕೊಂಡು, ಅದೆಷ್ಟೋ ಬಾರಿ ಏಕಾಂಗಿಯಾಗಿ ಹಾಡಿ, ಹಕ್ಕಲು, ಗುಡ್ಡಗಳನ್ನು ಸುತ್ತಿದ್ದ ನೆನಪುಗಳು ನಿಜಕ್ಕೂ ಆಪ್ಯಾಯಮಾನ. ಕೆಲವು ಬಾರಿ ವಿಶೇಷ ಹಕ್ಕಿಗಳು ಕಾಣಸಿಗುತ್ತಿದ್ದವು. ಅಂಥ ಒಂದು ಏಕಾಂಗಿ ತಿರುಗಾಟದಲ್ಲಿ, ನಮ್ಮ ಹಳ್ಳಿ ಮನೆಯಿಂದ 2 ಕಿ.ಮೀ. ದೂರದಲ್ಲಿದ್ದ ಬಳ್ಳಿಹರವೆಂಬ ದೊಡ್ಡ ಬೆಟ್ಟದಲ್ಲಿ ಕಾಣಸಿಕ್ಕ ಹಾರ್ನ್‌ಬಿಲ್‌ಗಳ ನೋಟ, ಅಂಥ ಒಂದು ವಿಶೇಷ ಸಂದರ್ಭ. ನಮ್ಮ ಮನೆಯ ಪಶ್ಚಿಮ, ದಕ್ಷಿಣ ಭಾಗದಲ್ಲಿ ನಾನಾ ಹೆಸರಿನ ಗುಡ್ಡೆ, ಹಾಡಿಗಳಿವೆ. ಪಶ್ಚಿಮ ದಿಕ್ಕಿನಲ್ಲಿ, ದಟ್ಟ ಮರಗಳಿಂದ ತುಂಬಿದ ಸೊಪ್ಪಿನ ಅಣೆಯಿದೆ. ದಕ್ಷಿಣ ದಿಕ್ಕಿನಲ್ಲಿ, ಮನೆ ಹಿಂದಿನ ಸೇಡಿಮಣ್ಣಿನ ದರೆಯನ್ನು ಏರಿಹೋದರೆ, ಮೊದಲಿಗೆ ಹಕ್ಕಲು, ನಂತರ ನಾಲ್ಕೆಂಟು ಎತ್ತರವಾದ ಮರಗಳಿದ್ದ ಸರಕಾರಿ ಕಾಡು. ಅದರಾಚೆ ಗಾಣದಡಿಯವರ ಹಕ್ಕಲು. ಆ ಹಕ್ಕಲಿನಲ್ಲಿ ದಟ್ಟವಾದ ಮರಗಿಡಗಳಿದ್ದು, ಅಲ್ಲಿನ ನೆಲದ ಮೇಲೆ ಗುಡ್ಡೆ ವಾಂಟರ್ಕಗಳನ್ನು (ಆಮೆ) ಹಿಂದೊಮ್ಮೆ ಕಂಡಿದ್ದೆ (ಆ ಹಕ್ಕಲನ್ನು ಈಗ ಬಾಳೆತೋಟ ಮಾಡಿದ್ದಾರಂತೆ!). ಗಾಣದಡಿಯ ಹಕ್ಕಲು ದಾಟಿದರೆ, ಬೋಳುಗುಡ್ಡ.

ಹೆಸರಿಗೆ ತಕ್ಕಂತೆ ಬೋಳು ಬೋಳಾಗಿದ್ದ ಬೋಳುಗುಡ್ಡವು, ದಟ್ಟ ಹಸಿರಿನ ಆ ಪರಿಸರದಲ್ಲಿ ತೀರಾ ಬೋಳಾಗಿ ಕಾಣಿಸುತ್ತಿತ್ತು. ಅದು ಬೋಳಾಗಿದ್ದುದರ ಹಿಂದೆ ಒಂದು ಸಣ್ಣ ದುರಂತ ಕಥೆಯಿದೆ. ಸುತ್ತಲಿನ ಎಲ್ಲಾ ಬೆಟ್ಟಗಳಲ್ಲಿ ಮರಗಿಡಗಳಿದ್ದರೆ, ಬೋಳುಗುಡ್ಡ ಮಾತ್ರ, ಜನರ ನಿರಂತರ ಚಟುವಟಿಕೆಯಿಂದಾಗಿ ಬೋಳಾಗಿಬಿಟ್ಟಿತ್ತು. ಹಸಿರು ತುಂಬಿದ ಪರಿಸರದ ನಡುವೆ ಪೂರ್ತಿ ಬರಡಾಗಿಬಿಟ್ಟಿರುವುದೇ ಆ ಗುಡ್ಡದ ದುರಂತ! ಅದಕ್ಕೂ ಒಂದು ಕಾರಣವಿದೆ. 'ಬೋಳುಗುಡ್ಡದ ವಿಶಾಲ ಜಾಗದಲ್ಲಿ ಯಾರು ಬೇಕಾದರೂ ಸೊಪ್ಪು ಸಂಗ್ರಹಿಸಬಹುದು, ಗಿಡ ಕಡಿಯಬಹುದು, ಕೊನೆಗೆ ಗಿಡದ ಬೇರನ್ನು ಸಹ ಕೀಳಬಹುದು' ಎಂಬ ವಿನಾಯಿತಿ ಇತ್ತು. ಸುತ್ತಲಿನ ಪರಿಸರದಲ್ಲಿ ಅಂಥ ವಿನಾಯಿತಿ ಇರಲಿಲ್ಲ. ಅದರ ಪಕ್ಕದಲ್ಲಿ, ತುಸು ದೂರದಲ್ಲಿದ್ದ ಸೊಪ್ಪಿನ ಅಣೆಯಲ್ಲಿ ಮರ ಕಡಿಯುವಂತಿರಲಿಲ್ಲ. ಸೊಪ್ಪನ್ನು ಮಾತ್ರ ಸಂಗ್ರಹಿಸಬಹುದಾಗಿದ್ದ ಕಾಡು ಅದು. ಆದ್ದರಿಂದಲೇ ಏನೋ, ಸೊಪ್ಪಿನ ಅಣೆ ಪ್ರದೇಶವು ಸರಕಾರಿ ಒಡೆತನದ್ದಾಗಿದ್ದರೂ, ಅಲ್ಲಿ ದಟ್ಟವಾದ ಮರಗಿಡಗಳು ಉಳಿದುಕೊಂಡಿದ್ದವು. ಈಚಿನ ವರ್ಷಗಳಲ್ಲಿ ಅಲ್ಲಿನ ಮರಗಿಡಗಳ ರಕ್ಷಣೆಯು ಕುಂದಿದ್ದರೂ, ಈಗಲೂ ಸಾಕಷ್ಟು ಸಂಖ್ಯೆಯ ದೊಡ್ಡ ದೊಡ್ಡ ಬೋಗಿ ಮರಗಳು ಸೊಪ್ಪಿನಅಣೆಯಲ್ಲಿದ್ದು, ಹಸಿರನ್ನು ಚೆಲ್ಲಿವೆ. ಆದರೆ, ಪಕ್ಕದ ಬೋಳುಗುಡ್ಡದಲ್ಲಿ, ಸೊಪ್ಪು ಕತ್ತರಿಸುವ, ಗಿಡ, ಮರ ಕಡಿಯುವ ಅನುಮತಿ ಇದ್ದುದರಿಂದ, ರೈತರು ಅಲ್ಲಿನ ಮರ, ಗಿಡ ಬಳ್ಳಿಗಳನ್ನೆಲ್ಲಾ ಪೂರ್ತಿಯಾಗಿ ಕತ್ತರಿಸಿ ಹಾಕಿದ್ದರು, ತಮ್ಮ ಕೃಷಿಗೆ ಬಳಸಿಕೊಂಡಿದ್ದರು. ಹಲವು ದಶಕಗಳ ಕಾಲ ನಡೆದ ನಿರಂತರ ಪರಿಸರ ನಾಶದಿಂದಾಗಿ, ಆ ಗುಡ್ಡವು ಬೋಳಾಗಿ ಬಿಟ್ಟಿತ್ತು! ತಾವೇ ಬೋಳು ಮಾಡಿದ ಆ ಗುಡ್ಡವನ್ನು, ಸ್ಥಳೀಯರು 'ಬೋಳುಗುಡ್ಡ' ಎಂದೇ ಕರೆಯತೊಡಗಿದರು.

ನಾನು ಏಕಾಂಗಿಯಾಗಿ ನಡೆದು ಸಾಗಿದ ಆ ದಿನ ಬೋಳುಗುಡ್ಡವು ನಿರ್ಜನ ಪ್ರದೇಶವಾಗಿತ್ತು (ನಂತರದ ವರ್ಷಗಳಲ್ಲಿ, ಭೂರಹಿತ ಕೃಷಿ ಕಾಯಕರು ಅಲ್ಲಿ ಮನೆ ಕಟ್ಟಿಕೊಂಡು ನೆಲೆಸಿದರು). ಬೋಳುಗುಡ್ಡದ ಸನಿಹದಲ್ಲಿದ್ದ ಒಂದೆರಡು ಮರಗಳಲ್ಲಿ ಬ್ಲೂ ಜೇ ಪಕ್ಷಿಗಳು (ಉರುಳಿಗ, ನೀಲಕಂಠ) ಆಟವಾಡುತ್ತಿದ್ದವು. ನೀಲಕಂಠ ಅಥವಾ ಬ್ಲೂಜೇ ಪಕ್ಷಿಗಳ ಸಂಖ್ಯೆ ಸಾಕಷ್ಟು ಕಡಿಮೆಯಾಗಿದೆ ಎಂಬ ಕಳವಳವನ್ನು ವ್ಯಕ್ತಪಡಿಸುವ ಪತ್ರಿಕಾ ವರದಿಗಳು ಈಗ ಒಂದೆರಡು ತಿಂಗಳುಗಳಿಂದ ಹರಿದಾಡುತ್ತಿವೆ.

ಬೋಳುಗುಡ್ಡವನ್ನು ದಾಟಿ, ಒಂದು ಕಣಿವೆಯನ್ನು ಇಳಿದು, ಮತ್ತೊಂದಿಷ್ಟು ದೂರ ನಡೆದರೆ, ಬಳ್ಳಿಹರ ಬೆಟ್ಟ ಸಿಗುತ್ತದೆ. ನಮ್ಮ ಹಳ್ಳಿಯ ಮಾನದಂಡದಲ್ಲಿ ಬಳ್ಳಿಹರವು ಬಹುದೊಡ್ಡ ಬೆಟ್ಟ ಮತ್ತು ಅಲ್ಲಿಂದಾಚೆ ದಟ್ಟವಾದ ಕಾಡಿದ್ದು, ಅದರ ಮೇಲೆಯೇ ನಡೆದು ಪೂರ್ವ ದಿಕ್ಕಿಗೆ ಸಾಗಿದರೆ, ಹರನಗುಡ್ಡವನ್ನು ತಲುಪಬಹುದು. ಈ ಎರಡೂ ಬೆಟ್ಟಗಳ ಹೆಸರಿನಲ್ಲಿ ಕಾಣಿಸುವ 'ಹರ' ಎಂದರೆ, ವಿಶಾಲವಾದ ಬೆಟ್ಟ ಎಂಬರ್ಥ.

ನಮ್ಮ ಹಳ್ಳಿ ಮನೆಯಿಂದ ಸಾಕಷ್ಟು ದೂರವಿರುವ, ಒಂದೆರಡು ಗುಡ್ಡಗಳನ್ನು ಹತ್ತಿ ಇಳಿದು ಸಾಗಬೇಕಾದ ಬಳ್ಳಿಹರ ನೋಡಲು ಹೊರಟಾಗ, ನಮ್ಮ ಗ್ರಾಮೀಣ ಕೌಟುಂಬಿಕ ಸನ್ನಿವೇಶದಲ್ಲಿ ತುಸು ಎಚ್ಚರಿಕೆ ವಹಿಸಬೇಕಿತ್ತು. ಈ ರೀತಿ ಗುಡ್ಡಗಳಲ್ಲಿ ನಾನು ಒಬ್ಬನೇ ಓಡಾಡುವುದನ್ನು ನಮ್ಮ ಅಮ್ಮಮ್ಮ ಗಮನಿಸಿದ್ದರೂ, ಒಂದೆರಡು ಬಾರಿ 'ಏಕೆ, ಏನು?' ಎಂದು ತಕರಾರು ಮಾಡಿದ್ದರೂ, ಕಾಲೇಜು ಪರೀಕ್ಷೆಯ ಸಮಯದಲ್ಲಾದರೆ ನನಗೊಂದು ವಿನಾಯತಿ ನೀಡುತ್ತಿದ್ದರು. ಕಾಡು ಮೇಡುಗಳಲ್ಲಿ ಸುತ್ತಾಡುತ್ತಾ, ತಮ್ಮ ಮನೆಯ ಹುಡುಗ ಪೋಲಿ ಅಲೆಯಬಾರದು ಎಂಬುದೇ ಅವರ ಕಾಳಜಿ. ಆದ್ದರಿಂದ, ಬೆಟ್ಟಗುಡ್ಡಗಳಲ್ಲಿ ಅಲೆದಾಡಲು ಹೋಗುವಾಗ, ಕೈಯಲ್ಲಿ ಒಂದು ಪುಸ್ತಕವನ್ನು ಹಿಡಿದಿರುತ್ತಿದ್ದೆ. ಕೈಲೊಂದು ದಪ್ಪನೆಯ ಇಂಗ್ಲಿಷ್ ಪುಸ್ತಕ ಹಿಡಿದು, ಮನೆ ಹಿಂದಿನ ದರೆಯನ್ನು ನಾನು ಏರಿ ಹೊರಟೆನೆಂದರೆ, ಪರೀಕ್ಷೆಗಾಗಿ ಓದಲು ಹೊರಟಿದ್ದಾನೆ ಎಂದು ಅವರು ತಿಳಿಯುತ್ತಿದ್ದರು. ನನ್ನ ಕೈಲಿರುವ ಇಂಗ್ಲಿಷ್ ಪುಸ್ತಕವು ಪಠ್ಯವೋ, ಪಠ್ಯೇತರವೋ ಎಂದು ಗುರುತಿಸಲು, ಅವರಿಗೆ ಇಂಗ್ಲಿಷ್ ಭಾಷೆಯ ಪರಿಚಯವಿರಲಿಲ್ಲ! ಅವರ ಅಮಾಯಕತನವನ್ನು ಹೀಗೆ ಬಳಸಿಕೊಂಡು, ಆಗಾಗ ಕಾಡು–ಮೇಡು ಸುತ್ತುತ್ತಾ, ಪಕ್ಷಿವೀಕ್ಷಣೆಯನ್ನೋ, ಮರಗಳ ಸಾಂಗತ್ಯವನ್ನೋ ಅರಸುತ್ತಿದ್ದ ನನಗೆ, ದೂರದ ಬಳ್ಳಿಹರಕ್ಕೆ ಹೋಗಲು ಅದೇ ಮೊದಲ ಬಾರಿ ಅವಕಾಶ ಸಿಕ್ಕಿತ್ತು.

ಹಿಂದೆ ಹೇಳಿದ ಹಕ್ಕಲು, ಬೋಳುಗುಡ್ಡ ಗಾಣದಡಿಯ ಹಕ್ಕಲು, ಎಲ್ಲವನ್ನೂ ದಾಟಿ ಬಳ್ಳಿಹರ ತಲುಪಲು ಒಂದು ಗಂಟೆಯೇ ಬೇಕಾಯ್ತು. ಸ್ವಲ್ಪ ಕಡಿದಾದ, ಗಿಡಗಂಟೆ ಬೆಳೆದಿದ್ದ ಕೊನೆಯ ಏರನ್ನು ಏರಿದ ನಂತರ, ವಿಶಾಲವಾದ ಮಟ್ಟಸ ಜಾಗ. ಅಲ್ಲೆಲ್ಲಾ ಸಾಕಷ್ಟು ಗಿಡಮರಗಳು ಬೆಳೆದಿದ್ದವು. ತುಸು ಮುಂದೆ ಸಾಗಿದರೆ ದಟ್ಟವಾದ ಹಾಡಿಯೂ ಇತ್ತು.

ಒಮ್ಮೆಗೇ ಆಗಸದಲ್ಲಿ ಬರಬರ ಸದ್ದು! ಮರಗಳ ದಟ್ಟವಾದ ಎಲೆಗಳ ಹಿಂದೆ 'ಕೇಂ ಕೇಂ' ಎಂಬ ಕರ್ಕಶ ಕೂಟು! ಕಾಡಿನ ಆ ನಿಶ್ಶಬ್ದ ವಾತಾವರಣದಲ್ಲಿ ತುಸು ಬೆಚ್ಚಿ ಬೀಳಿಸುವಂಥ ಸನ್ನಿವೇಶ! ಆದರೆ ಭಯಪಡುವಂಥದ್ದೇನಿಲ್ಲ! ದೊಡ್ಡ ಗಾತ್ರದ ನಾಲ್ಕಾರು ಪೈಡ್ ಹಾರ್ನ್‌ಬಿಲ್ ಹಕ್ಕಿಗಳು, ಕೂಗುತ್ತಾ, ಹಾರುವಾಗ ಸದ್ದು ಮಾಡುತ್ತಾ ಒಂದು ಮರದಿಂದ ಇನ್ನೊಂದು ಮರಕ್ಕೆ ಕುಪ್ಪಳಿಸಿ ಹಾರುತ್ತಿದ್ದವು, ಗದ್ದಲ ಮಾಡುತ್ತಿದ್ದವು! ಅವು ಮಲಬಾರ್ ಪೈಡ್ ಹಾರ್ನ್‌ಬಿಲ್ ಅನಿಸುತ್ತೆ– ಕಪ್ಪು ಬಿಳಿಬಣ್ಣ, ದೊಡ್ಡ ಗಾತ್ರ, ಉದ್ದನೆಯ ಕೊಕ್ಕು ದೊಡ್ಡ ಕೊಂಬಿನ ಗಾತ್ರ! ಅಷ್ಟು ದೊಡ್ಡ ಕೊಕ್ಕನ್ನು ಹೊತ್ತು ಅವು ಹಾರುವುದಾದರೂ ಹೇಗೆ ಎಂಬ ವಿಸ್ಮಯ ಮೂಡಿಸುವಂಥ ಹಕ್ಕಿಗಳು! ಆ ಪ್ರಭೇದದ ಬಾನಾಡಿಗಳ ವಿಶೇಷವೆಂದರೆ, ಮರದ ಪೊಟರೆಯಲ್ಲಿ ವಾರಗಟ್ಟಲೆ ಬಂದಿಯಾಗಿ ತಾಯಿ ಹಕ್ಕಿಯು ಮರಿಯನ್ನು ಪೋಷಿಸುವುದು, ಅಷ್ಟು ದಿನ ಪೊಟರೆಯಲ್ಲಿ ಕುಳಿತ ತಾಯಿ, ಮರಿಗೆ ಹಣ್ಣು ಮೊದಲಾದ ಆಹಾರ ತಂದುಕೊಡುವ ತಂದೆ ಹಕ್ಕಿಯ ಶ್ರಮ ಇವೆಲ್ಲಾ ಪಕ್ಷಿಲೋಕದ ವಿಸ್ಮಯಗಳಲ್ಲೊಂದಾಗಿ ದಾಖಲಾಗಿವೆ. ಆದರೆ, ಪೊಟರೆಯಿರುವ ಹಳೆಯ ಮರಗಳ ಸಂಖ್ಯೆ ಈಚಿನ ದಶಕಗಳಲ್ಲಿ ಕಡಿಮೆಯಾಗಿರುವುದರಿಂದ, ಅವು ಗೂಡು ಕಟ್ಟುವ ಅವಕಾಶಕ್ಕೇ ಕುಂದು ಬಂದಿದ್ದು, ನಿಧಾನವಾಗಿ ಈ ವಿಶಿಷ್ಟ ದೊಡ್ಡಗಾತ್ರದ ಹಕ್ಕಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಒಂದು ದುರಂತ. ಕಳೆದ ಕೆಲವು ದಶಕಗಳಿಂದ ವಿವೇಚನಾರಹಿತವಾಗಿ ಮಾನವನು ಕಾಡನ್ನು ನಾಶ ಮಾಡಿದ್ದರ ಫಲವನ್ನು, ಹಾರ್ನ್‌ಬಿಲ್‌ನಂಥ ಅಮಾಯಕ ಹಕ್ಕಿಗಳೂ ಉಣ್ಣಬೇಕಾಗಿರುವುದು ಈ ಭೂಮಿಯ ಇನ್ನೊಂದು ದುರಂತ. ಕಪ್ಪು–ಬಿಳಿ ಬಣ್ಣದ, ದೊಡ್ಡ ಗಾತ್ರದ, ದೊಡ್ಡ ಕೊಂಬಿನ ಆ ಹಕ್ಕಿಗಳನ್ನು ನಮ್ಮ ಹಳ್ಳಿಯವರು 'ಮಳೆ ಕೋಂಗಿಲ' ಎಂದು ಹೆಸರಿಸಿದ್ದರು!

ಬಳ್ಳಿಹರದ ನನ್ನ ಏಕಾಂಗಿ ಪಯಣವನ್ನು ಮುಗಿಸಿ ಮನೆಗೆ ಬಂದಾಗ, ಅಮ್ಮಮ್ಮ ಅಧಿಕಾರವಾಣಿಯಿಂದ ಕೇಳಿದರು

'ಎಲ್ಲಿಗೆ ಹೋಗಿತ್ತು ಸವಾರಿ?'

'ಓದೋದಿಕ್ಕೆ ಹೋಗಿದ್ದೆ'

'ಹಕ್ಕಲಿನಲ್ಲಿ ನೀನು ದಿನಾ ಕುಳಿತುಕೊಳ್ಳುವ ಮರದ ಹತ್ತಿರ ನಾನೂ ಬಂದಿದ್ದೆ; ಗ್ವಾಯ್ ಬೀಜ ಕೊಯ್ಯಲು. ಆದರೆ ನೀನು ಮರದ ಮೇಲೆ ಕುಳಿತದ್ದು ಕಾಣಲಿಲ್ಲವಲ್ಲ? ಬೇರೆಲ್ಲಿಗೆ ಹೋಗಿದ್ದೆ?'

'ಹಾಂ ಹಾಗೇ ಸ್ವಲ್ಪ ಮುಂದೆ ಹೋಗಿದ್ದೆ. ಬಳ್ಳಿಹರದ ತನಕ ಹೋಗಿದ್ದೆ. ಮಳೆಕೋಂಗಿಲ ಹಕ್ಕಿಗಳು ಅಲ್ಲಿದ್ದವು; ಆರೇಳು ಒಟ್ಟಿಗೇ ಹಾರ್ತಾ ಇದ್ದವು' ಎಂದೆ. ಅವರ ಮುಖದಲ್ಲಿ ಅಚ್ಚರಿ, ಸಂತಸ ಎರಡೂ ಮೂಡಿದವು!

'ಮಳೆ ಕೋಂಗಿಲ ಕಂಡ್ಯಾ. ಹಾಗಿದ್ದರೆ, ಇನ್ನೊಂದು ವಾರದಲ್ಲಿ ಮಳೆ ಬರಬಹುದು' ಎಂದರು ಅಮ್ಮಮ್ಮ.

ನನಗೆ ಏಕಾಂಗಿ ಚಾರಣದ ಹುಚ್ಚು, ಸೋಲೋ ಟ್ರಿಪ್‌ನ ಬಯಕೆಯಾದರೆ, ಅಮ್ಮಮ್ಮನಿಗೆ ಕಾಲಕಾಲಕ್ಕೆ ಮಳೆ ಬೀಳಲಿ, ಬೆಳೆ ಚೆನ್ನಾಗಿ ಬರಲಿ ಎಂಬ ಕಾಳಜಿ!

(ಇದು, 27.12.2025ರಂದು ಬಿಡುಗಡೆಯಾಗಲಿರುವ 'ನನ್ನ ಸೋಲೋ ಟ್ರಿಪ್' ಪುಸ್ತಕದ ಆಯ್ದ ಭಾಗ: ಸಪ್ನ ಬುಕ್ ಹೌಸ್ ಪ್ರಕಟಣೆ)

ಪ್ರತಿಸ್ಪಂದನ

ನಿತ್ಯಾನಂದ ಹೆಗಡೆ, ಮುರೂರು

ಯಕ್ಷಗಾನ ಐಟಂ ಸಾಂಗ್ಸ್: ಒಂದು ತೀಕ್ಷ್ಣ ಬರಹ

ವಿಶ್ವೇಶ್ವರ ಭಟ್ಟರ 'ನೂರೆಂಟು ವಿಶ್ವ' ಅಂಕಣಬರಹ (ಡಿ.25) ಸೂಕ್ಷ್ಮಗ್ರಾಹಿಯಾದುದು. ಹಾಗೆ ನೋಡಿದರೆ ಈ ಬರಹವನ್ನು ಅವರು ಸುಖಾಸುಮ್ಮನೆ ಬರೆದಂತಿಲ್ಲ. 'ಭಟ್ಟರ್ ಸ್ಕಾಚ್' ಅಂಕಣದಲ್ಲಿ ಪ್ರಕಟವಾದ ನಾಲ್ಕು ಪದಗಳ ಒಂದು ಉತ್ತರಕ್ಕೆ ಒದಗಿದ ಆಕ್ಷೇಪಕ್ಕೆ ಈ ಬರಹವು ಇನ್ನಿಲ್ಲದ ರೀತಿಯಲ್ಲಿ ಉತ್ತರ ನೀಡಿದಂತಿದೆ. 'ಮೊದಲಾಗಿ, ಅವರಿಗೆ ಯಕ್ಷಗಾನ ಗೊತ್ತಿದೆಯೇ? ಯಕ್ಷಗಾನ ಪ್ರಭೃತಿಗಳ ಬಗ್ಗೆ ಬರೆಯಲು ಅವರಿಗೆ ಏನು ಅರ್ಹತೆಯಿದೆ?' ಇಂಥ ಹಲವು ಆಕ್ಷೇಪಗಳನ್ನು ಎತ್ತಿದವರು ಮುಟ್ಟಿ ನೋಡಿಕೊಳ್ಳಬೇಕು, ಅಂಥ ಬರಹವಿದು.

ಹಿಂದಿನ ಅರ್ಥಧಾರಿಗಳು ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸುವಲ್ಲಿ ಪಾತ್ರದ ಔಚಿತ್ಯವನ್ನು ಮೀರುತ್ತಿರಲಿಲ್ಲ. ಅದೆಷ್ಟೇ ಕಠಿಣವಾದ ಸವಾಲನ್ನು ಎತ್ತಿದರೂ, ಶೇಣಿಯವರು ಪಾತ್ರದ ಹೃದಯವನ್ನರಿತು ಉತ್ತರಿಸುತ್ತಿದ್ದರು. ಅವರ ರಾವಣನ ಅರ್ಥಗಾರಿಕೆಯಲ್ಲಿ ಹಾಗೇ ಪೂರ್ತಿ ಸಂಭಾವಿತನಲ್ಲದ ಒಂದು ಎಳೆ ಕಂಡುಬಂದರೆ, ಅದೇ ರಾಮನಿರ್ಯಾಣದಲ್ಲಿ ಅದೆಷ್ಟು ಉದಾತ್ತ ವಿಚಾರ ಇರುತ್ತಿತ್ತು! ಅದೇ ರೀತಿಯಲ್ಲಿ, ವಾಲಿಯಾಗಿ ದೌಷ್ಟ್ಯ ಹಾಗೂ ಮನಃಪರಿವರ್ತನದ ಚಿತ್ರಣ, ಮಾಗಧನಾದಾಗ ಅದರ ಪರಿ ಎಲ್ಲಿಯೂ ಮೀರದ ವಾಕ್ಯಬಂಧ. ಇವರ ಜತೆಗೆ ಪೆರ್ಲ ಕೃಷ್ಣಭಟ್ಟರು, ತೆಕ್ಕಟ್ಟೆಯವರು, ದೊಡ್ಡ ಹಾಗೂ ಸಣ್ಣ ಸಾಮಗರು, ಮೂಡಂಬೈಲ್ ಕೃಷ್ಣಭಟ್ಟರು, ಸಿದ್ಧಕಟ್ಟೆ ವಿಶ್ವನಾಥ ಶೆಟ್ಟರು, ಪೆರಾಜೆಯವರು, ಕೆ. ಗೋವಿಂದ ಭಟ್ಟರು, ಕುಂಬಳೆ ಸುಂದರರಾವ್– ಇವರೆಲ್ಲ ಎಲ್ಲಿಯೂ ಪಾತ್ರದ ಹದವನ್ನು ತಪ್ಪಿ ಹೋದವರಲ್ಲ. ಅದೊಂದು ಒಳ್ಳೆಯ ಕಾಲ ಎಂಬುದನ್ನು ಭಟ್ಟರು ಉಲ್ಲೇಖಿಸಿದ್ದಾರೆ. ಯಾವಾಗ ಪ್ರೇಕ್ಷಕರ ಅಗ್ಗದ ಚಪ್ಪಾಳೆಗಾಗಿ, ಇಂದಿನ ರಾಜಕೀಯಕ್ಕೂ ಪೌರಾಣಿಕಕ್ಕೂ ತಳುಕು ಹಾಕಿ, ಗೃಹಲಕ್ಷ್ಮಿ, ಶಾದಿಭಾಗ್ಯ, ಭೂಕುಸಿತ ಪರಿಹಾರ, ಬೆಳೆ ಪರಿಹಾರ, ವಿಧವಾ ಭತ್ಯೆ ಹೀಗೆ ಏನೆಲ್ಲಾ 'ಐಟಂ ಸಾಂಗ್'ಗಳಿಗೆ ಇಳಿದರೋ, ಅಲ್ಲಿಂದ ದಾರಿ ತಪ್ಪಿದ್ದು ನಿಜ. ಯಾವಾಗ ಸಿದ್ದರಾಮಯ್ಯ, ಡಿಕೆಶಿ, ಮೋದಿ ಇವರೆಲ್ಲಾ ಈ ಐಟಂ ಸಾಂಗ್ ಕಲಾವಿದರ ಬಾಯಲ್ಲಿ ನಲಿದಾಡಿ ಕಸುಬು ಕುಲಗೆಟ್ಟಿತೋ, ಒಳ್ಳೆಯ ಅಭಿರುಚಿಯುಳ್ಳ ಪ್ರೇಕ್ಷಕನಿಗೆ ತಾಳಮದ್ದಳೆಯು ರೇಜಿಗೆ ಹುಟ್ಟಿಸತೊಡಗಿದ್ದು ಸತ್ಯಸಂಗತಿ. ಭಟ್ಟರು ತಮ್ಮ ಬರಹದಲ್ಲಿ, ವಾಲಿ–ರಾಮರ ವಾದವು ಅದೆಷ್ಟು ತರ್ಕಬದ್ಧ ಎಂಬುದನ್ನು ಹೇಳುತ್ತಾ, ಇಂದು ಅದು ಯಾವ ಮಟ್ಟಿಗೆ ನೀರಸವಾಗಿದೆ ಅಂತಲೂ ಉಲ್ಲೇಖಿಸಿದ್ದಾರೆ. ಯಾರ್‍ಯಾರು ಅಂತ ಹೆಸರು ಹೇಳದೆಯೇ ಹೆಸರು ತಿಳಿಸಿದ್ದಾರೆ. ಯಾರ್‍ಯಾರಿಗೆ ಪೋಸ್ಟ್ ಹೋಗಿ ತಲುಪಬೇಕೋ ಅವರಿಗೆಲ್ಲಾ ತಲುಪಿದೆ. ತಾಳಮದ್ದಳೆಯ ಕನ್ನಡದ ಅರ್ಥವನ್ನು ತರ್ಜುಮೆ ಮಾಡಬೇಕಾಗಿ ಬಂದಿರುವುದನ್ನೂ 'ಭಟ್ಟರ್ ಸ್ಕಾಚ್'ನಲ್ಲಿ ಒಂದೆಡೆ ಹೇಳಿದ್ದಾರೆ.

ಒಟ್ಟಿನಲ್ಲಿ, ಒಂದು ಪ್ರಬುದ್ಧ ಮತ್ತು ಅಷ್ಟೇ ಖಡಕ್ ಆದ ಉತ್ತರ ಹೊಮ್ಮಿದೆ ಭಟ್ಟರಿಂದ. ಆ ಉತ್ತರಕ್ಕೆ ಸಂಬಂಧಪಟ್ಟವರು ಇನ್ನಿಲ್ಲದಂತೆ ಪತರಗುಟ್ಟಿ ಹೋಗಬೇಕು, ಹಾಗಿದೆ ಬರಹ. ಯಕ್ಷಗಾನ ಅರ್ಥದಾರಿಯಾದವನಲ್ಲಿ ಬರಿಯ ಪಾಂಡಿತ್ಯ ಇದ್ದರೆ ಸಾಲದು, ಒಂದು ವಿನೀತ, ಸಾತ್ವಿಕ, ಸಭ್ಯ, ವಿವೇಕ ಪೂರ್ಣ ನಡೆಯೂ ಇರಬೇಕು ಎಂಬುದನ್ನು ಸೂಚ್ಯವಾಗಿ ಹೇಳಿದ್ದಾರೆ. ಮಾತ್ರವಲ್ಲದೆ, ಯಕ್ಷಗಾನದ ಕುರಿತಾದ ಭಟ್ಟರ ತಿಳಿವಳಿಕೆಗೆ ತಾಜಾ ನಿದರ್ಶನದಂತಿದೆ ಈ ಲೇಖನ. ಇದು ನಿಸ್ಸಂಶಯವಾಗಿ ಸಂಗ್ರಹಿಸಿಟ್ಟುಕೊಳ್ಳಬೇಕಾದ ಬರಹ.

(ಲೇಖಕರು ನಿವೃತ್ತ ಪ್ರಾಂಶುಪಾಲರು)

ಸಂಘ ಸಂಸ್ಕಾರದಿಂದಲೇ ರಾಜಕಾರಣವನ್ನು ಸಂಸ್ಕರಿಸಿದ ಅಟಲ್ ಜೀ

ಧೀರೋದಾತ್ತ

ಕಿರಣಕುಮಾರ ವಿವೇಕವಂಶಿ
vveditoped@gmail.com

ಅವರು ಸಂಘವನ್ನು ಬಳಸಿಕೊಂಡು ರಾಜಕಾರಣಕ್ಕೆ ಬಂದವರಲ್ಲ. ಸಂಘ ಸಂಸ್ಕಾರದಿಂದಲೇ ರಾಜಕಾರಣವನ್ನು ಸಂಸ್ಕರಿಸಿದವರು. ''ರಾಜಕೀಯದ ಆಟವಾಡಲು ನಾವಿಲ್ಲಿಗೆ ಬಂದಿಲ್ಲ. ಅಧಿಕಾರದ ಆಟ ನಡೆಯುತ್ತಲೇ ಇರುತ್ತದೆ. ಸರಕಾರಗಳು ಬರುತ್ತವೆ ಮತ್ತು ಹೋಗುತ್ತವೆ, ಪಕ್ಷಗಳು ರಚನೆಯಾಗುತ್ತವೆ ಮತ್ತು ನಾಶವಾಗುತ್ತವೆ; ಆದರೆ ಈ ದೇಶ ಉಳಿಯಬೇಕು, ಇಲ್ಲಿನ ಪ್ರಜಾಪ್ರಭುತ್ವವು ಅಮರವಾಗಿರಬೇಕು'' ಎಂದು ನುಡಿದು 161 ಸ್ಥಾನಗಳನ್ನು ಗೆದ್ದ ಏಕೈಕ ದೊಡ್ಡ ಪಕ್ಷದ ನಾಯಕನಾಗಿ ಪ್ರಧಾನಿ ಪಟ್ಟಕ್ಕೇರಿದರು ಅವರು. ಆದರೆ, ಹದಿಮೂರೇ ದಿನಗಳಿಗೆ ರಾಜೀನಾಮೆ ಕೊಟ್ಟು ಹೊರನಡೆಯಬೇಕಾದಾಗ ಯಾವ ರಾಜಕೀಯ ಮೇಲಾಟಗಳನ್ನೂ ಆಡದೇ ಮೋಸದ ರಾಜಕಾರಣಕ್ಕೆ ಧಿಕ್ಕಾರ ಕೂಗಿ ಮುಲಾಜಿಲ್ಲದೆ ಸ್ಪಷ್ಟ ಜನಾದೇಶದೊಂದಿಗೆ ಮತ್ತೆ ಬರುತ್ತೇವೆ ಎಂದು ಅಧಿಕಾರದ ಗದ್ದುಗೆಯಿಂದ ಎದ್ದು ನಡೆದಿದ್ದವರು ಅಟಲ್ ಬಿಹಾರಿ ವಾಜಪೇಯಿ. ಈ ತಾಕತ್ತು, ಧೈರ್ಯ, ನಿರ್ಮೋಹಿತ್ವಗಳು ಸಂಘದ ನಿತ್ಯಶಾಖೆಯನ್ನು ಬಿಟ್ಟರೆ ಇನ್ನೆಲ್ಲಿಂದ ಬರಲಿಕ್ಕೆ ಸಾಧ್ಯ?

1998ರಲ್ಲಿ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮೊದಲು ಸಂಸತ್‌ನಲ್ಲಿ ಮಾಡಿದ ಭಾಷಣದಲ್ಲಿ ಅವರು, ''ದೇಶ ಇಂದು ಸಂಕಟಗಳಿಂದ ಬಿದ್ದು ಹೋಗಿದೆ, ಈ ಸಂಕಟವನ್ನು ನಾವು ಹುಟ್ಟುಹಾಕಿಲ್ಲ. ಯಾವಾಗೆಲ್ಲಾ ಅಗತ್ಯವಿತ್ತೋ ಆವಾಗೆಲ್ಲ ನಾವು ಸರಕಾರಗಳೊಂದಿಗೆ ಸಹಾಯಕ್ಕೆ ನಿಂತಿದ್ದೇವೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದರೂ ಪ್ರಧಾನಿಯಾಗಿದ್ದ ನರಸಿಂಹರಾವ್ ದೇಶದ ಪರವಾಗಿ ನನ್ನನ್ನು ಜಿನೇವಾಕ್ಕೆ ಕಳುಹಿಸಿದ್ದರು. ನನ್ನನ್ನು ನೋಡಿ ಪಾಕಿಸ್ತಾನಿಯರೇ ಬೆರಗಾಗಿದ್ದರು. ಅವರು ಹೇಳಿದರು, ಅರೇ, ಇವರು ಎಲ್ಲಿಂದ ಬಂದರು? ಎಂದು. ಏಕೆಂದರೆ ಅಲ್ಲಿನ ವಿರೋಧ ಪಕ್ಷದ ನಾಯಕರು ಯಾವಾಗಲೂ ಆಳುವ ಸರಕಾರವನ್ನು ಕೆಡಹುವ ಕೆಲಸದಲ್ಲಿ ನಿರತರಾಗಿರುತ್ತಾರೆ, ದೇಶ ಕಟ್ಟುವ ಕೆಲಸದಲ್ಲಿ ಅಲ್ಲ. ಆದರೆ, ಇದು ನಮ್ಮ ಪರಂಪರೆಯೂ ಅಲ್ಲ, ನಮ್ಮ ಪ್ರಕೃತಿಯೂ ಅಲ್ಲ. ನಮ್ಮ ಪರಂಪರೆ ಹಾಗೂ ಪ್ರಕೃತಿ ಯಾವಾಗಲೂ ಜೋಡಿಸುವಿಕೆಯಲ್ಲಿ ಮತ್ತು ಕಟ್ಟುವಿಕೆಯಲ್ಲಿದೆ. ಅದು ಹೀಗೇ ಇರಲಿ ಎಂದು ನಾನು ಬಯಸುತ್ತೇನೆ'' ಎಂದಿದ್ದರು. ತಮ್ಮ ಈ ಸಂಸ್ಕಾರಭರಿತ ಮಾತುಗಳಿಂದ ಸಮಕಾಲೀನ ಭಾರತೀಯ ರಾಜಕಾರಣದ ಕುರಿತು ಭಾವನಾತ್ಮಕವಾಗಿ ಅರಿವು ಮೂಡಿಸಿ, ಪದತ್ಯಾಗ ಮಾಡಿದ ಅಟಲ್ ಜೀ ರಾಜಕೀಯವನ್ನು ಎಂದೂ ಜೂಜಿನಂತೆ ನೋಡಿದವರಲ್ಲ. ಅದೊಂದು ರಾಷ್ಟ್ರ ಕಾರ್ಯದ ತಪಸ್ಸು ಎಂದು ಅವರು ಭಾವಿಸಿದ್ದವರು. ರಾಜಕೀಯಕ್ಕೆ ಬರುವುದರಿಂದ ಅನೇಕರಿಗೆ ಗೌರವ ದೊರಕುತ್ತದೆ; ಆದರೆ ಅಟಲ್ ಜೀ ಅವರಂಥ ಮೇರು ರಾಜನೀತಿಜ್ಞರಿಂದ ರಾಜಕೀಯಕ್ಕೇ ಗೌರವ ಬಂದಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಅಂಥ ಶ್ರೇಷ್ಠ ರಾಜನೀತಿಯ ದಾರ್ಶನಿಕ, ನವಭಾರತದ ನಿರ್ಮಾತೃ ಅಟಲ್ ಬಿಹಾರಿ ವಾಜಪೇಯಿ ಅವರ ಜೀವನ ರೂಪುಗೊಂಡಿದ್ದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆಯಲ್ಲಿ ಎಂಬುದು ವಾಸ್ತವ. ಸಾತ್ವಿಕ ರಾಜಕೀಯದ ಕನಸು ಕಾಣುತ್ತಿರುವ ನಮ್ಮಂಥ ಯುವಪೀಳಿಗೆಗೆ ಇಂದು ಅರ್ಥವಾಗಬೇಕಿರುವ ಸಂಗತಿ ಇದುವೇ!

ವ್ಯಕ್ತಿತ್ವ ನಿರ್ಮಾಣದ ಪ್ರಯೋಗಶಾಲೆ: ವಾಜಪೇಯಿಯವರ ಸಾರ್ವಜನಿಕ ಬದುಕನ್ನು ಅರ್ಥಮಾಡಿಕೊಳ್ಳಬೇಕಾದರೆ, ಮೊದಲು ಅವರ ಸ್ವಯಂಸೇವಕ ಜೀವನವನ್ನು ಅರ್ಥಮಾಡಿಕೊಳ್ಳಬೇಕು. ಪ್ರಧಾನಮಂತ್ರಿ ಸ್ಥಾನ, ಅಂತಾರಾಷ್ಟ್ರೀಯ ವೇದಿಕೆ, ಸಂಸತ್ತಿನ ಭಾಷಣಗಳು– ಇವೆಲ್ಲಕ್ಕಿಂತ ಮುಂಚೆ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಸಾಮಾನ್ಯ ಸ್ವಯಂಸೇವಕರಾಗಿದ್ದರು. ಅವರ ನಾಯಕತ್ವದ ಬೇರುಗಳು ಅಧಿಕಾರದಲ್ಲಿರಲಿಲ್ಲ; ಅವು ಸಂಘದ ನಿತ್ಯಶಾಖೆಯ ಮಣ್ಣಿನಲ್ಲಿ ಗಟ್ಟಿಯಾಗಿ ರೂಪುಗೊಂಡಿದ್ದವು. ಆರೆಸ್ಸೆಸ್ ಶಾಖೆ ಎಂದರೆ ಕೇವಲ ವ್ಯಾಯಾಮ, ಪ್ರಾರ್ಥನೆ, ಅಮೃತ ವಚನ, ಸಂಚಲನ ಸೇರಿ ಒಂದು ಗಂಟೆಯ ಅವಧಿಯ ಹಲವು ಚಟುವಟಿಕೆಗಳಲ್ಲ; ಅದು ವ್ಯಕ್ತಿತ್ವ ನಿರ್ಮಾಣದ ಪ್ರಯೋಗಶಾಲೆ. ವಾಜಪೇಯಿಯವರು ಈ ಶಾಖೆಯ ಉತ್ಪನ್ನ.

ಗ್ವಾಲಿಯರ್‌ನಲ್ಲಿ ವಿದ್ಯಾರ್ಥಿ ದಿನಗಳಿಂದಲೇ (12ನೇ ವಯಸ್ಸು) ಅಟಲ್ ಜೀ ಸಂಘದ ಶಾಖೆಗೆ ಹೋಗುತ್ತಿದ್ದರು. ಸಂಘವೇ ನಡೆಸುತ್ತಿದ್ದ ಆರ್ಯಕುಮಾರ ಸಭಾದ ಸಕ್ರಿಯ ಸದಸ್ಯರಾಗಿದ್ದರು. ಅಲ್ಲಿ ಕಲಿತ ವ್ಯಾಯಾಮ, ಬೌದ್ಧಿಕ ಪಾಠ, ಸಮೂಹಗೀತೆ, ಮಹಾಪುರುಷರ ಜೀವನ ಕಥೆಗಳು, ಶಿಸ್ತು– ಇವುಗಳ ಮೂಲಕ ಅವರ ವ್ಯಕ್ತಿತ್ವ ರೂಪುಗೊಂಡಿತು. ಇದೇ ವೇಳೆಯಲ್ಲಿ ಅವರು 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗಿಯಾಗಿ 24 ದಿನಗಳ ಸೆರೆವಾಸವನ್ನು ಅನುಭವಿಸಿದರು. ವಾಜಪೇಯಿಯವರು ದೇಶವೇ ಮೆಚ್ಚುವಂಥ ನಾಯಕರಾಗಲು ಪ್ರೇರಣೆಯಾದದ್ದು ಸಂಘವು ಕಲಿಸಿಕೊಟ್ಟ 'ನಾಯಕತ್ವವು ಸ್ಥಾನದಿಂದಲ್ಲ, ಸೇವೆಯಿಂದ ಹುಟ್ಟುತ್ತದೆ' ಎಂಬ ಸ್ವಯಂಸೇವಕತ್ವದ ಪಾಠ. ಅದಕ್ಕಾಗಿಯೇ ಅವರು ಅಧಿಕಾರದಲ್ಲಿದ್ದರೂ ಎಂದಿಗೂ ಅಹಂಕಾರಿಗಳಾಗಲಿಲ್ಲ.

ಆರೆಸ್ಸೆಸ್ ತ್ಯಾಗಮಾರ್ಗ: ಅದು 1947, ವಾಜಪೇಯಿ ಯುವಕರಾಗಿದ್ದ ಕಾಲ. ಭಾರತದ ಸ್ವಾತಂತ್ರ್ಯ ನಂತರ ಕಾನ್ಪುರದ ಡಿಎವಿ ಕಾಲೇಜಿನಲ್ಲಿ ಕಾನೂನು ಪದವಿ ವ್ಯಾಸಂಗಕ್ಕೆ ಸೇರಿಕೊಂಡ ಅವರು ಓದನ್ನು ಅರ್ಧಕ್ಕೆ ಮೊಟಕುಗೊಳಿಸಿ ತಮ್ಮ ಜೀವನದ ಅತ್ಯಂತ ಅಮೂಲ್ಯ ಸಮಯವನ್ನು ಆರೆಸ್ಸೆಸ್‌ನ ಪ್ರಚಾರಕರಾಗಿ ರಾಷ್ಟ್ರಸೇವೆಗೆ ಅರ್ಪಿಸಿದರು. ಸಂಬಳವಿಲ್ಲ, ಸ್ಥಾನವಿಲ್ಲ, ಖ್ಯಾತಿಯಿಲ್ಲ, ವಿಶ್ರಾಂತಿಯಿಲ್ಲ, ರಜೆಗಳಿಲ್ಲ– ಆದರೆ ಸ್ಪಷ್ಟ ಗುರಿ ಇತ್ತು. ಅದುವೇ ರಾಷ್ಟ್ರಜಾಗೃತಿ.

ಗ್ರಾಮಗಳಿಂದ ನಗರಗಳವರೆಗೆ ಸಂಚರಿಸುತ್ತಾ, ಸಮಾಜದ ನೋವು–ನಂಬಿಕೆಗಳನ್ನು ನೇರವಾಗಿ ನೋಡಿದ ಅನುಭವವೇ, ಮುಂದೆ ಅವರನ್ನು ಭಾರತದ ಬದುಕನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡ ನಾಯಕನನ್ನಾಗಿ ರೂಪಿಸಿತು. ಕಾರ್ಯಕರ್ತರಿಂದ ಬೌದ್ಧಿಕ ವಲಯದವರೆಗೆ ಅವರು ಸಂಘದ ವಿಚಾರವನ್ನು ತಲುಪಿಸಿದರು. ಈ ಅನುಭವ ಅವರನ್ನು ರಾಷ್ಟ್ರದ ಭೌಗೋಳಿಕ–ಸಾಂಸ್ಕೃತಿಕ ವೈವಿಧ್ಯವನ್ನು ಆಳವಾಗಿ ಅರ್ಥಮಾಡಿಕೊಳ್ಳುವ ಮುಂದಾಳುವಾಗಿ ರೂಪಿಸಿತು. ಇದು ಕೇವಲ ಪುಸ್ತಕಗಳನ್ನು ಓದಿದ ಜ್ಞಾನವಾಗಿರಲಿಲ್ಲ; ಬದಲಿಗೆ ಸಂಘದ ಮೂಸೆಯ ಮೂಲಕ ದೊರೆತ ಅನುಭವಜನ್ಯ ಲೋಕಜ್ಞಾನವಾಗಿತ್ತು.

ಮೈಗೂಡಿದ ಸ್ವಯಂಸೇವಕ ಸಂಸ್ಕಾರ: 1951ರಲ್ಲಿ, ವಾಜಪೇಯಿಯವರು ಶ್ಯಾಮ್ ಪ್ರಸಾದ್ ಮುಖರ್ಜಿ ನೇತೃತ್ವದಲ್ಲಿ ಭಾರತೀಯ ಜನಸಂಘವನ್ನು ಸೇರಿ, ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿಯಾದರು ಮತ್ತು ಉತ್ತರ ಪ್ರದೇಶದ ಉಸ್ತುವಾರಿ ಎನಿಸಿಕೊಂಡರು. 1968ರಲ್ಲಿ ದೀನದಯಾಳ್ ಉಪಾಧ್ಯಾಯರ ಮರಣದ ನಂತರ, ಅವರು ಜನಸಂಘದ ರಾಷ್ಟ್ರೀಯ ಅಧ್ಯಕ್ಷರಾದರು. ಅವರು ಸುಮಾರು 5 ದಶಕಗಳ ಕಾಲ ಸಂಸತ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದು, 1957ರಿಂದ 6 ವಿಭಿನ್ನ ಕ್ಷೇತ್ರಗಳನ್ನು ಪ್ರತಿನಿಧಿಸುವ ಮೂಲಕ ಲೋಕಸಭೆಗೆ 10 ಬಾರಿ ಆಯ್ಕೆಯಾಗಿದ್ದು ಇತಿಹಾಸ!

ವಾಜಪೇಯಿಯವರು ರಾಜಕಾರಣಕ್ಕೆ ಬಂದಾಗಲೂ ಸಂಘದ ಸಂಸ್ಕಾರವನ್ನು ಕಳೆದುಕೊಳ್ಳಲಿಲ್ಲ. ಅವರ ರಾಜಕೀಯ ಶೈಲಿ ಸಂಘದ ಸಂಸ್ಕಾರದ ಪ್ರತಿಬಿಂಬವಾಗಿತ್ತು. ಅವರಲ್ಲಿನ ಶಿಸ್ತು ಆಡಳಿತದಲ್ಲಿ ಸ್ಥಿರತೆ ತರಲು, ಸಮೂಹ ಮನೋಭಾವನೆಯು ಮೈತ್ರಿ ಸರಕಾರವನ್ನು ಯಶಸ್ವಿಯಾಗಿ ನಡೆಸಲು ಅನುವುಮಾಡಿಕೊಟ್ಟಿತು. ಅವರಲ್ಲಿ ಕೆನೆಗಟ್ಟಿದ್ದ ತ್ಯಾಗ ಭಾವನೆಯು ಅಧಿಕಾರದ ಆಸಕ್ತಿಯಿಲ್ಲದ ನಾಯಕತ್ವ ರೂಪಿಸಲು, ರಾಷ್ಟ್ರ ಮೊದಲು ಎನ್ನುವ ಚಿಂತನೆಯು ರಾಜಕೀಯಕ್ಕಿಂತ ಉನ್ನತ ದೃಷ್ಟಿ ಎಂಬ ಭಾವ ಮೊಳೆಯಲು ಕಾರಣವಾದವು. ಸಂಯಮ, ಸೌಜನ್ಯ ಮತ್ತು ನೈತಿಕತೆ ಇವೆಲ್ಲವೂ ಅವರ ಸ್ವಯಂಸೇವಕ ಜೀವನದ ಪ್ರತಿಫಲಗಳೇ.

ಸಂಘದೊಂದಿಗೆ ಮೌನದ ನಿಷ್ಠೆ: 1996ರ ಸಾರ್ವತ್ರಿಕ ಚುನಾವಣೆಗಳ ನಂತರ ಭಾರತದ 10ನೇ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರು, ಅಲ್ಲಿ ಬಿಜೆಪಿ ಲೋಕಸಭೆಯಲ್ಲಿ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ ಸರಕಾರವು ಇತರ ಪಕ್ಷಗಳಿಂದ ಬೆಂಬಲವನ್ನು ಪಡೆಯಲು ಸಾಧ್ಯವಾಗದ ಕಾರಣ ಪ್ರಧಾನಿಯಾಗಿ ಅವರ ಮೊದಲ ಅವಧಿ ಕೇವಲ 13 ದಿನಗಳಿಗೆ ಕೊನೆಗೊಂಡಿತು. ನಂತರದ ಚುನಾವಣೆಯಲ್ಲಿ, ಬಿಜೆಪಿ ಮತ್ತೆ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಆದರೆ, ಎನ್‌ಡಿಎ ಸರಕಾರವು ಕೇವಲ ಒಂದು ಮತದಿಂದ ವಿಶ್ವಾಸ ನಿರ್ಣಯವನ್ನು ಕಳೆದುಕೊಂಡ ಕಾರಣ 13 ತಿಂಗಳಿಗೆ ಅಂತ್ಯಗೊಂಡಿತು. 1999ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತೆ ಲೋಕಸಭೆಯಲ್ಲಿ ಬಹುಮತದ ಸ್ಥಾನಗಳನ್ನು ಗಳಿಸಿತು ಮತ್ತು ವಾಜಪೇಯಿ 3ನೇ ಅವಧಿಗೆ ಪ್ರಮಾಣವಚನ ಸ್ವೀಕರಿಸಿ, ಅವಧಿಯನ್ನು ಪೂರ್ಣಗೊಳಿಸಿದ ಮೊದಲ ಕಾಂಗ್ರೆಸ್ಸೇತರ ಪ್ರಧಾನಿಯಾದರು!

ಈ ಅವಧಿಯಲ್ಲಿ ವಾಜಪೇಯಿಯವರು ಎಂದಿಗೂ ತಮ್ಮನ್ನು ಸಂಘದ ನಾಯಕ ಎಂದು ಘೋಷಿಸಿಕೊಂಡಿಲ್ಲ. ಅವರು ತಮ್ಮ ನಿಷ್ಠೆಯನ್ನು ಘೋಷಣೆಗಳ ಮೂಲಕ ಅಲ್ಲ, ಆಚರಣೆಗಳ ಮೂಲಕ ತೋರಿಸಿದರು. ಪ್ರಧಾನಿಯಾಗಿದ್ದರೂ ಸಂಘದ ಹಿರಿಯರನ್ನು ಗೌರವದಿಂದ ಕಾಣುತ್ತಿದ್ದರು, ಅವರ ಮಾರ್ಗದರ್ಶನವನ್ನು ಮೌನವಾಗಿ ಸ್ವೀಕರಿಸುತ್ತಿದ್ದರು. ಸ್ವಯಂಸೇವಕನ ಇಂಥ ವಿನಯವು ವಾಜಪೇಯಿಯವರಲ್ಲಿತ್ತು. ಸಂಘವನ್ನು ಶಕ್ತಿಕೇಂದ್ರವಲ್ಲ, ಸಂಸ್ಕಾರಕೇಂದ್ರವೆಂದು ನೋಡುವ ದೃಷ್ಟಿ ಅವರನ್ನು ಭಿನ್ನವಾಗಿ ನಿಲ್ಲುವಂತೆ ಮಾಡಿತು.

ದಕ್ಕಿತು ಅಜಾತಶತ್ರು ಪಟ್ಟ: ರಾಜಕಾರಣದಲ್ಲಿ ಶಾಶ್ವತವಾಗಿ ಯಾರಿಗ್ಯಾರೂ ಶತ್ರುಗಳೂ ಅಲ್ಲ, ಮಿತ್ರರೂ ಅಲ್ಲ ಎಂಬ ಮಾತಿದೆ. ಆದರೆ, ಇರುವಾಗ ತಾತ್ಕಾಲಿಕ ಶತ್ರುತ್ವವನ್ನು ಅನೇಕರು ಕಟ್ಟಿಕೊಳ್ಳುವುದುಂಟು. ಆದರೆ ವಾಜಪೇಯಿ ಇದಕ್ಕೆ ಹೊರತಾಗಿ ನಿಂತವರು, ಯಾರೊಂದಿಗೂ ವೈರತ್ವವನ್ನು ಕಟ್ಟಿಕೊಳ್ಳದೆ ಎಲ್ಲರೊಂದಿಗೂ ಮಿತ್ರನಂತೆ ಇದ್ದವರು. ವಾಜಪೇಯಿಯವರು ತಮ್ಮ ಬಹುತೇಕ ರಾಜಕೀಯ ಜೀವನವನ್ನು ವಿರೋಧ ಪಕ್ಷದಲ್ಲೇ ಕಳೆದರಾದರೂ ಅವರ ವಿರೋಧ ಎಂದಿಗೂ ವ್ಯಕ್ತಿಕೇಂದ್ರಿತವಾಗಿರಲಿಲ್ಲ, ಅದು ವಿಚಾರಕೇಂದ್ರಿತವಾಗಿತ್ತು. ಅವರು ಸದಾ ಹೇಳುತ್ತಿದ್ದರು– ''ನಾವು ಸರಕಾರದ ವಿರುದ್ಧವಲ್ಲ; ತಪ್ಪು ನೀತಿಗಳ ವಿರುದ್ಧ'' ಎಂದು. 1964ರಲ್ಲಿ ಜವಾಹರಲಾಲ್ ನೆಹರು ಅವರ ನಿಧನದ ನಂತರ, ಭಾರತದ ಪರವಾಗಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ಪ್ರತಿನಿಧಿ ತಂಡವನ್ನು ಕಳುಹಿಸುವ ಪ್ರಶ್ನೆ ಉದ್ಭವಿಸಿತು. ಆ ಸಮಯದಲ್ಲಿ ವಿರೋಧ ಪಕ್ಷದ ಸಂಸದರಾದ ವಾಜಪೇಯಿಯವರನ್ನು ಭಾರತದ ಅಧಿಕೃತ ಪ್ರತಿನಿಧಿ ತಂಡದಲ್ಲಿ ಕಳಿಸಲಾಯಿತು. ಇದು ರಾಜಕೀಯ ತಂತ್ರವಲ್ಲ, ಬದಲಿಗೆ ವಾಜಪೇಯಿಯವರ ಮೇಲಿದ್ದ ರಾಷ್ಟ್ರೀಯ ನಂಬಿಕೆ. ಅರೆ! ಇದು ಹೇಗೆ ಸಾಧ್ಯ? ಎಂದು ಅನೇಕರಿಗೆ ಅನ್ನಿಸಬಹುದು; ಆದರೆ ಸಂಘದಲ್ಲಿ ಪಳಗಿದವರಿಗೆ ಈ ಗುಣ ರಕ್ತಗತವಾಗಿರುತ್ತದೆ. ಸೈದ್ಧಾಂತಿಕ ಭಿನ್ನತೆಯ ಆಚೆಗೆ ಉತ್ತಮ ಬಾಂಧವ್ಯ ಹೊಂದುವುದು ರಾಷ್ಟ್ರಕಾರ್ಯದ ಅಗತ್ಯ ಸಂಗತಿ. ಹೀಗಾಗಿ ಅಟಲ್ ಜೀ ಅಜಾತಶತ್ರುವಾಗಲು ಮತ್ತು, ವೈಚಾರಿಕ ವಿರೋಧಿಗಳೊಂದಿಗೆ ರಾಷ್ಟ್ರ ಕಾರ್ಯಕ್ಕೆ ಅಣಿಯಾಗಲು ಸಾಧ್ಯವಾಯಿತು.

ಸಂಘಜೀವನ ಕಲಿಸಿದ ವಾಕ್ಪಟುತ್ವ: ವಾಜಪೇಯಿ ಅವರು ಭಾಷಣ ಮಾಡಲು ಬರುತ್ತಾರೆ ಎಂದರೆ ಅಲ್ಲಿ ಅಪಾರ ಜನಸ್ತೋಮವೇ ನೆರೆದಿರುತ್ತಿತ್ತು. ಯಾದವರಾವ್ ಜೋಶಿ ಅವರ ನಂತರ ಯಾರಾದರೂ ಪ್ರಚಾರಕರ ಭಾಷಣ ಕೇಳಲು ಬೃಹತ್ ಸಂಖ್ಯೆಯ ಜನ ಸೇರುತ್ತಿದ್ದರು ಎಂದರೆ ಅದು ವಾಜಪೇಯಿ ಅವರದ್ದೇ! ಹರಿವ ನದಿಯಂತೆ ನಿರರ್ಗಳವಾಗಿ ಭೋರ್ಗರೆಯುತ್ತಿದ್ದ ವಾಗ್ಝರಿ, ಮಾತಿನ ನಡುವೆ ಸಿಡಿಲಿನಂತೆ ಮೊಳೆಯುತ್ತಿದ್ದ ಕವಿತೆಗಳು, ಸಮುದ್ರದ ಅಲೆಗಳಂತೆ ಧ್ವನಿಯ ಏರಿಳಿತ, ಅಬ್ಬಬ್ಬಾ! ಕೇಳುತ್ತಿದ್ದರೆ ಕೇಳುತ್ತಲೇ ಇರಬೇಕು ಅನ್ನಿಸುವ ರಾಷ್ಟ್ರಹಿತದ ಭಾಷಣ. ಇದೆಲ್ಲದಕ್ಕೆ ಬುನಾದಿ ಹಾಕಿದ್ದು ಅವರ ಸ್ವಯಂಸೇವಕ ಹಾಗೂ ಪ್ರಚಾರಕ ಜೀವನದ ತರಬೇತಿ.

ನೆಹರು ಮೆಚ್ಚಿದ ಸಂಸದೀಯ ಪಟು: ವಾಜಪೇಯಿಯವರ ಸಂಸದೀಯ ಪಟುತ್ವಕ್ಕೆ ಮೊದಲ ಮೆಚ್ಚುಗೆ ದಕ್ಕಿದ್ದು ಜವಾಹರಲಾಲ್ ನೆಹರುರಿಂದಲೇ! ವಾಜಪೇಯಿ ಅವರ ಭಾಷಣದ ನಂತರ ನೆಹರು, ''ಈ ಯುವಕ ಒಂದು ದಿನ ಭಾರತದ ಪ್ರಧಾನಿಯಾಗುತ್ತಾನೆ'' ಎಂದಿದ್ದರು. ವಿಚಾರಧಾರೆಯಲ್ಲಿ ಭಿನ್ನತೆ ಇದ್ದರೂ, ನೆಹರು ಅವರು ವಾಜಪೇಯಿಯವರ ವಾಕ್–ಸಾಮರ್ಥ್ಯವನ್ನು ಗೌರವಿಸಿದ್ದರು. ಇದು ಅವರಿಗೆ ದಕ್ಕಿದ ರಾಜಕೀಯ ಸಂಸ್ಕಾರದ ಮೊದಲ ರಾಷ್ಟ್ರೀಯ ಪ್ರಮಾಣಪತ್ರ. ನಂತರದ ದಿನಗಳಲ್ಲಿ ವಾಜಪೇಯಿಯವರು ಹಲವು ಬಾರಿ ವಿರೋಧ ಪಕ್ಷದ ನಾಯಕರಾಗಿ, ಸಂಸತ್ತಿನ ಅಧಿನಾಯಕರಾಗಿ ಕಾರ್ಯನಿರ್ವಹಿಸಿದ್ದಾರೆ. ಈ ವೇಳೆ ಸಂಸದೀಯ ಪ್ರಶ್ನೆಗಳಿಗೆ ನೀಡುತ್ತಿದ್ದ ಗಂಭೀರ ಉತ್ತರ, ಸುದೀರ್ಘ ಚರ್ಚೆ, ವಿರೋಧ ಪಕ್ಷದ ಮಾತನ್ನು ತಾಳ್ಮೆಯಿಂದ ಕೇಳುತ್ತಿದ್ದ ಶೈಲಿ– ಇವೆಲ್ಲವೂ ಅವರ ಗೌರವವನ್ನು ಹೆಚ್ಚಿಸಿತು, ಅವರನ್ನು ಉತ್ತಮ ಸಂಸದೀಯ ವಾಕ್ಪಟುವನ್ನಾಗಿಸಿತು.

ಭಾರತೀಯ ಸಂಸತ್ತಿನ ಇತಿಹಾಸದಲ್ಲಿ ಕೆಲವೇ ಕೆಲವರು ತಮ್ಮ ಭಾಷಣಗಳ ಮೂಲಕ ರಾಜಕೀಯವನ್ನು ಸಂಸ್ಕರಿಸಿದ್ದಾರೆ. ಅಂಥ ಅಪರೂಪದ ವರ್ಗಕ್ಕೆ ಸೇರಿದವರು ವಾಜಪೇಯಿ. ಅವರು ಸಂಸತ್ತನ್ನು ಕೇವಲ ಕಾನೂನು ರೂಪಿಸುವ ವೇದಿಕೆಯಾಗಿ ನೋಡಲಿಲ್ಲ; ಬದಲಿಗೆ ಅದನ್ನು ರಾಷ್ಟ್ರದ ಅಂತರಾತ್ಮ ಮಾತನಾಡುವ ಸ್ಥಳವೆಂದು ಭಾವಿಸಿದರು.

ಸ್ವಯಂಸೇವಕತ್ವ ಮತ್ತು ರಾಷ್ಟ್ರ ನಾಯಕತ್ವ: ವಾಜಪೇಯಿಯವರ ಆಡಳಿತದ ಶಾಶ್ವತ ಕೊಡುಗೆ ಎಂದರೆ ಭಾರತದ ಭೌತಿಕ ಏಕತೆ. ಸುವರ್ಣ ಚತುಷ್ಪಥ ಹೆದ್ದಾರಿ ಯೋಜನೆಯ ಮೂಲಕ ದೆಹಲಿ–ಮುಂಬೈ–ಚೆನ್ನೈ–ಕೊಲ್ಕತ್ತಾ ನಗರಗಳನ್ನು ಸಂಪರ್ಕಿಸುವ ಹೆದ್ದಾರಿ ಜಾಲ ನಿರ್ಮಾಣ ಆರಂಭವಾಯಿತು. ಇದು ಕೇವಲ ರಸ್ತೆ ನಿರ್ಮಾಣವಾಗಿರಲಿಲ್ಲ, ರೈತನ ಉತ್ಪನ್ನಕ್ಕೆ ಮಾರುಕಟ್ಟೆ, ಯುವಕರಿಗೆ ಉದ್ಯೋಗದ ಅವಕಾಶ, ದೇಶದ ಒಳಗಿನ ವ್ಯಾಪಾರಕ್ಕೆ ವೇಗ ನೀಡುವ ಚಿಂತನೆಯಾಗಿತ್ತು. ಸಂಘವು ಕಟ್ಟಿಕೊಟ್ಟ ರಾಷ್ಟ್ರದ ಏಕತೆಯ ಕಲ್ಪನೆ ಇಲ್ಲಿ ಭೌತಿಕ ರೂಪ ಪಡೆದುಕೊಂಡಿತು. ವಾಜಪೇಯಿಯವರು ಅಭಿವೃದ್ಧಿಯನ್ನು ಕಟ್ಟಡಗಳಲ್ಲಷ್ಟೇ ನೋಡದೆ, ಅದನ್ನು ಮಾನವನೊಳಗೆ ಕಂಡರು. 2001ರಲ್ಲಿ ಆರಂಭವಾದ ಸರ್ವಶಿಕ್ಷಾ ಅಭಿಯಾನ ಪ್ರತಿಯೊಬ್ಬ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣ ತಲುಪಿಸುವ ರಾಷ್ಟ್ರಮಟ್ಟದ ಪ್ರಯತ್ನವಾಗಿತ್ತು. ಇದು ಸಂಘದ ಮೂಲ ಚಿಂತನೆಯಾದ 'ಸಬಲ ಸಮಾಜವೇ ಸಶಕ್ತ ರಾಷ್ಟ್ರ' ಎಂಬ ನಂಬಿಕೆಯ ಆಡಳಿತ ರೂಪ ಎನ್ನಬಹುದು.

ವಾಜಪೇಯಿಯವರ ಆರ್ಥಿಕ ದೃಷ್ಟಿಕೋನ 'ಉಗ್ರ ಲಿಬರಲಿಸಂ' ಅಲ್ಲ, ಸ್ತಬ್ಧ ಸಮಾಜವಾದವೂ ಅಲ್ಲ. ಅವರು ನಂಬಿದ್ದು– ಖಾಸಗಿ ವಲಯಕ್ಕೆ ಅವಕಾಶ, ರಾಷ್ಟ್ರಹಿತಕ್ಕೆ ರಕ್ಷಣಾ ಬೇಲಿ, ಆರ್ಥಿಕ ಶಿಸ್ತು, ಟೆಲಿಕಾಂ ಕ್ಷೇತ್ರದ ಸುಧಾರಣೆ, ಖಜಾನೆ ಶಿಸ್ತಿಗಾಗಿ ಹಣಕಾಸು ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣಾ ಕಾಯ್ದೆ. ಇವು ದೀರ್ಘಾವಧಿಯ ಆರ್ಥಿಕ ಸ್ಥಿರತೆಗೆ ಅಡಿಪಾಯ ಹಾಕಿದವು. ಈ ಸ್ಥಿರತೆಯ ಮೂಲವೇ ಆರೆಸ್ಸೆಸ್ ಹೇಳಿಕೊಟ್ಟ ಆರ್ಥಿಕ ಶುಚಿತ್ವದ ಪಾಠ!

1998ರ ಪೋಖ್ರಾನ್ ಅಣು ಪರೀಕ್ಷೆಗಳು ಭಾರತವನ್ನು ಆತ್ಮವಿಶ್ವಾಸದ ರಾಷ್ಟ್ರವಾಗಿ ಘೋಷಿಸಿದವು. ಇದು ಸಂಘದ ಸ್ವಾಭಿಮಾನಿ ರಾಷ್ಟ್ರ ಕಲ್ಪನೆಯ ರಾಜಕೀಯ ಅಭಿವ್ಯಕ್ತಿ. ವಾಜಪೇಯಿಯವರ ಆಡಳಿತದಲ್ಲಿ ಆರೆಸ್ಸೆಸ್ ನೇರ ನೀತಿ ನಿರ್ದೇಶಕನಾಗಿ ಕೆಲಸ ಮಾಡಲಿಲ್ಲ, ಆದರೆ, ಆಡಳಿತದ ಸ್ವಭಾವವನ್ನು, ನಿರ್ಧಾರಗಳ ನೈತಿಕತೆಯನ್ನು, ರಾಷ್ಟ್ರವೇ ಪ್ರಥಮ ಎನ್ನುವ ದೃಷ್ಟಿಯನ್ನು ನಿರಂತರವಾಗಿ ಅವರಲ್ಲಿ ಪೋಷಿಸಿತು. ಸಂಘವು ವಾಜಪೇಯಿ ಅವರಿಗೆ ಕೊಟ್ಟದ್ದು ಆಜ್ಞಾಪತ್ರವಲ್ಲ, ಆತ್ಮವಿಶ್ವಾಸ. ಒಟ್ಟಾರೆ ಹೇಳುವುದಾದರೆ ಸ್ಥಿರ ಸರಕಾರ, ಧೈರ್ಯದ ನಿರ್ಣಯಗಳು (ಪೋಖ್ರಾನ್), ಶಾಂತಿಯ ಪ್ರಯತ್ನ (ಲಾಹೋರ್ ಒಪ್ಪಂದ), ಅಭಿವೃದ್ಧಿಯ ದೃಷ್ಟಿ (ರಸ್ತೆಗಳು, ಸಂಪರ್ಕ) ಮತ್ತು ಸಂವಿಧಾನದ ಗೌರವ– ಇವು ಅವರ ಆಡಳಿತಾವಧಿಯಲ್ಲಿ ಸಂಘದ ಮೌಲ್ಯಗಳಿಗೆ ಸಿಕ್ಕ ರಾಷ್ಟ್ರೀಯ ಮಾನ್ಯತೆ.

ಯುವಕರಿಗೆ ಸಂದೇಶ: ಇಂದಿನ ಯುವಕರು ರಾಜಕಾರಣವನ್ನು ಶೀಘ್ರ ಯಶಸ್ಸಿನ ದಾರಿ ಎಂದು ನೋಡುವಾಗ, ವಾಜಪೇಯಿಯವರ ಸ್ವಯಂಸೇವಕ ಜೀವನವು 'ಸ್ವಯಂಸೇವಕತ್ವ ಎಂದರೆ ಅಧಿಕಾರಕ್ಕೆ ಮೆಟ್ಟಿಲಲ್ಲ, ಅದು ಜೀವನಪಥ' ಎಂಬ ಸಂದೇಶವನ್ನು ನಮಗೆ ನೀಡುತ್ತದೆ. ಅವರ ಸ್ವಯಂಸೇವಕ ಜೀವನ ನಮಗೆ ಸುದೀರ್ಘ ಪಾಠವೊಂದನ್ನು ಹೇಳುತ್ತದೆ. ಅದುವೇ– 'ಮೊದಲು ಶಿಸ್ತು ಕಲಿಯಿರಿ, ತ್ಯಾಗ ಮತ್ತು ಸೇವೆಯನ್ನು ಆದರ್ಶವಾಗಿಸಿಕೊಳ್ಳಿ, ರಾಷ್ಟ್ರ ಜೀವನವನ್ನು ಚೆನ್ನಾಗಿ ಅರಿತುಕೊಳ್ಳಿ, ಜೀವನವನ್ನು ಸಮಾಜಕ್ಕಾಗಿ ಸಮಿಧೆಯಂತೆ ದಹಿಸಿ, ಅದಾದ ಬಳಿಕ ಮಾತ್ರ ನಾಯಕತ್ವದ ಕನಸು ಕಾಣಿರಿ' ಎಂಬುದು. ಸ್ವಯಂಸೇವಕತ್ವವು ವ್ಯಕ್ತಿಯನ್ನು ವಿನಯವಂತನನ್ನಾಗಿಸುತ್ತದೆ, ರಾಷ್ಟ್ರವನ್ನು ಶ್ರೇಷ್ಠವಾಗಿ ಮಾಡುತ್ತದೆ. ನಿಜವಾದ ನಾಯಕತ್ವವು ಮಾತುಗಳಿಂದಲ್ಲ, ಸಂಸ್ಕಾರದಿಂದ ರೂಪುಗೊಳ್ಳುತ್ತದೆ. ಅದಕ್ಕಾಗಿ ವಾಜಪೇಯಿಯವರು ಒಬ್ಬ ಶ್ರೇಷ್ಠ ಪ್ರಧಾನಿಯಷ್ಟೇ ಅಲ್ಲ, ಒಬ್ಬ ಆದರ್ಶ ಸ್ವಯಂಸೇವಕನೂ ಹೌದು. ಅವರು ಕೇವಲ ಶ್ರೇಷ್ಠ ಪ್ರಧಾನಿಯಲ್ಲ, ಆರೆಸ್ಸೆಸ್ ಪ್ರೇರಿತ ರಾಷ್ಟ್ರನಾಯಕತ್ವದ ಜೀವಂತ ಮಾದರಿ ಎಂಬುದರಲ್ಲಿ ಎರಡು ಮಾತಿಲ್ಲ...

(ಲೇಖಕರು ಯುವ ಚಿಂತಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 345

ಸಮಾಚಾರ ಸಣ್ಣದಲ್ಲ

ಪೆನ್ ಕ್ಯಾಮೆರಾ, ಸ್ಮಾರ್ಟ್ ಕನ್ನಡಕ ನಿಷೇಧ

ದೆಹಲಿ: ಸಂಸತ್ ಭವನದ ಸಂಕೀರ್ಣದಲ್ಲಿ ಸ್ಮಾರ್ಟ್ ಕನ್ನಡಕ, ಪೆನ್ ಕ್ಯಾಮೆರಾ ಮತ್ತು ಸ್ಮಾರ್ಟ್ ಕೈಗಡಿಯಾರ ಮೊದಲಾದ ಡಿಜಿಟಲ್ ಸಾಧನಗಳನ್ನು ಬಳಸದಂತೆ ಲೋಕಸಭಾ ಸಚಿವಾಲಯ ಬುಧವಾರ ರಾಜ್ಯಸಭೆ ಮತ್ತು ಲೋಕಸಭೆ ಸದಸ್ಯರಿಗೆ ಸ್ಪಷ್ಟ ಸೂಚನೆ ನೀಡಿದೆ. ಈ ಸಾಧನಗಳು ಸಂಸದರ ಗೌಪ್ಯತೆಗೆ ಧಕ್ಕೆ ತರಬಹುದು, ಸಂಸದೀಯ ನಿಯಮಗಳ ಉಲ್ಲಂಘನೆಗೆ ಕಾರಣವಾಗಬಹುದು ಎಂಬ ಕಾರಣಕ್ಕೂ ಸೂಚನೆ ನೀಡಲಾಗಿದೆ. ಸಂಸದರ ವ್ಯಕ್ತಿಗತ ಭದ್ರತೆ, ಸವಲತ್ತುಗಳು ಮತ್ತು ಗೌಪ್ಯತೆಗೆ ಧಕ್ಕೆಯಾಗುವಂತೆ ಈ ಸಾಧನಗಳನ್ನು ಸಂಸತ್ ಭವನದ ಸಂಕೀರ್ಣದ ಯಾವುದೇ ಭಾಗದಲ್ಲಿಯೂ ಬಳಸಬೇಡಿ ಎಂದು ಸಂಸದರಿಗೆ ಮನವಿ ಮಾಡುತ್ತೇವೆ ಎಂದು ಬುಲೆಟಿನ್‌ನಲ್ಲಿ ಪ್ರಕಟಿಸಲಾಗಿದೆ.

ಅರಾವಳಿ ಪರ್ವತ ಶ್ರೇಣಿ ರಕ್ಷಣೆಗೆ ಬದ್ಧ

ದೆಹಲಿ: ಅಮೂಲ್ಯ ನೈಸರ್ಗಿಕ ಸಂಪತ್ತಾಗಿರುವ ಅರಾವಳಿ ಪರ್ವತ ಶ್ರೇಣಿ ಪೂರ್ಣವಾಗಿ ರಕ್ಷಿಸಲು ಬದ್ಧವಾಗಿರುವುದಾಗಿ ಕೇಂದ್ರ ಸರಕಾರ ಸ್ಪಷ್ಟವಾಗಿ ಹೇಳಿದೆ. ಗಣಿಗಾರಿಕೆ ಮೂಲಕ ಅರಾವಳಿಯಂತಹ ಸೂಕ್ಷ್ಮ ಪ್ರದೇಶವನ್ನು ನಾಶ ಮಾಡುವ ಪ್ರಯತ್ನ ನಡೆದಿರುವ ಬಗ್ಗೆ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಪತ್ರಿಕಾ ಹೇಳಿಕೆ ಹೊರಡಿಸಿದೆ. ಅರಾವಳಿ ಶ್ರೇಣಿಯಲ್ಲಿ ಹೊಸ ಗಣಿಗಾರಿಕೆ ಚಟುವಟಿಕೆಗಳಿಗೆ ಅನುಮತಿ ನೀಡಬಾರದು ಎಂದು ರಾಜ್ಯ ಸರಕಾರಗಳಿಗೆ ಸ್ಪಷ್ಟ ನಿರ್ದೇಶನವನ್ನೂ ನೀಡಿದೆ. ಭಾರತದಲ್ಲಿ ಪಶ್ಚಿಮ ಘಟ್ಟ, ವಿಂಧ್ಯ, ಕಾರಕೋರಮ್ ಪ್ರಮುಖ ಪರ್ವತ ಶ್ರೇಣಿಗಳಲ್ಲಿ ಅರಾವಳಿಯೂ ಸೇರಿದೆ. ದೆಹಲಿ ಬಳಿಯಿಂದ ಶುರುವಾಗುವ ಈ ಪರ್ವತ ಶ್ರೇಣಿ ಹರಿಯಾಣ, ರಾಜಸ್ಥಾನ ಮತ್ತು ಗುಜರಾತ್‌ವರೆಗೂ ಹರಡಿಕೊಂಡಿದೆ. ಹೆಚ್ಚಿನ ಭಾಗ ರಾಜಸ್ಥಾನದಲ್ಲಿದೆ.

ಲಂಕಾಕ್ಕೆ ಭಾರತದಿಂದ 4,000 ಕೋಟಿ ರು.

ಕೊಲಂಬೊ: 'ದಿತ್ವಾ' ಚಂಡಮಾರುತದಿಂದ ಶ್ರೀಲಂಕಾದಲ್ಲಿ ಭಾರೀ ಹಾನಿ ಉಂಟಾಗಿದದು, ಜನಜೀವನ ಅಸ್ತವ್ಯಸ್ತವಾಗಿದೆ. ಲಂಕಾದ ಪುನರ್ ನಿರ್ಮಾಣಕ್ಕಾಗಿ ಭಾರತ 4,000 ಕೋಟಿ ರು.ಗಳ ಪುನರ್ ನಿರ್ಮಾಣ ಪ್ಯಾಕೇಜ್ ಪ್ರಕಟಿಸಿದೆ.



ಲಂಕಾ ಅಧ್ಯಕ್ಷ ಅನುರ ಕುಮಾರ ದಿಸಾನಾಯಕ ಅವರನ್ನು ಭೇಟಿ ಮಾಡಿದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, 45 ಕೋಟಿ ಡಾಲರ್ ಪುನರ್ನಿರ್ಮಾಣ ಪ್ಯಾಕೇಜ್ ಘೋಷಿಸಿ ರುವ ಭಾರತ ಸರಕಾರದ ಪತ್ರವನ್ನು ಹಸ್ತಾಂತರಿ ಸಿದರು. ಜತೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಬರೆದಿದ್ದ ಪತ್ರವನ್ನು ಅಧ್ಯಕ್ಷ ಅನುರ ಕುಮಾರ ದಿಸಾನಾಯಕ ಅವರಿಗೆ ತಲುಪಿಸಿದರು.

ಢಾಕಾ: ಬಾಂಬ್ ದಾಳಿ, ಯುವಕನ ತಲೆ ಛಿದ್ರ

ಢಾಕಾ: ಬಾಂಗ್ಲಾದೇಶದಲ್ಲಿ ಹಿಂಸಾಚಾರ ಮುಂದುವರಿದಿದೆ. ರಾಜಧಾನಿ ಢಾಕಾ ನಗರದ ಮೋಘ ಬಜಾರ್ ಬಳಿಯ ಫ್ಲೈಓವರ್‌ನಿಂದ ದುಷ್ಕರ್ಮಿಗಳು ಬುಧವಾರ ಸಂಜೆ 7 ಗಂಟೆಯಲ್ಲಿ ಕಚ್ಚಾ ಬಾಂಬ್ ಎಸೆದಿದ್ದರಿಂದ ಕೆಳಗೆ ರಸ್ತೆಬದಿ ಅಂಗಡಿಯಲ್ಲಿ ಚಹಾ ಕುಡಿಯುತ್ತಾ ಕುಳಿತಿದ್ದ ವ್ಯಕ್ತಿಯ ತಲೆ ಛಿದ್ರವಾಗಿದೆ. ಪರಿಣಾಮ 21 ವರ್ಷದ ಸೈಫುಲ್ ಎಂಬಾತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ ಢಾಕಾದ ಹಾತಿರ್‌ಜೀಲ್ ಪೊಲೀಸ್ ಸ್ಟೇಷನ್ ಇನ್ಸ್‌ಪೆಕ್ಟರ್ ಹೇಳಿದ್ದಾರೆ. ಬಾಂಬ್ ನೇರವಾಗಿ ತಲೆಗೆ ಬಡಿದು ಸ್ಫೋಟಗೊಂಡಿದ್ದರಿಂದ ಸೈಫುಲ್ ತಲೆಯಿಂದ ಮಿದುಳು ಸಿಡಿದು ಹೊರಗೆಲ್ಲಾ ಚೆಲ್ಲಾಪಿಲ್ಲಿಯಾಗಿದೆ ಎಂದು ಪ್ರತ್ಯಕ್ಷದರ್ಶಿ ವಿವರಿಸಿದ್ದಾರೆ. ದಾಳಿ ನಡೆದ ಜಾಗ 1971ರ ಬಾಂಗ್ಲಾ ಮುಕ್ತಿ ಹೋರಾಟಗಾರರ ಕಚೇರಿಗೆ ಸಮೀಪವಾಗಿದೆ.

10ಗ್ರಾಂ 24 ಕ್ಯಾರಟ್ ಚಿನ್ನ 1.39 ಲಕ್ಷ ರು.

ದೆಹಲಿ: ಚಿನ್ನ, ಬೆಳ್ಳಿ ಬೆಲೆ ದಿನೇ ದಿನೇ ಏರಿಕೆ ಆಗುತ್ತಲೇ ಇದೆ. ಭಾರತದಲ್ಲಿ ಗುರುವಾರದ ವಹಿವಾಟಿನಲ್ಲಿ 22 ಕ್ಯಾರಟ್ ಚಿನ್ನ 10 ಗ್ರಾಮ್ ಬೆಲೆ 1,27,650 ರು.ಗಳಷ್ಟಿದೆ. 24 ಕ್ಯಾರಟ್(ಅಪರಂಜಿ) ಚಿನ್ನದ ಬೆಲೆ 1,39,250 ರು.ಗಳಿಗೇರಿದೆ. 1 ಕಿಲೊ ಬೆಳ್ಳಿ ಬೆಲೆ 2,34,000 ರು.ಗಳಿಗೆ ಮುಟ್ಟಿದೆ. ಬೆಂಗಳೂರಿನಲ್ಲಿ 22 ಕ್ಯಾರಟ್ ಚಿನ್ನದ ಬೆಲೆ 10 ಗ್ರಾಮ್‌ಗೆ 1,27,650 ರು. ಇದೆ, ಬೆಳ್ಳಿ ಬೆಲೆ 1 ಕಿಲೋಗೆ 2,34,000 ರು. ಇದೆ.

{ ನವನೀತ್ ರಾಣಾ } ಬಿಜೆಪಿ ನಾಯಕಿ

ಕೆಲವರು 4 ಪತ್ನಿ-19 ಮಕ್ಕಳನ್ನು ಹೊಂದಿದ್ದು, ದೇಶದ ಜನಸಂಖ್ಯೆ ಹೆಚ್ಚಿಸುತ್ತಿದ್ದಾರೆ. ಅವರು ಉದ್ದೇಶ ಹಿಂದೂಸ್ತಾನವನ್ನು ಪಾಕಿಸ್ತಾನವನ್ನಾಗಿಸುವುದು. ಅದನ್ನು ತಡೆಯಲು ಹಿಂದೂಗಳಲ್ಲಿ ವಿಶೇಷ ಮನವಿ. ದೇಶ ಪಾಕಿಸ್ತಾನದಂತೆ ಆಗಬಾರದೆಂದರೆ ಹಿಂದೂಗಳು ಕನಿಷ್ಠ 3-4 ಮಕ್ಕಳನ್ನಾದರೂ ಹೊಂದಬೇಕು. ಹಿಂದೂಗಳೇಕೆ ಒಂದೇ ಮಗುವಿಗೆ ತೃಪ್ತರಾಗಬೇಕು?

ಪ್ರಮುಖ ನಕ್ಸಲ್ ನಾಯಕ ಉಯಿಕೆ ಅಂತ್ಯ

1.10 ಕೋಟಿ ರು. ಇನಾಮಿನ 'ಗಣೇಶ್ ಉಯಿಕೆ' | **23.65 ಲಕ್ಷ ರು. ಇನಾಮಿನ ರಾಕೇಶ್, ಅಮೃತ್** | **2 ಮಹಿಳಾ ಕೇಡರ್ ಸೇರಿ 5 ನಕ್ಸಲರು ಹತ** | **ಒಡಿಶಾ ಕಂಧಮಾಲ್-ಗಂಜಾಮ್ ಅರಣ್ಯ ಕಾರ್ಯಾಚರಣೆ** | **0.303 ರೈಫಲ್, ಇನ್ಸಾಸ್ ರೈಫಲ್, ವಾಕಿಟಾಕಿ ವಶ** | **ಬುಧವಾರ ಗುರುವಾರ ಚಕಮಕಿ**

ಭುವನೇಶ್ವರ: ಒಡಿಶಾ ರಾಜ್ಯದ ಕಂಧಮಾಲ್ ಮತ್ತು ಗಂಜಾಮ್ ಜಿಲ್ಲೆಗಳ ಗಡಿ ಭಾಗದಲ್ಲಿರುವ 'ರಂಪಾ ಅರಣ್ಯ'ದಲ್ಲಿ ಬುಧವಾರ ಸಂಜೆಯಿಂದ ಗುರುವಾರ ಬೆಳಗ್ಗವರೆಗೂ ನಡೆಸಲಾದ ನಕ್ಸಲ್ ದಮನ ಕಾರ್ಯಾಚರಣೆಯಲ್ಲಿ ಜಂಟಿ ಭದ್ರತಾ ಪಡೆಗಳ ಕೈ ಮೇಲಾಗಿದೆ. ಗಡಿ ಭದ್ರತಾ ಪಡೆ(ಬಿಎಸ್‌ಎಫ್), ಕೇಂದ್ರ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್) ಮತ್ತು ಒಡಿಶಾ ಪೊಲೀಸ್ ಇಲಾಖೆಯ ವಿಶೇಷ ತಂಡ ಜಂಟಿಯಾಗಿ ಈ ಮಹತ್ವದ ಕಾರ್ಯಾಚರಣೆ ನಡೆಸಿವೆ.

1.10 ಕೋಟಿ ರು. ಇನಾಮು ಘೋಷಿಸಲಾಗಿದ್ದ ಒಬ್ಬ ಹಿರಿಯ ನಕ್ಸಲ್ ಮುಖಂಡ ಮತ್ತು ಒಟ್ಟಾರೆ 23.65 ಲಕ್ಷ ರು.ಗಳ ಬಹುಮಾನ ಘೋಷಣೆಯಾಗಿದ್ದ ಛತ್ತೀಸ್‌ಗಢ ಮೂಲದ ಇಬ್ಬರು ನಕ್ಸಲರು ಸೇರಿದಂತೆ ಐವರು ಮಾವೋವಾದಿಗಳು ತಾಸುಗಟ್ಟಲೆ ನಡೆದ ತೀವ್ರ ಸ್ವರೂಪದ ಗುಂಡಿನ ಚಕಮಕಿಯಲ್ಲಿ ಹತರಾಗಿದ್ದಾರೆ.

ಹತರಾದ ನಕ್ಸಲರಲ್ಲಿ ಇಬ್ಬರು ಮಹಿಳಾ ಕೇಡರ್ ಕೂಡಾ ಇದ್ದಾರೆ. ಉಳಿದ ಮೂವರು ಪುರುಷರಲ್ಲಿ ಒಬ್ಬಾತ 69 ವರ್ಷದ ಹಿರಿಯ ನಕ್ಸಲ್ ನಾಯಕ 'ಗಣೇಶ್ ಉಯಿಕೆ' ಎಂದು ಗುರುತಿಸಲಾಗಿದೆ. ಬೆಲ್ಘರ್ ಪೊಲೀಸ್ ಠಾಣಾ ವ್ಯಾಪ್ತಿಯ ಗುಮ್ಮಾ ಕಾಡಿನಲ್ಲಿ ಬುಧವಾರ ರಾತ್ರಿ ಗುಂಡಿನ ಚಕಮಕಿ ನಡೆದಿದೆ.

ಇನ್ನಿಬ್ಬರು ಮೃತ ನಕ್ಸಲರಲ್ಲಿ ಒಬ್ಬ ಸಿಪಿಐ(ಮಾವೋವಾದಿ) ಪ್ರದೇಶ ಸಮಿತಿ ಸದಸ್ಯ ಬರಿ ಅಲಿಯಾಸ್ ರಾಕೇಶ್, ಮತ್ತೊಬ್ಬ 'ದಲಂ' ಸದಸ್ಯ ಅಮೃತ್. ಇಬ್ಬರೂ ಛತ್ತೀಸ್‌ಗಢ ಮೂಲದವರು. ಇಬ್ಬರ ಸೆರೆಗೆ ನೆರವಾದವರಿಗೆ ಒಟ್ಟು 23.65 ಲಕ್ಷ ರು. ಬಹುಮಾನ ಘೋಷಿಸಲಾಗಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿ ಸುದ್ದಿಗಾರರಿಗೆ ವಿವರಿಸಿದ್ದಾರೆ. ಇಬ್ಬರು ಮಹಿಳಾ ಕೇಡರ್ ಶವ ಕಾರ್ಯಾಚರಣೆ ಸ್ಥಳದಲ್ಲಿ ಗುರುವಾರ ಬೆಳಗ್ಗೆ ಪತ್ತೆಯಾಗಿವೆ. ಆಕೆಯ ಗುರುತು ಸಿಕ್ಕಿಲ್ಲ ಎಂದು ಅಧಿಕಾರಿ ತಿಳಿಸಿದ್ದಾರೆ.

ಗುಪ್ತಚರ ಇಲಾಖೆ ಖಚಿತ ಮಾಹಿತಿ ಮೇರೆಗೆ ಒಡಿಶಾ ಪೊಲೀಸ್ ಎಸ್‌ಒಜಿ(ವಿಶೇಷ ಕಾರ್ಯಾಚರಣೆ ಗುಂಪು) ಸಣ್ಣ ತಂಡ ಕಾಡಿನಲ್ಲಿ ಬುಧವಾರ ಸಂಜೆ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿದಾಗ ಮಾವೋವಾದಿಗಳ ತಂಡ ಎದುರಾಗಿದೆ. ಎರಡೂ ಕಡೆಯಿಂದ ಕೆಲಕಾಲ ತೀವ್ರ ಗುಂಡಿನ ಚಕಮಕಿ ನಡೆದಿದ್ದು, 3 ಮಾವೋವಾದಿಗಳು ಹತರಾದರು. ಸ್ಥಳದಲ್ಲಿ 2 ಐಎನ್ ಎಸ್ ಎಎಸ್ ರೈಫಲ್, ಒಂದು 0.303 ರೈಫಲ್ ಸೇರಿದಂತೆ ಹಲವು ಶಸ್ತ್ರಾಸ್ತ್ರಗಳು ಮತ್ತು ವಾಕಿಟಾಕಿ ಸೆಟ್ ವಶಪಡಿಸಿಕೊಳ್ಳಲಾಗಿದೆ. ಭದ್ರತಾ ಪಡೆಗಳ ಕಡೆ ಯಾವುದೇ ಸಾವು ನೋವು ಸಂಭವಿಸಿಲ್ಲ ಎಂದು ಅಧಿಕಾರಿ ಹೇಳಿದ್ದಾರೆ.

ನೆರೆಯ ಮಲ್ಕನ್‌ಗಿರಿ ಜಿಲ್ಲೆಯಲ್ಲಿ ಒಡಿಶಾ ಡಿಜಿಪಿ ವೈ.ಬಿ.ಖುರಾನಿಯಾ ಅವರೆದುರು 22 ನಕ್ಸಲರು ಶರಣಾದ ಬೆನ್ನಲ್ಲೇ ಕಂಧಮಲ್ ಕಾರ್ಯಾಚರಣೆ ನಡೆದಿದೆ.

ನಕ್ಸಲ್ ದಮನ ಪಡೆಯ ಗುಂಡೇಟಿಗೆ ಹತರಾದ ಗಣೇಶ್ ಉಯಿಕೆ, ರಾಕೇಶ್, ಅಮೃತ್.

1.10 ಕೋಟಿ ರುಪಾಯಿ ಇನಾಮು

ಹತರಾದ ನಾಲ್ವರು ನಕ್ಸಲರಲ್ಲಿ ಒಬ್ಬನನ್ನು ಹಿರಿಯ ನಕ್ಸಲ್ ನಾಯಕ ಗಣೇಶ್ ಉಯಿಕೆ(69) ಎಂದು ಗುರುತಿಸಲಾಗಿದೆ. ಆತನಿಗೆ 'ಪಕ್ಕಾ ಹನುಮಂತು', ರಾಜೇಶ್ ತಿವಾರಿ, ರೂಪಾ ಎಂಬ ಅಡ್ಡ ಹೆಸರುಗಳೂ ಇದ್ದವು. ಉಯಿಕೆ ಸಿಪಿಐ(ಮಾವೋವಾದಿ) ಸಂಘಟನೆಯಲ್ಲಿ ಉನ್ನತ ಶ್ರೇಣಿಯ ಕೇಂದ್ರ ಸಮಿತಿ(ಪ್ರಮುಖ ನಿರ್ಧಾರ ಕೈಗೊಳ್ಳುವ ಸಮಿತಿ)ಯಲ್ಲಿ ಹಿರಿಯ ಸದಸ್ಯ ಹಾಗೂ ಒಡಿಶಾದಲ್ಲಿನ ನಕ್ಸಲ್ ಕಾರ್ಯಾಚರಣೆಗಳಿಗೆ ಮುಖಸ್ಥನಾಗಿದ್ದ. ದಂಡಕಾರಣ್ಯ ವಿಶೇಷ ವಲಯ ಸಮಿತಿಯ (ಡಿಕೆಎಸ್‌ಜೆಡ್‌ಸಿ) ಪ್ರಮುಖ ನಾಯಕನೂ ಆಗಿದ್ದ ಉಯಿಕೆ, ಕೇಂದ್ರ ಸಮಿತಿ ಮತ್ತು ಸ್ಥಳೀಯ ಘಟಕಗಳ ನಡುವಿನ ಪ್ರಮುಖ ಸಂಪರ್ಕದ ಕೊಂಡಿಯಾಗಿದ್ದ. ಒಡಿಶಾ ರಾಜ್ಯದ 'ರೆಡ್ ಕಾರಿಡಾರ್'ನಲ್ಲಿ ಉಯಿಕೆಯ ಪಾತ್ರ ಪ್ರಮುಖವಾಗಿತ್ತು. ಅಲ್ಲದೇ, ಪೂರ್ವದ ಘಟ್ಟ ಪ್ರದೇಶಗಳಲ್ಲಿ ನಕ್ಸಲ್ ಚಟುವಟಿಕೆಗಳನ್ನು ವಿಸ್ತಾರಗೊಳಿಸುವುದರಲ್ಲಿಯೂ ಉಯಿಕೆಯ ಚಿಂತನೆ-ಯೋಜನೆಗಳು ದೊಡ್ಡ ಮಟ್ಟದಲ್ಲಿ ಕೆಲಸ ಮಾಡಿದ್ದವು ಎನ್ನಲಾಗಿದೆ.

ಗಣೇಶ್ ಉಯಿಕೆ

ಅಂತಹ ಉನ್ನತ ಶ್ರೇಣಿಯ ನಕ್ಸಲ್ ಮುಖಂಡನೇ ಹತನಾಗಿರುವುದರಿಂದ ಒಡಿಶಾ ರಾಜ್ಯದ ರೆಡ್ ಕಾರಿಡಾರ್ ಬಲ ಬಹುತೇಕ ಕುಗ್ಗಿಹೋಗಿದೆ ಎಂದೇ ಅರ್ಥೈಸಲಾಗುತ್ತಿದೆ. ಹಾಗಾಗಿಯೇ ಈ ಕಾರ್ಯಾಚರಣೆಯನ್ನೂ ಮತ್ತು ಉಯಿಕೆ ಅಂತ್ಯವನ್ನೂ 'ನಕ್ಸಲ್ ಮುಕ್ತ ಭಾರತ' ಪರಿಕಲ್ಪನೆಯಲ್ಲಿನ ಹಾದಿಯಲ್ಲಿ ಪ್ರಮುಖ ಮೈಲುಗಲ್ಲು ಎಂದೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಣ್ಣಿಸಿದ್ದಾರೆ.

ಉಯಿಕೆ, ತೆಲಂಗಾಣದ ನಲಗೊಂಡ ಭಾಗದ ಚೆಂಡೈರ್ ಮಂಡಲದ ಪುಲ್ಲೆಮಲ ಹಳ್ಳಿಯಲ್ಲಿ ಜನಿಸಿದ್ದ ಎಂದು ತಿಳಿದುಬಂದಿದೆ. ಉಯಿಕೆ ತಲೆಗೆ 1.10 ಕೋಟಿ ರು. ಇನಾಮು ಘೋಷಣೆ ಆಗಿತ್ತು. ಉಯಿಕೆ ಬಂಧನಕ್ಕೆ ನೆರವಾದವರಿಗೆ ಈ ಮೊತ್ತ ಬಹುಮಾನವಾಗಿ ಸಿಗುತ್ತಿತ್ತು.

ಮಾರ್ಚ್‌ಗೆ ಭಾರತ ನಕ್ಸಲ್ ಮುಕ್ತ ದೇಶ: ಕೇಂದ್ರ ಸಚಿವ ಅಮಿತ್ ಶಾ

ಒಡಿಶಾದಲ್ಲಿ ನಡೆದ ನಕ್ಸಲ್ ದಮನ ಕಾರ್ಯಾಚರಣೆಯಲ್ಲಿ ಉಯಿಕೆ ಸೇರಿದಂತೆ ನಾಲ್ವರು ನಕ್ಸಲರು ಹತರಾಗಿರುವುದು 'ನಕ್ಸಲ್ ಮುಕ್ತ ಭಾರತ' ಪರಿಕಲ್ಪನೆಯಲ್ಲಿ ಮಹತ್ವದ ಘಟನೆಯಾಗಿದೆ. ಒಡಿಶಾ ರಾಜ್ಯ ಸಂಪೂರ್ಣ ನಕ್ಸಲ್ ಎಂದಾಗಲಿದೆ. ಭಾರತವೂ 2026ರ ಮಾ.31ರ ವೇಳೆಗೆ ನಕ್ಸಲ್ ಮುಕ್ತವಾಗಲಿದೆ ಎಂದೂ ಕೇಂದ್ರ ಗೃಹ ಸಚಿವ ಅಮಿತ್ ಶಾ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಮಾವೋವಾದಿ ಉನ್ನತ ಕೇಂದ್ರ ಸಮಿತಿಯ ಪ್ರಮುಖರ ಪತನ

ಒಡಿಶಾ ರಾಜ್ಯದಲ್ಲಿನ ಚಟುವಟಿಕೆಗಳ ಹೊಣೆ ಹೊತ್ತಿದ್ದ ಗಣೇಶ್ ಉಯಿಕೆಯನ್ನು ಗುರುವಾರದ ಕಾರ್ಯಾಚರಣೆಯಲ್ಲಿ ಹೊಡೆದುರುಳಿಸಲಾಗಿದೆ. ಅಲ್ಲಿಗೆ ಕೇಂದ್ರ ಮಾವೋವಾದಿ ಸಮಿತಿಯ ಪ್ರಮುಖ ಕೊಂಡಿಯೊಂದು ಕಳಚಿಕೊಂಡಿದೆ. ಇದಕ್ಕೂ ಮೊದಲಿನ ಕಾರ್ಯಾಚರಣೆಗಳಲ್ಲಿ ಮಾವೋವಾದಿ ಉನ್ನತ ಕೇಂದ್ರ ಸಮಿತಿಯ ಪ್ರಮುಖರಾದ ಮಾದ್ವಿ ಹಿಲ್ಡಾ(ನವೆಂಬರ್), ಪ್ರಧಾನ ಕಾರ್ಯದರ್ಶಿ ಬಸವರಾಜ್ (ಮೇ), ಛತ್ತೀಸ್‌ಗಢದ ಮಲ್ಲರಾಜಿ ರೆಡ್ಡಿ ಅಲಿಯಾಸ್ 'ಸಂಗ್ರಾಮ್', ಜಾರ್ಖಂಡ್‌ನ ಅನಾಲ್ದಾ ಅಲಿಯಾಸ್ 'ತೂಫಾನ್' ಹತರಾದರು. ಪರಿಣಾಮವಾಗಿ ಒಡಿಶಾ, ಛತ್ತೀಸ್‌ಗಢ, ಜಾರ್ಖಂಡ್, ಬಿಹಾರ, ಪಶ್ಚಿಮ ಬಂಗಾಳ ಭಾಗಗಳಲ್ಲಿನ ನಕ್ಸಲ್ ಬೇರುಗಳನ್ನು ಬುಡಮಟ್ಟ ಕಿತ್ತೊಗೆದಂತಾಗಿದೆ ಎಂದೇ ನಕ್ಸಲ್ ದಮನ ಕಾರ್ಯಾಚರಣೆಯ ಹಿರಿಯ ಅಧಿಕಾರಿಗಳು ಅರ್ಥೈಸಿದ್ದಾರೆ.

ಬೈಕ್ ಸೀಟಿನಡಿ 57 ಲಕ್ಷ ರುಪಾಯಿ ಹವಾಲಾ

ಕೊಯಮತ್ತೂರು: ತಮಿಳುನಾಡು-ಕೇರಳ ಗಡಿಯ ವೇಲಂತವಲಂ ಬಳಿ ಮೋಟಾರ್‌ಬೈಕ್‌ನಲ್ಲಿ ಸಾಗುತ್ತಿದ್ದ ವ್ಯಕ್ತಿಯನ್ನು ತಡೆದ ಪೊಲೀಸರಿಗೆ ಬೈಕ್‌ನ ಸೀಟ್ ಅಡಿಯಲ್ಲಿ 57 ಲಕ್ಷ ರು. ಪತ್ತೆಯಾಗಿದೆ.

ಕೇರಳದ ಮಲಪ್ಪುರಂ ಮೂಲದ ಆಭರಣ ವ್ಯಾಪಾರಿ ಶಬೀಕ್ (38) ಬೈಕ್ ಸೀಟಿನಡಿ ಹವಾಲಾ ಹಣ ಬಚ್ಚಿಟ್ಟು ಸಾಗಿಸುತ್ತಿದ್ದಾಗಲೇ ಸಾಕ್ಷಿ ಸಮೇತ ಪೊಲೀಸರ ಕೈಗೆ ಸಿಕ್ಕಿಬಿದ್ದ. ಆತನನ್ನು ಕೊಯಮತ್ತೂರು ಗ್ರಾಮೀಣ ಪೊಲೀಸರು ಬಂಧಿಸಿ, ಮೋಟಾರ್ ಬೈಕ್ ಮತ್ತು ಹಣ ವಶಪಡಿಸಿಕೊಂಡಿದ್ದಾರೆ.

ಶಬೀಕ್ ರಸ್ತೆಯಲ್ಲಿ ತಪಾಸಣೆ ನಡೆಸುತ್ತಿದ್ದ ಪೊಲೀಸರನ್ನು ನೋಡಿ ಬೈಕ್ ಅನ್ನು ವಿರುದ್ಧ ದಿಕ್ಕಿಗೆ ತಿರುಗಿಸಿ ಪರಾರಿಯಾಗಲು ಯತ್ನಿಸಿದ. ಬೆನ್ನಟ್ಟಿ ಹಿಡಿದ ಪೊಲೀಸರು, ಅನುಮಾನದ ಮೇರೆಗೆ ಇಡೀ ಬೈಕ್ ಪರಿಶೀಲಿಸಿದರು. ಬೈಕ್‌ನ ಸೀಟ್ ಬಡಿದಾಗ ಭಿನ್ನ ಸದ್ದು ಮೂಡಿತು. ಸೀಟ್‌ನ ರೆಕ್ಸೈನ್ ಕತ್ತರಿಸಿದರೆ ಅಲ್ಲಿ ಬಚ್ಚಿಟ್ಟಿದ್ದ ಹಣದ ಕಟ್ಟುಗಳು ಸಿಕ್ಕವು. ಅಲ್ಲದೇ ಪೆಟ್ರೋಲ್ ಟ್ಯಾಂಕನ್ನೂ ಅರ್ಧಕ್ಕೆ ಕತ್ತರಿಸಿ ಲಾಕರ್ ರೀತಿ ಮಾಡಿಕೊಂಡಿದ್ದ ಶಬೀಕ್, ಅದರಲ್ಲೂ ಕಂತೆ ಕಂತೆ ಹಣ ಅಡಗಿಸಿಟ್ಟಿದ್ದ.

ಕೊಯಮತ್ತೂರಲ್ಲಿ ಆಭರಣ ಮಾರಿದ್ದರಿಂದ ಬಂದ ಹಣ ಎಂದು ಆರೋಪಿ ಸಮಜಾಯಿಷಿ ನೀಡಲೆತ್ನಿಸಿದ. ಆದರೆ, ಚಿನ್ನ ಮಾರಾಟ ದೃಢೀಕರಿಸುವ ಯಾವುದೇ ದಾಖಲೆ ಆತನ ಬಳಿ ಇರಲಿಲ್ಲ. ಪೊಲೀಸರು ಅಷ್ಟೂ ಹಣವನ್ನು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಹಸ್ತಾಂತರಿಸಿದ್ದು, ಅಕ್ರಮ ಹಣ ಸಾಗಣೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಕ್ರಿಸ್ಮಸ್: ದೆಹಲಿ ಕ್ಯಾಥೆಡ್ರಲ್ ಚರ್ಚ್ ಸಾಮೂಹಿಕ ಪ್ರಾರ್ಥನೆಯಲ್ಲಿ ಪ್ರಧಾನಮಂತ್ರಿ ಮೋದಿ ಭಾಗಿ

ದೆಹಲಿ: ಕ್ರಿಸ್ಮಸ್ ಸಂದರ್ಭ ಪ್ರಧಾನಿ ನರೇಂದ್ರ ಮೋದಿ ದೆಹಲಿಯ ಕ್ಯಾಥೆಡ್ರಲ್ ಚರ್ಚ್ ಆಫ್ ದಿ ರಿಡೆಂಪ್ಶನ್‌ನಲ್ಲಿನ ಸಾಮೂಹಿಕ ಪ್ರಾರ್ಥನೆಯಲ್ಲಿ ಗುರುವಾರ ಮುಂಜಾನೆ ಭಾಗವಹಿಸಿದ್ದರು. ಬಿಷಪ್ ಡಾ. ಪಾಲ್ ಸ್ವರೂಪ್ ಪ್ರಧಾನಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

'ಎಲ್ಲರಿಗೂ ಕ್ರಿಸ್ಮಸ್ ಹಬ್ಬದ ಶುಭಾಶಯಗಳು. ಕ್ಯಾಥೆಡ್ರಲ್ ಚರ್ಚ್ ಆಫ್ ದಿ ರಿಡೆಂಪ್ಶನ್‌ನಲ್ಲಿ ಭಾಗವಹಿಸಿದ್ದೆ. ಕ್ರಿಸ್ಮಸ್ ಹೊಸ ಭರವಸೆ-ಎಲ್ಲರಲ್ಲಿ ದಯಾಪರತೆ ಮೂಡಿಸಲಿ, ಹಂಚಿಕೆಯ ಬದ್ಧತೆ ತರಲಿ, ಸಮಾಜದಲ್ಲಿ ಸಾಮರಸ್ಯ ಮತ್ತು ಸದ್ಭಾವನೆಯನ್ನು ಪ್ರೇರೇಪಿಸಲಿ ಎಂದು ಪ್ರಧಾನಿ ಮೋದಿ 'ಎಕ್ಸ್'ನಲ್ಲಿ ವಿಡಿಯೊ ಸಂದೇಶ ಹಂಚಿಕೊಂಡಿದ್ದಾರೆ.

ಕೆಲವು ವರ್ಷಗಳಿಂದ ಪ್ರಧಾನಿ ಮೋದಿ ಕ್ರೈಸ್ತ ಸಮುದಾಯದ ಕಾರ್ಯಕ್ರಮಗಳಿಗೆ ನಿಯಮಿತವಾಗಿ ಹಾಜರಾಗುತ್ತಿದ್ದಾರೆ. 2023ರ ಈಸ್ಟರ್‌ನಲ್ಲಿ ದೆಹಲಿಯ ಸೇಕ್ರೆಡ್ ಹಾರ್ಟ್ ಕ್ಯಾಥೆಡ್ರಲ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. 2023ರ ಕ್ರಿಸ್ಮಸ್ ವೇಳೆ ದೆಹಲಿ ಲೋಕ ಕಲ್ಯಾಣ್ ಮಾರ್ಗದಲ್ಲಿರುವ ತಮ್ಮ ನಿವಾಸದಲ್ಲಿ ಕಾರ್ಯಕ್ರಮ ಆಯೋಜಿಸಿದ್ದರು. ಸಚಿವ ಜಾರ್ಜ್ ಕುರಿಯನ್ ನಿವಾಸದಲ್ಲಿ 2024ರಲ್ಲಿ ಭೋಜನಕೂಟ ಮತ್ತು ಭಾರತದ ಕ್ಯಾಥೋಲಿಕ್ ಬಿಷಪ್‌ಗಳ ಸಮ್ಮೇಳನದಲ್ಲೂ ಭಾಗಿಯಾಗಿದ್ದರು.

ರಾಷ್ಟ್ರೀಯ ಪ್ರೇರಣಾ ಸ್ಥಳ ಲೋಕಾರ್ಪಣೆ

ಶ್ಯಾಮ್‌ಪ್ರಸಾದ್, ದೀನದಯಾಳ್, ಅಟಲ್ ಪ್ರತಿಮೆ ಅನಾವರಣ

ಲಖನೌ: ಮಾಜಿ ಪ್ರಧಾನಿ 'ಭಾರತ ರತ್ನ' ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮ ದಿನವಾದ ಇಂದು (ಡಿ.25) ಅವರ ಜೀವನ-ಆದರ್ಶಗಳನ್ನು ದೇಶದ ಜನತೆ ಸದಾ ನೆನಪಿಸುವ, ಆ ಮೂಲಕ ಪ್ರೇರಣೆ ಉಂಟು ಮಾಡುವ ಉದ್ದೇಶದಿಂದ ಉತ್ತರ ಪ್ರದೇಶದ ಲಖನೌ ಬಳಿ ನಿರ್ಮಿಸಿದ 'ರಾಷ್ಟ್ರೀಯ ಪ್ರೇರಣಾ ಸ್ಥಳ'ವನ್ನು ಪ್ರಧಾನಿ ನರೇಂದ್ರ ಮೋದಿ ಗುರುವಾರ ಲೋಕಾರ್ಪಣೆಗೊಳಿಸಿದರು.

ಸುವಿಶಾಲವಾದ ಪ್ರೇರಣಾ ಸ್ಥಳದಲ್ಲಿ ಜನಸಂಘ (ಬಿಜೆಪಿಯ ಮೂಲ) ಸಂಸ್ಥಾಪಕರಾದ ಶ್ಯಾಮಪ್ರಸಾದ್ ಮುಖರ್ಜಿ ಮತ್ತು ಪಂಡಿತ್ ದೀನದಯಾಳ್ ಉಪಾಧ್ಯಾಯ ಮತ್ತು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರುಗಳ 65 ಅಡಿ ಎತ್ತರದ ಕಂಚಿನ ಪ್ರತಿಮೆಗಳನ್ನು ಸ್ಥಾಪಿಸಲಾಗಿದೆ. ರಾಷ್ಟ್ರೀಯ ಪ್ರೇರಣಾ ಸ್ಥಳವನ್ನು 65 ಎಕರೆಯಲ್ಲಿ 230 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಅತ್ಯಾಧುನಿಕ ವಸ್ತುಸಂಗ್ರಹಾಲಯವನ್ನು ಬಿಜೆಪಿ ಚಿಹ್ನೆಯಾದ 'ಕಮಲ' ಆಕಾರದಲ್ಲಿ ವಿನ್ಯಾಸಗೊಳಿಸಿದ್ದು, ಒಟ್ಟು ನಿರ್ಮಾಣ 98 ಸಾವಿರ ಚದರಡಿಗಳಷ್ಟು ವಿಶಾಲ ಪ್ರದೇಶದಲ್ಲಿ ಹರಡಿಕೊಂಡಿದೆ. ಸಂಕೀರ್ಣದಲ್ಲಿನ ವಸ್ತು ಸಂಗ್ರಹಾಲಯಕ್ಕೂ ಭೇಟಿ ನೀಡಿದ ಮೋದಿ, ಮೂವರೂ ನಾಯಕರ ಜೀವನ-ಕೊಡುಗೆಗಳನ್ನು ಬಿಂಬಿಸುವ ಪ್ರದರ್ಶನವನ್ನು ವೀಕ್ಷಿಸಿದರು. ದೇಶ ನಿರ್ಮಾಣಕ್ಕೆ ಮೂವರು ನಾಯಕರ ಕನಸು-ಆದರ್ಶ-ಕೊಡುಗೆಗಳನ್ನು ಜನರಿಗೆ ತಿಳಿಸಿಕೊಡುತ್ತದೆ.

ನಂತರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ, ರಾಷ್ಟ್ರೀಯ ಪ್ರೇರಣಾ ಸ್ಥಳ ಭಾರತವನ್ನು ಸ್ವಾಭಿಮಾನ, ಏಕತೆ ಮತ್ತು ಸೇವೆಯ ಹಾದಿಯಲ್ಲಿ ಮುನ್ನಡೆಸುವ ಚಿಂತನೆಯನ್ನು ಪ್ರತಿನಿಧಿಸುತ್ತದೆ. ಮೂವರೂ ನಾಯಕರ ಅತ್ಯುನ್ನತ ಪ್ರತಿಮೆಗಳು ರಾಷ್ಟ್ರದ ಜನತೆಗೆ ಸ್ಫೂರ್ತಿದಾಯಕವಾಗಿರಲಿವೆ. ನಮ್ಮ ಪ್ರತಿಹೆಜ್ಜೆ-ಪ್ರಯತ್ನವೂ ರಾಷ್ಟ್ರ ನಿರ್ಮಾಣಕ್ಕೆ ಸಮರ್ಪಿತವಾಗಿರಬೇಕೆಂಬ ಸಂದೇಶ ವನ್ನು ಈ ಪ್ರೇರಣಾ ತಾಣ ನೀಡುತ್ತದೆ ಎಂದರು.

ಈ ಸ್ಥಳದ 30 ಎಕರೆ ಜಾಗ ಹಲವು ದಶಕಗಳಿಂದ ಕಸದಿಂದ ತುಂಬಿಕೊಂಡಿತ್ತು. ಕಳೆದ 3 ವರ್ಷಗಳಲ್ಲಿ ಅದನ್ನೆಲ್ಲಾ ತೆರವುಗೊಳಿಸಿ ಚೈತನ್ಯದಾಯಕ ಪ್ರೇರಣಾಸ್ಥಳವಾಗಿಸುವಲ್ಲಿ ಶ್ರಮಿಸಿದ ಎಲ್ಲಾ ಕಾರ್ಮಿಕರು-ಕುಶಲಕರ್ಮಿಗಳಿಗೆ ಅಭಿನಂದನೆ ಸಲ್ಲಿಸುವೆ.

ಒಂದು ಕುಟುಂಬದ ಪ್ರಗತಿ!

ದಶಕಗಳ ಹಿಂದೆಯೇ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರು 'ಅಂತ್ಯೋದಯ'ದ ಕನಸು ಕಂಡರು. ಸಮಾಜದ ಕೊನೆಯಲ್ಲಿರುವ ವ್ಯಕ್ತಿಯ ಮುಖದ ನಗು ಮೂಡಿದರೆ ಅದುವೇ ಭಾರತದ ಪ್ರಗತಿ ಎಂದಿದ್ದರು. ಅವರ ಆ ಕನಸನ್ನೇ ನಮ್ಮ ಸರಕಾರ ಸಂಕಲ್ಪವನ್ನಾಗಿಸಿಕೊಂಡಿದೆ ಎಂದರು. ಆದರೆ, ಕೆಲವು ನಾಯಕರಿಗೆ 'ಭಾರತದ ಅಭಿವೃದ್ಧಿ' ಎಂಬುದು 'ಒಂದು ಕುಟುಂಬದ' ಪ್ರಗತಿ ಎಂಬುದೇ ಆಗಿದೆ ಎಂದು ಮಾರ್ಮಿಕವಾಗಿ ನುಡಿದ ಮೋದಿ, ಕಾಂಗ್ರೆಸ್‌ನತ್ತ ಟೀಕಾಸ್ತ್ರ ಪ್ರಯೋಗಿಸಿದರು.

ಟೆಲಿಕಾಂ ಕ್ರಾಂತಿಗೆ ಉತ್ತೇಜನ

'ಡಿಜಿಟಲ್' ಗುರುತು ಬಗ್ಗೆ ಇಂದು ಬಹಳ ಚರ್ಚೆಯಾಗುತ್ತಿದೆ. ಅದಕ್ಕೆ ಬುನಾದಿ ಹಾಕಿದ್ದೇ ಅಟಲ್ ಜಿ ಸರಕಾರ. ಅವರ ಆಡಳಿತದಲ್ಲಿ ಶುರುವಾದ 'ವಿಶೇಷ ಕಾರ್ಡ್' ನೀಡುವ ಕೆಲಸ ಈಗ 'ಆಧಾರ್' ಹೆಸರಲ್ಲಿ ಪ್ರಸಿದ್ಧವಾಗಿದೆ. ಭಾರತದಲ್ಲಿ ಟೆಲಿಕಾಂ ಕ್ರಾಂತಿಯ ವೇಗವನ್ನು ಹೆಚ್ಚಿಸಿದ ಶ್ರೇಯಸ್ಸು ಕೂಡಾ ಅಟಲ್ ಜಿ ಅವರಿಗೆ ಸಲ್ಲುತ್ತದೆ. ಅವರ ನೇತೃತ್ವದ ಎನ್‌ಡಿಎ ಸರಕಾರ ರೂಪಿಸಿದ ಟೆಲಿಕಾಂ ನೀತಿಯಿಂದಾಗಿ ಪ್ರತಿ ಮನೆಗೆ ಫೋನ್-ಇಂಟರ್ನೆಟ್ ಸಂಪರ್ಕ ನೀಡುವುದು ಸುಲಭವಾಯಿತು. ಈಗ ಭಾರತ ವಿಶ್ವದಲ್ಲೇ ಅತಿ ಹೆಚ್ಚು ಮೊಬೈಲ್, ಇಂಟರ್ನೆಟ್ ಬಳಕೆದಾರರಿರುವ ದೇಶಗಳಲ್ಲಿ ಒಂದಾಗಿದೆ ಎಂದು ಮೋದಿ ಹೆಮ್ಮೆ ವ್ಯಕ್ತಪಡಿಸಿದರು.

ಎಚ್-1ಬಿ ವೀಸಾ ಲಾಟರಿ ಪ್ರಕ್ರಿಯೆಗೂ ಟ್ರಂಪ್ ತಡೆ

ವಾಷಿಂಗ್ಟನ್: ಉದ್ಯೋಗದ ಕಾರಣ ಅಮೆರಿಕಕ್ಕೆ ಬರುವವರಿಗೆ ಕೊಡಲಾಗುವ ಎಚ್-1ಬಿ ವೀಸಾಗೆ ಸಲ್ಲಿಸಿದ ಲಕ್ಷಾಂತರ ಅರ್ಜಿಗಳಲ್ಲಿ 85,000 ಅರ್ಜಿಗಳನ್ನು ಆರಿಸಲು ಲಾಟರಿ ಕ್ರಮ ಬಳಸಲಾಗುತ್ತಿತ್ತು. ಈಗ ಡೊನಾಲ್ಡ್ ಟ್ರಂಪ್ ಆ ವ್ಯವಸ್ಥೆಗೂ ಈಗ ಪೂರ್ಣವಿರಾಮ ಇಟ್ಟಿದ್ದಾರೆ. ಎಚ್1-ಬಿ ವೀಸಾ ಸಿಗುವುದು ಕಷ್ಟವಾದ ಕಾರಣ ಲಾಟರಿ ಆಯ್ಕೆ ನಂಬಿಕೊಂಡಿದ್ದ ವರಿಗೆ ಟ್ರಂಪ್ ಕ್ರಮದಿಂದ ನಿರಾಸೆಯಾಗಿದೆ.

2026ರ ಫೆ.27ರಿಂದ ಲಾಟರಿ ಬದಲಾಗಿ ಹೊಸ ನಿಯಮ ಜಾರಿಗೆ ಬರಲಿದ್ದು, ಅಧಿಕಾರಿಗಳೇ ಎಲ್ಲಾ ವೀಸಾದಾರರ ಅರ್ಜಿಗಳನ್ನು ಪರಿಶೀಲಿಸಿ, ಅಧಿಕ ಕೌಶಲ-ವೇತನ ಇರುವವರಿಗೆ ವೀಸಾ ನೀಡಲು ಅನುಮೋದಿಸುತ್ತಾರೆ ಎಂದು ತಿಳಿದುಬಂದಿದೆ. ಅಮೆರಿಕದ ಕಂಪನಿ ಗಳು ವೆಚ್ಚ ಕಡಿತ ಉದ್ದೇಶದಿಂದ ಕಡಿಮೆ ವೇತನದವರನ್ನು ವಿದೇಶಗಳಿಂದ ಕರೆಸಿಕೊಳ್ಳುತ್ತಿದ್ದವು. ಅದಕ್ಕಾಗಿ ಲಾಟರಿ ಮಾದರಿ ವೀಸಾ ಹಂಚಿಕೆ ವ್ಯವಸ್ಥೆ ಕಂಪನಿಗಳಿಗೆ ಅನುಕೂಲ ಕಾರಿಯಾಗಿತ್ತು. ಎಚ್-1ಬಿ ವೀಸಾ ಪಡೆಯುವ ವರಲ್ಲಿ ಶೇ.70ರಷ್ಟು ದೊಡ್ಡ ಪಾಲು ಭಾರತೀಯರದ್ದೇ ಆಗಿದೆ. ಇದರಲ್ಲಿ ಕೌಶಲದ ಕೆಲಸಗಳು ಹಾಗೂ ಉನ್ನತ ಹುದ್ದೆಗಾಗಿ ಅಮೆರಿಕಕ್ಕೆ ಹೋಗುವವರು ಇರುತ್ತಾರಾದರೂ ಸಂಖ್ಯೆ ಕಡಿಮೆ. ಕಡಿಮೆ ಸಂಬಳವಾದರೂ ಸೈ, ಒಮ್ಮೆ ಅಮೆರಿಕ ದೊಳಕ್ಕೆ ಸೇರಿಕೊಳ್ಳಬೇಕು ಎಂಬ ಆಸೆ ಇಟ್ಟುಕೊಂಡಿದ್ದರಿಗೆ ಕನಸು ಈಡೇರುವುದು ಕಷ್ಟ.

101ನೇ ಜಯಂತಿ: 100 ಹೊಸ ಅಟಲ್ ಕ್ಯಾಂಟೀನ್

ದೆಹಲಿ: ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜಯಂತಿ ಹಿನ್ನೆಲೆ ದೆಹಲಿ ಸರಕಾರ ಗುರುವಾರ ರಾಜಧಾನಿ ದೆಹಲಿಯಲ್ಲಿ 100 ಹೊಸ 'ಅಟಲ್ ಕ್ಯಾಂಟೀನ್' ಆರಂಭಿಸಿದೆ. ಕ್ಯಾಂಟೀನ್‌ನಲ್ಲಿ ಕೇವಲ 5 ರು. ಗೆ ಊಟ ಸಿಗಲಿದೆ. ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಲಾಜಪತ್‌ನ ನೆಹರೂ ನಗರದಲ್ಲಿ ಮೊದಲ ಕ್ಯಾಂಟೀನ್ ಉದ್ಘಾಟಿಸಿದರು. ಯಾರೂ ಹಸಿವಿನಿಂದ ಮಲಗಬಾರದು ಎಂಬ ಉದ್ದೇಶದಿಂದ ಆರಂಭವಾದ ಈ ಯೋಜನೆಯು ದೆಹಲಿ ಬಡವರಿಗೆ ದೊಡ್ಡ ಆಸರೆಯಾಗಲಿದೆ. ಇದು ನಿರ್ಧಾರ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಬಡವರ ಕಡೆಗೆ ಇದ್ದ ಕಾಳಜಿಯನ್ನು ನೆನಪಿಸುತ್ತದೆ ಎಂದು ಮುಖ್ಯಮಂತ್ರಿ ರೇಖಾ ಗುಪ್ತಾ ತಿಳಿಸಿದ್ದಾರೆ.

ಪ್ರತಿ ಕ್ಯಾಂಟೀನ್‌ನಲ್ಲಿ ದಿನಕ್ಕೆ 500 ಜನರಿಗೆ ಮಧ್ಯಾಹ್ನ ಮತ್ತು ರಾತ್ರಿ ಊಟದ ವ್ಯವಸ್ಥೆ ಇರಲಿದ್ದ, ಈ ಮೂಲಕ ಒಟ್ಟಾರೆಯಾಗಿ ದಿನಕ್ಕೆ 1 ಲಕ್ಷ ಜನರಿಗೆ ಅತಿ ಕಡಿಮೆ ಬೆಲೆಗೆ ಊಟ ಒದಗಿಸಲಿದೆ ಎಂದು ನಗರಾಭಿವೃದ್ಧಿ ಸಚಿವ ಆಶಿಷ್ ಸೂದ್ ಸುದ್ದಿಗಾರರಿಗೆ ತಿಳಿಸಿದರು.

ರೋಟಿ, ದಾಲ್, ತರಕಾರಿ, ಅನ್ನ ಮತ್ತು ಉಪ್ಪಿನಕಾಯಿ ಸೇರಿದಂತೆ ಪೋಷಕಾಂಶವುಳ್ಳ ಆಹಾರ ಲಭ್ಯವಿರುತ್ತದೆ. ಒಂದು ಊಟ ತಯಾರಿಸಲು 30 ರೂ. ವೆಚ್ಚವಾಗಿದ್ದರೂ, ಸರಕಾರದ ಸಬ್ಸಿಡಿಯಿಂದ 5 ರು. ಗೆ ಒದಗಿಸಲಾಗುತ್ತಿದೆ ಎಂದರು.

ಮುಂದಿನ ಒಂದು ವಾರ ದಟ್ಟ ಮಂಜು, ಶೀತಗಾಳಿ

ದೆಹಲಿ: ಕೆಲವು ಪ್ರದೇಶಗಳ ಹೊರತಾಗಿ ಇಡೀ ಭಾರತ ದೇಶವೇ ಪ್ರಸ್ತುತ ತೀವ್ರ ಚಳಿಯಿಂದ ನಡುಗುತ್ತಿದೆ. ದಕ್ಷಿಣ ಭಾರತದ ಬಯಲು ಪ್ರದೇಶಗಳಿಂದ ಆರಂಭಿಸಿ ಉತ್ತರ ಮತ್ತು ಪೂರ್ವ ಭಾರತದ ಪರ್ವತ ಪ್ರದೇಶಗಳಲ್ಲೆಲ್ಲಾ ಚಳಿಗಾಲದ ಪೂರ್ಣ ಪರಿಣಾಮವಾಗಿದೆ. ಉತ್ತರ, ಮಧ್ಯ ಮತ್ತು ಪೂರ್ವ ಭಾರತದ ಹೆಚ್ಚಿನ ಭಾಗಗಳಲ್ಲಿ ಮುಂದಿನ 1 ವಾರ ದಟ್ಟವಾದ ಮಂಜು ಸುರಿಯುವುದು, ಶೀತಗಾಳಿ ಬೀಸುವುದು ಮುಂದುವರಿಯಲಿದೆ. ಡಿ.31ರ ವರೆಗೂ ರಾತ್ರಿ-ಮುಂಜಾನೆ ಉತ್ತರ ಪ್ರದೇಶ, ಹರಿಯಾಣ, ಚಂಡೀಗಢ ಮತ್ತು ಪಂಜಾಬ್‌ನಲ್ಲಿ ದಟ್ಟವಾಗಿ ಮಂಜು ಕವಿದಿರಲಿದೆ. ಹಿಮಾಚಲ ಪ್ರದೇಶ, ಉತ್ತರಾಖಂಡದಲ್ಲಿ ಡಿ.29ರವರೆಗೆ ದಟ್ಟವಾದ ಮಂಜು ಸುರಿಯಲಿದೆ. ಜಮ್ಮು ಭಾಗದಲ್ಲಿ ಡಿ.27ರವರೆಗೆ ದಟ್ಟ ಮಂಜು ಇರಬಹುದು. ಬಿಹಾರ, ಒಡಿಶಾ ಮತ್ತು ಈಶಾನ್ಯ ಅಸ್ಸಾಂನಲ್ಲಿ ಡಿ.29ರವರೆಗೆ, ಪಶ್ಚಿಮ ಬಂಗಾಳ, ಪೂರ್ವ ಮಧ್ಯಪ್ರದೇಶ, ಈಶಾನ್ಯ ಭಾರತದ ಹಲವೆಡೆ ಡಿ.26ರವರೆಗೆ ದಟ್ಟ ಮಂಜು ಕವಿದಿರಲಿದೆ ಎಂದು ಭಾರತ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ. ಡಿ.26-27ರಲ್ಲಿ ವಾಯುವ್ಯ ಭಾರತದ ಕೆಲವೆಡೆ ಶೀತಲ ಅಲೆ ಏಳಲಿದೆ. ವಾಯುವ್ಯ ಮತ್ತು ಪೂರ್ವ ಭಾರತದಲ್ಲಿ ಮುಂದಿನ 2 ದಿನ ಕನಿಷ್ಠ ತಾಪಮಾನದಲ್ಲಿ 2-4 ಡಿಗ್ರಿ, ಸೆ.ಗಳಷ್ಟು ತಗ್ಗುವ ಸಾಧ್ಯತೆಯಿದೆ ಎಂದು ಐಎಂಡಿ ತಿಳಿಸಿದೆ

3 ಹೊಸ ವಿಮಾನಯಾನ ಸಂಸ್ಥೆಗೆ ಕೇಂದ್ರ ಅನುಮತಿ

ದೆಹಲಿ: ಇಂಡಿಗೊ ವಿಮಾನಯಾನ ಸಂಸ್ಥೆಯ ಅವ್ಯವಸ್ಥೆಯಿಂದಾಗಿ ಸಾವಿರಾರು ಪ್ರಯಾಣಿಕರು ಒಂದು ವಾರ ಕಾಲ ಪರಿತಪಿಸಿದ್ದನ್ನು ಭಾರತೀಯರು ಮರೆತಿಲ್ಲ. ಆ ಕಹಿ ನೆನಪು ಮಾಸುವಂತೆ ಮಾಡಲು ಮೂರು ಕಂಪನಿಗಳು ಹೊಸದಾಗಿ ಸದ್ಯದಲ್ಲೇ ವಿಮಾನಯಾನ ಸೇವೆ ಆರಂಭಿಸಲಿವೆ. ಮೂರು ಹೊಸ ವಿಮಾನಯಾನ ಸಂಸ್ಥೆಗಳಿಗೆ ಕೇಂದ್ರ ಸರಕಾರ ಅನುಮತಿ ನೀಡಿದೆ.

ಅಲ್ ಹಿಂದ್ ಏರ್ ಮತ್ತು ಫ್ಲೈಎಕ್ಸ್‌ಪ್ರೆಸ್ ಕಂಪನಿಗಳಿಗೆ ಬುಧವಾರವಷ್ಟೇ ಕೇಂದ್ರ ಸರಕಾರದಿಂದ ನಿರಾಕ್ಷೇಪಣಾ ಪ್ರಮಾಣಪತ್ರ(ಎನ್‌ಒಸಿ) ಪಡೆದುಕೊಂಡಿವೆ. 'ಶಂಖ್ ಏರ್'ಗೆ ಈ ಮೊದಲೇ ಅನುಮತಿ ಸಿಕ್ಕಿದೆ. ಕೇಂದ್ರದ ನಾಗರಿಕ ವಿಮಾನಯಾನ ಸಚಿವಾಲಯ ಕಳೆದವಾರ ಸಭೆ ನಡೆಸಿ ಹೊಸ ವಿಮಾನಯಾನ ಕಂಪನಿಗಳಿಗೆ ಅನುಮತಿ ನೀಡುವ ಪ್ರಕ್ರಿಯೆ ಪೂರ್ಣಗೊಳಿಸಿದೆ. ಭಾರತದ ವಾಯುಯಾನ ಕ್ಷೇತ್ರದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚುತ್ತಲೇ ಇದೆ. ಅದಕ್ಕೆ ತಕ್ಕಂತೆ ವಿಮಾನಗಳ ಸಂಪರ್ಕ ಸೇವೆಯನ್ನು ಒದಗಿಸಬೇಕಾದ ಕಾರಣ ಹೆಚ್ಚಿನ ವಿಮಾನಯಾನ ಸಂಸ್ಥೆಗಳಿಗೆ ಅವಕಾಶ ಮಾಡಿಕೊಡಲು ಸಚಿವಾಲಯ ನಿರ್ಧರಿಸಿದೆ ಎನ್ನಲಾಗಿದೆ.

ಕೇಂದ್ರದ ವಿಶೇಷ ಬಗೆಯ 'ಉಡಾನ್' ಯೋಜನೆ ದೇಶೀ ವಿಮಾನಯಾನ ಸಂಪರ್ಕ ಸೇವೆ ಹೆಚ್ಚಿಸಲೆಂದೇ ಸಣ್ಣ ವಿಮಾನಯಾನ ಸಂಸ್ಥೆಗಳಾದ ಸ್ಟಾರ್ ಏರ್, ಇಂಡಿಯ ಒನ್ ಏರ್, ಫ್ಲೈ91 ಕಂಪನಿಗಳಿಗೆ ಅವಕಾಶ ಮಾಡಿಕೊಡುತ್ತಿದೆ. ದೇಶೀ ಕ್ಷೇತ್ರದಲ್ಲಿಯೂ ಬೆಳವಣಿಗೆಗೆ ಹೆಚ್ಚಿನ ಅವಕಾಶವಿದೆ ಎಂದು ನಾಗರಿಕ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು 'ಎಕ್ಸ್' ಸಂದೇಶದಲ್ಲಿ ವಿವರಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ ಶುಕ್ರವಾರ ಬೆಳಗ್ಗೆ 10:00 ರಿಂದ ಸಂಜೆ 5.00 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. 66/11 ಕೆ.ವಿ. ಚಂದ್ರಾಲೇಔಟ್ ಉಪಕೇಂದ್ರ ವ್ಯಾಪ್ತಿಯ ಆರ್.ಪಿ.ಸಿ. ಲೇಔಟ್, ರೆಮ್ಕೋ ಲೇಔಟ್, ಕಲ್ಯಾಣ್ ಲೇಔಟ್, ಸುಬ್ಬಣ್ಣ ಗಾರ್ಡನ್, ವಿಡಿಯಾ ಲೇಔಟ್, ಚಂದ್ರಾ ಲೇಔಟ್, ಬಾಪೂಜಿ ಲೇಔಟ್, ವಿನಾಯಕ ಲೇಔಟ್, ಮೂಡಲಪಾಳ್ಯ, ಸ್ಕೈಲೈನ್ ಅಪಾರ್ಟ್‌ಮೆಂಟ್, ಕೆನರಾ ಬ್ಯಾಂಕ್ ಕಾಲೋನಿ, ವಿದ್ಯಾಗಿರಿ ಲೇಔಟ್, ಗಂಗೊಂಡನಹಳ್ಳಿ, ಸುವರ್ಣ ಲೇಔಟ್, ಬಿಡಿಎ 13ನೇ ಮತ್ತು 14ನೇ ಬ್ಲಾಕ, ಕೆಂಗುಂಟೆ, ಭೈರವೇಶ್ವರನಗರ, ನಾಗರಬಾವಿ ಕೊಕನಟ್ ಗಾರ್ಡನ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು. 66/11 ಕೆ.ವಿ ಕಟ್ಟಿಗೇನಹಳ್ಳಿ ವಿದ್ಯುತ್ ಕೇಂದ್ರ ವ್ಯಾಪ್ತಿಯಲ್ಲಿ ಬೆಳಗ್ಗೆ 11:00ರಿಂದ 4:00 ಗಂಟೆವರೆಗೆ ಉತ್ತರ ಗೇಟ್ 1, 2,3, ರಾಯಭಾರ ಕಚೇರಿ, ಫಿಲಿಪ್ಸ್ ಕಂಪನಿ, ದ್ವಾರಕಾನಗರ, ಬಾಬಾನಗರ, ಕಟ್ಟಿಗೇನಹಳ್ಳಿ ಸರ್ಡಿಂಗ್, ಬಾಗಲೂರು ಕ್ರಾಸ್ ಮತ್ತು ಬಾಗಲೂರು ಮುಖ್ಯ ರಸ್ತೆ, ಮಣಿಪಾಲ ಕಾಲೇಜು,ಬಾಗಲೂರು ಕ್ರಾಸ್ ವಿನಾಯಕನಗರ, ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: 220/66/11 ಕೆವಿ ಎಸ್‌ಆರ್‌ಎಸ್ ಪೀಣ್ಯ ಸಬ್ ಸ್ಟೇಷನ್ ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆ ಶನಿವಾರ ಬೆಳಗ್ಗೆ 10.00ರಿಂದ ಸಂಜೆ 5.00 ಗಂಟೆಯವರೆಗೆ

ವಿದ್ಯುತ್ ವ್ಯತ್ಯಯವಾಗಲಿದೆ. ಪೀಣ್ಯ ವಿಭಾಗದ ಎನ್-4/ ಎನ್-5/ ಎನ್-7 ಉಪ ವಿಭಾಗದ ಪೀಣ್ಯ ಗ್ರಾಮ, ಎಸ್‌ಆರ್‌ಎಸ್ ರಸ್ತೆ, 4 ನೇ ಬ್ಲಾಕ, 2 ನೇ ಬ್ಲಾಕ್, ಎಂಇಐ ಫ್ಯಾಕ್ಟರಿ, ರಾಜಗೋಪಾಲ ನಗರ, ಕಸ್ತೂರಿ ಬಡವಾಣೆ, ಜಿಕೆಡಬ್ಲ್ಯು ಲೇಔಟ್, ಬೈರವೇಶ್ವರ ನಗರ, 10 ನೇ ಕ್ರಾಸ್, 1 ನೇ ಹಂತದ ಪೀಣ್ಯ ಕೈಗಾರಿಕಾ ಪ್ರದೇಶ, ಚಾಮುಂಡಿಪುರ, ರಾಜೇಶ್ವರಿನಗರ, ಆಕಾಶ್ ಥಿಯೇಟರ್ ರಸ್ತೆ, ರಾಜೀವ್ ಗಾಂಧಿ ನಗರ ಭಾಗಶಃ, ಚೌಡೇಶ್ವರಿ ನಗರ ಭಾಗಶಃ, ಲಗ್ಗೆರೆ ಹಳೆ ಗ್ರಾಮ ಭಾಗಶಃ ಪೀಣ್ಯ 4 ನೇ ಹಂತ, 4 ನೇ ಮುಖ್ಯ, 8 ನೇ ಅಡ್ಡ ಮತ್ತು ಸುತ್ತಮುತ್ತಲಿನ ಪ್ರದೇಶ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಹಣಕಾಸಿನ ಸಲಹೆ ಜಾಲ ವಿಸ್ತರಣೆ

ಬೆಂಗಳೂರು: ಆನ್‌ಲೈನ್ ಮೂಲಕ ಹಣಕಾಸಿನ ಸಲಹೆ, ಮಾಹಿತಿ ಒದಗಿಸುವ ಪಾಲಿಸಿಬಜಾರ್ ಕಂಪನಿಯು ಗ್ರಾಹಕರಿಗೆ ಹೆಚ್ಚಿನ ಸೇವೆ ಒದಗಿಸುವ ಉದ್ದೇಶದಿಂದ ತನ್ನ ಆಫ್‌ಲೈನ್ ಜಾಲವನ್ನು ವಿಸ್ತರಿಸಲು ಮುಂದಾಗಿದೆ. ಗ್ರಾಹಕರ ಜತೆ ಅಗತ್ಯ ಮಾತುಕತೆ ನಡೆಸಲು ಕಂಪನಿಯು ಈಗ 400ಕ್ಕೂ ಹೆಚ್ಚು ಪ್ರತಿನಿಧಿಗಳನ್ನು ಹೊಂದಿದ್ದು, ಅವರ ಸಂಖ್ಯೆಯನ್ನು 600ಕ್ಕಿಂತ ಹೆಚ್ಚು ಮಾಡಲಿದೆ. ಗ್ರಾಹಕರು ಪ್ರಮುಖವಾದ ಹಣಕಾಸಿನ ತೀರ್ಮಾನಗಳನ್ನು ಕೈಗೊಳ್ಳುವಾಗ ವೈಯಕ್ತಿಕವಾಗಿ ಸಲಹೆ ಪಡೆಯಲು ಬಯಸುವುದು ಹೆಚ್ಚಾಗುತ್ತಿದೆ. ಜನರು ಹಣಕಾಸಿನ ಸಂಗತಿಗಳ ಬಗ್ಗೆ ಆನ್‌ಲೈನ್ ಮೂಲಕ ಮಾಹಿತಿ ಹುಡುಕುತ್ತಾರೆ. ನಂತರ ಅವರು ತಜ್ಞರ ಜತೆ ಮಾತುಕತೆ ನಡೆಸಲು ಬಯಸಬಹುದು. ಅವರು ತಮ್ಮಲ್ಲಿನ ಪ್ರಶ್ನೆಗಳನ್ನು ಕೇಳಲು, ಮಾತನಾಡಲು ಒಬ್ಬರು ಬೇಕು ಎಂದು ಬಯಸುತ್ತಾರೆ ಎಂದು ಪಾಲಿಸಿಬಜಾರ್‌ನ ವಿಮೆ ವಿಭಾಗದ ಮುಖ್ಯಸ್ಥ ವರುಣ್ ಅಗರ್ವಾಲ್ ಹೇಳಿದ್ದಾರೆ.

28ಕ್ಕೆ ಅಂಕಿತ ಪುಸ್ತಕದ ಸಾವಿರನೇ ಕೃತಿ ಬಿಡುಗಡೆ

ಬೆಂಗಳೂರು: ಅಂಕಿತ ಪುಸ್ತಕದ 1000 ನೇ ಪುಸ್ತಕ ಬಿಡುಗಡೆ ಮತ್ತು 30 ನೇ ವಾರ್ಷಿಕೋತ್ಸವ ಕಾರ್ಯಕ್ರಮ ಡಿ.28 ರಂದು ಬೆಳಗ್ಗೆ 10.30 ಕ್ಕೆ ನಗರದ ಬಸವನಗುಡಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಆಯೋಜಿಸಲಾಗಿದೆ. ಈ ಕುರಿತು ಪ್ರಕಟಣೆ ಹೊರಡಿಸಿರುವ ಅಂಕಿತ ಪುಸ್ತಕದ ಪ್ರಕಾಶ್ ಕಂಬತ್ತಳ್ಳಿ, ಈ ವೇಳೆ ಸಾಹಿತಿ ಬರಗೂರು ರಾಮಚಂದ್ರಪ್ಪ, ನಿರ್ದೇಶಕ ಜಯಂತ ಕಾಯ್ಕಿಣಿ, ಸಾಹಿತಿಗಳಾದ ಹರೀಶ್ ಕೇರ, ಜೋಗಿ ಸೇರಿದಂತೆ ಹಲವರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬರೀ ಭಾಷಣ ಮಾಡಿಕೊಂಡು ಮುಂದೆ ಬಂದಿಲ್ಲ

ಪರೋಕ್ಷವಾಗಿ 'ಕೂಲಿ' ಕೇಳಿದ ಡಿಸಿಎಂ ಡಿಕೆಶಿ | ದೆಹಲಿಯಿಂದ ಮರಳಿದ ಬೆನ್ನಿಗೆ ಎಐಸಿಸಿ ಅಧ್ಯಕ್ಷರ ಭೇಟಿ

ಬೆಂಗಳೂರು: ನಾನು ಕೇವಲ ವೇದಿಕೆಯಲ್ಲಿ ಕುಳಿತು, ಭಾಷಣ ಮಾಡಿಕೊಂಡು ಹೋಗಿಲ್ಲ. ಪಕ್ಷದಲ್ಲಿ ಎಲ್ಲಾ ಕೆಲಸ ಮಾಡಿದ್ದೇನೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ದೆಹಲಿಯ ಭೇಟಿಯ ವೇಳೆ ಹೈಕಮಾಂಡ್‌ನ ಯಾವುದೇ ನಾಯಕರನ್ನು ಭೇಟಿಯಾಗದೇ ವಾಪಸಾಗಿದ್ದ ಡಿ.ಕೆ. ಶಿವಕುಮಾರ್ ಅವರು ದೆಹಲಿಯಲ್ಲಿ 'ವೈರಾಗ್ಯ'ದ ಮಾತುಗಳನ್ನು ಆಡಿದ್ದರು. ಆದರೆ ಮರುದಿನವೇ 'ಭಾಷಣ ಮಾಡಿಕೊಂಡು ಮುಂದೆ ಬಂದಿಲ್ಲ' ಎನ್ನುವ ಮಾತುಗಳನ್ನು ಆಡುವ ಮೂಲಕ ಯಾರಿಗೆ ಸಂದೇಶ ನೀಡಲು ಬಯಸಿದ್ದಾರೆ? ನಾಯಕತ್ವ ಬದಲಾವಣೆ ವಿಷಯದಲ್ಲಿ ಎಲ್ಲವೂ ಶಾಂತವಾಗಿರುವಾಗ ನಿತ್ಯ ಹೊಸ ಹೇಳಿಕೆಗಳನ್ನು ನೀಡುವ ಹಿಂದಿರುವ ತಂತ್ರಗಾರಿಕೆ ಏನು ಎನ್ನುವ ಪ್ರಶ್ನೆಗಳು ಶುರುವಾಗಿದೆ.

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ ಬಳಿಕ ಸುದ್ದಿಗಾರರು ಕೇಳಿದ 'ಪಕ್ಷದ ಕಾರ್ಯಕರ್ತನಾಗಿಯೇ ಇರಲು ಬಯಸುತ್ತೇನೆ' ಎನ್ನುವ ಹೇಳಿಕೆಗೆ ಪ್ರತಿಕ್ರಿಯಿಸಿದ ಡಿಕೆಶಿ, ನಾನು ಲೈಫ್ ಟೈಮ್ ಕಾರ್ಯಕರ್ತ. ನಾನು ಒಬ್ಬ ಕಾರ್ಯಕರ್ತ. ಅಧ್ಯಕ್ಷನಾದಾಗಲೂ ಪಕ್ಷದ ಬಾವುಟ ಕಟ್ಟಿದ್ದೇನೆ. ಕಾರ್ಯಕರ್ತನಾದಾಗಲೂ ಬಾವುಟ ಕಟ್ಟಿದ್ದೇನೆ, ಪೋಸ್ಟರ್ ಅಂಟಿಸಿದ್ದೇನೆ, ಕಸ ಗುಡಿಸಿದ್ದೇನೆ. ಕಾಂಗ್ರೆಸ್ ಪಕ್ಷಕ್ಕೆ ಏನೇನು ಬೇಕೋ ಎಲ್ಲವನ್ನೂ ಮಾಡಿದ್ದೇನೆ ಎಂದರು.

ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತದೆಯೇ ಎಂದು ಕೇಳಿದಾಗ, ನೀವು (ಮಾಧ್ಯಮಗಳು) ಹೇಳಿದ್ದಕ್ಕೆಲ್ಲಾ ಉತ್ತರ ನೀಡಲು ಆಗುವುದಿಲ್ಲ. ನಾನು ಹೇಳುವುದನ್ನೂ ಕೇಳಿ. ದೆಹಲಿಯಲ್ಲಿ ನಡೆಯುವ ಸಿಡಬ್ಲ್ಯುಸಿ ಸಭೆಗೆ ನನ್ನನ್ನು ಕರೆದರೆ ಖಂಡಿತಾ ಹೋಗುತ್ತೇನೆ. ಆದರೆ ಇದುವರೆಗೂ ಕರೆದಿಲ್ಲ. ಈ ಸಭೆಗೆ ಮೂವರು ಸಿಎಂಗೆ ಆಹ್ವಾನ ನೀಡಿದ್ದಾರೆ ಎಂದು ನನಗೂ

ಗೊತ್ತಿದೆ. ಆದರೆ ಉಪಮುಖ್ಯಮಂತ್ರಿಗಳನ್ನು ಕರೆದಿಲ್ಲ. ರಾಜ್ಯಗಳ ರಾಜ್ಯಾಧ್ಯಕ್ಷರನ್ನು ಸಮಿತಿಯ ವಿಸ್ತರಿತ ಸಭೆಗೆ ಕರೆಯುತ್ತಾರೆ ಎಂದು ಸಮರ್ಥಿಸಿಕೊಂಡರು. ಒಂದೊಮ್ಮೆ ಸಭೆಗೆ ಕರೆದರೆ ಹೋಗುವಿರಾ ಎಂದು ಕೇಳಿದರೆ, ಕರೆದರೆ ಹೋಗಬೇಕಾಗುತ್ತದೆ. ಕರೆದಾಗ ಹೋಗದೇ ಇರಲು ಆಗುತ್ತದೆಯೇ ಎಂದು ಹೇಳಿದರು.

ಯಾವ ವಿಷಯವೂ ಚರ್ಚೆಯಾಗಿಲ್ಲ: ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ನಾಯಕತ್ವ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಲಾಗಿದೆಯೇ ಎನ್ನುವ ಪ್ರಶ್ನೆಗೆ, ಯಾವ ವಿಚಾರವಾಗಿಯೂ ಚರ್ಚೆ ನಡೆಸಿಲ್ಲ. ನಾನು ಚರ್ಚೆ ಮಾಡುವುದೂ ಇಲ್ಲ. ಮಾಡುವ ಅವಶ್ಯಕತೆಯೂ ಇಲ್ಲ. ನಾನು ಮತ್ತು ಸಿದ್ದರಾಮಯ್ಯ ಅವರು ಈಗಾಗಲೇ ಇದರ ಬಗ್ಗೆ ಹೇಳಿದ್ದೇವೆ. ಹೈಕಮಾಂಡ್ ಏನು ಹೇಳುತ್ತದೆಯೋ ಅದರಂತೆ ಕೆಲಸ ಮಾಡಿಕೊಂಡು ಹೋಗುತ್ತೇವೆ. ಅವರು ಏನು ಹೇಳುತ್ತಾರೋ ಆ ರೀತಿ ಕೇಳಿಕೊಂಡು ಹೋಗುತ್ತೇವೆ. ಸ್ಥಳೀಯ ಮಟ್ಟದಲ್ಲಿ ಗೊಂದಲ ಬಗೆಹರಿಸಿಕೊಳ್ಳಿ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಹಿರಿಯ ಮಾರ್ಗದರ್ಶನದಲ್ಲಿ ನಡೆಯುತ್ತೇವೆ ಎಂದರು.

ಕೇಂದ್ರದ ವಿರುದ್ಧ ದೊಡ್ಡ ಹೋರಾಟ

ಮನರೇಗಾ ಯೋಜನೆಯಿಂದ ಪಂಚಾಯತಿಗಳಿಗೆ ಅನುಕೂಲವಾಗುತ್ತಿತ್ತು. ಪಂಚಾಯತಿ ಸದಸ್ಯರುಗಳಿಗೆ ಶಕ್ತಿಯಿತ್ತು. ಪ್ರತಿ ಕೂಲಿ ಕಾರ್ಮಿಕರ ಖಾತೆಗೆ ಹಣ ಸಂದಾಯವಾಗಿತ್ತಿತ್ತು. ಪ್ರತಿಯೊಬ್ಬರು ಚರ್ಚೆ ನಡೆಸಿ ತಮ್ಮ ಊರಿಗೆ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕು ಎನ್ನುವ ಅವಕಾಶವಿತ್ತು. ಆದರೆ ಈಗ ಕೇಂದ್ರ ಸರ್ಕಾರವೇ ಯಾವ ಜಿಲ್ಲೆಯಲ್ಲಿ ಯಾವ ಕೆಲಸ ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡುತ್ತಿದ್ದಂತೆ. ರೈತರು ತಮ್ಮ ಸ್ವಂತ ಜಮೀನಿನಲ್ಲಿ ಕೆಲಸ ಮಾಡಿಕೊಳ್ಳಲು, ಇಂಗುಗುಂಡಿ ತೋಡಿಕೊಳ್ಳಲು, ಕೊಟ್ಟಿಗೆ ಕಟ್ಟಿಕೊಳ್ಳಲು - ಹೀಗೆ ಅನೇಕ ಕೆಲಸಗಳನ್ನು ಮಾಡಿಕೊಳ್ಳಲು ಅನುಕೂಲವಾಗುತ್ತಿತ್ತು. ಇಂತಹ ಅದ್ಭುತವಾದ ಕಾರ್ಯಕ್ರಮವನ್ನು ಸೋನಿಯಾಗಾಂಧಿ ಅವರ ಮಾರ್ಗದರ್ಶನದಲ್ಲಿ ಮನಮೋಹನ್ ಸಿಂಗ್ ಅವರು ನೀಡಿದ್ದರು. ಮುಂದಿನ 2026 ರ ಫೆಬ್ರವರಿ ವೇಳೆಗೆ ಈ ಯೋಜನೆಗೆ 20 ವರ್ಷ ತುಂಬಲಿದೆ. ಆದ ಕಾರಣ ದೊಡ್ಡ ಹೋರಾಟವನ್ನು ಹಮ್ಮಿಕೊಳ್ಳಲು ಆಲೋಚಿಸಲಾಗಿದೆ ಎಂದು ಹೇಳಿದರು.

ಖರ್ಗೆ ಭೇಟಿ ಉದ್ದೇಶವೇನು?

ಎರಡು ದಿನ ದೆಹಲಿ ಪ್ರವಾಸದಲ್ಲಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಕಾಂಗ್ರೆಸ್‌ನ ಯಾವುದೇ ಹೈಕಮಾಂಡ್ ನಾಯಕರನ್ನು ಭೇಟಿಯಾಗಿರಲಿಲ್ಲ. ರಾಹುಲ್ ಗಾಂಧಿ ಅವರು ವಿದೇಶದಿಂದ ವಾಪಸಾಗಿದ್ದರೂ, ಅವರನ್ನು ಭೇಟಿಯಾಗುವ ಪ್ರಯತ್ನವನ್ನೂ ಮಾಡಲಿಲ್ಲ. ಆದರೆ ದೆಹಲಿಯಿಂದ ವಾಪಸಾಗುತ್ತಿದ್ದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಚರ್ಚಿಸಿದ್ದಾರೆ. ಈ ಮೂಲಕ ದೆಹಲಿ ನಾಯಕರು ಕರೆಯುವ ತನಕ ಹೋಗುವುದಿಲ್ಲ ಎನ್ನುವ ಸಂದೇಶವನ್ನು ರವಾನಿಸುವ ಪ್ರಯತ್ನ ಮಾಡಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ದೆಹಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ ಸಭೆಯಿದೆ. ಈ ಸಭೆಯಲ್ಲಿ ನರೇಗಾ ಯೋಜನೆಯ ಹೆಸರು ಬದಲಾವಣೆ, ಅನುದಾನದಲ್ಲಿ ರಾಜ್ಯದ ಪಾಲನ್ನು ಶೇ.40ಕ್ಕೆ ಹೆಚ್ಚಿಸಿರುವುದು ಸೇರಿದಂತೆ ರೈತರಿಗೆ ಮಾರಕವಾದಂತಹ ಬದಲಾವಣೆಗಳನ್ನು ಕೇಂದ್ರ ಸರಕಾರ ಜಾರಿಗೆ ತಂದಿದೆ. ಈ ವಿಚಾರವಾಗಿ ಒಂದು ರಾಜ್ಯದ ಅಧ್ಯಕ್ಷನಾಗಿ ನನ್ನ ಅಭಿಪ್ರಾಯಗಳನ್ನು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ತಿಳಿಸಿದ್ದೇನೆ. ಅವರ ಜತೆ ಯಾವ ರಾಜಕೀಯ ಮಾತುಕತೆಯೂ ಮಾಡಿಲ್ಲ.

– ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

ಬೀದಿ ನಾಯಿಗಳನ್ನು ದತ್ತು ಪಡೆಯಲು ಜಿಬಿಎ ಅವಕಾಶ

ಬೆಂಗಳೂರು: ದಿನದಿಂದ ದಿನಕ್ಕೆ ಬೀದಿ ನಾಯಿಗಳ ಕಾಟ ಹೆಚ್ಚಾಗುತ್ತಿದ್ದರೂ, ನಿಯಂತ್ರಣ ಹಾಗೂ ಸ್ಥಳಾಂತರಕ್ಕೆ ಹಲವು ಕಾನೂನಾತ್ಮಕ ಸಮಸ್ಯೆ ಎದುರಾಗಿವೆ. ಆದ್ದರಿಂದ ಇದೀಗ ಬೀದಿನಾಯಿಗಳನ್ನು ದತ್ತು ಪಡೆಯಲು ಶ್ವಾನಪ್ರಿಯರಿಗೆ ಒಂದು ಅವಕಾಶ ನೀಡಲು ಜಿಬಿಎಯ ಕೇಂದ್ರ ನಗರಪಾಲಿಕೆ ಮುಂದಾಗಿದೆ.

ನಗರದಲ್ಲಿ ಬೀದಿ ನಾಯಿಗಳನ್ನು ದತ್ತು ಪಡೆಯಲು ಪ್ರಾಣಿ ಪ್ರಿಯರಿಗೆ ಜಿಬಿಎ ಅವಕಾಶ ನೀಡಿದ್ದು, ನಗರ ವ್ಯಾಪ್ತಿಯಲ್ಲಿರುವ ಬೀದಿ ನಾಯಿಗಳನ್ನು ದತ್ತು ಪಡೆದು ಸಾಕಲು ಮುಂದಾಗುವವರಿಗೆ ಕೇಂದ್ರ ನಗರಪಾಲಿಕೆಯಿಂದ ಹೊಸ ಯೋಜನೆ ಜಾರಿಗೊಳಿಸಲಾಗಿದೆ. ಜಿಬಿಎಯ ಪಶುಸಂಗೋಪನೆ ಇಲಾಖೆಯಿಂದ ಯೋಜನೆ ಜಾರಿ ಮಾಡಲಾಗಿದ್ದು, ಮಾನವೀಯತೆ ದೃಷ್ಟಿಯಿಂದ ಬೀದಿ ನಾಯಿಗಳನ್ನು ಸಾಕಲು ಅವಕಾಶ ನೀಡಲಾಗಿದೆ. ಸಾರ್ವಜನಿಕರು, ಸಂಘ ಸಂಸ್ಥೆಗಳು. ಅಪಾರ್ಟ್‌ಮೆಂಟ್ ನಿವಾಸಿಗಳು, ಸ್ವಯಂಸೇವಾ ಸಂಸ್ಥೆಗಳು ಬೀದಿ ನಾಯಿಗಳನ್ನು ದತ್ತು ಪಡೆಯಲು ಅವಕಾಶ ನೀಡಲಾಗಿದೆ. ಜಿಬಿಎನಿಂದ ದತ್ತು ಪಡೆಯುವ ನಾಯಿಗಳಿಗೆ ಉಚಿತವಾಗಿ ಆರೋಗ್ಯ ತಪಾಸಣೆ, ರೇಬಿಸ್ ಲಸಿಕೆ, ಸಂತಾನ ನಿರೋಧಕ ಶಸ್ತ್ರಚಿಕಿತ್ಸೆ ಮಾಡಿಸಲಾಗುವುದು. ಆಸಕ್ತಿ ವ್ಯಕ್ತಿಗಳು ಜಿಬಿಎ ಪಶುಪಾಲನೆ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಬೀದಿ ನಾಯಿಗಳ ದತ್ತಕವು ಪ್ರಾಣಿ ಕಲ್ಯಾಣವನ್ನು ಉತ್ತೇಜಿಸುವುದರ ಜತೆಗೆ ನಗರದಲ್ಲಿ ಸಹಬಾಳ್ವೆ ಮತ್ತು ಸಾರ್ವಜನಿಕ ಆರೋಗ್ಯದ ರಕ್ಷಣೆಗೆ ಸಹಕಾರಿಯಾಗುತ್ತದೆ.ಆಸಕ್ತ ವ್ಯಕ್ತಿಗಳು ಮತ್ತು ಸಂಸ್ಥೆಗಳು ಹೆಚ್ಚಿನ ಮಾಹಿತಿಗಾಗಿ ಪಶುಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ, ಬೆಂಗಳೂರು ಕೇಂದ್ರ ನಗರ ನಿಗಮವನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ.

ಹೊರೆ ತಪ್ಪಿಸಿಕೊಳ್ಳಲು ದತ್ತು ಕೊಡಲು ಸಿದ್ಧತೆ

ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಬೆಂಗಳೂರಿನ ಅಧಿಕಾರಿಗಳು ಬೀದಿ ನಾಯಿಗಳನ್ನು ಆಶ್ರಯತಾಣಗಳಿಗೆ ಸ್ಥಳಾಂತರಿಸಲು ಸಿದ್ಧತೆ ಪ್ರಾರಂಭಿಸಿದ್ದಾರೆ. ಪ್ರತಿ ಬೀದಿನಾಯಿಯ ನಿರ್ವಹಣೆಗೆ 3,035 ರು. ಮಾಸಿಕ ನಿರ್ವಹಣಾ ವೆಚ್ಚ ನಿಗದಿಪಡಿಸಿವೆ. ಆದ್ದರಿಂದ ಈ ಆರ್ಥಿಕ ಹೊರೆ ತಪ್ಪಿಸಲು ಕೇಂದ್ರ ನಗರಪಾಲಿಗೆ ದತ್ತು ನೀಡುವ ಪ್ರಕ್ರಿಯೆಗೆ ಮುಂದಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸುಮಾರು 2.79 ಲಕ್ಷ ಬೀದಿ ನಾಯಿಗಳಿವೆ. ಅಧಿಕಾರಿಗಳು ಸಿದ್ಧಪಡಿಸಿದ ವೆಚ್ಚದ ಅಂದಾಜಿನಂತೆ, 100 ಬೀದಿ ನಾಯಿಗಳನ್ನು ನಿರ್ವಹಿಸಲು ತಿಂಗಳಿಗೆ ಸುಮಾರು 3.33 ಲಕ್ಷ ವೆಚ್ಚವಾಗುತ್ತದೆ. ಇದರಲ್ಲಿ ಆಹಾರಕ್ಕಾಗಿ 1.50 ಲಕ್ಷ, ಮೇಲ್ವಿಚಾರಕರು ಮತ್ತು ಸಿಬ್ಬಂದಿಗೆ ಸಂಬಳಕ್ಕಾಗಿ 1.18 ಲಕ್ಷ, ವೈದ್ಯಕೀಯ ಚಿಕಿತ್ಸೆ ಮತ್ತು ಆಡಳಿತಾತ್ಮಕ ವೆಚ್ಚಗಳಿಗಾಗಿ ತಲಾ 10,000 ಮತ್ತು ನಾಯಿಗಳನ್ನು ಹಿಡಿಯಲು ಮತ್ತು ಸಾಗಿಸಲು ಸುಮಾರು 30,000 ವೆಚ್ಚವಾಗಲಿದೆ.

ದತ್ತು ಪಡೆಯುವುದು ಎಲ್ಲಿ?

ಸಹಾಯಕ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಬೆಂಗಳೂರು ಕೇಂದ್ರ ನಗರ ಪಾಲಿಕೆ, ಕೊಠಡಿ ನಂ.406-ಎ, 4ನೇ ಮಹಡಿ, ಅನೆಕ್ಸ್-3 ಕಟ್ಟಡ, ಜಿಬಿಎ ಕೇಂದ್ರ ಕಚೇರಿ, ಎನ್. ಆರ್. ಚೌಕ, ಬೆಂಗಳೂರು -560002

ವಿವೇಕ್ ನಗರದಲ್ಲಿರುವ ಇನ್ಫೆಂಟ್ ಜೀಸಸ್ ಚರ್ಚ್‌ನಲ್ಲಿ ಗುರುವಾರ ವಿಶೇಷ ಪ್ರಾರ್ಥನೆ ಸಲ್ಲಿಸುವ ಮೂಲಕ ಕ್ರಿಸ್ಮಸ್ ಹಬ್ಬವನ್ನು ಕ್ರೈಸ್ತರು ಸಂಭ್ರಮದಿಂದ ಆಚರಿಸಿದರು. ಫೋಟೋ; ಸುಧಾಕರ್ ದೇವರಾಜ್

ಮಹದೇವಪುರ: ಬಿಜೆಪಿಯಿಂದ ಕ್ರಿಸ್ಮಸ್ ಆಚರಣೆ

ಮಹದೇವಪುರ: ಬಿಜೆಪಿ ಪಕ್ಷ ಅಲ್ಪಸಂಖ್ಯಾತರ ವಿರೋಧಿಯಲ್ಲ, ಎಲ್ಲರೂ ಒಂದೇ ಭಾರತೀಯರು ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ವತಿಯಿಂದ ಹೂಡಿಯಲ್ಲಿ ಆಯೋಜಿಸಲಾಗಿದ್ದ ಕ್ರಿಸ್ಮಸ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಕಳೆದ 17 ವರ್ಷಗಳಿಂದ ಯಾವುದೇ ಧರ್ಮ, ಸಮುದಾಯ ಆಧಾರಿತ ಭೇದಭಾವ ನಡೆದಿಲ್ಲ. ದೇಶದಲ್ಲೂ ಕಳೆದ 11 ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವೂ ಯಾವುದೇ ತಾರತಮ್ಯಮಾಡಿಲ್ಲ ಎಂದರು.

ಪ್ರಧಾನಮಂತ್ರಿ ಮೋದಿಯವರು ಜಗತ್ತಿನ ಅನೇಕ ದೇಶಗಳಿಗೆ ಭೇಟಿ ನೀಡಿದ್ದು, ಕ್ರಿಶ್ಚಿಯನ್ ಧರ್ಮೀಯರು ನೇತೃತ್ವವಹಿಸಿರುವ ರಾಷ್ಟ್ರಗಳಲ್ಲಿಯೂ ಭಾರತ ಮತ್ತು ಮೋದಿಯವರ ಬಗ್ಗೆ ಗೌರವವಿದೆ. ಪಕ್ಷ ಯಾವುದೇ ಆಗಿರಲಿ, ನಾವು ಎಲ್ಲರೂ ಮೊದಲು ಭಾರತೀಯರು. ದೇಶದ ಅಭಿವೃದ್ಧಿಯ ಜೊತೆಗೆ ಎಲ್ಲ ಸಮಾಜಗಳ ಅಭಿವೃದ್ಧಿ ಅಗತ್ಯ ಎಂದು ಹೇಳಿದರು.

ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಬಜೆಟ್ ಮೂಲಕ ಕ್ರಿಶ್ಚಿಯನ್ ಸಮುದಾಯಕ್ಕೆ ವಿಶೇಷ ಯೋಜನೆಗಳನ್ನು ಜಾರಿಗೆ ತರಲಾಯಿತು. ಆ ಸಮಯದಲ್ಲಿ ಆರಂಭಿಸಿದ ಅನೇಕ ಸೌಲಭ್ಯಗಳ ಲಾಭ ಇಂದಿಗೂ ಸಮುದಾಯಕ್ಕೆ ಸಿಗುತ್ತಿದೆ. ಆದರೆ ಯೋಜನೆಗಳು ಕೊನೆಯ ವ್ಯಕ್ತಿಗೆ ತಲುಪುವಲ್ಲಿ ಇನ್ನೂ ಕೊರತೆ ಇದೆ. ಮಾಹಿತಿ ಕೊರತೆಯಿಂದ ಹಲವರಿಗೆ ತಮ್ಮ ಹಕ್ಕುಗಳೇ ತಿಳಿದಿಲ್ಲ ಎಂದರು.

ಮಹದೇವಪುರ ಕ್ಷೇತ್ರದಲ್ಲಿ ವಿವಿಧ ರಾಜ್ಯಗಳಿಂದ ಬಂದ ಕ್ರಿಶ್ಚಿಯನ್ ಸಮುದಾಯದವರು ವಾಸಿಸುತ್ತಿದ್ದಾರೆ. ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ ಮಾತನಾಡುವ ಎಲ್ಲ ಕ್ರಿಶ್ಚಿಯನ್ಸ್ ಒಂದಾಗಿ ಬರಬೇಕು. ಅವರ ಸಾಮಾಜಿಕ, ಆರ್ಥಿಕ ಸ್ಥಿತಿ ಅರಿತು ಸರಕಾರದ ಯೋಜನೆಗಳನ್ನು ತಲುಪಿಸುವುದು ನಮ್ಮ ಕರ್ತವ್ಯ. ಪ್ರತಿಯೊಬ್ಬ ನಾಗರಿಕನ ಆರ್ಥಿಕ ಹಾಗೂ ಸಾಮಾಜಿಕ ಮಟ್ಟ ಏರಿದಾಗ ಮಾತ್ರ ದೇಶ ನಿಜವಾದ ಅಭಿವೃದ್ಧಿ ಕಾಣುತ್ತದೆ ಎಂದು ಲಿಂಬಾವಳಿ ಹೇಳಿದರು.

ಈ ವೇಳೆ ರಾಜ್ಯ ಪರಿಷತ್ ಸದಸ್ಯ ಎಲ್. ರಾಜೇಶ್, ಮೈನಾರಿಟಿ ಮೋರ್ಚಾ ಉಸ್ತುವಾರಿ ವರ್ತೂರು ಶ್ರೀಧರ್, ಅಧ್ಯಕ್ಷ ರಾಜು ಪಾಲ್, ಹೂಡಿ ವಾರ್ಡ್ ಅಧ್ಯಕ್ಷ ಪವನ್ ರೆಡ್ಡಿ, ಕ್ಷೇತ್ರ ಮೈನಾರಿಟಿ ಮುಖಂಡ ಜಾಯ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಹದೇವಪುರ ಕ್ಷೇತ್ರದ ಹೂಡಿಯಲ್ಲಿ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ವತಿಯಿಂದ ಅಯೋಜಿಸಲಾದ ಕ್ರಿಸ್ಮಸ್ ಕಾರ್ಯಕ್ರಮವನ್ನು ಮಾಜಿ ಸಚಿವ ಅರವಿಂದ ಲಿಂಬಾವಳಿ ಉದ್ಘಾಟಿಸಿದರು. ಬಿಜೆಪಿ ರಾಜ್ಯ ಪರಿಷತ್ ಸದಸ್ಯ ಎಲ್.ರಾಜೇಶ್, ವರ್ತೂರು ಶ್ರೀಧರ್, ರಾಜು ಪಾಲ್ ಸೇರಿ ಹಲವರು ಉಪಸ್ಥಿತರಿದ್ದರು.

ಪಿಎಂ ಕುಸುಮ್ ಬಿ ಸಹಾಯವಾಣಿ ಆರಂಭ

ಬೆಂಗಳೂರು: ಮಾಹಿತಿ ಕೊರತೆ ಹಾಗೂ ತಾಂತ್ರಿಕ ತೊಂದರೆಗಳಿಂದಾಗಿ ಅರ್ಹ ರೈತರು ಕುಸುಮ್-ಬಿ ಯೋಜನೆಯಿಂದ ವಂಚಿತರಾಗಬಾರದು ಎನ್ನುವ ಉದ್ದೇಶದಿಂದ ಕ್ರೆಡಲ್‌ನಿಂದ ನಾಗರಬಾವಿಯ ಕೇಂದ್ರ ಕಚೇರಿಯಲ್ಲಿ ಸಹಾಯವಾಣಿ ಕೇಂದ್ರ ಸ್ಥಾಪಿಸಲಾಗಿದೆ.

2025ರ ಡಿಸೆಂಬರ್ 23ರಿಂದ 31ರವರೆಗೆ ಸಹಾಯವಾಣಿ ಕೇಂದ್ರ ಕಾರ್ಯನಿರ್ವಹಿಸಲಿದ್ದು, ಕುಸುಮ್ ಬಿ ಯೋಜನೆ ಕುರಿತಂತೆ ರೈತರು ತಮ್ಮ ಸಮಸ್ಯೆಗಳನ್ನು ದೂರವಾಣಿ ಕರೆಯ ಮೂಲಕ ಪರಿಹರಿಸಿಕೊಳ್ಳಬಹುದು. ರಾಜ್ಯದ ಎಲ್ಲ ರೈತರು ಇದರ ನೆರವು ಪಡೆದುಕೊಳ್ಳಬಹುದಾಗಿದ್ದು, ಇದಕ್ಕಾಗಿ ಕ್ರೆಡಲ್ ಸಿಬ್ಬಂದಿ, ಪ್ರತಿದಿನ ಬೆಳಿಗ್ಗೆ 6.00 ರಿಂದ ರಾತ್ರಿ 9.00ರವರೆಗೆ ರಜೆ ಇಲ್ಲದೆ ಎರಡು ಪಾಳಿಗಳಲ್ಲಿ ಕೆಲಸ ನಿರ್ವಹಿಸಲಿದ್ದಾರೆ.

ಸಹಾಯವಾಣಿಯಲ್ಲಿ ಕುಸುಮ್ ಯೋಜನೆಯ ಕಾಂಪೊನೆಂಟ್ ಬಿ ಅಡಿ ಸೋಲಾರ್ ಪಂಪ್‌ಸೆಟ್ ಹಾಕಿಸುವ ಮಾಹಿತಿ, ಆನ್‌ಲೈನ್ ಪಾವತಿ ಮತ್ತು ಇತರ ಸಂಬಂಧಿತ ಪ್ರಶ್ನೆಗಳಿಗೆ ಉತ್ತರ ದೊರೆಯಲಿದ್ದು, ರೈತರು ಮಧ್ಯವರ್ತಿಗಳನ್ನು ಸಂಪರ್ಕಿಸದೆ ಸಹಾಯವಾಣಿಯ ಅಧಿಕೃತ ಫೋನ್ ಸಂಖ್ಯೆ 080-22202100 ಮತ್ತು 8095132100ನ್ನು ನೇರವಾಗಿ ಸಂಪರ್ಕಿಸಬಹುದು. ಸೋಲಾರ್ ವಿದ್ಯುತ್ ಚಾಲಿತ ನೀರಾವರಿ ಪಂಪ್ ಸೆಟ್‌ಗಾಗಿ ರೈತರು ತಮ್ಮ ಪಾಲಿನ ವಂತಿಗೆ ಹೊರತುಪಡಿಸಿ ಯಾರಿಗೂ ಹಣ ಪಾವತಿಸಬೇಕಾಗಿಲ್ಲ ಎಂದು ಕ್ರೆಡಲ್ ತಿಳಿಸಿದೆ.

ಪಿಎಂ ಕುಸುಮ್ ಬಿ ಯೋಜನೆಗೆ ರೈತ ಸಮುದಾಯದಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, www.souramitra.com ಪೋರ್ಟಲ್ ಮೂಲಕ ಈವರೆಗೆ 83,204 ರೈತರು ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಂಡಿದ್ದಾರೆ. ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡವರು ಲಭ್ಯವಿರುವ ಆಯ್ಕೆಗಳಿಂದ ತಮ್ಮ ಆದ್ಯತೆಯ ಮಾರಾಟಗಾರರು ಅಥವಾ ಏಜೆನ್ಸಿಯನ್ನು ಆಯ್ಕೆ ಮಾಡಿಕೊಡು ತಮ್ಮ ಪಾಲಿನ ವಂತಿಗೆಯನ್ನು ಆನ್‌ಲೈನ್ ಮೂಲಕ ಪಾವತಿಸುವ ಮೂಲಕ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದು. ವಂತಿಗೆ ಪಾವತಿಗೆ ಡಿ.31 ಕೊನೆಯ ದಿನಾಂಕವಾಗಿದ್ದು, ಅಂತಿಮ ದಿನಾಂಕದೊಳಗೆ ಪಾವತಿ ಮಾಡಲು ವಿಫಲವಾದರೆ ಯೋಜನೆಗೆ ಅನರ್ಹರಾಗುತ್ತಾರೆ ಎಂದು ಸ್ಪಷ್ಟಪಡಿಸಲಾಗಿದೆ.

ನೀರಾವರಿ ಪಂಪ್‌ಸೆಟ್‌ಗಳಿಗೆ ಸೌರಶಕ್ತಿಯನ್ನು ಕೈಗೆಟುಕುವ ದರಲ್ಲಿ ಒದಗಿಸುವ ಮೂಲಕ ರೈತರ ಸಬಲೀಕರಣಗೊಳಿಸುವುದು ಕುಸುಮ್ ಬಿ ಯೋಜನೆಯ ಮೂಲ ಉದ್ದೇಶವಾಗಿದೆ. ಸಹಾಯವಾಣಿಯನ್ನು ಸ್ಥಾಪಿಸುವ ಮೂಲಕ, ಅರ್ಜಿ ಸಲ್ಲಿಸಿರುವ ಅರ್ಹ ರೈತರಿಗೆ ಸಕಾಲಿಕ ಮಾರ್ಗದರ್ಶನ ಮತ್ತು ಬೆಂಬಲವನ್ನು ಒದಗಿಸಲಾಗುತ್ತದೆ. ಆನ್‌ಲೈನ್ ಅರ್ಜಿ ಸಲ್ಲಿಕೆ ವೇಳೆ ರೈತರು ಎದುರಿಸಬಹುದಾದ ಗೊಂದಲವನ್ನು ನೇರ ಸಂಪರ್ಕದಿಂದ ನಿವಾರಿಸಲಾಗುತ್ತದೆ. ಮಧ್ಯವರ್ತಿಗಳಿಲ್ಲದೆ ಯೋಜನೆ ಪ್ರಯೋಜನಗಳನ್ನು ಪಡೆಯಬಹುದು.

-ಕೆ.ಜೆ.ಜಾರ್ಜ್ ಇಂಧನ ಸಚಿವರು

ಬ್ಯಾಂಕ್ ಆಫ್ ಬರೋಡಾದಿಂದ 2ನೇ ಫಿಜಿಟಲ್ ಶಾಖೆ ಆರಂಭ

ಬೆಂಗಳೂರು: ಬೆಂಗಳೂರು ತಂತ್ರಜ್ಞಾನ ಆಧಾರಿತ ವ್ಯವಹಾರಗಳು ಮತ್ತು ಯುವ ವೃತ್ತಿಪರರ ಕೇಂದ್ರವಾಗಿದೆ. ಫಿಜಿಟಲ್ ಶಾಖೆಯ ಮೂಲಕ ಶಾಖೆಯನ್ನು ಅನುಭವ ಕೇಂದ್ರವಾಗಿ ರೂಪಿಸಿ, ಗ್ರಾಹಕರಿಗೆ ಸುಲಭ, ವೇಗವಾದ ಮತ್ತು ಭವಿಷ್ಯಕ್ಕೆ ಸಿದ್ಧವಾದ ಬ್ಯಾಂಕಿಂಗ್ ಒದಗಿಸುವುದು ನಮ್ಮ ಗುರಿ ಎಂದು ಬ್ಯಾಂಕ್ ಆಫ್ ಬರೋಡಾದ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಡಾ. ದೇಬದತ್ತ ಚಂದ್ ತಿಳಿಸಿದರು.

ನಗರದ ಕೆ.ಜಿ. ರಸ್ತೆಯಲ್ಲಿ ತನ್ನ ಎರಡನೇ ಫಿಜಿಟಲ್ ಶಾಖೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಶಾಖೆ ಸ್ವ-ಸೇವೆ ಮತ್ತು ನೆರವಿನ ಸೇವೆಗಳನ್ನು ಸಂಯೋಜಿಸುವ ಮೂಲಕ ಗ್ರಾಹಕರಿಗೆ ಅತ್ಯಾಧುನಿಕ ಹಾಗೂ ವಿಭಿನ್ನ ಬ್ಯಾಂಕಿಂಗ್ ಅನುಭವವನ್ನು ಒದಗಿಸುತ್ತದೆ. ಭಾರತದ ಪ್ರಮುಖ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ಒಂದಾದ ಬ್ಯಾಂಕ್ ಆಫ್ ಬರೋಡಾ ಈ ಹೊಸ ಶಾಖೆಯೊಂದಿಗೆ ಬೆಂಗಳೂರಿನಲ್ಲಿ ಎರಡು ಫಿಜಿಟಲ್ ಶಾಖೆಗಳನ್ನು ಹಾಗೂ ದೇಶಾದ್ಯಂತ ಒಟ್ಟು 11 ಫಿಜಿಟಲ್ ಶಾಖೆಗಳನ್ನು ಹೊಂದಿದೆ. ಬೆಂಗಳೂರು ವಲಯವು 298 ಶಾಖೆಗಳ ಜಾಲವನ್ನು ಹೊಂದಿದ್ದು, ಅದರಲ್ಲಿನ ಶೇಕಡಾ 47ರಷ್ಟು ಶಾಖೆಗಳು ಗ್ರಾಮೀಣ ಹಾಗೂ ಅರೆನಗರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಬ್ಯಾಂಕ್‌ನ ಬೆಂಗಳೂರು ವಲಯದ ಮುಖ್ಯ ಮಹಾಪ್ರಬಂಧಕ ಮನೋಜ್ ಚಯಾನಿ, ಉಪಅನಿಲ್ ಕುಮಾರ್ ಶ್ರೀವಾಸ್ತವ ಸೇರಿದಂತೆ ಇನ್ನಿತತರು ಉಪಸ್ಥಿತರಿದ್ದರು.

ಫಿಜಿಟಲ್ ಶಾಖೆ ವೈಶಿಷ್ಟತೆ

ಫಿಜಿಟಲ್ ಶಾಖೆಯಲ್ಲಿ ಸ್ವಯಂ ಸೇವಾ ಕಿಯೋಸ್ಕ್‌ಗಳು, ವಿಡಿಯೊ ಸಂಪರ್ಕ ಕೇಂದ್ರ, ಸಾರ್ವತ್ರಿಕ ಸೇವಾ ಡೆಸ್ಕ್‌ಗಳು, ವರ್ಚುವಲ್ ರಿಲೇಶನ್ಶಿಪ್ ಮ್ಯಾನೇಜರ್ ಇರುವರಿಂದ ಇದರ ಮೂಲಕ ಗ್ರಾಹಕರಿಗೆ ತ್ವರಿತ ಮತ್ತು ವೈಯಕ್ತಿಕಗೊಳಿಸಿದ ಸೇವೆಗಳು ಲಭ್ಯವಾಗುತ್ತವೆ. ಇದರ ಮೂಲಕ ಪ್ಯಾನ್ ಮತ್ತು ನಾಮಿನಿ ನವೀಕರಣ, ಖಾತೆ ವಿವರಗಳು, ಟಿಡಿಎಸ್ ಪ್ರಮಾಣಪತ್ರ ಸೇರಿ ಹಲವು ಸೇವೆಗಳನ್ನು ಡಿಜಿಟಲ್ ಮೂಲಕವೇ ಪಡೆಯಬಹುದು.

ನಗರದ ಕೆ.ಜಿ. ರಸ್ತೆಯಲ್ಲಿ ಬ್ಯಾಂಕ್ ಆಫ್ ಬರೋಡಾ ತನ್ನ ಎರಡನೇ ಫಿಜಿಟಲ್ ಶಾಖೆಯನ್ನು ಉದ್ಘಾಟಿಸಲಾಯಿತು.ಈ ವೇಳೆ ಬ್ಯಾಂಕ್ ಆಫ್ ಬರೋಡಾದ ವ್ಯವಸ್ಥಾಪಕ ನಿರ್ದೇಶಕ ಡಾ. ದೇಬದತ್ತ ಚಂದ್, ಬ್ಯಾಂಕ್‌ನ ಬೆಂಗಳೂರು ವಲಯದ ಮುಖ್ಯ ಮಹಾಪ್ರಬಂಧಕ ಮನೋಜ್ ಚಯಾನಿ,ಅನಿಲ್ ಕುಮಾರ್, ಶ್ರೀವಾಸ್ತವ ಸೇರಿದಂತೆ ಇನ್ನಿತತರು ಉಪಸ್ಥಿತರಿದ್ದರು.

ಮಿಸ್ ಇಂಡಿಯಾ ಸ್ಪರ್ಧೆ

ಕರ್ನಾಟಕದ ಸಮೃದ್ಧಿ ತ್ರಿಪಾಠಿ ವಿನ್ನರ್

ಬೆಂಗಳೂರು: ಕಳಿಂಗ ಇನ್ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ (ಕೆಐಐಟಿ) ಸಂಸ್ಥೆಯು ಆಯೋಜಿಸಿದ್ದ ಕೆಐಐಟಿ ನಾನ್ನಿಪಾರಿ ಲಿಟಲ್ ಮಿಸ್ ಇಂಡಿಯಾ ಸ್ಪರ್ಧೆ ಯಲ್ಲಿ ಬೆಂಗಳೂರಿನ ಸಮೃದ್ಧಿ ತ್ರಿಪಾಠಿ ವಿಜೇತರಾಗಿದ್ದಾರೆ.

ಮೊದಲ ಮತ್ತು ಎರಡನೇ ರನ್ನರ್-ಅಪ್ ಆಗಿ ಮಧ್ಯಪ್ರದೇಶದ ಪ್ರಾಂಜಲ್ ಶರ್ಮಾ ಮತ್ತು ತೆಲಂಗಾಣದ ಪಿ. ಪ್ರಾರ್ಥಿನಿ ಸ್ಥಾನ ಪಡೆದಿದ್ದಾರೆ. ಈ ಹಿಂದೆ ನಡೆದ ಸ್ಪರ್ಧೆಗಳಲ್ಲಿ ಕರ್ನಾಟಕದವರು ವಿಜೇತರಾಗಿ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಕೆಐಐಟಿ ನಾನ್ನಿಪಾರಿ ಲಿಟಲ್ ಮಿಸ್ ಇಂಡಿಯಾ ಸ್ಪರ್ಧೆಯು ರಾಷ್ಟ್ರಮಟ್ಟದ ಪ್ರತಿಭಾ ಪ್ರದರ್ಶನ ಮತ್ತು ಸೌಂದರ್ಯ ಸ್ಪರ್ಧೆಯಾಗಿದ್ದು ಈ ಬಾರಿ 25 ನೇ ಆವೃತ್ತಿಯ ಪ್ರದರ್ಶನವಾಗಿದ್ದು ವಿಶೇಷವಾಗಿತ್ತು. ಫೋಟೋಶೂಟ್, ಅತ್ಯುತ್ತಮ ವೇಷಭೂಷಣ, ಆಕರ್ಷಕವಾದ ನಡಿಗೆ ಮತ್ತು ಅತ್ಯುತ್ತಮ ಭಂಗಿ, ಅತ್ಯುತ್ತಮ ಪರ್ಸನಾಲಿಟಿ ಹೀಗೇ ಹಲವು ವಿಭಾಗಗಳಲ್ಲಿ ಸ್ಪರ್ಧೆ ನಡೆದಿತ್ತು.

ಡಿಸೆಂಬರ್ 21 ರಿಂದ 23 ರವರೆಗೆ ಸ್ಪರ್ಧೆಯ ಸೆಮಿ ಫೈನಲ್ ಮತ್ತು ಫೈನಲ್ ಹಂತದ ಚಟುವಟಿಕೆಗಳು ನಡೆದಿದ್ದವು.

ಸೆಮಿ ಫೈನಲ್ ಮತ್ತು ಫೈನಲ್ಗೂ ಮೊದಲು ದೇಶದಾದ್ಯಂತ ಮೂರು ತಿಂಗಳು ಆಡಿಷನ್ ನಡೆದಿತ್ತು. ಆಡಿಷನ್ನಲ್ಲಿ ಆಯ್ಕೆಯಾದವರಿಗೆ ಸೆಮಿಫೈನಲ್ನಲ್ಲಿ ಸ್ಪರ್ಧಿಸಲು ಅವಕಾಶ ನೀಡಲಾಗುತ್ತದೆ. ಪೂನಾ, ಬೆಂಗಳೂರು, ಮುಂಬೈ, ದೆಹಲಿ, ಅಗರ್ತಲಾ ಸೇರಿದಂತೆ 25 ನಗರಗಳಲ್ಲಿ ಆಡಿಷನ್ ನಡೆದಿತ್ತು. ಮೊದಲ ವಿನ್ನರ್‌ಗೆ 28 ಲಕ್ಷ ರು. ಬಹುಮಾನ ನೀಡಲಾಯಿತು. ಇದರಲ್ಲಿ 10 ಲಕ್ಷ ನಗದು ಹಾಗೂ ಕೆಐಐಟಿ ವಿಶ್ವವಿದ್ಯಾಲಯದಲ್ಲಿ ಯಾವುದೇ ವಿಷಯ ಅಧ್ಯಯನಕ್ಕೆ ಶೇ. 100 ರಷ್ಟು ಶೈಕ್ಷಣಿಕ ಶುಲ್ಕ ವಿನಾಯಿತಿ ಸೇರಿದೆ.

ಸಮಾಚಾರ ಸಣ್ಣದಲ್ಲ

ರೀಲ್ ಹುಚ್ಚಾಟ: ರೈಲ್ವೆಯಿಂದ ಇಬ್ಬರು ಯುವಕರ ಬಂಧನ

ಕಣ್ಣೂರು: ಗುರುವಾರ ಕಣ್ಣೂರು ಜಿಲ್ಲೆಯಲ್ಲಿ ದೀರ್ಘ ದೂರ ರೈಲೊಳದನ್ನು ನಿಲ್ಲಿಸಿ ಸಾಮಾಜಿಕ ಮಾಧ್ಯಮದ ರೀಲ್‌ಗಳನ್ನು ಚಿತ್ರೀಕರಿಸಿದ್ದಕ್ಕಾಗಿ ಇಬ್ಬರು ಯುವಕರ ಮೇಲೆ ರೈಲ್ವೆ ರಕ್ಷಣಾ ಪಡೆ ಪ್ರಕರಣ ದಾಖಲಿಸಿದೆ. ಪೊಲೀಸರ ಪ್ರಕಾರ, ಎರ್ನಾಕುಲಂ-ಪುಣೆ ಎಕ್ಸ್‌ಪ್ರೆಸ್ ತಲಶ್ಶೇರಿ ರೈಲು ನಿಲ್ದಾಣದಿಂದ ಹೊರಟ ಸ್ವಲ್ಪ ಸಮಯದ ನಂತರ, ಬೆಳಗಿನ ಜಾವ 1.50ರ ಸುಮಾರಿಗೆ ಈ ಘಟನೆ ನಡೆದಿದೆ. ಮುಂದೆ ಕೆಂಪು ದೀಪವನ್ನು ನೋಡಿದ ಲೋಕೋ ಪೈಲಟ್ ಸುರಕ್ಷತಾ ಕ್ರಮವಾಗಿ ರೈಲಿನ ವೇಗವನ್ನು ಕಡಿಮೆ ಮಾಡಿ ನಿಲ್ಲಿಸಿದ್ದಾರೆ. ಪೈಲಟ್‌ನ ಎಚ್ಚರಿಕೆಯ ಆಧಾರದ ಮೇಲೆ, ಆರ್‌ಪಿಎಫ್ ಬೆಳಕಿನ ಮೂಲವನ್ನು ಪತ್ತೆಹಚ್ಚಿ ಆ ಪ್ರದೇಶದ ಇಬ್ಬರು ಯುವಕರನ್ನು ಬಂಧಿಸಿತು. ವಿಚಾರಣೆಯ ಸಮಯದಲ್ಲಿ ವೀಡಿಯೊ ರೆಕಾರ್ಡ್ ಮಾಡಲು ಬಳಸಿದ ಮೊಬೈಲ್ ಫೋನ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪತ್ರಿಕಾ ವಿತರಕರಿಗೆ ಜರ್ಕಿನ್ ವಿತರಣೆ

ತುಮಕೂರು: ರಾಮಕೃಷ್ಣ ಸೇವಾಶ್ರಮ ಪಾವಗಡ, ಹಾಗೂ ಹಾಲಪ್ಪ ಫೌಂಡೇಷನ್ ಇವರ ಸಹಯೋಗದಲ್ಲಿ ತುಮಕೂರು ಜಿಲ್ಲಾ ದಿನಪತ್ರಿಕೆ ಹಂಚಿಕೆದಾರರ ಸಂಘದ 150 ಮಂದಿ ಪತ್ರಿಕಾ ವಿತರಕರಿಗೆ ಜರ್ಕಿನ್ ವಿತರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಮತ್ ಜಪಾನಂದಜೀ ಮಹಾರಾಜ್, ಪ್ರಜಾ ಪ್ರಗತಿ ಸಂಪಾದಕರಾದ ಡಾ. ಎಸ್. ನಾಗಣ್ಣ ಜಿಲ್ಲಾ ಕಸಾಪ ಅಧ್ಯಕ್ಷರಾದ ಸಿದ್ದಲಿಂಗಪ್ಪ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷರಾದ ಕೆ. ಶಂಭುಲಿಂಗ. ಹಾಲಪ್ಪ ಫೌಂಡೇಷನ್‌ನ ಕೃಷ್ಣಮೂರ್ತಿ, ತುಮಕೂರು ಜಿಲ್ಲಾ ದಿನಪತ್ರಿಕೆ ಹಂಚಿಕೆದಾರರ ಸಂಘದ ಗೌರವಾಧ್ಯಕ್ಷರಾದ ನರಸಿಂಹಯ್ಯ.ಟಿ.ಎಲ್, ಜಿಲ್ಲಾಧ್ಯಕ್ಷರಾದ ಚೆಲುವರಾಜ್ (ರಘು) ಕಾರ್ಯದರ್ಶಿಗಳಾದ ನಾದೂರು ವಾಸುದೇವ, ಉಪಾಧ್ಯಕ್ಷರಾದ ರಂಗಮುತ್ತಯ್ಯ, ನಿರ್ದೇಶಕರಾದ ಆನಂದ್ ಜೈನ್ ಲೋಕೇಶ್ ಗಂಗ ಮುತ್ತಯ್ಯ ಲೋಕೇಶ್ ಭದ್ರಾಚರ ಹಿರಿಯರಾದ ಸಿದ್ದಪ್ಪ ರುದ್ರೇಶ್ ಸೇರದಂತೆ ಸಂಘದ ಪದಾಧಿಕಾರಿಗಳು ಮತ್ತು ಪತ್ರಿಕಾ ವಿತರಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕೃತಿ ಲೋಕಾರ್ಪಣೆ

ಬೆಂಗಳೂರು: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಲೇಖಕರಾದ ನ್ಯೂರೋ ಸರ್ಜನ್ ಡಾ. ಶರಣ್ ಶ್ರೀನಿವಾಸನ್ ಮತ್ತು ನ್ಯೂರೋರಿಹ್ಯಾಬಿಲಿಟೇಶನ್ ತಜ್ಞೆ ಡಾ. ಪ್ರತಿಭಾ ಶರಣ್ ಅವರು ರಚಿಸಿರುವ ನ್ಯೂರೋ ಜಸ್ಟೀಸ್ ಟ್ರೈಲಾಜಿ ಪುಸ್ತಕವನ್ನು ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಅರವಿಂದ್ ಕುಮಾರ್ ಬಿಡುಗಡೆ ಮಾಡಿದರು. ಮೋಟಾರು ವಾಹನ ಅಪಘಾತ ಪ್ರಕರಣಗಳ ನಂತರ ಮಾನವ ಜೀವನ ಮತ್ತು 'ಕಾರ್ಯಾತ್ಮಕ ಅಂಗವೈಕಲ್ಯ'ವನ್ನು ಭಾರತೀಯ ನ್ಯಾಯಾಂಗ ವ್ಯವಸ್ಥೆಯು ಮೌಲ್ಯಮಾಪನ ಮಾಡುವ ವಿಧಾನದಲ್ಲಿ ಕ್ರಾಂತಿಕಾರಿ ಬದಲಾವಣೆ ತರುವ ಐತಿಹಾಸಿಕ ಹೆಜ್ಜೆಯಾಗಿ ಈ ಕೃತಿಗಳು ಪ್ರಸ್ತುತ ಇರುವ ರೋಗಲಕ್ಷಣ ಆಧಾರಿತ ನ್ಯಾಯಾಂಗ ವ್ಯವಸ್ಥೆಯಿಂದ ಕಾರ್ಯ ಆಧಾರಿತ ವ್ಯವಸ್ಥೆಗೆ ಬದಲಾಗುವ ಅಗತ್ಯವನ್ನು ಪ್ರತಿಪಾದಿಸುತ್ತವೆ. ಪುಸ್ತಕ ಬಿಡುಗಡೆ ಮಾಡಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್ ಅವರು ಮಾತನಾಡಿ, ಕೃತಿಯು ಕಾನೂನು, ನರವಿಜ್ಞಾನ ಮತ್ತು ನೈತಿಕತೆಯ ಅರ್ಥಪೂರ್ಣ ಸಂಗಮ. ಭವಿಷ್ಯದ ನ್ಯಾಯಾಂಗ ವ್ಯವಸ್ಥೆ ರೂಪಿಸುವಲ್ಲಿ ಅಂತರಶಿಸ್ತೀಯ ಸಂವಾದಗಳು ಎಷ್ಟು ಮುಖ್ಯ ಎಂಬುದನ್ನು ಈ ಕಾರ್ಯಕ್ರಮ ಸಾಬೀತುಪಡಿಸಿದೆ ಎಂದರು. ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿದರು

ವಾಲ್ಮೀಕಿ ಮೂರ್ತಿ ಲೋಕಾರ್ಪಣೆ

ಬಳ್ಳಾರಿ: ಅಯೋಧ್ಯಾ ಶ್ರೀರಾಮಮೂರ್ತಿಯನ್ನು ತಯಾರಿಸಿ ರುವ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತಿರುವ ವಾಲ್ಮೀಕಿ ಮೂರ್ತಿಯನ್ನುಬಳ್ಳಾರಿಯಲ್ಲಿ ಜ.3ರಂದು ಲೋಕಾರ್ಪಣೆ ಮಾಡಲಾಗುತ್ತದೆ. ವಾಲ್ಮೀಕಿ ವೃತ್ತದಲ್ಲಿ ಪ್ರತಿಷ್ಠಾಪನೆ ಹಿನ್ನೆಲೆ ಯಲ್ಲಿ ಬಳ್ಳಾರಿಗೆ ಗುರುವಾರ ಆಗಮಿಸಿದ ಮೂರ್ತಿಯನ್ನು ಭವ್ಯ ಮೆರವಣಿಗೆ ಮೂಲಕ ಸ್ವಾಗತಿಸಲಾಯಿತು. ಶಾಸಕ ಭರತ್ ರೆಡ್ಡಿ ವೈಯಕ್ತಿಕವಾಗಿ 1.10 ಕೋಟಿ ರು. ವೆಚ್ಚದಲ್ಲಿ ಮೂರ್ತಿಯನ್ನು ನಿರ್ಮಾಣ ಮಾಡಿಸಿದ್ದಾರೆ. ಶಿಲ್ಪಿ ಅರುಣ್ ಯೋಗಿರಾಜ್ ಕಲ್ಪನೆಯಲ್ಲಿ ವಾಲ್ಮೀಕಿ ಮೂರ್ತಿಯನ್ನು ಅದ್ಭುತವಾಗಿ ಕೆತ್ತನೆ ಮಾಡಲಾಗಿದೆ. ಬಳ್ಳಾರಿಗೆ ಬಂದಿರುವ ಮೂರ್ತಿಯನ್ನು ವಾಲ್ಮೀಕಿ ಸಮಾಜದ ಮುಖಂಡರು, ಯುವಕರು ಹಾಗೂ ಮಹಿಳೆಯರು ಪೂರ್ಣಕುಂಭದೊಂದಿಗೆ ಸ್ವಾಗತಿಸಿದರು. ರಾಮ-ಆಂಜನೇಯ ವೇಷಭೂಷಣ ಹಾಕಿದ ಕೆಲ ಯುವಕರು ಮೆರವಣಿಗೆಯೊದ್ದಕ್ಕೂ ಗಮನ ಸೆಳೆದರು.

ಇದೀಗ ಬಡ ಮಕ್ಕಳಿಂದಲೂ ಉನ್ನತ ಸಾಧನೆ | ಸಂಸದ್ ಖೇಲ್ ಮಹೋತ್ಸವ ಉದ್ದೇಶಿಸಿ ವರ್ಚುಯಲ್ ಭಾಷಣ

ಕ್ರೀಡಾ ಸ್ವಜನಪಕ್ಷಪಾತ ಕೊನೆಗೊಂಡಿದೆ

ದೆಹಲಿ: 2014ಕ್ಕಿಂತ ಮೊದಲು ತಂಡಗಳ ಆಯ್ಕೆ ಮತ್ತು ಕ್ರೀಡೆಗಳಲ್ಲಿ ನಡೆಯುತ್ತಿದ್ದ ಅಕ್ರಮ, ಸ್ವಜನಪಕ್ಷಪಾತವನ್ನು ದಶಕದ ಹಿಂದೆಯೇ ಕೊನೆಗೊಳಿಸಿದ್ದೇವೆ. ಈಗ ಬಡ ಕುಟುಂಬಗಳ ಮಕ್ಕಳೂ ಕಠಿಣ ಪರಿಶ್ರಮ ಮತ್ತು ಪ್ರತಿಭೆಯ ಮೂಲಕ ಉನ್ನತ ಸಾಧನೆ ಮಾಡಬಹುದು ಎಂದು ಪ್ರಧಾನಿ ಮೋದಿ ಹೇಳಿದರು.

ಯುವಜನರಲ್ಲಿ ಕ್ರೀಡಾ ಸಂಸ್ಕೃತಿ ಮತ್ತು ನಾಯಕತ್ವವನ್ನು ಉತ್ತೇಜಿಸುವ ಗುರಿ ಹೊಂದಿರುವ 'ಸಂಸದ್ ಖೇಲ್ ಮಹೋತ್ಸವ'ವನ್ನು ಉದ್ದೇಶಿಸಿ ವರ್ಚುಯಲ್ ಮೂಲಕ ಮಾತನಾಡಿದ ಪ್ರಧಾನಿ, ಸಂಸದ್ ಖೇಲ್ ಮಹೋತ್ಸವದಿಂದ ರಾಷ್ಟ್ರವು ಸಾವಿರಾರು ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ರೂಪಿಸುತ್ತಿದೆ. ಇದು ಯುವ ಸಬಲೀಕರಣ ಮತ್ತು ರಾಷ್ಟ್ರ ನಿರ್ಮಾಣದ ಆಧಾರಸ್ತಂಭವಾಗಿ ಹೊರಹೊಮ್ಮುತ್ತಿದೆ, ಇದರ ಮತ್ತೊಂದು ವಿಶೇಷ ಅಂಶವೆಂದರೆ, ಸಾಮಾಜಿಕ ಮನಸ್ಥಿತಿಗಳನ್ನು ಬದಲಾಯಿಸುವಲ್ಲಿ ಪರಿವರ್ತನಾತ್ಮಕ ಪಾತ್ರವಾಗಿದೆ ಎಂದು ಮೋದಿ ಅಭಿಪ್ರಾಯಪಟ್ಟರು.

ನೆಪೋಟಿಸಮ್ ಅಂತ್ಯ: 2014ಕ್ಕಿಂತ ಮೊದಲು ತಂಡಗಳ ಆಯ್ಕೆ ಮತ್ತು ಕ್ರೀಡಾ ಮೂಲಸೌಕರ್ಯದಲ್ಲಿ ಅಕ್ರಮ, ಸ್ವಜನಪಕ್ಷಪಾತ ಹೆಚ್ಚಾಗಿ ನಡೆಯುತ್ತಿದ್ದವು ಎಂದು ಆರೋಪಿಸಿದ ಪ್ರಧಾನಿ, ಈಗ ಆ ಕೆಟ್ಟ ವ್ಯವಸ್ಥೆ ಕೊನೆಗೊಂಡಿವೆ. ಬಡ ಕುಟುಂಬ ಗಳ ಮಕ್ಕಳೂ ತಮ್ಮ ಕಠಿಣ ಪರಿಶ್ರಮ ಮತ್ತು ಪ್ರತಿಭೆಯಿಂದ ಅತ್ಯುನ್ನತ ಮಟ್ಟಕ್ಕೆ ಏರುತ್ತಿದ್ದಾರೆ ಎಂದು ಹೇಳಿದರು.

2030ರಲ್ಲಿ ಭಾರತವು ಅಹಮದಾಬಾದ್‌ನಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು ಆಯೋಜಿಸುತ್ತಿದೆ. ಇದಲ್ಲದೆ 2036ರಲ್ಲಿ ನಡೆಯುವ ಒಲಿಂಪಿಕ್ಸ್ ಅನ್ನು ಆಯೋಜಿಸಲು ಪ್ರಯತ್ನಗಳು ಸಾಗಿವೆ.
ನರೇಂದ್ರ ಮೋದಿ, ಪ್ರಧಾನಿ

2014ರ ಮೊದಲು 1,200 ಕೋಟಿ ರು.ಗಳಿಗಿಂತ ಕಡಿಮೆಯಿದ್ದ ಕ್ರೀಡಾ ಬಜೆಟ್ ಅನ್ನು 3,000 ಕೋಟಿ ರು. ಗಳಿಗಿಂತ ಹೆಚ್ಚಿಸಲಾಗಿದೆ. ವಿಶೇಷ ಯೋಜನೆಯ ಮೂಲಕ ಕ್ರೀಡಾಪಟುಗಳಿಗೆ ತಲಾ 25,000ರಿಂದ 50,000 ರು. ಗಳವರೆಗೆ ಮಾಸಿಕ ಆರ್ಥಿಕ ನೆರವು ನೀಡಲಾಗುತ್ತಿದೆ ಎಂದೂ ಅವರು ತಿಳಿಸಿದರು.

ಕನಸು ನನಸಿಗಾಗಿ ಶ್ರಮ: ದೇಶದಲ್ಲಿ ಕ್ರೀಡಾ ಸಂಸ್ಕೃತಿ ಹೇಗೆ ಬೆಳೆಯುತ್ತಿದೆ ಎಂಬುದನ್ನು ವಿವರಿಸಿದ ಪ್ರಧಾನಿ ಮೋದಿ, ದೇಶದ ಪ್ರತಿಯೊಂದು ಮೂಲೆಯಿಂದಲೂ, ರಾಷ್ಟ್ರವನ್ನು ಪ್ರೇರೇಪಿಸುವ ಸ್ಫೂರ್ತಿದಾಯಕ ಉದಾಹರಣೆಗಳು ಹೊರಹೊಮ್ಮುತ್ತಿವೆ. ಕೆಲವು ಕ್ರೀಡಾಪಟುಗಳು ತಮ್ಮ ಸಾಮರ್ಥ್ಯವನ್ನು ಮೀರಿ ಹೊಸ ಎತ್ತರಕ್ಕೆ ತಲುಪುತ್ತಿದ್ದಾರೆ. ಯುವತಿಯರೂ ಹಿಂದೆ ಬೀಳದೆ ತಮ್ಮ ಕನಸುಗಳನ್ನು ನನಸಾಗಿಸಲು ಅವಿರತವಾಗಿ ಶ್ರಮಿಸುತ್ತಿದ್ದಾರೆ ಎಂದರು.

ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡುವ ಮೂಲಕ ತಮ್ಮ ಮತ್ತು ಕುಟುಂಬದ ಭವಿಷ್ಯವನ್ನು ಮಾತ್ರವಲ್ಲದೆ ಇಡೀ ಗ್ರಾಮ ಮತ್ತು ಸಮಾಜದ ಭವಿಷ್ಯವನ್ನು ಬದಲಾಯಿಸಬಹುದು. ಇಂದು ಕ್ರೀಡೆಗಳಲ್ಲಿನ ಅವಕಾಶಗಳು ಸೀಮಿತವಾಗಿಲ್ಲ, ಅಪರಿಮಿತವಾಗಿವೆ ಎಂದು ಅವರು ಹೇಳಿದರು.

ಸಂಸದ್ ಖೇಲ್ ಮಹೋತ್ಸವ

ಸಂಸದ್ ಖೇಲ್ ಮಹೋತ್ಸವವು ಯುವಜನರಲ್ಲಿ ಕ್ರೀಡಾ ಸಂಸ್ಕೃತಿ ಮತ್ತು ನಾಯಕತ್ವವನ್ನು ಉತ್ತೇಜಿಸುವ ಉದ್ದೇಶ ಹೊಂದಿರುವ ಕ್ರೀಡಾ ಮತ್ತು ಫಿಟ್ನೆಸ್ ಉತ್ಸವಾಗಿದ್ದು, ವಾರ್ಡ್ ಬ್ಲಾಕ್ ಮತ್ತು ಲೋಕಸಭಾ ಕ್ಷೇತ್ರ ಮಟ್ಟದಲ್ಲಿ ಮೂರು ಹಂತದ ಸ್ಪರ್ಧೆಗಳನ್ನು ಒಳಗೊಂಡಿದೆ. ಸಾಂಪ್ರದಾಯಿಕ ಆಟಗಳು, ಫುಟ್ಬಾಲ್, ವಾಲಿಬಾಲ್ ಮತ್ತು ಕ್ರಿಕೆಟ್ ಕೂಡ ಸೇರಿವೆ. ಹಗ್ಗ ಜಗ್ಗಾಟ, ನಿಂಬೆ ಚಮಚ ಓಟ ಮತ್ತು ಗೋಣಿಚೀಲ ಓಟಗಳಂತಹ ಮೋಜಿನ ಚಟುವಟಿಕೆಗಳನ್ನೂ ಇದು ಹೊಂದಿದೆ.

ದೆಹಲಿ ಮೆಟ್ರೋ ಮತ್ತಷ್ಟು ವಿಸ್ತರಣೆ

ದೆಹಲಿ: ಡೆಹಲಿ ಮೆಟ್ರೋ ಜಾಲ ಮತ್ತಷ್ಟು ವಿಸ್ತರಣೆಗೆ ಕೇಂದ್ರ ಸರಕಾರ ಸಮ್ಮತಿಸಿದ್ದು, 12,015 ಕೋಟಿ ರು. ವೆಚ್ಚದಲ್ಲಿ ಮೆಟ್ರೋ ವಿಸ್ತರಣೆ ಯೋಜನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ನಂತರ ಕೇಂದ್ರ ಸಚಿವ ಅಶ್ವಿನ್ ವೈಷ್ಣವ್ ಅವರು ಈ ವಿಚಾರವನ್ನು ಮಾಧ್ಯಮಗಳಿಗೆ ತಿಳಿಸಿದ್ದಾರೆ. ಕೇಂದ್ರ ಸಚಿವ ಸಂಪುಟವು ದೆಹಲಿ ಮೆಟ್ರೋದ 5ಎ ಹಂತಕ್ಕೆ ಅನುಮೋದನೆ ನೀಡಿದೆ ಎಂದು ಅವರು ಹೇಳಿದ್ದು, ಪ್ರಸ್ತಾವಿತ ವಿಸ್ತರಣೆಯು 16 ಕಿ. ಮೀ. ಮೆಟ್ರೋ ಮಾರ್ಗದಲ್ಲಿ 13 ನಿಲ್ದಾಣಗಳು ನಿರ್ಮಾಣವಾಗಲಿವೆ. ಈ ಪೈಕಿ 10 ಸುರಂಗ ನಿಲ್ದಾಣಗಳಾದರೆ, ಉಳಿದ ಮೂರು ಎಲಿವೇಟೆಡ್ ನಿಲ್ದಾಣವಾಗಲಿವೆ ಎಂದರು. ಸದ್ಯ ದೆಹಲಿ ಮೆಟ್ರೋ ಭಾರತದಲ್ಲಿರುವ ಅತಿದೊಡ್ಡ ಮೆಟ್ರೋ ಜಾಲ ಎನಿಸಿದ್ದು, 395 ಕಿಮೀ ಉದ್ದದ ಮಾರ್ಗವನ್ನು ಹೊಂದಿದೆ. ಈಗ ಐದನೇ ಹಂತದ ಮೆಟ್ರೋ ಕಾಮಗಾರಿ ಪೂರ್ಣಗೊಂಡರೆ, ಇದರ ಒಟ್ಟು ಜಾಲ 400 ಕಿಮೀ ದಾಟುತ್ತದೆ.

ಶಬರಿಮಲೆ ದೇವಸ್ಥಾನದ ಚಿನ್ನ ನಾಪತ್ತೆ | ಸೋನಿಯಾ ವಿರುದ್ಧ ಪಿಣರಾಯಿ ಆರೋಪ

ಅಯ್ಯಪ್ಪ ಚಿನ್ನ ಕಳವಿಗೆ ಸೋನಿಯಾ ನಂಟು?

ತಿರುವನಂತಪುರಂ: ಶಬರಿಮಲೆ ದೇವಸ್ಥಾನದ ಚಿನ್ನ ನಾಪತ್ತೆ ಪ್ರಕರಣದ ಪ್ರಮುಖ ಆರೋಪಿ ಉನ್ನಿಕೃಷ್ಣನ್ ಪೊಟ್ಟಿ ಮತ್ತು ಬಳ್ಳಾರಿಯ ಚಿನ್ನದ ವ್ಯಾಪಾರಿ ಗೋವರ್ಧನ್‌ಗೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ನಂಟಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಗಂಭೀರ ಆರೋಪ ಮಾಡಿದ್ದಾರೆ.

ಈ ಬಗ್ಗೆ ಮಾಧ್ಯಮಕ್ಕೆ ಪ್ರತಿಕ್ರಿಯಿಸಿರುವ ಪಿಣರಾಯಿ ಅವರು, ಸೋನಿಯಾ ಹೆಚ್ಚಿನ ಭದ್ರತೆಯಿರುವ ನಾಯಕಿ. ಆರೋಪಿಗೆ ಹೇಗೆ ಅವರ ಭೇಟಿ ಸಾಧ್ಯವಾಯಿತು ಎಂದು ಕೇಳಿರುವ ಕೇರಳ ಸಿಎಂ, ಸೋನಿಯಾ ಅವರು ಉನ್ನಿಕೃಷ್ಣನ್ ಪೊಟ್ಟಿ, ಗೋವರ್ಧನ್‌ರಿಂದ ಉಡುಗೊರೆ ಸ್ವೀಕರಿಸುತ್ತಿರುವ ಫೋಟೋವೊಂದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಸೋನಿಯಾ ಭೇಟಿ ಎಷ್ಟು ಕಷ್ಟ ಎಂದು ಕಾಂಗ್ರೆಸ್ ನಾಯಕರಿಗೂ ಗೊತ್ತು, ಹಾಗಿದ್ದರೆ ಆರೋಪಿಗೆ ಬಹಳ ಬೇಗ ಅವರ ಭೇಟಿಯ ಅವಕಾಶ ಹೇಗೆ ಸಿಕ್ಕಿತು ಎಂದು ಪಿಣರಾಯಿ ಪ್ರಶ್ನಿಸಿದ್ದಾರೆ.

ಈ ಮೂಲಕ ಶಬರಿಮಲೆ ಚಿನ್ನದ ಅವ್ಯವಹಾರದ ತನಿಖೆಯನ್ನು ರಾಜ್ಯ ಸರ್ಕಾರ ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ಆರೋಪಿಸಿದ್ದ ಕಾಂಗ್ರೆಸ್ ಮತ್ತು ಯುಡಿಎಫ್‌ಗೆ ತಿರುಗೇಟು ನೀಡಿದ್ದಾರೆ.

ಅರುಣಾಚಲ ಗಡಿ ಉದ್ವಿಗ್ನತೆಗೆ ಸಾಧ್ಯತೆ

ದೆಹಲಿ: ಭಾರತ ಮತ್ತು ಚೀನಾ ನಡುವೆ ಲಡಾಖ್‌ನಲ್ಲಿ ವರ್ಷಗಳಿಂದ ನಡೆದ ಗಡಿ ಉದ್ವಿಗ್ನತೆ ಕೊನೆಗೊಂಡಿದ್ದರೂ ಕೂಡ ಮುಂದೆ ಅರುಣಾಚಲ ಪ್ರದೇಶದಲ್ಲಿ ಹೊಸ ಉದ್ವಿಗ್ನತೆ ಉಂಟಾಗಬಹುದು ಎಂದು ಅಮೆರಿಕದ ರಕ್ಷಣಾ ಇಲಾಖೆಯ ಇತ್ತೀಚಿನ ವರದಿ ಎಚ್ಚರಿಕೆ ನೀಡಿದೆ. ಚೀನಾ ಅರುಣಾಚಲ ಪ್ರದೇಶದ ಮೇಲಿನ ಹಕ್ಕನ್ನು ತೈವಾನ್‌ನೊಂದಿಗೆ ಸಮಾನವಾಗಿ ತನ್ನ ಮೂಲಭೂತ ಆಸಕ್ತಿ (ಕೋರ್ ಇಂಟರೆಸ್ಟ್) ಎಂದು ಪರಿಗಣಿಸುತ್ತಿದೆ ಎಂದು ವರದಿ ಹೇಳಿದೆ. ಅಮೆರಿಕದ ಕಾಂಗ್ರೆಸ್‌ಗೆ ಸಲ್ಲಿಸಿದ ಈ ವಾರ್ಷಿಕ ವರದಿಯಲ್ಲಿ ಅರುಣಾಚಲ, ತೈವಾನ್ ಮತ್ತು ದಕ್ಷಿಣ ಚೀನಾ ಸಮುದ್ರದಲ್ಲಿನ ಇತರ ಪ್ರದೇಶಗಳ ಮೇಲಿನ ಹಕ್ಕುಗಳು 2049ರ ವೇಳೆಗೆ 'ಮಹಾನ್ ಪುನರುಜ್ಜೀವನ' (ಗ್ರೇಟ್ ರಿಜುವಿನೇಷನ್) ಸಾಧಿಸುವಲ್ಲಿ ಪ್ರಮುಖವಾಗಿವೆ ಎಂದು ಉಲ್ಲೇಖಿಸಲಾಗಿದೆ. ಈ ಯೋಜನೆಯಡಿ ಚೀನಾ ವಿಶ್ವ ಮಟ್ಟದಲ್ಲಿ ಉನ್ನತ ಸ್ಥಾನ ಪಡೆಯಲು ಮತ್ತು ಯುದ್ಧ ಮಾಡಿ ಗೆಲ್ಲುವ ಸಾಮರ್ಥ್ಯದ ವಿಶ್ವದರ್ಜೆಯ ಸೇನೆಯನ್ನು ನಿರ್ಮಿಸಲು ಉದ್ದೇಶ ಹೊಂದಿದೆ ಎಂದು ವರದಿ ತಿಳಿಸಿದೆ. ಅರುಣಾಚಲ ಪ್ರದೇಶ ಯಾವಾಗಲೂ ಭಾರತದ ಅವಿಭಾಜ್ಯ ಅಂಗವಾಗಿರುತ್ತದೆ ಎಂಬ ನಿಲುವನ್ನು ದೃಢವಾಗಿ ಹೊಂದಿದೆ. ಅರುಣಾಚಲದಲ್ಲಿ ಹೊಸ ಫ್ಲ್ಯಾಶ್ ಪಾಯಿಂಟ್ ಆಗುವ ಸಾಧ್ಯತೆಗಳಿದೆ ಎನ್ನಲಾಗುತ್ತಿದೆ. ಕಳೆದ ವರ್ಷ ಭಾರತ-ಚೀನಾ ದೇಶಗಳು ಲೈನ್ ಆಫ್ ಆಕ್ಚುವಲ್ ಕಂಟ್ರೋಲ್ (ಎಲ್‌ಎಸಿ) ಬಳಿ ಲಡಾಖ್‌ನಲ್ಲಿ ಸೈನಿಕರ ಹಿಂದಕ್ಕೆ ಸರಿಸುವ ಒಪ್ಪಂದಕ್ಕೆ ಬಂದಿದ್ದವು, ಆದರೆ ಇತ್ತೀಚಿನ ತಿಂಗಳುಗಳಲ್ಲಿ ಅರುಣಾಚಲ ಸಂಬಂಧಿತ ಉದ್ವಿಗ್ನತೆಯನ್ನು ಹೆಚ್ಚಿಸಿವೆ.

ಕ್ರಿಸ್‌ಮಸ್ ಆಚರಣೆ ವೇಳೆ ಶಾಲೆ, ಮಾಲ್‌ಗೆ ನುಗ್ಗಿ ಧ್ವಂಸ | ಹಿಂದೂಪರ ಸಂಘಟನೆಯ ನಾಲ್ವರ ಬಂಧನ

ಅಸ್ಸಾಂನಲ್ಲಿ ಕ್ರಿಸ್‌ಮಸ್ ದಿನ ದಾಂಧಲೆ

ಗುವಾಹಟಿ: ಕ್ರಿಸ್‌ಮಸ್ ದಿನವಾದ ಗುರುವಾರ ದೇಶದ ವಿವಿಧ ಕಡೆಗಳಲ್ಲಿ ಬಲಪಂಥೀಯ ಸಂಘಟನೆಗಳಾದ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳ ಕಾರ್ಯಕರ್ತರು ಶಾಲೆ, ಮಾಲ್‌ಗೆ ನುಗ್ಗಿ ಸಿಕ್ಕ ಸಿಕ್ಕ ಅಲಂಕಾರಿಕ ವಸ್ತುಗಳನ್ನು ಪುಡಿ ಪುಡಿ ಮಾಡಿದ್ದು, ಬೆಂಕಿ ಹಚ್ಚಿ ಪುಂಡಾಟ ಮೆರೆದಿದ್ದಾರೆ.

ಅಸ್ಸಾಂನ ನಲ್ಬರಿ ಜಿಲ್ಲೆಯ ಡಯೋಸಿಸನ್ ಶಾಲೆಯೊಂದರಲ್ಲಿ ಕ್ರಿಸ್‌ಮಸ್ ಅಲಂಕಾರಗಳನ್ನು ಧ್ವಂಸಗೊಳಿಸಲಾಗಿದೆ. ನಲ್ಬರಿ ಜಿಲ್ಲೆಯ ಪಾಣಿಗಾಂವ್‌ನ ಸೇಂಟ್ ಮೇರಿ ಇಂಗ್ಲಿಷ್ ಶಾಲೆಯ ಪ್ರಾಂಶುಪಾಲ ಫಾದರ್ ಬೈಜು ಸೆಬಾಸ್ಟಿಯನ್ ನೀಡಿದ ಲಿಖಿತ ದೂರಿನ ಆಧಾರದ ಮೇಲೆ ಪೊಲೀಸರು ಗುರುವಾರ ನಾಲ್ವರನ್ನು ಬಂಧಿಸಿದ್ದಾರೆ.

ಶಾಲೆಗೆ ನುಗ್ಗಿ ಸಿಕ್ಕಸಿಕ್ಕ ವಸ್ತು ಧ್ವಂಸ: ಕೆಲವು ಅಪರಿಚಿತ ದುಷ್ಕರ್ಮಿಗಳು ಕಾನೂನುಬಾಹಿರವಾಗಿ ಶಾಲೆಗೆ ನುಗ್ಗಿ ಆವರಣವನ್ನು ಧ್ವಂಸಗೊಳಿಸಿದ್ದಾರೆ. ಹೊರ ಅಲಂಕಾರಿಕ, ಸೀರಿಯಲ್ ಲೈಟ್‌ಗಳು, ಸಸ್ಯದ ಕುಂಡಗಳು ಮತ್ತು ಇತರ ವಸ್ತುಗಳನ್ನು ಹಾನಿಗೊಳಿಸಿದ್ದಾರೆ. ನಂತರ ಹಾಳಾದ ವಸ್ತುಗಳಿಗೆ ಬೆಂಕಿ ಹಚ್ಚಲಾಗಿದೆ ಎಂದು ದೂರಿನಲ್ಲಿ ಪ್ರಾಂಶುಪಾಲರು ತಿಳಿಸಿದ್ದಾರೆ.

ಸಾಮಾಜಿಕ ಮಾಧ್ಯಮದಲ್ಲಿ ಇದರ ವಿಡಿಯೋ ಹರಿದಾಡುತ್ತಿದ್ದು, ಶಾಲೆಯ ಆವರಣದಲ್ಲಿ ಕ್ರಿಸ್‌ಮಸ್ ಆಚರಣೆ ಮಾಡದಂತೆ ಎಚ್ಚರಿಕೆ ನೀಡಿದ್ದಾರೆ. ತದನಂತರ ನಲ್ಬರಿ ಪಟ್ಟಣದಲ್ಲಿ ಕ್ರಿಸ್ಮಸ್ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗೂ ದಾಳಿ ಮಾಡಿದ್ದು, ಕೆಲವು ವಸ್ತುಗಳಿಗೆ ಬೆಂಕಿ ಹಚ್ಚಿದ್ದಾರೆ.

ನಾಲ್ವರ ಬಂಧನ: ಘಟನೆಗೆ ಸಂಬಂಧಿಸಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದು, ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಸೆಕ್ಷನ್ 189(2) (ಕಾನೂನುಬಾಹಿರ ಸಭೆ), 324(3) (ಕಿಡಿಗೇಡಿತನ) 324(4) ಆಸ್ತಿ ಹಾನಿ ಉಂಟುಮಾಡುವ ಕಿಡಿಗೇಡಿತನ), 326(ಎಫ್) (ಬೆಂಕಿಯಿಂದ ಹಾನಿ ಮಾಡುವ ದುಷ್ಕೃತ್ಯ, ಇತ್ಯಾದಿ), 329(3) (ಅಪರಾಧ 12) (35 ಅಪರಾಧ) (35 ಅಪರಾಧ) 61(2) (ಕ್ರಿಮಿನಲ್ ಪಿತೂರಿ) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಮಾಲ್‌ಗೆ ನುಗ್ಗಿ ಪುಂಡಾಟ

ಛತ್ತೀಸ್‌ಗಢದ ರಾಜಧಾನಿ ರಾಯಪುರದ ಮಾಲ್‌ನಲ್ಲಿ ಕ್ರಿಸ್‌ಮಸ್ ಅಲಂಕಾರವನ್ನು ಧ್ವಂಸಗೊಳಿಸಿದ ಅಪರಿಚಿತ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದು, ಧಾರ್ಮಿಕ ಮತಾಂತರವನ್ನು ಪ್ರತಿಭಟಿಸಿ ಹಿಂದೂ ಪರ ಸಂಘಟನೆಗಳು ಕರೆ ನೀಡಿದ್ದ ದಿನವಿಡೀ 'ಛತ್ತೀಸ್‌ಗಢ ಬಂದ್' ಸಂದರ್ಭದಲ್ಲಿ ಮ್ಯಾಗ್ನೆಟೋ ಮಾಲ್‌ನಲ್ಲಿ ಈ ಘಟನೆ ಸಂಭವಿಸಿದೆ. ದೊಣ್ಣೆಗಳೊಂದಿಗೆ ಮಾಲ್‌ಗೆ ನುಗ್ಗುವ ಗುಂಪು ಆಸ್ತಿಯನ್ನು ಧ್ವಂಸ ಮಾಡುವುದು ಮಾಲ್‌ನ ಸಿಸಿಟಿವಿ ದೃಶ್ಯಾವಳಿಗಳಲ್ಲಿ ಸೆರೆಯಾಗಿದೆ. ಮಾಲ್ ಸಿಬ್ಬಂದಿ ನೀಡಿದ ದೂರಿನ ಆಧಾರದ ಮೇಲೆ, ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಅಡಿಯಲ್ಲಿ 30-40 ಅಪರಿಚಿತ ವ್ಯಕ್ತಿಗಳ ವಿರುದ್ಧ ಸ್ವಯಂಪ್ರೇರಣೆಯಿಂದ ಹಾನಿ, ಕಾನೂನುಬಾಹಿರ ಸಭೆ, ಸಾಮಾನ್ಯ ಕಾನೂನುಬಾಹಿರ ಉದ್ದೇಶ, ಗಲಭೆ ಮತ್ತು ಕಿಡಿಗೇಡಿತನಕ್ಕಾಗಿ ಪ್ರಕರಣ ದಾಖಲಿಸಲಾಗಿದೆ ಎಂದು ರಾಯಪುರ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಲಾಲ್ ಉಮೇದ್ ಸಿಂಗ್ ತಿಳಿಸಿದ್ದಾರೆ.

ಸೌಂದರ್ಯ ಕಾಂಪೋಸಿಟ್ ಪಿಯು ಕಾಲೇಜಿನಲ್ಲಿ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ

ಕ್ಯಾನ್ಸರ್ ಬಗ್ಗೆ ಭಯ ಬೇಡ, ಜಾಗೃತಿ ಅಗತ್ಯ

ಬೆಂಗಳೂರು: ಕ್ಯಾನ್ಸರ್ ಮರಣ ಶಾಸನವಲ್ಲ, ಈ ಕಾಯಿಲೆ ಬಗ್ಗೆ ಭಯಪಡುವ ಬದಲಾಗಿ ಮುನ್ನೆಚ್ಚರಿಕೆ ವಹಿಸುವುದು ಮುಖ್ಯ ಹಾಗೂ ಪ್ರಾರಂಭದ ಹಂತದಲ್ಲೇ ಪರೀಕ್ಷೆ ಮಾಡಿಸಿ ಚಿಕಿತ್ಸೆ ಪಡೆದುಕೊಂಡರೆ ಕ್ಯಾನ್ಸರ್ ಗೆಲ್ಲಬಹುದು ಎಂದು ಯೆನಪೋಯ ವಿವಿ ಉಪ ಕುಲಪತಿ ಡಾ. ಎಂ. ವಿಜಯಕುಮಾರ್ ಹೇಳಿದರು.

ಹಾವನೂರು ಬಡಾವಣೆಯಲ್ಲಿರುವ ಸೌಂದರ್ಯ ಕಾಂಪೋಸಿಟ್ ಪಿಯು ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ 'ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ'ದಲ್ಲಿ ಮತನಾಡಿದ ಅವರು, ದೇಶದಲ್ಲಿ ಪ್ರತಿ ವರ್ಷ ಸುಮಾರು 2,74,000 ಕ್ಯಾನ್ಸರ್ ಪ್ರಕರಣಗಳು ದಾಖಲಾಗುತ್ತಿವೆ. ದುರದೃಷ್ಟವಶಾತ್, ಇವುಗಳಲ್ಲಿ ಸುಮಾರು 52,000 ರೋಗಿಗಳು ಸಕಾಲದಲ್ಲಿ ಸರಿಯಾದ ಚಿಕಿತ್ಸೆ ಪಡೆಯದೆ ಸಾವನ್ನಪ್ಪುತ್ತಿದ್ದಾರೆ. ಈ ಸಾವಿನ ಸಂಖ್ಯೆಯನ್ನು ತಗ್ಗಿಸಲು ಜಾಗೃತಿಯೇ ಪ್ರಮುಖ ಅಸ್ತ್ರ ಎಂದರು.

ಇಂದಿನ ಯುವಜನತೆ ಉತ್ತಮ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು. ತಂಬಾಕು, ಆಲ್ಕೋಹಾಲ್ ಮತ್ತು ಪ್ಲಾಸ್ಟಿಕ್ ಬಳಕೆಯಂತಹ ಹಾನಿಕಾರಕ ಅಭ್ಯಾಸಗಳನ್ನು ತ್ಯಜಿಸಬೇಕು. ಹಣ್ಣು ಮತ್ತು ತರಕಾರಿಗಳಂತಹ ಪೌಷ್ಟಿಕ ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೂಲಕ ಕ್ಯಾನ್ಸರ್ ಬರುವುದನ್ನು ತಡೆಗಟ್ಟಬಹುದು ಎಂದು ಸಲಹೆ ನೀಡಿದರು.

ಸ್ತನ ಕ್ಯಾನ್ಸರ್ ಕೇವಲ ಮಹಿಳೆಯರಿಗೆ ಮಾತ್ರವಲ್ಲ, ಪುರುಷರಲ್ಲೂ ಕಾಣಿಸಿಕೊಳ್ಳುತ್ತದೆ. ಆದರೆ, ರೋಗದ ಲಕ್ಷಣಗಳು ಕಂಡುಬಂದ ತಕ್ಷಣ ಪರೀಕ್ಷೆಗೆ ಒಳಪಟ್ಟರೆ, ಸಣ್ಣ ಶಸ್ತ್ರಚಿಕಿತ್ಸೆಯ ಮೂಲಕ ಅದನ್ನು ಗುಣಪಡಿಸಬಹುದು. ಈಗ ವೈದ್ಯಕೀಯ ಕ್ಷೇತ್ರ ಮುಂದುವರಿದಿದ್ದು, ಸರ್ಜರಿ, ಲೇಸರ್ ಚಿಕಿತ್ಸೆ, ಲ್ಯಾಪ್ರೋಸ್ಕೋಪಿ ಮತ್ತು ರೋಬೋಟಿಕ್ ಸರ್ಜರಿಗಳ ಮೂಲಕ ರೋಗಿಗಳನ್ನು ಗುಣಮುಖರನ್ನಾಗಿಸಬಹುದು ಎಂದು ಧೈರ್ಯ ತುಂಬಿದರು.

ರಾಷ್ಟ್ರಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪದಕ ಮತ್ತು ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು. ಕಿದ್ವಾಯಿ ಮೆಮೊರಿಯಲ್ ಇನ್ಸ್ಟಿಟ್ಯೂಟ್ ಆಫ್ ಆಂಕಾಲಜಿಯ ಡಾ. ನಾದಿಮುಲ್ ಹೂಡಾ ಅವರು ಕ್ಯಾನ್ಸರ್ ಕುರಿತು ವಿಶೇಷ ಉಪನ್ಯಾಸ ನೀಡಿದರು. ಈ ವೇಳೆ ಸೌಂದರ್ಯ ಸಂಸ್ಥೆಯ ಕಾರ್ಯನಿರ್ವಾಹಣಾಧಿಕಾರಿ ಎಂ. ಕೀರ್ತನ್ ಕುಮಾರ್, ಟ್ರಸ್ಟಿ ಎಂ. ವರುಣ್ ಕುಮಾರ್, ಪ್ರಾಂಶುಪಾಲ ಮಹಾಬಲೇಶ್ವರ ತುಂಗಾ, ಉಪ ಪ್ರಾಂಶುಪಾಲೆ ಕೃಪಾ ಆರ್. ದೇವ್, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಒಂದೇ ದಿನ ಹರಿದುಬಂದ ಲಕ್ಷಾಂತರ ಭಕ್ತರು | ಸ್ವಾಮಿಯ ದರ್ಶನ, ವಸತಿ ಸಮಸ್ಯೆಗೂ ತೊಡಕು

ಮಂತ್ರಾಲಯದಲ್ಲಿ ಜನಸಾಗರ

ರಾಯಚೂರು: ವರ್ಷದ ಕೊನೆಯ ವಾರ ಹಾಗೂ ಕ್ರಿಸ್‌ಮಸ್ ರಜಾ ದಿನದ ಹಿನ್ನೆಲೆಯಲ್ಲಿ ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠ ಹಿಂದೆಂದಿಗಿಂತಲೂ ಭಕ್ತರಿಂದ ಗುರುವಾರ ಕಿಕ್ಕಿರಿದು ತುಂಬಿತು. ಗುರುವಾರವೂ ಇದ್ದ ಕಾರಣ ಮಂತ್ರಾಲಯದಲ್ಲಿ ಜನಸಾಗರವೇ ಹರಿದುಬಂದಿತು.

ಸಾಮಾನ್ಯವಾಗಿ ರಜಾ ದಿನಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಭಕ್ತರು ಬರುತ್ತಾರೆ, ಆದರೆ ಈಗ ಭಕ್ತರ ಸಂಖ್ಯೆ ದುಪ್ಪಟ್ಟಾಗಿದೆ. ಒಂದೇ ದಿನ ಲಕ್ಷಾಂತರ ಭಕ್ತರು ಮಠಕ್ಕೆ ಭೇಟಿ ನೀಡಿದ್ದರಿಂದ ಭಕ್ತರಿಗೆ ಸೌಲಭ್ಯ ಒದಗಿಸಲು ಶ್ರೀಮಠ ಹರಸಾಹಸಪಟ್ಟಿತು. ಬೃಂದಾವನ ದರ್ಶನಕ್ಕೆ ಅವಕಾಶವಿರುವ ಎಲ್ಲ ಬಾಗಿಲುಗಳನ್ನೂ ತೆರೆದು ಮಠದ ಆಡಳಿತ ಮಂಡಳಿ ದರ್ಶನಕ್ಕೆ ಅವಕಾಶ ಮಾಡಿಕೊಟ್ಟಿದೆ.

ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದ ಹಿನ್ನೆಲೆಯಲ್ಲಿ ಸ್ವಾಮಿಯ ದರ್ಶನಕ್ಕೆ ಗಂಟೆಗಟ್ಟಲೆ ಕ್ಯೂ ನಿಲ್ಲಬೇಕಾಯಿತು. ರೂಮ್ ಬುಕ್ ಮಾಡದೇ ನೇರವಾಗಿ ಬೆಂಗಳೂರು ಸೇರಿ ವಿವಿಧ ನಗರಗಳಿಂದ ಬಂದ ಸಾವಿರಾರು ಭಕ್ತರು ವಸತಿ ಸಮಸ್ಯೆ ಅನುಭವಿಸಬೇಕಾಯಿತು. ಈಗಾಗಲೇ ಮಠದ ರೂಮುಗಳು ಭರ್ತಿಯಾಗಿದ್ದು, ಡಿ.23ರಿಂದ, 2026ರ ಜ.15ರವರೆಗೆ ಯಾವುದೇ ರೂಮ್‌ಗಳು ಲಭ್ಯವಿರುವುದಿಲ್ಲವೆಂದು ಮಠದ ಆಡಳಿತ ಮಂಡಳಿ ತಿಳಿಸಿದೆ.

ಬಿಹಾರಿ ವಾಜಪೇಯಿ ಅವರ 101ನೇ ಜನ್ಮದಿನ | ಅಟಲ್ ಹೆಸರಿನ ಉಚ್ಚಾರಣೆಯೇ ರೋಮಾಂಚನ

ಪಕ್ಷ ಸಂಘಟನೆಗೆ ವಾಜಪೇಯಿ ಪ್ರೇರಕ

ಬೆಂಗಳೂರು: ಅಟಲ್ ಹೆಸರಿನ ಉಚ್ಚಾರಣೆಯೇ ನಮಗೆ ರೋಮಾಂಚನವನ್ನುಂಟು ಮಾಡುತ್ತದೆ. ಆ ಹೆಸರು ಪ್ರೇರಣೆ, ಉತ್ಸಾಹವನ್ನು ತುಂಬುತ್ತದೆ. ಅಂಥ ಶ್ರೇಷ್ಠ ವ್ಯಕ್ತಿತ್ವ ಅವರದ್ದಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಅವರು ತಿಳಿಸಿದ್ದಾರೆ.

ಮಾಜಿ ಪ್ರಧಾನಮಂತ್ರಿ, ಭಾರತ ರತ್ನ ದಿ. ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಲವಾರು ಬಾರಿ ಅವರು ಕರ್ನಾಟಕದಲ್ಲಿ ಪ್ರವಾಸ ಮಾಡಿದ್ದರು. ರಾಜ್ಯದಲ್ಲಿ ಬಿಜೆಪಿ ಸಂಘಟನೆಗೆ ಯಡಿಯೂರಪ್ಪ, ಶಂಕರಮೂರ್ತಿ, ರಾಮಚಂದ್ರೇಗೌಡ, ಜಗದೀಶ ಶೆಟ್ಟರ್, ಪಕ್ಷದ ಹಿರಿಯರಿಗೆ ಪ್ರೇರಣೆ ನೀಡಿದ ಮಹಾನ್ ನಾಯಕರು ಎಂದು ಅಭಿಪ್ರಾಯಪಟ್ಟರು.

ಕರ್ನಾಟಕವು ಮುಂದೊಂದು ದಿನ ದಕ್ಷಿಣ ಭಾರತದಲ್ಲಿ ಬಿಜೆಪಿಯ ಭದ್ರ ಕೋಟೆಯಾಗಲಿದೆ ಎಂಬ ದೂರದೃಷ್ಟಿತ್ವ ಅವರಲ್ಲಿತ್ತು. ಕಾರ್ಯಕರ್ತರ ಕುರಿತು ಅದಮ್ಯ ವಿಶ್ವಾಸ ಅವರದಾಗಿತ್ತು. ಅವರ ದೇಶಭಕ್ತಿ ನಮಗೆ ಪ್ರೇರಣೆ ಆಗಬೇಕು. ಕಾಂಗ್ರೆಸ್ ಅಪಪ್ರಚಾರಗಳ ನಡುವೆಯೂ ಬಿಜೆಪಿ ನೇತೃತ್ವದ ಕೇಂದ್ರದ ಎನ್‌ಡಿಎ ಸರಕಾರವು ಭ್ರಷ್ಟಾಚಾರರಹಿತ ಆಡಳಿತವನ್ನು ನರೇಂದ್ರ ಮೋದಿಯವರು ನೀಡುತ್ತಿದ್ದಾರೆ. ಅಸ್ತಿತ್ವ ಕಳಕೊಳ್ಳುತ್ತಿರುವ ಕಾಂಗ್ರೆಸ್ಸಿನ ಸ್ಥಿತಿಯನ್ನು ರಾಜ್ಯದ ಪಟ್ಟಣ ಪಂಚಾಯಿತಿ ಚುನಾವಣೆ ತೋರಿಸಿಕೊಟ್ಟಿದೆ ಎಂದರು.



ಬುಧವಾರ ನಡೆದ ಸ್ಥಳೀಯ ಸಂಸ್ಥೆ ಉಪಚುನಾವಣೆ ಫಲಿತಾಂಶ ಬಿಜೆಪಿ ಪರವಾಗಿ ಬಂದಿದೆ. ಹಾಗಿದ್ದರೆ ಮತಗಳ್ಳತನ ಮಾಡಿದ್ದು ಯಾರು? ಕಾಂಗ್ರೆಸ್ ಮತಗಳ್ಳರ ಪಕ್ಷ. ನಮ್ಮದು ದಿಲ್ ಚೋರಿ ಪಕ್ಷ. ಮುಂದಿನ ಚುನಾವಣೆಯಲ್ಲಿ ಬಿಜೆಪಿ ರಾಜ್ಯದಲ್ಲಿ ಗೆಲುವು ಸಾಧಿಸಲಿದೆ.
-ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ಪ್ರತಿಪಕ್ಷ ನಾಯಕ

ಕರ್ನಾಟಕದಲ್ಲಿ 30 ಸಾವಿರ ಉದ್ಯೋಗದ ಚರ್ಚೆ

ರಾಹುಲ್-ವೈಷ್ಣವ್ ಕ್ರೆಡಿಟ್ ವಾರ್

ದೆಹಲಿ: ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಮತ್ತು ಕೇಂದ್ರ ಎಲೆಕ್ಟ್ರಾನಿಕ್ಸ್ ಸಚಿವ ಅಶ್ವಿನಿ ವೈಷ್ಣವ್ ಮಧ್ಯೆ ಕರ್ನಾಟಕದಲ್ಲಿ ಉದ್ಯೋಗ ಸೃಷ್ಟಿ ವಿಚಾರದಲ್ಲಿ ಕ್ರೆಡಿಟ್ ವಾರ್ ನಡೆದಿದೆ.

ಕರ್ನಾಟಕದ ದೇವನಹಳ್ಳಿಯಲ್ಲಿ ಘಟಕ ತೆರೆದ 8-9 ತಿಂಗಳಲ್ಲಿ 30 ಸಾವಿರ ಮಂದಿಗೆ ತೈವಾನ್ ಮೂಲದ ಫಾಕ್ಸ್‌ಕಾನ್ ಕಂಪನಿ ಉದ್ಯೋಗ ನೀಡಿದ ಸುದ್ದಿಯನ್ನು ಹಂಚಿಕೊಂಡ ರಾಹುಲ್ ಗಾಂಧಿ ಇದು ಕರ್ನಾಟಕ ಮಾದರಿ ಎಂದು ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದರು.

ಈ ಪೋಸ್ಟ್‌ಗೆ ಅಶ್ವಿನಿ ವೈಷ್ಣವ್ ಪ್ರತಿಕ್ರಿಯಿಸಿ, ''ಪ್ರಧಾನಿ ನರೇಂದ್ರ ಮೋದಿ ಅವರ 'ಮೇಕ್ ಇನ್ ಇಂಡಿಯಾ' ಕಾರ್ಯಕ್ರಮದ ಯಶಸ್ಸನ್ನು ಒಪ್ಪಿಕೊಂಡಿದ್ದಕ್ಕಾಗಿ ರಾಹುಲ್ ಗಾಂಧಿ ಅವರಿಗೆ ಧನ್ಯವಾದಗಳು. ನೀವು ಗಮನಿಸಿದಂತೆ ನಮ್ಮ ಪ್ರಧಾನಿಯವರ ದೃಷ್ಟಿಕೋನವನ್ನು ನಾವು ಕಾರ್ಯಗತಗೊಳಿಸುತ್ತಿದ್ದಂತೆ ನಾವು ಉತ್ಪಾದಕ ಆರ್ಥಿಕತೆಯಾಗುತ್ತಿದ್ದೇವೆ'' ಬರೆದು ಟಾಂಗ್ ನೀಡಿದ್ದಾರೆ.

ಚರ್ಚೆ ಯಾಕೆ?: ರಾಹುಲ್ ಗಾಂಧಿ ಕಳೆದ ವಾರ ಜರ್ಮನಿ ಪ್ರವಾಸದಲ್ಲಿದ್ದರು. ಈ ವೇಳೆ ಭಾರತದಲ್ಲಿ ಉತ್ಪಾದನಾ ಸಾಮರ್ಥ್ಯ ಕುಸಿಯುತ್ತಿದೆ ಎಂದು ಹೇಳಿಕೆ ನೀಡಿದ್ದು ದೊಡ್ಡ ಚರ್ಚೆಯಾಗಿತ್ತು. ಮ್ಯೂನಿಕ್‌ನಲ್ಲಿರುವ ಬಿಎಂಡಬ್ಲ್ಯೂ ಘಟಕಕ್ಕೆ ಭೇಟಿ ನೀಡಿದ ಬಳಿಕ ರಾಹುಲ್ ಗಾಂಧಿಯವರು ಸಾಮಾಜಿಕ ಮಾಧ್ಯಮ ಇನ್‌ಸ್ಟಾಗ್ರಾಮ್‌ನಲ್ಲಿ ವೀಡಿಯೊವೊಂದನ್ನು ಪೋಸ್ಟ್ ಮಾಡಿದ್ದರು. ಉತ್ಪಾದನೆಯು ಬಲವಾದ ಆರ್ಥಿಕತೆಯ ಬೆನ್ನೆಲುಬಾಗಿದೆ. ಬೇಸರದ ವಿಚಾರವೆಂದರೆ ಭಾರತದಲ್ಲಿ ಉತ್ಪಾದನೆ ಕುಸಿಯುತ್ತಿದೆ. ದೊಡ್ಡ ಪ್ರಮಾಣದ ಉದ್ಯೋಗಗಳನ್ನು ಸೃಷ್ಟಿಸಲು ಭಾರತಕ್ಕೆ ಉತ್ತಮ ಉತ್ಪಾದನಾ ವಾತಾವರಣದ ಅಗತ್ಯವಿದೆ. ಪ್ರಸ್ತುತ ಭಾರತದಲ್ಲಿ ಉತ್ಪಾದನಾ ವಲಯವು ನಿರೀಕ್ಷಿತ ವೇಗದಲ್ಲಿ ಬೆಳೆಯುತ್ತಿಲ್ಲ. ಇದು ಯುವಜನರಿಗೆ ಸಾಕಷ್ಟು ಉದ್ಯೋಗಾವಕಾಶಗಳನ್ನು ತಡೆಯುತ್ತಿದೆ ಎಂದು ಅವರು ಹೇಳಿದ್ದರು.

ರಾಹುಲ್ ಹೇಳಿಕೆಯ ನಂತರ ಬಿಜೆಪಿ ನಾಯಕರು ಮೇಕ್ ಇನ್ ಯೋಜನೆಯ ಸಾಧನೆಗಳ ವಿವರವನ್ನು ಪೋಸ್ಟ್ ಮಾಡಿ ತಿರುಗೇಟು ನೀಡಿದ್ದರು. ಈ ಚರ್ಚೆ ನಡೆಯುತ್ತಿರುವ ಸಮಯದಲ್ಲೇ ರಾಹುಲ್ ಗಾಂಧಿ ಕರ್ನಾಟಕದ ಫಾಕ್ಸ್‌ಕಾನ್ ಉದ್ಯೋಗಕ್ಕೆ ಸಂಬಂಧಿಸಿದ ಸುದ್ದಿಯನ್ನು ಪ್ರಕಟಿಸಿ ಕಾಂಗ್ರೆಸ್ ಸರಕಾರದ ಸಾಧನೆ ಎಂದು ಬಣ್ಣಿಸಿದ್ದರು ಎಂದು ಬಿಂಬಿಸಿದ್ದಾರೆ.

ಶಬರಿಮಲೆ ಯಾತ್ರೆಗೆ ಅನುಮತಿ ನೀಡದ ತಾಯಿ: ಬಾಲಕ ಆತ್ಮಹತ್ಯೆ

ಬೆಳಗಾವಿ: ಅಯ್ಯಪ್ಪ ಸ್ವಾಮಿ ಮಾಲೆ ಧರಿಸಲು ಮನೆಯಲ್ಲಿ ಒಪ್ಪಿಗೆ ನೀಡದ ಕಾರಣಕ್ಕೆ 14 ವರ್ಷದ ಬಾಲಕ ಆತ್ಮಹತ್ಯೆಗೆ ಶರಣಾದ ಘಟನೆ ರಾಮದುರ್ಗ ತಾಲೂಕಿನ ಗಡದ ಕೇರಿಯಲ್ಲಿ ನಡೆದಿದೆ.

ಧರಣೇಶ ಹಲಗೆ (14) ಮೃತ ದುರ್ದೈವಿ. ಅಯ್ಯಪ್ಪ ಸ್ವಾಮಿ ವ್ರತ ಹಿಡಿಯುವ ಆಸೆಯಿಂದ ಈ ಬಾರಿ ಮಾಲೆ ಧರಿಸುತ್ತೇನೆ ಎಂದು ಬಾಲಕ ಮನೆಯವರಲ್ಲಿ ಕೇಳಿಕೊಂಡಿದ್ದಾನೆ. ಮಗ ಹಾಸ್ಟೆಲ್ ನಲ್ಲಿ ವ್ಯಾಸಂಗ ಮಾಡುವ ಕಾರಣ ಹಾಗೂ ಚಿಕ್ಕ ವಯಸ್ಸಿದ್ದು ಕಠಿಣ ವ್ರತ ಆಚರಣೆ ಕಷ್ಟದ ಕೆಲಸವೆಂದು ತಾಯಿ ನಿರಾಕರಿಸಿದ್ದಾಳೆ.

ಕಳೆದ ವರ್ಷ ಬಾಲಕ ಧರಣೇಶ ತಂದೆಯ ಜೊತೆಗೆ ಅಯ್ಯಪ್ಪ ಸ್ವಾಮಿ ಮಾಲೆ ಧರಿಸಿದ್ದ. ದುರಾದೃಷ್ಟವಶಾತ್ ಬಾಲಕನ ತಂದೆ ಮೃತಪಟ್ಟು ವರ್ಷ ಕಳೆದಿಲ್ಲ. ಈ ವರ್ಷವೂ ಅಯ್ಯಪ್ಪ ಸ್ವಾಮಿ ಮಾಲೆ ಧರಿಸಲು ಬಾಲಕ ನಿರ್ಧರಿಸಿದ್ದಾಗ ತಾಯಿ ತಡೆದಿದ್ದಾಳೆ. ಶಬರಿಮಲೆಗೆ ಕರೆದೊಯ್ಯಲು ಯಾರೂ ಇಲ್ಲ, ಈ ಕಾರಣಕ್ಕೆ ಮಾಲೆ ಹಾಕುವುದು ಬೇಡ ಎಂಬ ಬುದ್ಧಿವಾದ ಹೇಳಿದ್ದಾಳೆ.

ತನಗೆ ಅಯ್ಯಪ್ಪ ಸ್ವಾಮಿ ವ್ರತ ಆಚರಣೆಗೆ ಮನೆಯವರು ಅವಕಾಶ ನೀಡಲಿಲ್ಲ ಎಂದು ಮನನೊಂದ ಬಾಲಕ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಕೂಡಲೇ ಸ್ಥಳೀಯರು ಬಾಲಕನನ್ನು ಆಸ್ಪತ್ರೆಗೆ ಸಾಗಿಸಿದರು ಚಿಕಿತ್ಸೆ ಫಲಕಾರಿಯಾಗದೆ ಬಾಲಕ ಮೃತಪಟ್ಟಿದ್ದಾನೆ.

ಧರಣೇಶ ಮೃತಪಟ್ಟ ಸುದ್ದಿ ತಿಳಿಯುತ್ತಿದ್ದಂತೆ ಮನೆಯವರ ಆಕ್ರಂದನ ಮುಗಿಲು ಮುಟ್ಟಿತ್ತು. ಅಯ್ಯಪ್ಪ ಸ್ವಾಮಿ ಮಾಲೆ ಹಾಕಬೇಡ ಎಂದಿದ್ದಕ್ಕೆ ನಮ್ಮ ಮಗ ಈ ನಿರ್ಧಾರ ತಗೆದುಕೊಳ್ಳುತ್ತಾನೆ ಎಂಬ ಕಲ್ಪನೆಯೂ ಇರಲಿಲ್ಲ ಎಂದು ಮೃತನ ತಾಯಿ ಕಣ್ಣೀರು ಹಾಕುತ್ತಿದ್ದ ದೃಶ್ಯ ಮನ ಕಲಕುವಂತಿತ್ತು. ರಾಮದುರ್ಗ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದೆ.

ಪ್ರತಿಭೆಗೆ ಮನ್ನಣೆ ನೀಡುವ ದೂರದೇಶಗಳಲ್ಲೂ ಸಮರ್ಥರು ನೆಲೆಗಾಣಬಹುದು.

ಅನುಪಮ ಸಾಧಕಿ ಈ ರೈಲು ಚಾಲಕಿ

• ಅಭಿನಂದನ್, ಮೃಗವಧೆ

ಇವರು ಲಹರಿ ತಂತ್ರಿ, ತೀರ್ಥಹಳ್ಳಿಯವರು. ಈಗ, ನ್ಯೂಜಿಲೆಂಡ್‌ನಲ್ಲಿ ಮೆಟ್ರೋ ರೈಲು ಚಾಲಕಿ! ದೂರದ ಆ ದೇಶ ದಲ್ಲಿ ಇಂಥದೊಂದು ಕಾರ್ಯನಿರ್ವಹಿಸುತ್ತಿರುವ ಇವರು ನಮ್ಮೆಲ್ಲರಿಗೂ ಹೆಮ್ಮೆಯ ಮಹಿಳೆ.

ಸಾಧನೆಯೆಂದರೆ ಎಲ್ಲವಕ್ಕೂ ಕಿರೀಟ ಇಟ್ಟೇ ನೋಡಬೇಕಿಲ್ಲ, ಕಿರು ಸತ್ಕಾರ್ಯಗಳೂ ಸಾಧನೆ ಗಳೇ ಮತ್ತು ಅವು ಬೆಳವಣಿಗೆಗೆ ಸಾಧನವೇ. ನಮ್ಮ ನಡುವೆಯೇ ಹುಟ್ಟಿ ಬೆಳೆದು ಬದುಕು ಕಟ್ಟಿಕೊಂಡವರಿಂದಲೂ ನಾವು ಕಲಿಯುವ, ಮೆಚ್ಚುವ ನೂರಾರು ಅಂಶಗಳಿರಬಹುದು. ಕಾರಣ, 'ಹಲವಂ ಬಲ್ಲವರಿಂದ ಕಲ್ತು' ಅನ್ನುವ ಪರಂಪರೆ ನಮ್ಮದು. ಇಲ್ಲೊಂದು ಕುತೂಹಲವಿದೆ. ಜಗತ್ತಿನ ಸುಂದರ ದೇಶ ಗಳಲ್ಲೊಂದು ನ್ಯೂಜಿಲೆಂಡ್. ಇದು ಮಹತ್ತಾದ ಪೆಸಿಫಿಕ್ ಸಾಗರ ದಲ್ಲಿರುವ ದ್ವೀಪ ರಾಷ್ಟ್ರ. ಭೂಮಿಯ ನಕಾಶೆಯ ಮೂಲೆಯಲ್ಲಿ ಆಸ್ಟ್ರೇಲಿಯಾದ ಸಮೀಪ ಕಾಣು ವಂಥದ್ದು. ಅಲ್ಲಿ ನಮಗಿಂತ ಏಳೆಂಟು ಗಂಟೆ ಮೊದಲೇ ಸೂರ್ಯೋದಯ ಆಗುತ್ತದೆ. ಮೋಹಕ ಬೀಚುಗಳು, ಹಚ್ಚ ಹಸಿರು ಪರ್ವತಗಳು, ಹಾರಲಾರದ 'ಕಿವೀ' ಹಕ್ಕಿ, ಅತಿದೊಡ್ಡ 'ಕಕಾಪೋ' ಗಿಳಿ– ಇಂಥ ಚಂದದ ಅಂಶಗಳು ತುಂಬಿರುವ ದ್ವೀಪದ ರಾಜಧಾನಿ ವೆಲ್ಲಿಂಗ್ಟನ್. ಇಲ್ಲಿ ಪಯಣಿಸುವ ಚಿತ್ರಣವನ್ನು ಕಣ್ಣು ಕಟ್ಟಿಕೊಳ್ಳಿ.

'ಇಲ್ಲಿಯ ಚಂದದ ರೈಲು ಓಡಿಸುವ ಕಸುಬು ಸಿಕ್ಕರೆ?' ಎಂದು ಕನಸು ಕಂಡಾಕೆ ತೀರ್ಥಹಳ್ಳಿ ಮೂಲದ ಈ ಹೆಣ್ಣುಮಗಳು. ಕನಸನ್ನು ಹಾಗೆಯೇ ಕಟ್ಟಿಡದೆ, ಗಂಟಿನಿಂದ ಹೊರತೆಗೆದು ಹರವಿಟ್ಟದ್ದರ ಫಲವಾಗಿ ಈಗ ಆಕೆ ಅಲ್ಲಿನ ಮೆಟ್ರೋ ರೈಲಿನ ಚಾಲಕಿ ಎನಿಸಿ ಕೊಂಡಿದ್ದಾರೆ! ಮೇಲ್ನೋಟಕ್ಕೆ ಇದೊಂದು ತೀರಾ ಸಣ್ಣ ಸಾಧನೆ ಎನಿಸಬಹುದು, 'ಇದೂ ಒಂದು ಉದ್ಯೋಗವಲ್ಲವೇ, ಇದರಲ್ಲೇನು ಹೆಚ್ಚುಗಾರಿಕೆ?' ಎಂದು ಅವರಿವರು ಪ್ರಶ್ನಿಸ ಬಹುದು. ಆದರೆ, ನಮ್ಮ ತಾಯ್ನೆಲದ ಹುಡುಗಿಯೊಬ್ಬಳು ಪರನಾಡಿನಲ್ಲಿ ಹೀಗೊಂದು ಚಟುವಟಿಕೆಯಲ್ಲಿ ತೊಡಗಿಸಿ ಕೊಂಡಿರುವುದನ್ನು 'ಸಾಮಾನ್ಯ ಸಾಧನೆ' ಅಂತೇಕೆ ಭಾವಿಸಬೇಕು? ಪ್ರತಿಭೆ–ಪರಿಶ್ರಮ ಗಳಿಗೆ ಮನ್ನಣೆ ನೀಡುವ ದೂರದೇಶ ಗಳಲ್ಲೂ ಸಮರ್ಥರು ನೆಲೆಗಾಣ ಬಹುದು ಎಂಬುದಕ್ಕೆ ಇವರೇ ನಿದರ್ಶನ. ಹೀಗಾಗಿ ಖುಷಿ ಪಡೋಣ...

ವಿಶ್ವವಾಣಿ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಬೆಂಗಳೂರು 26-12-2025 ಶುಕ್ರವಾರ

ಮದುವೆ ಆಗಿ ನೋಡು, ಮಗು ತೂಗಿ ನೋಡು

• ಮಿರ್ಲೆ ಚಂದ್ರಶೇಖರ, ಮೈಸೂರು

ಹುಡುಗನಿಗೆ ವಯಸ್ಸು ಮೂವತ್ತೈದು ಆಗಿದ್ದರೂ ಇನ್ನೂ ಮದುವೆಯಾಗಿಲ್ಲ. ಅವನೇನೊ ಮದುವೆಯಾಗಲು ತುದಿಗಾಲಲ್ಲಿ ನಿಂತು ಹಲವು ವರ್ಷಗಳೇ ಆಗಿದ್ದವು; ಆದರೆ ಮದುವೆಗೆ ಹೆಣ್ಣು ಸಿಗಬೇಕಲ್ಲ, ಸಿಕ್ಕರೂ ಒಪ್ಪಬೇಕಲ್ಲ?! ನೂರೆಂಟು ಕಂಡಿಷನ್‌ಗಳು... ಎಲ್ಲವೂ ಸರಿಯಾಗಿ ಇದ್ದವರಿಗೇ ಹೆಣ್ಣು ಸಿಗುವುದು ಕಷ್ಟ. ಅಂಥದ್ದರಲ್ಲಿ ಕಡಿಮೆ ಸಂಬಳದ ಗುತ್ತಿಗೆ ಕೆಲಸದಲ್ಲಿರುವ ಮತ್ತು ಆಸ್ತಿವಂತನೂ ಅಲ್ಲದ ಹುಡುಗನನ್ನು ಮದುವೆ ಆಗಲು ಯಾವ ಹೆಣ್ಣು ಮುಂದೆ ಬರುತ್ತಾಳೆ?

ಆದರೆ, ಈ ಮೂವತ್ತೈದರ ಯುವಕನಿಗೆ ಅದೃಷ್ಟವೆಂಬಂತೆ ಒಂದು ಸಂಬಂಧ ಕೂಡಿಬರುವಂತಿದೆ. ಮನೆಮಂದಿಗೆಲ್ಲಾ ಸಂಭ್ರಮ, ಹೆಣ್ಣನ್ನು ನೋಡಿ ಬರುವುದಕ್ಕೆ ಸಿದ್ಧತೆಯಲ್ಲಿದ್ದಾರೆ. ಮೊಬೈಲ್ ಮೂಲಕ ಮಾತಾಡಿ ಮುಂದಿನ ವಾರ ಕನ್ಯೆಯನ್ನು ನೋಡುವ ಶಾಸ್ತ್ರವನ್ನು ಗೊತ್ತುಪಡಿಸಿದರು. ಮದುಮಗನಿಗೆ ಎಲ್ಲಿಲ್ಲದ ಖುಷಿ. ಆ ದಿನ ಬಂದೇಬಿಟ್ಟಿತು. ಕೆಲವೇ ಗಂಟೆಗಳ ಪ್ರಯಾಣದ ಊರು, ಹೆಣ್ಣಿನ ಮನೆಗೆ ಫಲ–ತಾಂಬೂಲ ಸಮೇತ ಮಧ್ಯಾಹ್ನದ ವೇಳೆಗೆ ಬಂದಿದ್ದಾರೆ ವರನ ಮನೆಯವರು. ಹಾಗೆ ಬಂದವರನ್ನು ನೋಡಿದ ಹೆಣ್ಣಿನ ಮನೆಯವರಿಗೆ ಆಶ್ಚರ್ಯವಾಗಿ, ''ಯಾರು ನೀವು? ಏನು ಬಂದಿರಿ?'' ಎಂದೆಲ್ಲಾ ಕೇಳಿಯೇಬಿಟ್ಟರು!

ಇವರಿಗೂ ಪರಮಾಶ್ಚರ್ಯ. ''ನಾವು ತಮ್ಮ ಮಗಳನ್ನು ನೋಡಿ, ಮದುವೆ ಮಾತುಕತೆ ಆಡಲು ಬಂದಿದ್ದೇವೆ. ಇಂಥ ದಿನ ಬರುತ್ತೇವೆ ಅಂತ ಕಳೆದ ವಾರವೇ ನಿಮಗೆ ಕರೆ ಮಾಡಿದ್ದೆವಲ್ಲಾ? ಯಾಕೆ ಮರೆತಿರಾ?'' ಎಂದು ಕೇಳಿದರು.

ಅದಕ್ಕೆ ಹೆಣ್ಣಿನ ಮನೆಯವರು, ''ಅಯ್ಯೋ, ಬೆಳಗ್ಗೆಯೇ ಒಂದು ಮನೆಯವರು ಬಂದಿದ್ದರು. ಫಲ–ತಾಂಬೂಲ ತಟ್ಟೆಯನ್ನು ಬದಲಾಯಿಸಿಕೊಂಡು ಮಾತುಕತೆಯನ್ನೂ ನಡೆಸಿದೆವು. ಬಳಿಕ ನಾವು ಲಗ್ನಪತ್ರಿಕೆಯನ್ನು ಬರೆಯಿಸಿ ಈಗಷ್ಟೇ ಮುದ್ರಣಕ್ಕೂ ಕೊಟ್ಟೆವಲ್ಲಾ..? ಹಾಗಾದರೆ ನೀವು ಯಾರು?'' ಎಂಬ ಮರುಪ್ರಶ್ನೆ ಹಾಕಿದರು.

ನಿಜಸಂಗತಿಯೇನು ಎಂದು ತಿಳಿದ ನಂತರ, ತಾವು ಬೇಸ್ತು ಬಿದ್ದಿರುವುದು ಎರಡೂ ಮನೆಯವರಿಗೆ ತಿಳಿಯಿತು.

ಆಗಿದ್ದು ಇಷ್ಟೇ: ಮೂವತ್ತೈದು ವಯಸ್ಸಿನ ವರನ ಮನೆಯಲ್ಲಿ ಕನ್ಯೆಯನ್ನು ನೋಡಲು ಹೋಗುವ ಸಂಭ್ರಮ. ಹೇಗೋ ನಮ್ಮ ಮಗನಿಗೆ ಹೆಣ್ಣು ಸಿಗುತ್ತಿದೆ ಎಂಬ ಹಿಗ್ಗು. ಆದರೆ, 'ಯಾರಿಗೂ



ಈಗಲೇ ಹೇಳೋದು ಬೇಡ; ವಿಷಯ ಗೊತ್ತಾದರೆ ನಡೆಯುವ ಮದುವೆಗೂ ಯಾರಾದರೂ ಕಲ್ಲುಹಾಕಿ ನಿಲ್ಲಿಸಿಬಿಡಬಹುದು' ಎಂಬ ಭಯ ಮನೆಯ ಎಲ್ಲರಲ್ಲೂ. ಆದರೆ, ಹೆಣ್ಣಿಗಾಗಿ ಕಾದುನಿಂತಿದ್ದ ವರನು, ಮನೆಯಿಂದ ಹೊರಬಂದು ಮರೆಯಲ್ಲಿ ನಿಂತು, ತನ್ನ ಆಪ್ತಮಿತ್ರನಿಗೆ ಮೊಬೈಲ್ ಕರೆ ಮಾಡಿ, ತಾನು ಹೆಣ್ಣು ನೋಡಲು ಹೋಗುತ್ತಿರುವ ವಿಷಯವನ್ನೂ, ಸಮಯ, ಸ್ಥಳ, ಅದು ಯಾರ ಮನೆ ಇತ್ಯಾದಿ ಪೂರ್ಣವಿವರವನ್ನೂ ಹೇಳಿಬಿಟ್ಟ! ಇವನಂತೆಯೇ ತನ್ನ ಮಗನಿಗೆ ಕನ್ಯೆ ಸಿಗದೆ ಬಸವಳಿದಿದ್ದ ಎದುರು ಮನೆಯಾಕೆ, ಅವನು ಹಾಗೆ ಮೊಬೈಲ್‌ನಲ್ಲಿ ಮಾತಾಡಿದ್ದೆಲ್ಲವನ್ನೂ ಕದ್ದು ಕೇಳಿಸಿಕೊಂಡಳು. ಹೆಣ್ಣು ಸಿಗದೆ ಅಕ್ಷರಶಃ ಬರಗೆಟ್ಟಿದ್ದ ಆ ಮನೆಯವರು, ಸ್ಥಳ ಮತ್ತು ಮನೆಯ ಸಮೇತ ವಿವರಗಳು ದಕ್ಕುತ್ತಿದ್ದಂತೆ ತಮ್ಮ ಖತರ್‌ನಾಕ್ ಬುದ್ಧಿಯನ್ನು ಉಪಯೋಗಿಸಿದರು. ಕನ್ಯೆಯನ್ನು ಗೊತ್ತುಮಾಡಿಕೊಂಡಿದ್ದ ಮನೆಯವರಿಗಿಂತ ಮೊದಲೇ, ಅವರು ನಿಗದಿಪಡಿಸಿದ್ದ ದಿನದಂದೇ, ಅವರಿಗಿಂತಲೂ ಮುಂಚೆ ಬೆಳ್ಳಂಬೆಳಗ್ಗೆಯೇ ಕನ್ಯೆಯ ಮನೆಗೆ 'ಬರಗೆಟ್ಟಿದ್ದ ವರ'ನೊಂದಿಗೆ ತೆರಳಿಬಿಟ್ಟರು! ಫೋನ್ ಮಾಡಿ ದಿನವನ್ನು ನಿಗದಿಪಡಿಸಿದ್ದು ತಾವೇ ಎಂಬ ಶೈಲಿಯಲ್ಲಿ ಮಾತನಾಡಿ, ಕನ್ಯೆಯ ಅಪ್ಪ–ಅಮ್ಮನ ಮನವೊಲಿಸಿ, ತಾಂಬೂಲ ಬದಲಾಯಿಸಿಕೊಂಡು, ಮದುವೆಯ ದಿನಾಂಕವನ್ನೂ ನಿಶ್ಚಯ ಮಾಡಿಕೊಂಡು, ಮುಂದಿನ ಕೆಲಸ–ಕಾರ್ಯಗಳು ಸುಸೂತ್ರವಾಗಿ ನಡೆಯುವಂತೆ 'ಬಂದೋಬಸ್ತ್' ಮಾಡಿಕೊಂಡು ಊರಿಗೆ ಮರಳಿಬಿಟ್ಟದ್ದರು! ಇದು ನಡೆದಿದ್ದ ಒಳಸಂಚಿನ ಪರಿ...!

ಪರಿಣಾಮವಾಗಿ, ವಯಸ್ಸು ಮೂವತ್ತೈದು ಆಗಿದ್ದ ಹುಡುಗ ಇನ್ನೂ ಅವಿವಾಹಿತನಾಗಿಯೇ ಉಳಿಯಬೇಕಾಯಿತು...

'ಮದುವೆಗೆ ಹೆಣ್ಣು ಸಿಗುತ್ತಿಲ್ಲ, ಹಾಗಾಗಿ ನಮಗೆ ಮಠವನ್ನು ಕಟ್ಟಿಕೊಡಿ' ಅಂತ ಅದೆಲ್ಲೋ ಒಂದು ಕಡೆ ಯುವಕರು ಸರಕಾರಕ್ಕೆ ಮನವಿ ಸಲ್ಲಿಸಿದ್ದನ್ನು ಕೇಳಿದ್ದೇವೆ. ಹೆಣ್ಣನ್ನು ದಕ್ಕಿಸಿಕೊಳ್ಳುವುದಕ್ಕೆ ಯುದ್ಧಗಳೇ ನಡೆದಿರುವುದನ್ನು ಇತಿಹಾಸದ ಕಥೆಗಳಲ್ಲಿ ಓದಿದ್ದೇವೆ. ಮೇಲೆ ಉಲ್ಲೇಖಿಸಿರುವಂಥ ನಿದರ್ಶನಗಳನ್ನು ಓದಿದಾಗ/ಕಂಡಾಗ, ಬಹುಶಃ ಇತಿಹಾಸವು ಮರುಕಳಿಸುತ್ತಿರಬಹುದು ಎನಿಸುತ್ತದೆ...!

ಈ ಘಟನೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಸಹೃದಯಿಗಳಿಗೆ ಒಂದು ಮಾತನ್ನು ಹೇಳುವುದಿದೆ: 'ಸಂಸಾರದ ಗುಟ್ಟು, ವ್ಯಾಧಿ ರಟ್ಟು' ಅಂತ ಹೇಳೋದು ಇದಕ್ಕೇನೇ! ಯಾರೆಷ್ಟೇ ಆಪ್ತರಾಗಿರಲಿ, ವಿಶ್ವಾಸಿಗಳು ಎನಿಸಿಕೊಂಡಿರಲಿ, ಕೆಲವೊಂದು ಕೌಟುಂಬಿಕ ವಿಷಯಗಳು ಹೊರಗೆ ಗೊತ್ತಾಗದಂತೆ ನೋಡಿಕೊಳ್ಳಬೇಕಾಗುತ್ತದೆ, ಗುಟ್ಟು ಮಾಡಬೇಕಾಗುತ್ತದೆ. ಇದರಲ್ಲಿ ತಪ್ಪೇನಿಲ್ಲ. 'ಇಷ್ಟೊಂದು ಮಹತ್ವದ ವಿಷಯವನ್ನು ನಮಗೆ ಹೇಳಲೇ ಇಲ್ಲವಲ್ಲಾ?' ಎಂದು ಇಂಥ ಸಂದರ್ಭದಲ್ಲಿ ಕೆಲವರು ಆಕ್ಷೇಪಿಸಬಹುದು, ಆದರೆ ಅಂಥ ಆಕ್ಷೇಪಣೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು. ನಮ್ಮ ಮನೆಯನ್ನು ಮತ್ತು ಮನೆಯವರನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳುವುದು ನಮ್ಮ ಆದ್ಯ ಕರ್ತವ್ಯವಾಗಬೇಕು. ಇದು ಸ್ವಾರ್ಥವಲ್ಲ, ಕೌಟುಂಬಿಕ ಬದ್ಧತೆ.

ಲೌಕಿಕ ಸಮಸ್ಯೆಗಳಿಗೆ ಅಲೌಕಿಕ ಪರಿಹಾರ

• ವಿದ್ಯಾಶಂಕರ ಶರ್ಮ, ಬೆಂಗಳೂರು

ಅಧ್ಯಾತ್ಮ ಎಂದಾಕ್ಷಣ ಅದು ವೃದ್ಧಾಪ್ಯದ, ವೈರಾಗ್ಯದ, ಜಿಗುಪ್ಸೆಯ ಆವರಣದೊಳಗಿರುವ ವಿಷಯ ಎಂಬಂತೆ ಹೆಚ್ಚಿನ ಜನರು ಯೋಚಿಸುತ್ತಾರೆ. ಎರವಲು ಶಿಕ್ಷಣ ಪದ್ಧತಿಯಿಂದ ನಾವು ನಮ್ಮ ಬೇರುಗಳನ್ನು ಮರೆತು ಬಲು ದೂರ ಸಾಗಿರುವುದರಿಂದ, ನಮ್ಮ ಜೀವನ ಕ್ರಮವೇ ಆಗಿದ್ದ ಅಧ್ಯಾತ್ಮ ಇಂದು ನಮಗೆ ಅಪರಿಚಿತವೆನಿಸಿದೆ. ಸಾಮಾನ್ಯ ತರ್ಕಕ್ಕೆ ವಿರುದ್ಧವಾಗಿ ಅಧ್ಯಾತ್ಮವು ಹೇಳುವುದು ನಮ್ಮ ಬಗೆಗೆ. ಯಾವುದೇ ವಿಷಯವನ್ನು ಒಳಹೊಕ್ಕು ನೋಡದೆ ಅದನ್ನು ಅರಿಯಲು ಸಾಧ್ಯವಿಲ್ಲ. ಭಾರತದ ಆಧ್ಯಾತ್ಮಿಕ ಚಿಂತನೆಗಳು ಹೇಗೆ ಮನುಕುಲಕ್ಕೆ ತಕ್ಕುದಾದ ಸಂದೇಶಗಳನ್ನು ಹೊಂದಿವೆ ಎಂಬುದನ್ನು ನಾವು ಅರಿಯೋಣ.

- ನಮಗಿಂತ ಬಲಶಾಲಿಯಾದ ಅಗೋಚರ ಶಕ್ತಿಗೆ ಶರಣು ಹೋಗುವುದು. ನಮ್ಮ ಪಾಲಿಗೆ ಬಂದಿರುವುದನ್ನು ಪ್ರಸಾದದಂತೆ ಸ್ವೀಕರಿಸುವುದು. ಇದರಿಂದ ಶಾಂತಯುತ ಮನಸ್ಥಿತಿಯ ಪ್ರಾಪ್ತಿ.
- ನಮ್ಮ ಕಾರ್ಯಗಳು ಮಾತ್ರ ನಮ್ಮ ಅಧೀನದಲ್ಲಿ ಇರುವ ವಿಷಯ, ಅದರ ಫಲಾಫಲದ ಕುರಿತು ಚಿಂತೆ ಬೇಡ. ಏನಾಗಬೇಕೆಂದಿರುವುದೋ ಅದೇ ಜರುಗುವುದು. ಕರ್ಮ ಸಿದ್ಧಾಂತದಲ್ಲಿ ನಂಬಿಕೆ.
- ಅತಿಯಾದ ಮೋಹ–ಮಮಕಾರಗಳನ್ನು ತ್ಯಜಿಸುವಿಕೆ. ದೇಹವು ಒಂದು ಮಾಧ್ಯಮ ಮಾತ್ರ, ಆತ್ಮ ವಸ್ತುವಿನ ಚೈತನ್ಯದಿಂದ ದೇಹ ಮತ್ತು ಇಂದ್ರಿಯಗಳ ಚಟುವಟಿಕೆ. ದೇಹವು ನಶ್ವರ, ಆತ್ಮವು ನಿತ್ಯ. ಸರ್ವಾತ್ಮ ಭಾವದ ದೃಷ್ಟಿಕೋನದಿಂದ ರಾಗ ಮತ್ತು ದ್ವೇಷಗಳ ನಿಯಂತ್ರಣ. ಇದು ವ್ಯಕ್ತಿಗತವಾಗಿ ಮಾತ್ರವಲ್ಲ, ಇಡೀ ಪ್ರಪಂಚವು ಶಾಂತಮಯವಾಗಲು ರಹದಾರಿಯಾಗುತ್ತದೆ.
- ಸಂತಸವನ್ನು ವಸ್ತು/ವಿಷಯಗಳಿಂದ ಪಡೆಯಲಾಗದು. ಏಕೆಂದರೆ ಯಾವುದನ್ನು ನಾವು ಸಂತಸದ ಮೂಲ ಅಂದುಕೊಂಡಿದ್ದೇವೆಯೋ ಅವೆಲ್ಲ ಅನಿತ್ಯವಾದವುಗಳು. ಅವು ಇಂದಿದ್ದು ನಾಳೆ ಇಲ್ಲವಾಗುವಂಥವುಗಳು. ಸಂತಸದ ಸ್ವರೂಪವೇ ನಾವಾಗಿದ್ದೇವೆ ಎಂಬುದನ್ನು ಅರಿಯುವುದು.
- ಆತ್ಮ ಸ್ವರೂಪರಾದ ನಾವು ಎಲ್ಲದಕ್ಕೂ 'ಸಾಕ್ಷಿ'ಯಾಗಿರುವವು. ಸುಖ ಬಂದಾಗ ಮೈಮರೆಯದೆ, ದುಃಖ ಬಂದಾಗ ಹತಾಶರಾಗದೆ, ಇವೆರಡಕ್ಕೂ ನಾವು ಬರಿಯ ಸಾಕ್ಷಿ ಮಾತ್ರ, ಇದರಿಂದ ಬದುಕಿನಲ್ಲಿ ನಡೆಯುವ ಎಲ್ಲ ಆಗುಹೋಗುಗಳು ನಮ್ಮ ಕಣ್ಣೆದುರು ಜರುಗುತ್ತಿರುವ ನಾಟಕದಂತೆ ಎಂಬುದನ್ನು ಅರಿಯುವುದು.
- ದಿನದ ಕೆಲವು ಹೊತ್ತು ಧ್ಯಾನ, ಮೌನ, ಪ್ರಾರ್ಥನೆಗಳ ಹವ್ಯಾಸವನ್ನು ಹೊಂದುವುದು. ಹುಚ್ಚೆದ್ದು ಕುಣಿಯುವ ಮನವು ಇವುಗಳಿಂದ ಪ್ರಶಾಂತವಾಗುತ್ತದೆ.
- ನಮ್ಮ ಬದುಕನ್ನು ಬೇರೆಯವರಿಗೆ ಹೋಲಿಸಿಕೊಂಡು ಕೀಳರಿಮೆ ಭಾವದಿಂದ ನರಳುವುದು ಸಲ್ಲ, ನಮ್ಮ ಪ್ರಾರಬ್ಧ ಕರ್ಮಗಳಿಂದ ನಮಗೆ ಒದಗಿಬರುತ್ತವೆ ಸನ್ನಿವೇಶಗಳು. ನಮ್ಮ ಪಾಪ–ಪುಣ್ಯಗಳಿಗೆ ನಾವೇ ವಾರಸುದಾರರು. ಇಂಥ ಆಧ್ಯಾತ್ಮಿಕ



ತಿಳಿವಳಿಕೆಯಿಂದ ಧನಾತ್ಮಕ ಚಿಂತನೆಗಳು ನಮ್ಮಲ್ಲಿ ಬೆಳೆಯುತ್ತವೆ.

- ಜನಜಂಗುಳಿಯ ನಡುವೆ ನಾನು ಒಬ್ಬಂಟಿ ಎನ್ನುವ ಭಾವವು ಧಾವಂತ ಬದುಕಿನ ಉಡುಗೊರೆಯಾಗಿದೆ. ಸರ್ವಾಂತರ್ಯಾಮಿ, ಸರ್ವಶಕ್ತನು ಸದಾ ನನ್ನೊಡನೆ ಇದ್ದಾನೆ, ಅವನು ಎಲ್ಲರನ್ನೂ ಸಲಹುವನು ಎಂಬ ಅಧ್ಯಾತ್ಮ ಅರಿವು ನಮಗೆ ಎಂಥ ನಿರಾಶಾದಾಯಕ ಸಂದರ್ಭದಲ್ಲೂ ಬಲ ನೀಡುತ್ತದೆ.
- ನಿಯಂತ್ರಣವಿಲ್ಲದ ಆಲೋಚನೆಗಳಿಂದ ದುರಾಲೋಚನೆಗಳ ಉದಯವಾಗುತ್ತದೆ. ಇದರಿಂದ ಅಮಾನುಷ ಕೃತ್ಯಗಳು ಜರುಗುವ ಸಂಭವವಿರುತ್ತದೆ. ಜಗದ ಸೂತ್ರಧಾರನು ಎಲ್ಲವನ್ನೂ ಗಮನಿಸುವನು. ಅವನ ನ್ಯಾಯಾಲಯದಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆ ನಿಶ್ಚಿತ. ಅಂಥ ಅಗಾಧ ಶಕ್ತಿಯೆಡೆಗೆ ತೋರಬೇಕಾದ ಗೌರವದ ಭಾವವನ್ನು ಅಧ್ಯಾತ್ಮವು ನಮಗೆ ತಿಳಿಹೇಳುತ್ತದೆ.

ಅಧ್ಯಾತ್ಮವೆಂದರೆ ಎಲ್ಲ ತೊರೆದು ಕಾಡಿಗೆ ಹೋಗುವುದು, ಸನ್ಯಾಸಿಯಾಗುವುದು ಎಂದರ್ಥವಲ್ಲ. ನಮ್ಮ ಎಂದಿನ ಬದುಕಿನಲ್ಲಿ ಇರುತ್ತ, ಆಧ್ಯಾತ್ಮಿಕತೆಯನ್ನು ನಮ್ಮ ಬದುಕಿನ ಮಾದರಿಯನ್ನಾಗಿಸಿಕೊಳ್ಳುವುದು. ಅಂದರೆ ನಮ್ಮ ಕೆಲಸ ಕಾರ್ಯಗಳು ಸಾಗುತ್ತಿರಬೇಕು, ಆದರೆ ಅವುಗಳು ಅಧ್ಯಾತ್ಮವನ್ನು ಆಧಾರವಾಗಿಸಿಕೊಂಡು ಮುಂದುವರಿಯಬೇಕು. ಇದು ಸತತ ಪ್ರಯತ್ನಗಳಿಂದ, ಮನಃಪೂರ್ವಕ ಸಮರ್ಪಣೆಯಿಂದ, ನಂಬಿಕೆ ಮತ್ತು ಶ್ರದ್ಧೆಗಳಿಂದ ಸಾಧ್ಯವಾಗುತ್ತದೆ. ಅಧ್ಯಾತ್ಮದಿಂದ ನಾವು ಪಡೆದ ಜ್ಞಾನವು ನಮ್ಮ ಎಲ್ಲ ಲೌಕಿಕ ಪ್ರಶ್ನೆಗಳಿಗೆ ಅತ್ಯಂತ ಸಮರ್ಥವಾದ ಉತ್ತರವನ್ನು ನೀಡಬಲ್ಲದು. ಲೌಕಿಕ ಸಾಧನೆಯ ಶಿಖರವನ್ನೇರಿರಲಿ, ಸುಖದ ಬಾಳು ನಡೆಸುತ್ತಿರಲಿ, ಆಂತರಿಕ ನೆಮ್ಮದಿ, ಕೊನೆಯಿಲ್ಲದ ಶಾಂತ ಭಾವದಿಂದ ನಾವೆಲ್ಲರೂ ವಂಚಿತರಾಗಿದ್ದೇವೆ. ನಾವು ಪಡೆಯುತ್ತಿದ್ದೇವೆ ಅಂದುಕೊಂಡಿರುವ ಸುಖಕ್ಕಾಗಿ ಏನೆಲ್ಲ ಹೋರಾಟಗಳು! ಅಂತಿಮವಾಗಿ ನಮಗೆ ಬೇಕಿರುವುದು ಹೊಟ್ಟೆಗೆ ಹಿಟ್ಟು, ಕಣ್ತುಂಬ ನಿದ್ದೆ. ಆದರೆ ನಮ್ಮ ಎಲ್ಲ ಸಾಹಸಗಳು ಅಜೀರ್ಣ ಮತ್ತು ಅಶಾಂತ ರಾತ್ರಿಗಳಲ್ಲಿ ಪರ್ಯವಸಾನವಾದರೆ ಏನು ಪ್ರಯೋಜನ? ಅಧ್ಯಾತ್ಮದ ಅರಿವು ನಮ್ಮನ್ನು ಈ ಎಲ್ಲ ಪಾಶಗಳಿಂದ ಮುಕ್ತರನ್ನಾಗಿಸಿ, ಕಾರಣವಿಲ್ಲದೆ ಸಂತಸವಾಗಿರುವ ಆತ್ಮಸ್ವರೂಪವೇ ನಾವು ಎಂಬುದನ್ನು ಮನಗಾಣಿಸುತ್ತದೆ.

ಸುಣ್ಣ ಸುಡುವ ಕಾಯಕ ಮರೆಯಾಗುತ್ತಿರುವುದೇಕೆ?

• ಪುರುಷೋತ್ತಮ್ ವೆಂಕಿ, ಚಿತ್ರದುರ್ಗ

ಮೊದಲೆಲ್ಲ ನಗರ ಪ್ರದೇಶ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ, ಹಬ್ಬ–ಹರಿದಿನಗಳ ಸಂದರ್ಭದಲ್ಲಿ ಮನೆಯ ಗೋಡೆ ಗಳಿಗೆ ಸುಣ್ಣ ಬಳಿಯುವುದು ವಾಡಿಕೆಯಾಗಿತ್ತು. ಆದರೆ ಕಾಲ ಬದಲಾಗುತ್ತಾ ಹೋದಂತೆ, ಹೊಸ ಹೊಸ ತಂತ್ರಜ್ಞಾನಗಳು/ವಿಧಾನಗಳು/ಆಯ್ಕೆ ಗಳು ಲಭ್ಯವಾಗುತ್ತಿದ್ದಂತೆ, ತಲೆತಲಾಂತರದಿಂದ ಬಂದಿದ್ದ ದೇಸಿ ಕಸುಬುಗಳು ನಿಧಾನವಾಗಿ ಮೂಲೆಗುಂಪಾಗತೊಡಗಿದವು. ಅಂತೆಯೇ 'ಸುಣ್ಣ ಹೊಡೆಸುವಿಕೆ' ಕೂಡ ಇಂದು ಕಣ್ಮರೆಯಾಗುತ್ತಿದೆ.

ಇವತ್ತಿನ ದುಬಾರಿ ಮತ್ತು ಫ್ಯಾಷನ್ ಯುಗ ದಲ್ಲಿ ಜನರು ಇನ್ನಷ್ಟು ಚಿತ್ತಾಕರ್ಷಕ ಮತ್ತು ವರ್ಣರಂಜಿತ ಆಯ್ಕೆಗಳನ್ನು ಇಷ್ಟಪಡುತ್ತಿರುವು ದರಿಂದ, ಜೀವನೋಪಾಯಕ್ಕಾಗಿ ಹಿಂದಿ ನಿಂದಲೂ ನೆಚ್ಚಿಕೊಂಡಿದ್ದ 'ದೇಸಿ ಲೇಪ'ದ ಉದ್ಯೋಗಗಳಿಂದ ಬದುಕು ಸಾಗಿಸುವುದು ಅಸಾಧ್ಯವಾಗಿದೆ. ಇದನ್ನು ಅರಿತ ಬಹುತೇಕರು ಪರ್ಯಾಯ ಕೆಲಸಗಳನ್ನು ಹುಡುಕಿಕೊಂಡಿದ್ದಾರೆ. ಇವರ ಪೈಕಿ ಕಲ್ಲು ಸುಟ್ಟು ಸುಣ್ಣ ತಯಾರು ಮಾಡುವ ಸುಣ್ಣಗಾರರು ಕೂಡ ಹೊರತಾಗಿಲ್ಲ.

ಬೇಡಿಕೆಯಿಲ್ಲದ ಕಾರಣದಿಂದಾಗಿ, ಈಗ ಸುಣ್ಣದ ಮಾರಾಟ ಕಾಣಿಸುತ್ತಿಲ್ಲ. ದೇಸಿ ಸುಣ್ಣಗಳನ್ನು ಖರೀದಿಸುವವರೇ ಇಲ್ಲ ಎಂದ ಮೇಲೆ ಅದನ್ನು ತಯಾರು ಮಾಡುವವರು ತಾನೆ ಏನು ಮಾಡಬೇಕು? ದೂರದ ಊರುಗಳಿಂದ ಮಣ್ಣಿನಡಿ ಸಿಗುವ ಕಲ್ಲುಗಳನ್ನು ತಂದು ಭಟ್ಟಿ ಕಟ್ಟಿ ಸುಟ್ಟು ಶ್ರಮಪಟ್ಟರೂ ಅದರಿಂದ ಯಾವುದೇ ಲಾಭವಿಲ್ಲ ಎನ್ನುವುದಾದರೆ ಆ ಕೆಲಸವನ್ನು ಏಕೆ ಮಾಡಬೇಕು? ಹೀಗಾಗಿ ಬಹಳಷ್ಟು ವೃತ್ತಿನಿರತರು ಅದರಿಂದ ವಿಮುಖವಾಗಿ ಬೇರೆ ಕೆಲಸಗಳನ್ನು ಹುಡುಕಿಕೊಂಡಿದ್ದಾರೆ. ಸಂಕಷ್ಟದ ಸುಳಿಯಲ್ಲಿರುವ ರಾಜ್ಯದ ಬಹುತೇಕ ಸುಣ್ಣಗಾರರು ಇತ್ತೀಚಿನ ದಿನಗಳಲ್ಲಿ ವೃತ್ತಿಯನ್ನು ತೊರೆದಿದ್ದಾರೆ. ಕಾರಣ ಈ ಕಸುಬಿನಿಂದ ಬದುಕು ಕಟ್ಟಿಕೊಳ್ಳು ವುದು ಅಸಾಧ್ಯ ಎಂಬುದು ಗೊತ್ತಾಗಿದೆ. ಜತೆಗೆ ಜನರೂ ಕಾರ್ಖಾನೆ ಸುಣ್ಣದತ್ತ ಮುಖ ಮಾಡಿ ರುವುದರಿಂದ ಮುಂದೆ ಇದರಿಂದ ಜೀವನ ಸಾಗಿಸಲು ಸಾಧ್ಯವಿಲ್ಲ ಎಂಬಂತಾಗಿದೆ. ಇದನ್ನು ತಿಳಿದ ಮೇಲೆ ಕಸುಬನ್ನು ಮುಂದುವರಿಸಲು ಯುವಜನರೂ ಮುಂದೆ ಬರುತ್ತಿಲ್ಲ. ಆದ್ದರಿಂದ ಅನಿವಾರ್ಯವಾಗಿ ಸುಣ್ಣ ತಯಾರು ಮಾಡುವ ಕೆಲಸಕ್ಕೆ ವಿದಾಯ ಹೇಳಲಾಗುತ್ತಿದೆ. ಇದರೊಟ್ಟಿಗೆ, ಸುಣ್ಣ ಸುಡುವ ಭಟ್ಟಿಗಳಿಂದ ನಿರಂತರವಾಗಿ ಹೊಮ್ಮುವ ಹೊಗೆಯಿಂದ ಆರೋಗ್ಯಕ್ಕೆ ಹಾನಿಯಾಗುವ ಕಾರಣ ಸ್ಥಳೀಯರು ಹಾಗೂ ಸುಣ್ಣ ಸುಡುವವರ ನಡುವೆ ನಿತ್ಯ ಸಂಘರ್ಷ ಕಾಣಬರುತ್ತಿದೆ. ಈಗಲೂ ಪಟ್ಟಣ ಹಾಗೂ ಗ್ರಾಮೀಣ ಭಾಗ ಗಳಲ್ಲಿ, ಅಲ್ಲಿನ ಭಟ್ಟಿಗಳಲ್ಲಿ ಹೊಗೆಯಾಡುತ್ತಿಲ್ಲ. ಕಾರಣ ಹಿಂದಿನಿಂದಲೂ ವೃತ್ತಿ ಮಾಡಿಕೊಂಡು ಬಂದವರಿಗೆ ಈಗ ವಯಸ್ಸಾಗಿದೆ. ಇನ್ನು ಕೆಲವರು ಮೃತಪಟ್ಟಿದ್ದಾರೆ. ಈಗಿನವರಿಗೆ ಅದನ್ನು ನಿಭಾಯಿಸುವುದು ಕಷ್ಟವಾಗಿದೆ.

ಇಷ್ಟಕ್ಕೂ ಸುಣ್ಣಗಾರರು ಸುಣ್ಣ ತಯಾರಿಸುವ ಕೆಲಸದಿಂದ ಏಕೆ ದೂರವಾದರು ಎಂಬುದನ್ನು ನೋಡುತ್ತಾ ಹೋದರೆ ಅವರ ಕೆಲಸದ ಹಿಂದಿರುವ ಸಂಕಷ್ಟಗಳು ಎದ್ದುಕಾಣಿಸುತ್ತವೆ. ಈ ಕೆಲಸದಿಂದ ಮೂರು ಹೊತ್ತು ಹೊಟ್ಟೆ ತುಂಬಾ ಊಟ ಮಾಡುವುದು ಕಷ್ಟ ಎಂಬುದು ಗೊತ್ತಾಗಿ ಬಿಡುತ್ತದೆ. ಹಿಂದಿನ ಕಾಲದಲ್ಲಿ ಎಲೆ–ಅಡಕೆ ಸೇವನೆಯ ವೇಳೆ ಮತ್ತು ಮನೆಗಳ ಗೋಡೆಗೆ ಬಳಿಯಲು, ಕೃಷಿ ಜಮೀನಿಗೆ ಇದೇ ಸುಣ್ಣವನ್ನು ಬಳಸುತ್ತಿದ್ದರು. ಹೀಗಾಗಿ ಸುಣ್ಣಗಾರರು ತಯಾರಿಸುವ ಸುಣ್ಣಕ್ಕೆ ಆಗ ಬೇಡಿಕೆಯಿತ್ತು. ಈಗ ಫ್ಯಾಕ್ಟರಿಗಳು ಬಂದಿವೆ. ಎಲ್ಲದಕ್ಕೂ ಕಂಪನಿ ಸುಣ್ಣವನ್ನೇ ಬಳಸುತ್ತಾರೆ. ಇನ್ನು ಸುಣ್ಣ ತಯಾರಿಸಲು ಬೇಕಾಗುವ ಕಲ್ಲುಗಳು ಸ್ಥಳೀಯವಾಗಿ ಸಿಗುವುದಿಲ್ಲ. ಹೆಚ್ಚುವರಿ ಹಣ ನೀಡಿ ಅವುಗಳನ್ನು ದೂರದೂರಿನಿಂದ ತರಬೇಕಾಗುತ್ತದೆ. ಅಷ್ಟೇ ಅಲ್ಲದೆ ಅವನ್ನು ಬೇಯಿಸಲು ಸೌದೆ ಬೇಕಾಗುತ್ತದೆ. ಹಿಂದಿನ ದಿನಗಳಲ್ಲಿ ಸುಣ್ಣದ ಕಲ್ಲು ಮತ್ತು ಸೌದೆ ಸ್ಥಳೀಯ ವಾಗಿ ಸಿಗುತ್ತಿತ್ತು. ಹೀಗಾಗಿ

ನಷ್ಟವಾಗುತ್ತಿರಲಿಲ್ಲ. ಆದರೆ ಈಗ ಎಲ್ಲವನ್ನು ಮತ್ತೊಂದೆಡೆಯಿಂದ ತರಬೇಕಾಗುತ್ತಿದ್ದು, ಬಂಡವಾಳ ಸುರಿದು ಸುಣ್ಣ ತಯಾರಿಸುವುದು ಸವಾಲಾಗಿದೆ. ಒಂದು ಟ್ರ್ಯಾಕ್ಟರ್ ಸುಣ್ಣದ ಕಲ್ಲುಗಳನ್ನು ಬೇಯಿಸಿದರೆ 100–110 ಮೂಟೆ ಸುಣ್ಣ ಬರುತ್ತದೆ. ಇದರಲ್ಲಿ ಕಚ್ಚಾ ಸುಣ್ಣ ಕಳೆದು ಶುದ್ಧವಾದ ಹರಳು ಸುಣ್ಣ 70–80 ಮೂಟೆ ಸಿಗುತ್ತದೆಯಂತೆ. ಇನ್ನು ಕನಿಷ್ಠ 30 ಮೂಟೆ ಸುಣ್ಣ ಬೇಯಿಸಲು 10 ಪ್ಲ್ಯಾಸ್ಟಿಕ್ ಚೀಲಗಳಷ್ಟು ಸೌದೆ, ಇದ್ದಿಲು ಬೇಕಾಗುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ಇದೆಲ್ಲವನ್ನು ಹಣ ಕೊಟ್ಟು ಖರೀದಿಸಬೇಕು. ಇಷ್ಟೆಲ್ಲ ಕಷ್ಟಪಟ್ಟು ಸುಣ್ಣ ತಯಾರಿಸಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ. ಏಕೆಂದರೆ ಸುಣ್ಣಕ್ಕೆ ಮೊದಲಿನಂತೆ ಬೇಡಿಕೆಯಿಲ್ಲ ಎಲೆ–ಅಡಕೆ ತಿನ್ನುವವರು ಮಾತ್ರ ತೆಗೆದುಕೊಳ್ಳು ತ್ತಾರೆ. ಆದ್ದರಿಂದ ಚಿಕ್ಕ ಪೊಟ್ಟಣ ಮಾಡಿ ಮಾರಾಟ ಮಾಡಬೇಕು. ಸಂತೆಗಳಿಗೆ ಹೋಗಿ ಮಾರಿದರೂ ಸುವಾಸನೆ ಮತ್ತು ಬಣ್ಣದ ಆಧುನಿಕ ಸುಣ್ಣಕ್ಕೆ ಪೈಪೋಟಿ ನೀಡುವುದು ಕಷ್ಟವಾಗುತ್ತಿದೆ. ಈ ಹಿಂದೆ ರೈತರು ಕೃಷಿ ಕಾರ್ಯದಲ್ಲಿ ಬಳಸಲು ಸುಣ್ಣವನ್ನು ಖರೀದಿಸುತ್ತಿದ್ದರು. ಆದರೆ ಫ್ಯಾಕ್ಟರಿಯ ಸುಣ್ಣ ಕಡಿಮೆ ದರದಲ್ಲಿ ದೊರೆಯುವುದರಿಂದ ಅಂಗಡಿಗಳಿಂದ ಗೊಬ್ಬರ ಖರೀದಿಸುವಾಗಲೇ ಸುಣ್ಣವನ್ನೂ ರೈತರು ಕೊಳ್ಳುವುದರಿಂದ ದೇಸಿ ಸುಣ್ಣಕ್ಕೆ ಬೇಡಿಕೆ ಕಡಿಮೆಯಾಗಿದೆ. ಹೀಗೆ ಹತ್ತಾರು ಸಮಸ್ಯೆಗಳಿಂದ ನಲುಗುತ್ತಿರುವ ಸುಣ್ಣಗಾರರು ತಮ್ಮ ವೃತ್ತಿಗೆ ವಿದಾಯ ಹೇಳುತ್ತಿದ್ದಾರೆ. ಇದರಿಂದಾಗಿ ಮುಂದಿನ ತಲೆಮಾರಿಗೆ ಸುಣ್ಣವನ್ನು ಹೀಗೂ ತಯಾರಿಸುತ್ತಿದ್ದರು ಎಂಬುದು ಕೌತುಕವಾಗಿ ಉಳಿಯಲಿದೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ನಾಶ ಎನ್ನುವುದನ್ನು ಹೀಗೆಯೂ ಹೇಳಬಹುದು (4)
5. ಸೀತಾಪಹರಣ ಮಾಡಿದ ಲಂಕಾಧಿಪತಿ (3)
6. ಹಣ್ಣಿನೊಂದಿಗೆ ಬಂದಿರುವ ಹಲಗೆ (3)
8. ಧಾನ್ಯಗಳನ್ನು ಹಸನು ಮಾಡುವುದಕ್ಕೆ ಬಳಸುವ ಸಾಧನ (3)
9. ನೃತ್ಯ ಮಾಡುವವನು (3)
11. ಪ್ರಾಣಿ, ವಾಹನಗಳ ಮೇಲೆ ಕುಳಿತು ಸಂಚರಿಸುವುದು (3)
12. ಹನ್ನೆರಡು ತಿಂಗಳುಗಳ ಅವಧಿ (2)
13. ನೀರಡಿಕೆ ಅಥವಾ ಬಾಯಾರಿಕೆ (2)
14. ಸೀಸೆ ಮುಂತಾದುವುಗಳ ಮುಚ್ಚಳ (3)
16. ಹಿಂದೆ ಆಗಿಹೋಗಿರುವುದರ ಸ್ಮರಣೆ (3)
18. ಎಲ್ಲೆಡೆ ಹರಡುವಿಕೆ (3)
19. ಮುದ ನೀಡುವ ತಾವರೆ (3)
21. ನೇವರಿಸು ಎಂದರ್ಥ (3)
22. ವಿಷ್ಣು ಮತ್ತು ಶಿವನೊಂದಿಗೆ ಬಂದಿರುವ ಪ್ರದೇಶ (4)

ಮೇಲಿಂದ ಕೆಳಕ್ಕೆ

1. ಹಳೆಯ ಕಾಲದ ಎಂದರ್ಥ (4)
2. ತೂಕದ ಒಂದು ಪ್ರಮಾಣವಿದು (2)
3. ಚುರುಕಾಗಿರುವ ದ್ರವರೂಪದ ಲೋಹ (4)
4. ಬಲರಾಮನ ಆಯುಧ (2)
7. ಆಳವಾದ ಪ್ರಪಾತ (3)
10. ಕಡೆಗೆ ಸಮುದ್ರದಲ್ಲಿ ಸಿಗುವ ಒಂದು ಬಗೆಯ ಚಿಪ್ಪು (3)
11. ಮನುಷ್ಯರಿಗೆ ಇರಬೇಕಾದ ತಾಳ್ಮೆ (3)
14. ಒಡಕು ಅಥವಾ ಸೀಳು (3)
17. ಹೇಳಿದುದನ್ನೇ ಮತ್ತೆ ಹೇಳುವುದು (4)
20. ಬಿಡುಗಡೆ ಅಥವಾ ಮೋಕ್ಷ (2)
21. ಮತ್ತೊಂದು ಹಾರ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ: 2.ಮಣ್ಣುಪಾಲು 5.ರಾವಣ 6.ಫಲಕ 8.ಜರಡಿ 9.ನರ್ತಕ 11.ಸವಾರಿ 12.ವರ್ಷ 13.ದಾಹ 14.ಬಿರಡೆ 16.ನೆನಪು 18.ಪ್ರಸಾರ 19.ಕುಮುದ 21.ಸವರು 22.ಹರಿಹರ

ಮೇಲಿಂದ ಕೆಳಕ್ಕೆ: 1.ಪುರಾತನ 2.ಮಣ 3.ಪಾದರಸ 4.ಹಲ 7.ಕಮರಿ 10.ಕವಡೆ 11.ಸಹನೆ 14.ಬಿರುಕು 15.ಉಸಾಬರಿ 17.ಪುನರುಕ್ತಿ 20.ಮುಕ್ತಿ 21.ಸರ

ತುಕಾರಾಮರು ನಿಜವಾಗಿಸಿದ, ಚಿನ್ನದ ಪಾತ್ರೆಯ ದಾನ

ಈ ಕಥೆಯು ಮಹಾರಾಷ್ಟ್ರದ ಪ್ರಸಿದ್ಧ ಸಂತ–ಕವಿ ತುಕಾರಾಮರ ಆಳವಾದ ಆಧ್ಯಾತ್ಮಿಕ ಶಕ್ತಿ, ಉದಾರತೆ ಮತ್ತು ಗ್ರಾಮಸ್ಥರ ಅಚಲ ಭಕ್ತಿ–ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ.

ಪುಣೆಯ ಸಮೀಪದ ಚಿಂಚ್ವಾಡಿ (ಇಂದಿನ ಚಿಂಚ್ವಾಡ) ಗ್ರಾಮದಲ್ಲಿ ತುಕಾರಾಮರು ತಮ್ಮ ಸಂಕೀರ್ತನೆಗಳು, ಭಕ್ತಿಯ ಅಭಂಗಗಳನ್ನು ಹಾಡಲು ಆಗಾಗ್ಗೆ ಆಹ್ವಾನಿತರಾಗುತ್ತಿದ್ದರು. ಈ ಭಜನೆಗಳು ಬಹುಮಟ್ಟಿಗೆ ಬೆಳಗಿನ ಜಾವದವರೆಗೂ ಮುಂದುವರಿದು, ಗ್ರಾಮಸ್ಥರನ್ನು ಆಧ್ಯಾತ್ಮಿಕವಾಗಿ ಆಕರ್ಷಿಸಿ, ಅವರಿಗೆ ಭಗವಂತನಲ್ಲಿ ಮನಸ್ಸು ನೆಡಲು ಸಹಕಾರಿಯಾಗುತ್ತಿತ್ತು.

ಒಂದು ದಿನ, ರಾಮಾಯಣದ ಪಂಡಿತನಾಗಿದ್ದ ಒಬ್ಬ ಬ್ರಾಹ್ಮಣನು, ತನ್ನ ಮಗಳ ವಿವಾಹಕ್ಕಾಗಿ ಧನಸಂಗ್ರಹ ಮಾಡುವ ಉದ್ದೇಶದಿಂದ ಉಪನ್ಯಾಸ ನೀಡಲು ಈ ಗ್ರಾಮಕ್ಕೆ ಬಂದನು. ಆದರೆ ಗ್ರಾಮಕ್ಕೆ ಬಂದಾಗ ಜನರು ಬೆಳಗ್ಗೆ ಸುಮಾರು 8 ಗಂಟೆಯ ಹೊತ್ತಿಗೆ ಮಾತ್ರವೇ ದಿನಾರಂಭ ಮಾಡುತ್ತಿರುವುದನ್ನು ನೋಡಿ, ಅದನ್ನು ಸೋಮಾರಿತನವೆಂದು ತಪ್ಪಾಗಿ ಭಾವಿಸಿದನು. ವಿಚಾರಿಸಿದಾಗ, ತುಕಾರಾಮರ ಕೀರ್ತನೆಗಳು ತಡರಾತ್ರಿಯವರೆಗೂ ನಡೆಯುವುದರಿಂದ ಜನರು ಅದಾದ ಮೇಲೆ ಮಾತ್ರ ನಿದ್ರೆ ಮಾಡು

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ತ್ತಾರೆ ಎಂಬುದು ತಿಳಿಯಿತು. ಇದರಿಂದ ಗ್ರಾಮಸ್ಥರಿಗೆ ತನ್ನ ಉಪನ್ಯಾಸದಲ್ಲಿ ಆಸಕ್ತಿ ಇರುವುದಿಲ್ಲವೆಂದು ಭಾವಿಸಿ, ಬ್ರಾಹ್ಮಣನು ಹಿಂದಿರುಗಲು ನಿರ್ಧರಿಸಿದನು. ಈ ವಿಷಯ ತುಕಾರಾಮರಿಗೆ ತಿಳಿದಾಗ, ಅವರು ಬ್ರಾಹ್ಮಣರ ಬಳಿಗೆ ಹೋಗಿ ಸಾಷ್ಟಾಂಗ ನಮಸ್ಕಾರ ಮಾಡಿ, ಊರಿನಲ್ಲೇ ಉಳಿದು ರಾಮಾಯಣ ಉಪನ್ಯಾಸ ನೀಡುವಂತೆ ವಿನಂತಿಸಿದರು. ತಾವು ಹಾಗೂ ಗ್ರಾಮಸ್ಥರು ಶ್ರದ್ಧೆಯಿಂದ ಕೇಳುವುದಾಗಿ ಭರವಸೆ ನೀಡಿದರು. ಈ ವಿನಮ್ರತೆ ಬ್ರಾಹ್ಮಣರನ್ನು ಸಂತೋಷಪಡಿಸಿ, ಅವರು ನಲವತ್ತೈದು ದಿನಗಳ ಕಾಲ ವಿವರವಾದ ರಾಮಾಯಣ ಉಪನ್ಯಾಸ ನೀಡಲು ಒಪ್ಪಿದರು.

ಈ ಅವಧಿಯಲ್ಲಿ, ಗ್ರಾಮದಲ್ಲಿದ್ದ ಒಬ್ಬ ಜಿಪುಣ ವ್ಯಾಪಾರಿಯು ದೇಣಿಗೆಯನ್ನು ಕೇಳಬಹುದು ಎಂಬ ಭಯದಿಂದ ಉಪನ್ಯಾಸಕ್ಕೆ ತಾನು ಹಾಗೂ ತನ್ನ ಕುಟುಂಬ ಬರುವುದಿಲ್ಲ ಎಂದು ಪಟ್ಟು ಹಿಡಿದು ಕುಳಿತನು. ಇನ್ನು ಗ್ರಾಮಸ್ಥರು ಹೇಗಾದರೂ ದೇಣಿಗೆ ವಸೂಲು ಮಾಡುತ್ತಾರೆ ಎಂದು ಹೆದರಿ 45 ದಿನಗಳ ಉಪನ್ಯಾಸ ಮುಗಿಯುವ ಮೊದಲೇ ಗ್ರಾಮವನ್ನು ತೊರೆದನು.

ನಂತರ ದೇಣಿಗೆ ಸಂಗ್ರಹಿಸಲು ಆಯೋಜಕರು ಬಂದಾಗ, ಅವನ ಹೆಂಡತಿಗೆ ಹಣ ನೀಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಆಕೆ ಕಾಲು ತೊಳೆಯಲು ಬಳಸುತ್ತಿದ್ದ ಹಳೆಯ ತಾಮ್ರದ ಪಾತ್ರೆಯನ್ನು ದಾನವಾಗಿ ಕೊಟ್ಟಳು. ಸಮಾರೋಪ ಸಮಾರಂಭದಲ್ಲಿ ದೇಣಿಗೆಗಳನ್ನು ಬ್ರಾಹ್ಮಣರಿಗೆ ಅರ್ಪಿಸುವಾಗ ಆಯೋಜಕರು ವ್ಯಂಗ್ಯವಾಗಿ 'ಜಿಪುಣ ವ್ಯಾಪಾರಿಯು ಬಂಗಾರದ ಪಾತ್ರೆಯನ್ನು ದಾನ ಮಾಡಿದ್ದಾನೆ' ಎಂದು ಘೋಷಿಸಿ, ಆ ಹಳೆಯ ಪಾತ್ರೆಯನ್ನು ತು



ಕಾರಾಮರಿಗೆ ನೀಡಿದರು. ಜಿಪುಣನ ಹೆಂಡತಿ ದೂರದಿಂದ ಇದನ್ನು ನೋಡಿ, ತಾನು ಬಂಗಾರದ ಪಾತ್ರೆ ನೀಡಲಾಗಲಿಲ್ಲ ಎಂಬ ಪಶ್ಚಾತ್ತಾಪದಿಂದ ಮನಸಾರೆ ದುಃಖಪಟ್ಟಳು. ಅವಳ ಹೃದಯದ ಶುದ್ಧ ಭಾವನೆಯನ್ನು ಅರಿತ ತುಕಾರಾಮರು, ಅದ್ಭುತವಾಗಿ ಆ ಪಾತ್ರೆಯನ್ನು ಬಂಗಾರವಾಗಿಸಿದರೆಂದು ಹೇಳಲಾಗುತ್ತದೆ. ಈ ಅದ್ಭುತದಿಂದ ಆ ಜಿಪುಣನ ಹೆಂಡತಿ ಆನಂದಬಾಷ್ಪ ಸುರಿಸಿದಳು. ಬ್ರಾಹ್ಮಣನು ಗ್ರಾಮಸ್ಥರ ಉದಾರತೆಗೆ ಕೃತಜ್ಞನಾಗಿ, ದೇಣಿಗೆಗಳನ್ನು ಸ್ವೀಕರಿಸಿ ತನ್ನ ಮಗಳ ವಿವಾಹವನ್ನು ನೆರವೇರಿಸಲು ಮನೆಗೆ ಹಿಂದಿರುಗಿದನು. ತುಕಾರಾಮರು ಮತ್ತೊಮ್ಮೆ ತಮ್ಮ ಆಧ್ಯಾತ್ಮಿಕ ಶಕ್ತಿ ಮತ್ತು ಕರುಣೆಯನ್ನು ತೋರಿಸಿ ನಂತರ ಅಲ್ಲಿಂದ ಮರಳಿದರು. ಕೆಲವೊಮ್ಮೆ ನಮಗೆ ಮತ್ತೊಬ್ಬರ ಕಷ್ಟಗಳನ್ನು ನೋಡಿದಾಗ ಅವರಿಗೆ ಏನಾದರೂ ಸಹಾಯ ಮಾಡಬೇಕು ಎನ್ನುವ ಮನಸ್ಸಾಗುತ್ತದೆ. ಆದರೆ ಅಷ್ಟು ಅನುಕೂಲ ಇರುವುದಿಲ್ಲ. ಅಂಥ ಸಮಯದಲ್ಲಿ ಏನೂ ಮಾಡದೆ ಇರುವುದಕ್ಕಿಂತ, ಒಳ್ಳೆಯ ಮನಸ್ಸಿನಿಂದ ನಮ್ಮ ಕೈಲಿ ಏನಾಗುತ್ತದೆ ಅದನ್ನು ಅವರಿಗೆ ಮಾಡಿದಾಗ ಭಗವಂತನ ಅನುಗ್ರಹದಿಂದ ಅದೇ ಅವರಿಗೆ ದೊಡ್ಡದಾಗಿ ಬೆಳೆಯುತ್ತದೆ. ನಾವು ಮಾಡುವ ಸಹಾಯ ದೊಡ್ಡದು ಚಿಕ್ಕದು ಎನ್ನುವುದಕ್ಕಿಂತ, ಮಾಡುವ ಮನಸ್ಸು ಬಹಳ ಮುಖ್ಯವಾಗುತ್ತದೆ. ಒಳ್ಳೆಯ ಮನಸ್ಸಿನಿಂದ ಮಾಡಿದ ಸಹಾಯಗಳು ನೂರುಪಟ್ಟು ಒಳಿತನ್ನು ಮಾಡುವುದರಲ್ಲಿ ಸಂದೇಹವೇ ಇಲ್ಲ.

ಆದ್ದರಿಂದಲೇ ಕೈಲಾದ ಸಹಾಯ ಮಾಡೋಣ, ಅದು ಹೆಚ್ಚು ಕಡಿಮೆ ಎನ್ನುವ ಅನುಮಾನ ಬೇಡ. ಮುಖ್ಯವಾಗುವುದು ಸಹಾಯ ಮಾಡುವ ಮನಸ್ಸು ಮಾತ್ರ...

ನೀವೂ ಬರೆಯಬಹುದು | ನಮ್ಮ ವಿಳಾಸ | ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಕಿವೀಸ್ ವಿರುದ್ಧದ ಸರಣಿಗೆ ಅಯ್ಯರ್ ಆಯ್ಕೆ ಸಾಧ್ಯತೆ

ಬೆಂಗಳೂರು: ಆಸ್ಟ್ರೇಲಿಯಾ ವಿರುದ್ಧ ಏಕದಿನ ಸರಣಿಯಲ್ಲಿ ಗಾಯಕ್ಕೆ ಒಳಗಾಗಿದ್ದ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಶ್ರೇಯಸ್ ಅಯ್ಯರ್ ಇದೀಗ ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ. ನ್ಯೂಜಿಲೆಂಡ್ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿ ಆರಂಭಕ್ಕೂ ಮುನ್ನ ಈ ಮೂಲಕ ಭಾರತ ತಂಡವು ಇನ್ನಷ್ಟು ಬಲಿಷ್ಠವಾಗಲಿದೆ. ಬೆಂಗಳೂರಿನಲ್ಲಿರುವ ಬಿಸಿಸಿಐ ಆಫ್ ಎಕ್ಸ್‌ಲೆನ್ಸ್ ಮೈದಾನದಲ್ಲಿ ಅವರು ಬ್ಯಾಟಿಂಗ್ ಅಭ್ಯಾಸವನ್ನು ಆರಂಭಿಸಿದ್ದಾರೆ. ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮರಳುವ ಸಲುವಾಗಿ ಶ್ರೇಯಸ್ ಅಯ್ಯರ್ ಅವರು ನೆಟ್ಸ್‌ನಲ್ಲಿ ಸುಮಾರು ಒಂದು ಗಂಟೆ ಯಾವುದೇ ಅಡೆತಡೆ ಇಲ್ಲದೆ ಬ್ಯಾಟಿಂಗ್ ಅಭ್ಯಾಸವನ್ನು ನಡೆಸಿದ್ದಾರೆಂದು ವರದಿಯಾಗಿದೆ. ಶ್ರೇಯಸ್ ಅಯ್ಯರ್ ಅವರು ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾ ಎದುರಿನ ಏಕದಿನ ಸರಣಿಯಲ್ಲಿ ಆಡುತ್ತಿದ್ದ ವೇಳೆ ಫೀಲ್ಡಿಂಗ್ ವೇಳೆ ಗಾಯಕ್ಕೆ ಒಳಗಾಗಿದ್ದರು. ಅದರ ಪರಿಣಾಮವಾಗಿ ಅವರು ದಕ್ಷಿಣ ಆಫ್ರಿಕಾ ವಿರುದ್ಧ ಏಕದಿನ ಸರಣಿ ಹಾಗೂ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯಲ್ಲಿ ಆಡಿರಲಿಲ್ಲ. ಭಾರತ ತಂಡದ ಮುಂದಿನ ಏಕದಿನ ಸರಣಿಯು ಜನವರಿ 11ರಂದು ನ್ಯೂಜಿಲೆಂಡ್ ವಿರುದ್ಧ ಆರಂಭವಾಗಲಿದ್ದು, ಜನವರಿ 2 ಅಥವಾ 3 ರಂದು ಭಾರತ ಏಕದಿನ ತಂಡವನ್ನು ಘೋಷಿಸುವ ಸಾಧ್ಯತೆಯಿದೆ.

ಸೂರ್ಯವಂಶಿಗೆ ತಂಡದಲ್ಲಿ ಸ್ಥಾನ ನೀಡಲಿ: ಶಶಿ ತರೂರ್

ದೆಹಲಿ: ಅರುಣಾಚಲ ಪ್ರದೇಶ ವಿರುದ್ಧದ ವಿಜಯ್ ಹಜಾರೆ ಟ್ರೋಫಿ ಪಂದ್ಯದಲ್ಲಿ 190 ರನ್‌ಗಳನ್ನು ಬಾರಿಸಿದ ಹಾಗೂ ಪ್ರಸ್ತುತ ಭಾರತೀಯ ಕ್ರಿಕೆಟ್‌ನ ಉದಯೋನ್ಮುಖ ಆಟಗಾರ ವೈಭವ್ ಸೂರ್ಯವಂಶಿ ಅವರನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ಗುಣಗಾನ ಮಾಡಿದ್ದಾರೆ. ಸಚಿನ್ ತೆಂಡೂಲ್ಕರ್ ಅವರ ರೀತಿ ವೈಭವ್ ಸೂರ್ಯವಂಶಿ ಕೂಡ ಚಿಕ್ಕ ವಯಸ್ಸಿನಲ್ಲಿಯೇ ಭಾರತ ತಂಡವನ್ನು ಪ್ರತಿನಿಧಿಸಬೇಕೆಂದು ಶಶಿ ತರೂರ್ ಆಗ್ರಹಿಸಿದ್ದಾರೆ. ದೇಶಿ ಕ್ರಿಕೆಟ್ ಅಲ್ಲದೆ, ಐಪಿಎಲ್ ಟೂರ್ನಿಯಲ್ಲಿ ಮಿಂಚಿದ್ದ ವೈಭವ್ ಸೂರ್ಯವಂಶಿ ಅವರನ್ನು ಇಡೀ ವಿಶ್ವದ ಗಮನವನ್ನು ಸೆಳೆದಿದ್ದರು. ಬುಧವಾರ ಅರುಣಾಚಲ ಪ್ರದೇಶ ವಿರುದ್ಧದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ವೈಭವ್ ಸೂರ್ಯವಂಶಿ ಅವರು ತಮ್ಮ ಅಬ್ಬರದ ಆಟ ಪ್ರದರ್ಶಿಸಿದರು. ಅವರ ಸ್ಫೋಟಕ ಬ್ಯಾಟಿಂಗ್ ಮೂಲಕ ಅರುಣಾಚಲ ಪ್ರದೇಶ ಬೌಲರ್‌ಗಳ ಮೇಲೆ ಒತ್ತಡ ಹೇರಿದರಲ್ಲದೆ, ಆಡಿದ 84 ಎಸೆತಗಳಲ್ಲಿ 190 ರನ್‌ಗಳನ್ನು ಬಾರಿಸಿದರು.

ವಿಜಯ್ ಹಜಾರೆ ಟ್ರೋಫಿ: ಬೆಂಗಳೂರಿನಲ್ಲಿ ದೆಹಲಿ-ಗುಜರಾತ್, ಜೈಪುರದಲ್ಲಿ ಮುಂಬೈ-ಉತ್ತರಾಖಂಡ ಪಂದ್ಯ

ಮತ್ತೆ ರೋಕೊ ಭರ್ಜರಿ ಪ್ರದರ್ಶನ ನಿರೀಕ್ಷೆ

ಬೆಂಗಳೂರು: ಟೀಮ್ ಇಂಡಿಯಾದ ಬ್ಯಾಟಿಂಗ್ ದಿಗ್ಗಜ ವಿರಾಟ್ ಕೊಹ್ಲಿ ಮತ್ತು ಮಾಜಿ ನಾಯಕ ರೋಹಿತ್ ಶರ್ಮಾ ಬುಧವಾರ ನಡೆದಿದ್ದ ವಿಜಯ್ ಹಜಾರೆ ಟ್ರೋಫಿಯ ಲೀಗ್ ಪಂದ್ಯದಲ್ಲಿ ಭರ್ಜರಿ ಶತಕ ಬಾರಿಸಿ ಅಭಿಮಾನಿಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ಬೆಂಗಳೂರಿನಲ್ಲಿ ನಡೆದಿದ್ದ ಆಂಧ್ರಪ್ರದೇಶದ ವಿರುದ್ಧದ ಪಂದ್ಯದಲ್ಲಿ ಆಡುವ ಮೂಲಕ ಕೊಹ್ಲಿ 15 ವರ್ಷಗಳ ನಂತರ ದೆಹಲಿ ಪರ ತಮ್ಮ ಮೊದಲ ವಿಜಯ್ ಹಜಾರೆ ಟ್ರೋಫಿ ಪಂದ್ಯವನ್ನು ಆಡಿದ್ದರು.

ಇನ್ನಿಂಗ್ಸ್‌ನುದ್ದಕ್ಕೂ ಸೊಗಸಾಗಿ ಬ್ಯಾಟ್ ಮಾಡಿದ ವಿರಾಟ್ ಕೊಹ್ಲಿ ಆಂಧ್ರ ಬೌಲರ್‌ಗಳನ್ನು ಒತ್ತಡಕ್ಕೆ ತಳ್ಳಿದ್ದರು. ಆಡಿದ 101 ಎಸೆತಗಳಲ್ಲಿ ಮೂರು ಸಿಕ್ಸರ್ ಹಾಗೂ 14 ಬೌಂಡರಿಗಳೊಂದಿಗೆ 131 ರನ್‌ಗಳನ್ನು ಬಾರಿಸಿದ್ದರು. ಅವರ ಶತಕದ ಮೂಲಕ ದೆಹಲಿ ತಂಡ 4 ವಿಕೆಟ್ ಗೆಲುವನ್ನು ಪಡೆಯಿತಲ್ಲದೆ, ಆ ಮೂಲಕ ಕೊಹ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿಗೂ ಭಾಜನರಾಗಿದ್ದರು.

ವಿಶ್ವದ ನಂ. 1 ಏಕದಿನ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ತಮ್ಮ ದೇಶೀಯ ತಂಡವಾದ ಮುಂಬೈ ಪರ ಬುಧವಾರ ವಿಜಯ್ ಹಜಾರೆ ಟ್ರೋಫಿ ಪಂದ್ಯವನ್ನಾಡಿದ್ದರು. 38 ವರ್ಷದ ರೋಹಿತ್ ಕೇವಲ 94 ಎಸೆತಗಳಲ್ಲಿ 155 ರನ್‌ಗಳನ್ನು ಗಳಿಸಿದ್ದರು, ಅದರಲ್ಲಿ 18 ಬೌಂಡರಿಗಳು ಮತ್ತು 9 ಸಿಕ್ಸರ್‌ಗಳಿದ್ದವು.

ಬುಧವಾರ ನಡೆದ ಈ ಸಲದ ಮೊದಲ ವಿಜಯ್ ಹಜಾರೆ ಟ್ರೋಫಿಯಲ್ಲಿ ಬುಧವಾರ ಸುದ್ದಿ ಮಾಡಿದ ನಂತರ, ರೋಹಿತ್ ಮತ್ತು ಕೊಹ್ಲಿ ಕ್ರಮವಾಗಿ ಮುಂಬೈ ಮತ್ತು ದೆಹಲಿ ಪರ ಕನಿಷ್ಠ ಇನ್ನೂ ಒಂದು ಪಂದ್ಯವನ್ನಾಡ ಬೇಕಿದೆ. ಎಲ್ಲಾ ಅಂತಾರಾಷ್ಟ್ರೀಯ

ಆಟಗಾರರು ಕನಿಷ್ಠ ಎರಡು ಪಂದ್ಯಗಳನ್ನು ಆಡಬೇಕೆಂದು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಎಲ್ಲಾ ಆಟಗಾರರಿಗೂ ಈ ಸಲ ತಾಕೀತು ಮಾಡಿದೆ. ಹಾಗಾಗಿ ಇಬ್ಬರೂ ಮತ್ತೆ ಇನ್ನೂ ಒಂದೊಂದು ಪಂದ್ಯ ಆಡಬೇಕಿರುವುದರಿಂದ ಶುಕ್ರವಾರ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚಿದೆ.

ಶುಕ್ರವಾರ ಜೈಪುರದ ಸವಾಯಿ ಮಾನ್ಸಿಂಗ್ ಕ್ರೀಡಾಂಗಣದಲ್ಲಿ ಉತ್ತರಾಖಂಡ ವಿರುದ್ಧ ನಡೆಯಲಿರುವ ಎರಡನೇ ಎಲೈಟ್ ಗ್ರೂಪ್-ಸಿ ಪಂದ್ಯದಲ್ಲಿ ಮುಂಬೈ ಪರ ರೋಹಿತ್ ಶರ್ಮಾ ಆಡಲಿದ್ದಾರೆ ಎಂದು ವರದಿಯಾಗಿದೆ.

ಮತ್ತೊಂದೆಡೆ ವಿರಾಟ್ ಕೊಹ್ಲಿ ಬೆಂಗಳೂರಿನ ಬಿಸಿಸಿಐನ ಸೆಂಟರ್ ಆಫ್ ಎಕ್ಸಲೆನ್ಸ್‌ನಲ್ಲಿ ಶುಕ್ರವಾರ ತಮ್ಮ ದೆಹಲಿ ತಂಡದ ಪರ ಗುಜರಾತ್ ವಿರುದ್ಧ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚಿದೆ.

ಗುಜರಾತ್ ತಂಡವು ಬುಧವಾರ ಆಲೂರಿನ ಕೆಎಸ್‌ಸಿಎ ಕ್ರಿಕೆಟ್ ಮೈದಾನದಲ್ಲಿ ನಡೆದ ತನ್ನ ಮೊದಲ ಪಂದ್ಯದಲ್ಲಿ ಸರ್ವಿಸಸ್ ತಂಡವನ್ನು 8 ವಿಕೆಟ್‌ಗಳಿಂದ ಸೋಲಿಸಿತ್ತು.

ಈಗಾಗಲೇ ಬುಧವಾರ ತಾವಾಡಿದ ವಿಜಯ್ ಹಜಾರೆ ಟ್ರೋಫಿಯ ಮೊದಲ ಪಂದ್ಯದಲ್ಲೇ ಶತಕ ಬಾರಿಸಿರುವುದರಿಂದ ರೋಹಿತ್ ಮತ್ತು ಕೊಹ್ಲಿಯಲ್ಲಿ ಅಮಿತ ಆತ್ಮವಿಶ್ವಾಸ ಮೂಡಿರುವುದಂತೂ ಸುಳ್ಳಲ್ಲ

ಹಾಗಾಗಿ ಬಿಸಿಸಿಐ ಷರತ್ತು ಪೂರೈಸಲು ಇನ್ನೊಂದು ಪಂದ್ಯವನ್ನು ಆಡಲೇ ಬೇಕಿರುವುದರಿಂದ ಶುಕ್ರವಾರವೇ ಈ ಇಬ್ಬರೂ ಹಿರಿಯ ಆಟಗಾರರು ಮೈದಾನಕ್ಕಿಳಿದು ಮತ್ತೊಮ್ಮೆ ತಮ್ಮ ಬ್ಯಾಟಿಂಗ್ ಅನ್ನು ಅಗ್ನಿಪರೀಕ್ಷೆಗೊಡ್ಡುವುದು ಬಹುತೇಕ ಖಚಿತವಾಗಿದೆ.

ರಾಜ್ಯ ತಂಡಕ್ಕೆ 2ನೇ ಪಂದ್ಯವನ್ನೂ ಗೆಲ್ಲುವ ಆತ್ಮವಿಶ್ವಾಸ

ಇಂದು ಕರ್ನಾಟಕ-ಕೇರಳ ಪಂದ್ಯ

ಅಹಮದಾಬಾದ್: ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಶುಕ್ರವಾರ ಇಲ್ಲಿನ ಮೋದಿ ಸ್ಟೇಡಿಯಂನಲ್ಲಿ ನಡೆಯುವ ಪಂದ್ಯದಲ್ಲಿ ಕರ್ನಾಟಕವು ಕೇರಳ ತಂಡವನ್ನು ಎದುರಿಸಲಿದೆ. ಈಗಾಗಲೇ ಎರಡು ತಂಡಗಳೂ ಒಂದೊಂದು ಪಂದ್ಯವನ್ನು ಗೆದ್ದಿರುವುದರಿಂದ ಈ ಹಣಾಹಣಿ ರೋಚಕತೆಯಿಂದ ಕೂಡಿರಲಿದೆ ಎಂದೇ ನಿರೀಕ್ಷಿಸಲಾಗುತ್ತಿದೆ.

ಅಹಮದಾಬಾದ್‌ನಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮಯಾಂಕ್ ಅಗರ್ವಾಲ್ ನಾಯಕತ್ವದ ಕರ್ನಾಟಕ ತಂಡವು ದೇವದತ್ ಪಡಿಕ್ಕಲ್ ಅವರ ಆಕರ್ಷಕ ಶತಕದ ನೆರವಿನಿಂದ ಜಾರ್ಖಂಡ್ ವಿರುದ್ಧ ಗೆಲುವನ್ನು ಸಾಧಿಸಿತ್ತು. ಮೊದಲು ಬ್ಯಾಟಿಂಗ್ ಮಾಡಿದ್ದ ಜಾರ್ಖಂಡ್ 412 ರನ್ ಗಳಿಸಿದ್ದರೂ, ಇನ್ನೂ 2.3 ಓವರ್ ಬಾಕಿ ಇರುವಂತೆಯೇ ಕರ್ನಾಟಕ ತಂಡವು ತನ್ನ ಗುರಿ ತಲುಪಿತ್ತು. ಜಾರ್ಖಂಡ್ ನಾಯಕ ಇಶಾನ್ ಕಿಶನ್, ತಮ್ಮ ತಂಡದ ಪರ ಶತಕ ಬಾರಿಸಿದ್ದರು. ಕರ್ನಾಟಕ ಪರ ಪಡಿಕ್ಕಲ್ 118 ಎಸೆತಗಳಲ್ಲಿ 147 ರನ್ ಗಳಿಸಿ ರಾಜ್ಯ ತಂಡದ ಗೆಲುವಿನಲ್ಲಿ ಪ್ರಧಾನ ಪಾತ್ರ ವಹಿಸಿದರೆ, ಅಭಿನವ್ ಮನೋಹರ್ ಅವರ ಅರ್ಧ ಶತಕವೂ ಕರ್ನಾಟಕಕ್ಕೆ ವರದಾನವಾಯಿತು.

ಬುಧವಾರ ರೋಹನ್ ಕುನ್ನುಮ್ಮಲ್ ನಾಯಕತ್ವದ ಕೇರಳ ತಂಡವು ತ್ರಿಪುರಾ ವಿರುದ್ಧ ಭರ್ಜರಿ ಜಯ ದಾಖಲಿಸಿತ್ತು. ಮೊದಲು ಬ್ಯಾಟಿಂಗ್ ಮಾಡಿದ್ದ ಕೇರಳವು 8 ವಿಕೆಟ್‌ಗೆ 348 ರನ್ ಪೇರಿಸಿತ್ತು, ಆದರೆ ಆ ಬಳಿಕ ತ್ರಿಪುರಾವನ್ನು 35.5 ಓವರ್‌ಗಳಲ್ಲಿ 203 ರನ್‌ಗೆ ಆಲೌಟ್ ಮಾಡಿ 145 ರನ್‌ಗಳ ಭಾರೀ ಅಂತರದ ಜಯ ದಾಖಲಿಸಿತ್ತು.

ಬಿಸಿಸಿಐ ಭಾರತ ತಂಡದ ಎಲ್ಲಾ ಅಂತಾರಾಷ್ಟ್ರೀಯ ಆಟಗಾರರಿಗೆ ಕನಿಷ್ಠ ಎರಡು ಪಂದ್ಯಗಳನ್ನು ಆಡಬೇಕೆಂಬ ಸೂಚನೆಯನ್ವಯ ಸಂಜು ಸ್ಯಾಮ್ಸನ್ ಶುಕ್ರವಾರ ಕೇರಳ ತಂಡವನ್ನು ಸೇರಿಕೊಳ್ಳಲಿದ್ದು, ಕರ್ನಾಟಕ ವಿರುದ್ಧದ ಪಂದ್ಯದಲ್ಲಿ ತಂಡವನ್ನು ಮುನ್ನಡೆಸಲಿದ್ದಾರೆ. ಹಾಗಾಗಿ ಕೇರಳ ತಂಡಕ್ಕೆ ಆನೆಬಲ ಬಂದಂತಾಗಿದೆ.

ಹೀಗಾಗಿ ಮಯಾಂಕ್ ಅಗರ್ವಾಲ್ ನಾಯಕತ್ವದ ಕರ್ನಾಟಕ, ಸಂಜು ಸ್ಯಾಮ್ಸನ್ ಮುನ್ನಡೆಸುವ ಕೇರಳ ತಂಡಗಳ ನಡುವಿನ ಶುಕ್ರವಾರದ ಪಂದ್ಯ ಪೈಪೋಟಿಯಿಂದಿರುವ ಸಾಧ್ಯತೆ ಹೆಚ್ಚಿದೆ.

ಆ್ಯಷಸ್ 4ನೇ ಟೆಸ್ಟ್: ತಂಡ ಪ್ರಕಟಿಸಿದ ಆಸ್ಟ್ರೇಲಿಯಾ

ಇಂದಿನಿಂದ ಬಾಕ್ಸಿಂಗ್ ಡೇ ಟೆಸ್ಟ್

ಮೆಲ್ಬರ್ನ್: ಈಗಾಗಲೇ ಆ್ಯಷಸ್ ಟೆಸ್ಟ್ ಸರಣಿಯನ್ನು ವಶಪಡಿಸಿಕೊಂಡಿರುವ ಆಸ್ಟ್ರೇಲಿಯಾ ತಂಡ ಶುಕ್ರವಾರ ಮೆಲ್ಬೋರ್ನ್ ಕ್ರಿಕೆಟ್ ಮೈದಾನದಲ್ಲಿ ನಡೆಯಲಿರುವ ನಾಲ್ಕನೇ ಹಾಗೂ ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯಕ್ಕೆ ತನ್ನ ತಂಡವನ್ನು ಪ್ರಕಟಿಸಿದೆ. ಸ್ಟೀವನ್ ಸ್ಮಿತ್ ನಾಯಕನಾಗಿದ್ದು ವಿಕೆಟ್ ಕೀಪರ್-ಬ್ಯಾಟರ್ ಜೋಶ್ ಇಂಗ್ಲಿಸ್ ಅವರನ್ನು ಆಸೀಸ್ ಕೈಬಿಟ್ಟಿದೆ. ಮಿಚೆಲ್ ಸ್ಟಾರ್ಕ್, ಸ್ಕಾಟ್ ಬೋಲ್ಯಾಂಡ್, ಬ್ರೆಂಡನ್ ಡಾಗೆಟ್, ಮೈಕೆಲ್ ನೇಸರ್ ಮತ್ತು ಜೇ ರಿಚರ್ಡ್ಸನ್ ಆಸ್ಟ್ರೇಲಿಯಾ ಪರ ಆಡುವ ಹನ್ನೊಂದು ಆಟಗಾರರ ಬಳಗದಲ್ಲಿದ್ದಾರೆ. ಡಿಸೆಂಬರ್ 4ರಿಂದ 7ರ ವರೆಗೆ ಗಬ್ಬಾದಲ್ಲಿ ನಡೆದ ಎರಡನೇ ಆಷ್ಯಸ್ ಟೆಸ್ಟ್ ಪಂದ್ಯದಲ್ಲಿ ಮೈಕಲ್ ನೇಸರ್ ಐದು ವಿಕೆಟ್ ಪಡೆದಿದ್ದರು. ಮೂರನೇ ಟೆಸ್ಟ್ ಪಂದ್ಯದಲ್ಲಿ ಪ್ಯಾಟ್ ಕಮ್ಮಿನ್ಸ್ ಬದಲಿಗೆ ಸ್ಥಾನ ಪಡೆದ ಕಾರಣ, ನಾಲ್ಕನೇ ಪಂದ್ಯಕ್ಕೂ ಮರಳುವ ಸಾಧ್ಯತೆಯಿದೆ. ನಾಲ್ಕನೇ ವೇಗಿ ಸ್ಥಾನಕ್ಕೆ ಡಾಗೆಟ್ ಮತ್ತು ರಿಚರ್ಡ್ಸನ್ ನಡುವೆ ಪೈಪೋಟಿ ನಡೆಯಲಿದೆ.

ಗಾಯದ ಸಮಸ್ಯೆಯಿಂದಾಗಿ ಸ್ಮಿತ್, ಅಡಿಲೇಡ್‌ನಲ್ಲಿ ನಡೆದ ಮೂರನೇ ಟೆಸ್ಟ್ ಪಂದ್ಯವನ್ನು ತಪ್ಪಿಸಿಕೊಂಡಿದ್ದರು. ಅವರ ಬದಲಿಗೆ, ಉಸ್ಮಾನ್ ಖವಾಜಾ ಅಡಿಲೇಡ್ ಟೆಸ್ಟ್‌ನ ಎರಡೂ ಇನ್ನಿಂಗ್ಸ್‌ಗಳಲ್ಲಿ 4ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ್ದರು, ಮೆಲ್ಬರ್ನ್‌ನಲ್ಲಿ ಎಡಗೈ ಬ್ಯಾಟ್ಸ್‌ಮನ್ 5ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಲಿದ್ದಾರೆ. ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿ 6 ನೇ ಕ್ರಮಾಂಕದಲ್ಲಿ ಮತ್ತು ಆಲ್‌ರೌಂಡರ್ ಕ್ಯಾಮರೂನ್ ಗ್ರೀನ್ 7ನೇ ಕ್ರಮಾಂಕದಲ್ಲಿ ಆಡಲಿದ್ದಾರೆ.

ಬುಧವಾರ ನಡೆದ ವಿಜಯ್ ಹಜಾರೆ ಪಂದ್ಯದಲ್ಲಿ ಡಬಲ್ ಸೆಂಚುರಿ ಬಾರಿಸಿದ ಒಡಿಶಾದ ಆಟಗಾರ

ಸ್ವಸ್ತಿಕ್ ಸಮಲ್ ವಿಶಿಷ್ಟ ದಾಖಲೆ

ದೆಹಲಿ: ಒಡಿಶಾ ತಂಡದ ಬ್ಯಾಟ್ಸ್‌ಮನ್ ಸ್ವಸ್ತಿಕ್ ಸಮಲ್ ಅವರು ಬುಧವಾರದಂದು ನಡೆದ ವಿಜಯ್ ಹಜಾರೆ ಟ್ರೋಫಿ ಟೂರ್ನಿಯ ಪಂದ್ಯದಲ್ಲಿ ಡಬಲ್ ಸೆಂಚುರಿ ಬಾರಿಸಿದ ಒಡಿಶಾದ ಮೊದಲ ಹಾಗೂ ಭಾರತದ ನಾಲ್ಕನೇ ಬ್ಯಾಟ್ಸ್‌ಮನ್ ಎಂಬ ದಾಖಲೆ ಬರೆದಿದ್ದಾರೆ. ಸೌರಾಷ್ಟ್ರ ವಿರುದ್ಧದ ಪಂದ್ಯದಲ್ಲಿ ಅವರು ಈ ಸಾಧನೆಗೆ ಭಾಜನರಾಗಿದ್ದು, ಒಟ್ಟು 169 ಎಸೆತಗಳನ್ನು ಎದುರಿಸಿ, 212 ರನ್ ಗಳಿಸಿದ್ದಾರೆ.

ಪಂದ್ಯದಲ್ಲಿ ಟಾಸ್ ಗೆದ್ದಿದ್ದ ಸೌರಾಷ್ಟ್ರ ತಂಡ ಮೊದಲು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭದಲ್ಲಿ ಒಡಿಶಾ ಬಹುಬೇಗ ಮೂರು ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ವೇಳೆ ಕ್ರೀಸ್‌ಗೆ ಬಂದ ಸ್ವಸ್ತಿಕ್ ಸಮಲ್ ಹಾಗೂ ನಾಯಕ ಬಿಪ್ಲಬ್ ಸಮಂತ್ರೆ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶನವನ್ನು ಪ್ರದರ್ಶಿಸಿದರು.

ಸ್ತಿಕ್ ಸಮಲ್ ಅವರು 2000ರಲ್ಲಿ ಒಡಿಶಾದ ಕೊರಾಪುತ್‌ನಲ್ಲಿ ಜನಿಸಿದ್ದು, ಒಡಿಶಾ ತಂಡವನ್ನು 12 ಪ್ರಥಮ ದರ್ಜೆ ಪಂದ್ಯಗಳು, 10 ಲಿಸ್ಟ್-ಎ ಪಂದ್ಯಗಳು ಹಾಗೂ 13 ಟಿ20 ಪಂದ್ಯಗಳಲ್ಲಿ ಪ್ರತಿನಿಧಿಸಿದ್ದಾರೆ. ಬುಧವಾರದಂದು ಸ್ವಸ್ತಿಕ್ ಸಮಲ್ ಅವರು ದ್ವಿಶತಕವನ್ನು ಸಿಡಿಸಿದ ಹೊರತಾಗಿಯೂ ಒಡಿಶಾ ತಂಡ, ಸೌರಾಷ್ಟ್ರ ತಂಡವನ್ನು ಮಣಿಸಲು ಸಾಧ್ಯವಾಗಿಲ್ಲ

ವಿಜಯ್ ಹಜಾರೆ ಟ್ರೋಫಿ ಟೂರ್ನಿಯ ಮೊದಲನೇ ಪಂದ್ಯದ ಅಂತ್ಯಕ್ಕೆ ಈ ಟೂರ್ನಿಯಲ್ಲಿ ಅತೀ ಹೆಚ್ಚು ರನ್ ಗಳಿಸಿದ ಬ್ಯಾಟ್ಸ್‌ಮನ್‌ಗಳ ಸಾಲಿನಲ್ಲಿ ಸ್ವಸ್ತಿಕ್ ಸಮಲ್ 212 ರನ್‌ಗಳ ಮೂಲಕ ಅಗ್ರಸ್ಥಾನವನ್ನು ಅಲಂಕರಿಸಿದ್ದಾರೆ. 155 ರನ್‌ಗಳನ್ನು ಗಳಿಸಿರುವ ಟೀಮ್ ಇಂಡಿಯಾ ಮಾಜಿ ನಾಯಕ ರೋಹಿತ್ ಶರ್ಮಾ ಎರಡನೇ ಸ್ಥಾನದಲ್ಲಿದ್ದಾರೆ. ಒಡಿಶಾ ತಂಡವು ಅಂಕಪಟ್ಟಿಯಲ್ಲಿ ಡಿ-ಗುಂಪಿನಲ್ಲಿ ಐದನೇ ಸ್ಥಾನದಲ್ಲಿದೆ.

ಜಾಂಟಿ ರೋಡ್ಸ್ ವಿಶ್ವ ದಾಖಲೆ ಮುರಿದ 24 ವರ್ಷದ ಆಟಗಾರ

ಕೇರಳದ ವಿಘ್ನೇಶ್ ಪುತ್ತೂರು ವಿಶ್ವದಾಖಲೆ

ಅಹಮದಾಬಾದ್: 24 ವರ್ಷದ ಸ್ಪಿನ್ನರ್ ವಿಘ್ನೇಶ್ ಪುತ್ತೂರು ಬುಧವಾರದಂದು ತ್ರಿಪುರ ವಿರುದ್ಧದ ವಿಜಯ್ ಹಜಾರೆ ಟ್ರೋಫಿ ಎಲೈಟ್ ಗ್ರೂಪ್-ಎ ಪಂದ್ಯದಲ್ಲಿ ಕೇರಳ ಪರ ಲಿಸ್ಟ್-ಎ ಪದಾರ್ಪಣೆ ಮಾಡುವ ಜತೆಗೆ ತಮ್ಮ ಹೆಸರನ್ನು ಇತಿಹಾಸ ಪುಸ್ತಕಗಳಲ್ಲಿ ದಾಖಲಿಸಿದರು. ಪಂದ್ಯದಲ್ಲಿ 6 ಕ್ಯಾಚ್‌ಗಳನ್ನು ಹಿಡಿಯುವ ಮೂಲ ಲಿಸ್ಟ್-ಎ ಪಂದ್ಯದಲ್ಲಿ ಅತ್ಯಧಿಕ ಕ್ಯಾಚ್ ಹಿಡಿದ ವಿಶ್ವದ ಮೊದಲ ಕ್ರಿಕೆಟಿಗ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಕೇರಳದ ಮಲ್ಲಪುರಂ ಮೂಲದ ಪುತ್ತೂರು, ಫೀಲ್ಡರ್ ಆಗಿ (ವಿಕೆಟ್ ಕೀಪರ್ ಅಲ್ಲದ) ಆರು ಕ್ಯಾಚ್‌ಗಳನ್ನು ಬುಧವಾರದ ಪಂದ್ಯದಲ್ಲಿ ಹಿಡಿದರು. ಲಿಸ್ಟ್-ಎ ಪಂದ್ಯದಲ್ಲಿ ಅತೀ ಹೆಚ್ಚು ಕ್ಯಾಚ್‌ಗಳನ್ನು ಪಡೆದ ಹಿಂದಿನ ದಾಖಲೆ ದಕ್ಷಿಣ ಆಫ್ರಿಕಾದ ಜಾಂಟಿ ರೋಡ್ಸ್ ಅವರ ಹೆಸರಿನಲ್ಲಿತ್ತು. 1993, ನವೆಂಬರ್‌ನಲ್ಲಿ ಮುಂಬೈನ ಬ್ರಬೋರ್ನ್ ಕ್ರೀಡಾಂಗಣದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ದಕ್ಷಿಣ ಆಫ್ರಿಕಾ ಪರ ಆಡುವಾಗ ರೋಡ್ಸ್ ಐದು ಕ್ಯಾಚ್‌ಗಳನ್ನು ಪೂರ್ಣಗೊಳಿಸಿದ್ದರು.

ಡಿಸೆಂಬರ್ 16ರಂದು ಅಬುಧಾಬಿಯಲ್ಲಿ ನಡೆದ ಐಪಿಎಲ್ 2026ರ ಹರಾಜಿನಲ್ಲಿ 30 ಲಕ್ಷ ರು.ಗೆ ರಾಜಸ್ಥಾನ್ ರಾಯಲ್ಸ್ ತಂಡವನ್ನು ಸೇರಿದ ವಿಘ್ನೇಶ್ ಪುತ್ತೂರು, ಮುಂಬರುವ ಐಪಿಎಲ್‌ನಲ್ಲಿ ತಮ್ಮ ಸ್ಪಿನ್ ಮೋಡಿ ತೋರಿಸಲು ಮತ್ತು ಉತ್ತಮ ಬ್ಯಾಟಿಂಗ್ ಪ್ರದರ್ಶನಕ್ಕೂ ಸಜ್ಜಾಗುತ್ತಿದ್ದಾರೆ. ಕಳೆದ ಆವೃತ್ತಿಯಲ್ಲಿ ಮುಂಬೈ ಇಂಡಿಯನ್ಸ್ ಪರ ತನ್ನ ಮಿಂಚಿನ ಪ್ರದರ್ಶನದ ಮೂಲಕ ವಿಘ್ನೇಶ್, ಭಾರತ ಕ್ರಿಕೆಟ್ ದಿಗ್ಗಜ ಧೋನಿ ಅವರ ಮನಗೆದ್ದಿದ್ದರು.

ಕರ್ಮದ ಫಲ

ಪಾತ್ರ ಏನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು, ಒಟ್ಟಾರೆ ಅರ್ಜುನ್ ಜನ್ಯ ಹೊಸ ಪ್ರಪಂಚವನ್ನು ಸೃಷ್ಟಿಸಿ ಗೆದ್ದಿದ್ದಾರೆ, ನಿರ್ಮಾಪಕ ರಮೇಶ್ ರೆಡ್ಡಿ ಸೈ ಎನಿಸಿಕೊಂಡಿದ್ದಾರೆ, ಈ ಹಿಂದೆಂದೂ ನೋಡಿರದ ಶಿವಣ್ಣ, ಉಪ್ಪಿ ಅವರನ್ನು ಈ ಸಿನಿಮಾದಲ್ಲಿ ಕಣ್ತುಂಬಿಕೊಳ್ಳಬಹುದು. 45 ನೋಡುತ್ತಾ ಹೊಸ ಪ್ರಪಂಚಕ್ಕೆ ಹೋದ ಬಾಸವಾಗುತ್ತದೆ.

ಚಿತ್ರ; 45
ನಿರ್ದೇಶನ : ಅರ್ಜುನ್ ಜನ್ಯ
ನಿರ್ಮಾಣ: ರಮೇಶ್ ರೆಡ್ಡಿ
ತಾರಾಗಣ : ಉಪೇಂದ್ರ, ಶಿವಣ್ಣ, ರಾಜ್ ಶೆಟ್ಟಿ, ಸುಧಾರಾಣಿ ಮುಂತಾದವರು
ರೇಟಿಂಗ್ : ★★★★

ನಾವು ಮಾಡಿದ ಕರ್ಮದ ಫಲ ನಮ್ಮನ್ನು ಕಾಡದೆ ಇರದು ಎಂಬುದನ್ನು 45 ಸಿನಿಮಾದ ಮೂಲಕ ಹೇಳಲಾಗಿದೆ. ವಿನಯ್ ಅರಿಯದೇ ಮಾಡಿದ ತಪ್ಪಿಗೆ ಪರಿತಪ್ಪಿಸುತ್ತಾನೆ. ಆ ಬಳಿಕ ಗರುಡ ಪುರಾಣದ ಪ್ರಕಾರ ಶಿಕ್ಷೆ ಅನುಭವಿಸುತ್ತಾನೆ, ಅದು ಯಾಕೆ ಏನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಶಿವಣ್ಣ ಬಂದ ಮೇಲೆಯೇ ಸಿನಿಮಾ ಹೊಸ ತಿರುವು ಪಡೆದುಕೊಳ್ಳುತ್ತದೆ. ಅಲ್ಲಿವರೆಗೆ ಸಿನಿಮಾ ಅರ್ಥವಾಗುವುದೇ ಇಲ್ಲ. ದ್ವಿತಿಯಾರ್ಧದ ಬಳಿಕ ಸಿನಿಮಾ ಹೊಸ ತಿರುವು ಪಡೆದುಕೊಳ್ಳುತ್ತದೆ, ಈ ಚಿತ್ರದಲ್ಲಿ ಶಿವಣ್ಣ ನಾನಾ ಅವತಾರದಲ್ಲಿ ಕಂಗೊಳಿಸಿದ್ದಾರೆ. ಶಿವನ ಎಲ್ಲಾ ರೂಪದಲ್ಲಿ ಕಂಗೊಳಿಸಿದ್ದಾರೆ, ಹಾಗಾದರೆ ಸಾಮಾನ್ಯ ಮನುಷ್ಯ ಶಿವನ ವಿರುದ್ಧ ನಿಲ್ಲಲು ಸಾಧ್ಯವೇ ಎಂಬುದನ್ನು ಸಿನಿಮಾದಲ್ಲಿ ಹೇಳಲಾಗಿದೆ. ಚಿತ್ರದಲ್ಲಿ ಕಾಮನ್ ಮ್ಯಾನ್ ಆಗಿ ರಾಜ್ ಶೆಟ್ಟಿ ಅಭಿನಯಿಸಿದ್ದಾರೆ, ರಾಯಪ್ಪನಾಗಿ ಉಪ್ಪಿ ಕಾಣಿಸಿಕೊಂಡಿದ್ದಾರೆ. ಅವರ

ಕಳೆದ ಬಾರಿ ಮ್ಯಾಕ್ಸ್ ಅವತಾರದಲ್ಲಿ ಮಿಂಚಿದ್ದ ಸುದೀಪ್, ಈ ಬಾರಿ ಮಾರ್ಕ್ ಅವತಾರದಲ್ಲಿ ಅಬ್ಬರಿಸಿದ್ದಾರೆ. ಹದಿನೆಂಟು ಮಕ್ಕಳು ನಿಗೂಢವಾಗಿ ಕಣ್ಮರೆಯಾಗಿದ್ದಾರೆ. ಅವರನ್ನು ಯಾರು ಕಿಡ್ನಾಪ್ ಮಾಡಿದ್ದಾರೆ ಆ ಮಕ್ಕಳನ್ನು ಎಲ್ಲಿಟ್ಟಿದ್ದಾರೆ ಎಂದು ಎಲ್ಲರೂ ತಲೆಕೆಡಿಸಿಕೊಂಡು ಕುಳಿತಿದೆ. ಆ ಮಕ್ಕಳನ್ನು ಕಿಡ್ನಾಪ್ ಮಾಡಿದ್ದು ಯಾರು ಅವರನ್ನು ಎಲ್ಲಿ ಬಚ್ಚಿಡಲಾಗಿದೆ ಎಂದು ಹುಡುಕುವ ಜವಾಬ್ದಾರಿ ಯಾರೂ ವಹಿಸದಿದ್ದರೂ, ಆ ಜವಾಬ್ದಾರಿಯನ್ನು ಅಮಾನತಿನಲ್ಲಿರುವ ಅಜೇಯ್ ಮಾರ್ಕಂಡೇಯ ವಹಿಸಿಕೊಳ್ಳುತ್ತಾನೆ. ಬರೀ ಕಿಡ್ನಾಪ್ ಪ್ರಕರಣವಷ್ಟೇ ಅಲ್ಲ, ರಾಜ್ಯದಲ್ಲಿ ದೊಡ್ಡ ರಾಜಕೀಯ ಷಡ್ಯಂತ್ರ ನಡೆಯುತ್ತಿದೆ. ಜತೆಗೆ ಸಾವಿರಾರು ಕೋಟಿ ಡ್ರಗ್ಸ್ ಜಪ್ತಿಯಾಗಿರುತ್ತದೆ. ಇಂಥಹ ಜಟಿಲವಾದ ಪ್ರಕರಣವನ್ನು ಮಾರ್ಕ್ ಹೇಗೆ ಬಗೆಹರಿಸುತ್ತಾನೆ ಎಂಬುದನ್ನು ಮಾರ್ಕ್‌ನಲ್ಲಿ ಅದ್ಭುತವಾಗಿ ಕಟ್ಟಿಕೊಡಲಾಗಿದೆ.

ಮಾರ್ಕ್, ಮ್ಯಾಕ್ಸ್ ಚಿತ್ರದ ಪ್ರೀಕ್ವೆಲ್ ಎಂದು ಹೇಳಲಾಗಿತ್ತು. ಆದರೆ ಸಿನಿಮಾ ಮ್ಯಾಕ್ಸ್ ಎಂಬುದು ತಿಳಿಯುತ್ತದೆ. ಕಥೆ ವಿಷಯದಲ್ಲಿ ಸ್ವಾಮ್ಯತೆ ಹುಡುಕುವುದಕ್ಕಾಗುವುದಿಲ್ಲ. ಆ ನಿಟ್ಟಿನಲ್ಲಿ ಎರಡೂ ಸ್ವತಂತ್ರ ಚಿತ್ರಗಳು. ಅಲ್ಲಿ ಒಂದು ರಾತ್ರಿಯಲ್ಲಿ ನಡೆಯುವ ಕಥೆಯಾದರೆ, ಇಲ್ಲಿ ಒಂದು ಹಗಲು ಮತ್ತು ಎರಡು ರಾತ್ರಿಗಳ ಕಥೆ. ಆದರೆ, ಮೇಕಿಂಗ್ ವಿಷಯದಲ್ಲಿ ಎರಡೂ ಚಿತ್ರಗಳಲ್ಲಿ ಸಾಕಷ್ಟು ಹೋಲಿಕೆಗಳಿವೆ. ಬಹುತೇಕ ಕತ್ತಲು, ಹೊಡೆದಾಟ, ಚೇಸಿಂಗ್, ಹಲವು ವಿಲನ್‌ಗಳು ಇವೆಲ್ಲವೂ ಮ್ಯಾಕ್ಸ್ ಚಿತ್ರವನ್ನೇ ನೆನಪಿಸುತ್ತದೆ. ಯೋಗಿ ಬಾಬು, ಶೈನ್ ಟಾಮ್ ಚಾಕೋ, ನವೀನ್ ಚಂದ್ರ, ಗುರು ಸೋಮಸುಂದರಂ ಮುಂತಾದ ಕಲಾವಿದರು ಚಿತ್ರದಲ್ಲಿದ್ದಾರೆ. ತಾಂತ್ರಿಕವಾಗಿಯೂ ಚಿತ್ರ

ಚಿತ್ರ: ಮಾರ್ಕ್
ನಿರ್ದೇಶನ: ವಿಜಯ್ ಕಾರ್ತಿಕೇಯ
ನಿರ್ಮಾಣ: ಸೆಂಧಿ ತ್ಯಾಗರಾಜ, ಅರುಣ್ ತ್ಯಾಗರಾಜ್
ತಾರಾಗಣ: ಸುದೀಪ್, ರೋಶಿನಿ ಪ್ರಕಾಶ್, ಯೋಗಿ ಬಾಬು, ನವೀನ್ ಚಂದ್ರ, ಗುರು ಸೋಮಸುಂದರಂ, ಗೋಪಾಲಕೃಷ್ಣ ದೇಶಪಾಂಡೆ, ಅರ್ಚನಾ ಕೊಟ್ಟಿಗೆ, ರಾಘು ರಾಮನಕೊಪ್ಪ ಮುಂತಾದವರು.
ರೇಟಿಂಗ್ : ★★★

ಮಾರ್ಕ್ ಫುಲ್ ಮಾಸ್

ಶ್ರೀಮಂತವಾಗಿದೆ.

ಶೇಖರ್ ಚಂದ್ರು ಮತ್ತು ಅಜನೀಶ್ ಲೋಕನಾಥ್ ಇಬ್ಬರೂ ತಮ್ಮ ಜವಾಬ್ದಾರಿಯನ್ನು

ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಸಾಹಸ ದೃಶ್ಯಗಳಿಗಂತೂ ಸುದೀಪ್ ಅಭಿಮಾನಿಗಳಿಗೆ ಸಡಗರ ಎನ್ನಿಸುತ್ತದೆ.



ಹೂಡಿದ್ದಾರೆ. ಇನ್ನು ಹಾಡಿನ ಕುರಿತು ಹೇಳುವುದಾದರೆ, ಅಂದರು ವಾಸನೆಯನ್ನು ಹೇಗೆ ಗ್ರಹಿಸುತ್ತಾರೆ, ಸ್ಪರ್ಶವನ್ನು ಯಾವ ರೀತಿ ಅನುಭವಿಸುತ್ತಾರೆ ಎನ್ನುವ ಕುತೂಹಲ ಇತ್ತು. ಇದನ್ನು ತಿಳಿಸುವ ಸಲುವಾಗಿ ಗೀತೆ ಮಾಡಲಾಗಿದೆ ಅಂತ ನಿರ್ದೇಶಕರು ವ್ಯಾಖ್ಯಾನ ನೀಡುತ್ತಾರೆ. ದೈಹಿಕ ನ್ಯೂನತೆ ಏನೇ ಇದ್ದರೂ, ಜಿವನದಲ್ಲಿ ಕನಸನ್ನು ಇಟ್ಟುಕೊಂಡವನು, ಚಿಂತಿಸದೆ ಅದರ ಬೆನ್ನು ಹತ್ತಿ ಹೇಗೆ ಸಾಧಿಸುತ್ತಾರೆ ಎಂಬುದನ್ನು ಹೇಳಲಿದ್ದಾರೆ. ಜತೆಗೆ ಐರ್ಲೆಂಡ್ ದೇಶ ಎಷ್ಟು ಚೆನ್ನಾಗಿದೆ ಎಂದು ತಿಳಿಸಲು ಅಲ್ಲಿನ ಸುಚಿದರ ತಾಣಗಳಲ್ಲಿ ದೃಶ್ಯಗಳನ್ನು ಸೆರೆ ಹಿಡಿದಿದ್ದಾರೆ. ರಂಗಭೂಮಿ ನಟಿ ಎಡೆಲ್ ಆಶ್ಲಿಂಗ್ ನಾಯಕಿ. ಇವರೊಂದಿಗೆ ಅರ್ಜುನ್ ನಟಿಸಿದ್ದಾರೆ. ಸಂಗೀತ ಅಜೇಶ್.ಎಂ.ಸಿ, ಛಾಯಾಗ್ರಹಣ ಟಲೋ ಕೆನಡಿ, ಚಿತ್ರಕಥೆ ಶ್ರೀಪಾದ್ ಜೋಶಿ, ಗಾಯನ ಸಿದ್ದಾರ್ಥ್ ಬೆಲ್ಮಣ್ಣು ಸಂಕಲನ ಅದ್ವಿಕ್-ವಿನೋಧ್, ಕಲರಿಸ್ಟ್ ಅನಿಲ್ ಕುಮಾರ್.ಕೆ ಅವರದಾಗಿದೆ.

ಮನಸ್ಸು ಕದಡುವ ಪ್ರಣಯ ಗೀತೆ

ಲೈಫ್ 360 ಚಿತ್ರದ ನಾಯಕ ಅಲ್ಲದೆ ನಿರ್ದೇಶನ ಮಾಡಿದ್ದ ಅರ್ಜುನ್ ಕಿಶೋರ್ ಚಂದ್ರ, ಮುಂದೆ ಉದ್ಯೋಗ ಅರಸಿ ವಿದೇಶಕ್ಕೆ ಹಾರಿದ್ದರು. ಅಲ್ಲಿದ್ದರೂ ಮನಸ್ಸು ಮಾತ್ರ ಬಣ್ಣದ ಲೋಕದ ಕಡೆ ಸೆಳೆಯುತ್ತಲೇ ಇತ್ತು. ಬಿಡುವಿನ ವೇಳೆಯಲ್ಲಿ ಏನಾದರೂ ಮಾಡುತ್ತಿದ್ದರು. ಅದರ ಪ್ರತಿಫಲವೇ ಪ್ರಣಯ ಪಯಣ ಎಂಬ ಗೀತೆಗೆ ಕಥೆ, ಸಾಹಿತ್ಯ ಬರೆದು ನಿರ್ದೇಶನ ಮಾಡಿದ್ದಾರೆ. ಸಾಯಿ ಗಗನ್ ಪ್ರೊಡಕ್ಷನ್ಸ್ ಅಡಿಯಲ್ಲಿ ಬಂಡವಾಳವನ್ನೂ

ಸುಖೀಭವ ಚಿತ್ರ ಹಾಡು ಬಿಡುಗಡೆಯಾಗಿದ್ದು ಶರಣ್ ದನಿಯಾಗಿದ್ದಾರೆ. ಸಂತೋಷ್ ಕುಮಾರ್-ಭಾರ್ಗವಿ ಸಂತೋಷ್ ನಿರ್ಮಾಪಕರು. ಇವರಿಗೆ ರಾಬರ್ಟ್ ನಿರ್ಮಾಪಕ ಉಮಾಪತಿ ಶ್ರೀನಿವಾಸಗೌಡ ಸ್ನೇಹಿತರು. ಗೆಳೆಯನ ಸ್ಫೂರ್ತಿ ಹಾಗೂ ಹಿತೈಷಿಯಾಗಿದ್ದರಿಂದಲೇ ಧೈರ್ಯ ಮಾಡಿ ಪುತ್ರರ ಹೆಸರುಗಳಾದ ವೇದ್ ಆರ್ಯನ್ ಫಿಲಂಸ್ ಬ್ಯಾನರ್ ಅಡಿಯಲ್ಲಿ ಬಂಡವಾಳ ಹೂಡಿದ್ದಾರೆ. ಇವರ ತಾತಾ 80ರ ದಶಕದಲ್ಲಿ ತೆಲುಗು ಚಿತ್ರಗಳನ್ನು ನಿರ್ಮಾಣ ಮಾಡಿದ್ದರು. ಅದೇ ವಂಶದ ಕುಡಿಯಾಗಿರುವ ಸಂತೋಷ್‌ಕುಮಾರ್ ಲಂಡನ್‌ನಲ್ಲಿ ಶಿಕ್ಷಣ ಮುಗಿಸಿ, ನಂತರ ಭಾಷೆಯ ಮೇಲಿನ ಅಭಿಮಾನದಿಂದ

ಕನ್ನಡ ಸಿನಿಮಾಕ್ಕೆ ಹಣ ಹಾಕಿದ್ದಾರೆ. ವಿಕಟಕವಿ, ನಿರ್ದೇಶಕ ಯೋಗರಾಜ್ ಭಟ್ ಸೇರಿದಂತೆ ಅನೇಕರ ಬಳಿ ಸಹಾಯಕರಾಗಿ ಗುರುತಿಸಿಕೊಂಡಿದ್ದ ಮೈಸೂರು ಮೂಲದ ಎನ್. ಕೆ.ರಾಜೇಶ್ ನಾಯ್ಡುಕಥೆ, ಚಿತ್ರಕಥೆ,ಸಂಭಾಷಣೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ.

ಸದಾ ಹೊಸಬರಿಗೆ ಪ್ರೋತ್ಸಾಹ ಕೊಡುತ್ತಿರುವ ನಟ ಶರಣ್ ಈ ಸಿನಿಮಾಕ್ಕೂ ಎಣ್ಣೆ ಹಾಡು ಕುರಿತಾದ 'ಬೇಡ ಮಚ್ಚಾ ಬೇಡ' ಸಾಲಿನ ಗೀತೆಗೆ

ಸುಖೀಭವ ಹಾಡಿಗೆ ಶರಣ್ ಧ್ವನಿ

ಧ್ವನಿಯಾಗಿ ಶುಭ ಹಾರೈಸಿರುವುದು ತಂಡಕ್ಕೆ ಶಕ್ತಿ ಬಂದಿದೆ. ಸಿನಿಮಾವು ಫ್ಯಾಮಿಲಿ ಕಥೆಯನ್ನು ಹೊಂದಿದ್ದು, ಮಿಕ್ಕಂತೆ ವಿಷಯಗಳನ್ನು ಮುಂದಿನ ದಿನಗಳಲ್ಲಿ ನೀಡುವುದಾಗಿ ನಿರ್ದೇಶಕರು ಹೇಳಿಕೊಂಡಿದ್ದಾರೆ. ಸುಶ್ಮಿತಾ ನಾಯಕ್ ಹಾಗೂ ವಿಯಾನ್‌ಶಿ ಗ್ಡೆ ನಾಯಕಿಯರು. ಉಳಿದಂತೆ ಗೌರವ್ ಶೆಟ್ಟಿ, ಶೋಭರಾಜ್, ರವಿಶಂಕರ್ ಗೌಡ, ಸುನಿಲ್ ಪುರಾಣಿಕ್, ತುಕಾಲಿಸಂತು, ಮೈತ್ರಿ ಜಗ್ಗಿ ಮುಂತಾದವರು ಅಭಿನಯಿಸಿದ್ದಾರೆ. ಸಂಗೀತ ಬಿ. ಜೆ.ಭರತ್-ಶುಭಂ, ಛಾಯಾಗ್ರಹಣ ಮಂಜುನಾಥ್ ನಾಯಕ್ ಅವರದಾಗಿದೆ.